ಗುರುವಾರ, ಸೆಪ್ಟೆಂಬರ್ 19, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 261 | ಪುಟ 14
● www.prajavani.net
prajavani·net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಪ್ಯಾರಾಮಿಲಿಟರಿ ಪಡೆಗಳಲ್ಲಿ 39,481 ಉದ್ಯೋಗಾವಕಾಶ

ವಿದೇಶ ವಿದ್ಯಮಾನ
ಸಂವಹನ ಸಾಧನವೇ ಅಸ್ತ್ರವಾದಾಗ...

ಹರಿಯಾಣಕ್ಕೆ ಕಾಂಗ್ರೆಸ್ ಏಳು ಗ್ಯಾರಂಟಿಗಳು 11

ಮಧ್ಯ ವಯಸ್ಸಿನವರಿಗೂ ವೃದ್ಧಾಪ್ಯ ವೇತನ! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,948	25,377	₹75,350 (ಬೆಂಗಳೂರು)	₹89,600 (ಬೆಂಗಳೂರು)	83.67

‘ಒಂದು ದೇಶ–ಒಂದು ಚುನಾವಣೆ’ ಕೋವಿಂದ್ ವರದಿಗೆ ಕೇಂದ್ರ ಅಂಗೀಕಾರ

ಒಟ್ಟಿಗೆ ಚುನಾವಣೆಗೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯು ಏಕಕಾಲಕ್ಕೆ ಚುನಾವಣೆ ನಡೆಸುವ ಸಂಬಂಧ ನೀಡಿದ ಶಿಫಾರಸುಗಳನ್ನು ಕೇಂದ್ರ ಸಚಿವ ಸಂಪುಟ ಬುಧವಾರ ಅಂಗೀಕರಿಸಿದೆ. ಈ ಮೂಲಕ ಬಿಜೆಪಿಯ ಮತ್ತೊಂದು ‘ಕಾರ್ಯಸೂಚಿ’ಯನ್ನು ಕಾರ್ಯಗತ-ಗೊಳಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿ ಸರ್ಕಾರ ಮುಂದಡಿ ಇಟ್ಟಿದೆ.

‘ಒಂದು ರಾಷ್ಟ್ರ – ಒಂದು ಚುನಾವಣೆ’ ಸಂಬಂಧ ಕೋವಿಂದ್ ನೇತೃತ್ವದ ಸಮಿತಿಯು ಮಾರ್ಚ್‌ನಲ್ಲಿ 18,626 ಪುಟಗಳ ವರದಿ ಸಲ್ಲಿಸಿತ್ತು. ಸಂವಿಧಾನಕ್ಕೆ 18 ತಿದ್ದುಪಡಿಗಳನ್ನು ಸಮಿತಿ ಶಿಫಾರಸು ಮಾಡಿತ್ತು.

11ನೇ ಪುಟ ನೋಡಿ

ಶಿಫಾರಸು ಅನುಷ್ಠಾನದ ದಾರಿ

- ಎರಡು ಹಂತಗಳಲ್ಲಿ ಕಾರ್ಯಗತಗೊಳಿಸುವುದು
- ಮೊದಲ ಹಂತದಲ್ಲಿ: ಲೋಕಸಭೆ ಮತ್ತು ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸುವುದು
- ಎರಡನೇ ಹಂತದಲ್ಲಿ:ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣೆಗಳೊಂದಿಗೆ ಪುರಸಭೆಗಳು ಮತ್ತು ಪಂಚಾಯಿತಿಗಳ ಚುನಾವಣೆಗಳನ್ನು ಸಮ್ಮಿಳನಗೊಳಿಸುವುದು
- ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳೊಂದಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ನಡೆಸಲಾಗದಿದ್ದರೆ, ಸಾರ್ವತ್ರಿಕ ಚುನಾವಣೆಯ 100 ದಿನಗಳೊಳಗೆ ಅದನ್ನು ನಡೆಸುವುದು
- ಅಗತ್ಯ ಬಿದ್ದರೆ ವಿಧಾನಸಭೆಗಳ ಅವಧಿ ಮೊಟಕು
- ಎಲ್ಲ ಚುನಾವಣೆಗಳಿಗೆ ಒಂದೇ ಮತದಾರರ ಪಟ್ಟಿ
- ಈ ವ್ಯವಸ್ಥೆಯ ಅನುಷ್ಠಾನದ ಸಂಬಂಧ ದೇಶದಾದ್ಯಂತ ವ್ಯಾಪಕ ಚರ್ಚೆ ಪ್ರಾರಂಭಿಸುವುದು
- ಅನುಷ್ಠಾನ ಗುಂಪಿನ ರಚನೆ
- ಲೋಕಸಭೆ, ವಿಧಾನಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಏಕಕಾಲಕ್ಕೆ ನಡೆಸಲು ಸಂವಿಧಾನಕ್ಕೆ ತಿದ್ದುಪಡಿ

ಯಾವಾಗ ಎಲ್ಲಿ ಚುನಾವಣೆ

- ಈ ವರ್ಷ ಲೋಕಸಭಾ ಚುನಾವಣೆಯ ಜತೆಗೆ ಒಡಿಶಾ, ಆಂಧ್ರ ಪ್ರದೇಶ, ಸಿಕ್ಕಿಂ ಹಾಗೂ ಅರುಣಾಚಲ ಪ್ರದೇಶ ವಿಧಾನಸಭೆಗಳಿಗೆ ಚುನಾವಣೆ ನಡೆದಿತ್ತು.
- 2025ರಲ್ಲಿ ದೆಹಲಿ ಹಾಗೂ ಬಿಹಾರ ವಿಧಾನಸಭೆಗಳಿಗೆ ಚುನಾವಣೆ.
- ಅಸ್ಸಾಂ, ಕೇರಳ, ತಮಿಳುನಾಡು, ಪಶ್ಚಿಮ ಬಂಗಾಳ, ಪುದುಚೆರಿ ವಿಧಾನಸಭೆಗಳ ಅವಧಿ 2026ರಲ್ಲಿ ಮುಗಿಯಲಿದೆ. ಗೋವಾ, ಗುಜರಾತ್, ಮಣಿಪುರ, ಪಂಜಾಬ್, ಉತ್ತರ ಪ್ರದೇಶ, ಉತ್ತರಾಖಂಡ, ಹಿಮಾಚಲ ಪ್ರದೇಶ ವಿಧಾನಸಭೆಗಳಿಗೆ 2027ಕ್ಕೆ ಮೇಘಾಲಯ, ನಾಗಾಲ್ಯಾಂಡ್, ತ್ರಿಪುರಾ, ತೆಲಂಗಾಣ, ಕರ್ನಾಟಕ ವಿಧಾನಸಭೆಗಳಿಗೆ 2028ಕ್ಕೆ ಚುನಾವಣೆ ನಡೆಯಲಿದೆ.

ಇದು ಪ್ರಾಯೋಗಿಕವಾಗಿ ಅಸಾಧ್ಯ. ಕೆಲವು ರಾಜ್ಯಗಳ ಚುನಾವಣೆ ಸಮೀಪದಲ್ಲಿರುವ ಸಂದರ್ಭದಲ್ಲಿ ಜನರ ಗಮನ ಬೇರೆಡೆಗೆ ಸೆಳೆಯಲು ಕೇಂದ್ರ ಸರ್ಕಾರ ಈ ತಂತ್ರ ಹೂಡಿದೆ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಒಂದು ಚುನಾವಣೆಯು ಸಂವಿಧಾನದ ಮೂಲ ಸ್ವರೂಪಕ್ಕೆ ಧಕ್ಕೆ ಉಂಟು ಮಾಡುವುದರ ಜತೆಗೆ ಒಕ್ಕೂಟ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶ ಪಡಿಸುತ್ತದೆ
ಅಸಾದುದ್ದೀನ್ ಒವೈಸಿ, ಸಂಸದ

ಭಾರತೀಯ ಚುನಾವಣಾ ವ್ಯವಸ್ಥೆ ಸುಧಾರಣೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಐತಿಹಾಸಿಕ ಹೆಜ್ಜೆ ಇರಿಸಿದ್ದಾರೆ
ಎಚ್‌.ಡಿ.ಕುಮಾರಸ್ವಾಮಿ
ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ

ಕೇಂದ್ರ ಸಂಪುಟದ ತೀರ್ಮಾನವು ದೇಶದಲ್ಲಿ ಚುನಾವಣಾ ವ್ಯವಸ್ಥೆಯ ಸುಧಾರಣೆಗೆ ದೈತ್ಯ ಹೆಜ್ಜೆ ಆಗಲಿದೆ
ಅಮಿತ್ ಶಾ
ಕೇಂದ್ರ ಗೃಹ ಸಚಿವ

ಡ್ರಗ್ಸ್ ನಿಯಂತ್ರಣಕ್ಕೆ ಕಾರ್ಯಪಡೆ

ಬೆಂಗಳೂರು: ರಾಜ್ಯದಲ್ಲಿ ಡ್ರಗ್ಸ್ ಪೂರೈಕೆ, ಮಾರಾಟ ಜಾಲಕ್ಕೆ ಕಡಿವಾಣ ಹಾಕಲು ಗೃಹ ಸಚಿವ ಜಿ. ಪರಮೇಶ್ವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಲಾಗಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂ ರಾವ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. 6

ಅಡಿಕೆ ಆಮದಿಗೆ ಅನುಮತಿ

ನವದೆಹಲಿ (ಪಿಟಿಐ): ಭೂತಾನ್‌ನಿಂದ ಕನಿಷ್ಠ ಆಮದು ಬೆಲೆಯ (ಎಂಐಪಿ) ಷರತ್ತು ಇಲ್ಲದೆಯೇ 17 ಸಾವಿರ ಟನ್ ಹಸಿ ಅಡಿಕೆ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರವು, ಬುಧವಾರ ಅನುಮತಿ ನೀಡಿದೆ. ಒಡಿಶಾದ ಹತಿಸರ್ ಮತ್ತು ಅಸ್ಸಾಂನ ದರ್ರಂಗದ ಕಸ್ಟಮ್ಸ್ ಕೇಂದ್ರದ ಮೂಲಕ ಈ ಅಡಿಕೆ ಆಮದಿಗೆ ಒಪ್ಪಿಗೆ ನೀಡಲಾಗಿದೆ ಎಂದು ಡಿಜಿಎಫ್‌ಟಿ ತಿಳಿಸಿದೆ. 10

ನೇಮಕ: ಸರ್ಕಾರದ ವಿವೇಚನೆಗೆ ● ಸಂಪುಟ ಸಭೆ ಚರ್ಚೆ

ಕುಲಪತಿ: ರಾಜ್ಯಪಾಲರ ಅಧಿಕಾರ ಮೊಟಕು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವವಿದ್ಯಾಲಯಗಳ ಕುಲಪತಿ ಮತ್ತು ವಿವಿಧ ನೇಮಕಾತಿ-ಗಳಲ್ಲಿ ರಾಜ್ಯಪಾಲರ ಅಧಿಕಾರವನ್ನು ಮೊಟಕು ಮಾಡುವತ್ತ ಗಂಭೀರ ಚಿಂತನೆ ನಡೆಸಿರುವ ರಾಜ್ಯ ಸರ್ಕಾರ, ಇದಕ್ಕಾಗಿ ‘ಗುಜರಾತ್ ಮಾದರಿ’ ಅಳವಡಿಸಿಕೊಳ್ಳುವತ್ತ ಹೆಜ್ಜೆ ಇಟ್ಟಿದೆ.

‘ಕಲಬುರಗಿಯಲ್ಲಿ ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕುಲಪತಿ ನೇಮಕಕ್ಕೆ ಸಂಬಂಧಿಸಿದ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ ಚರ್ಚೆಯಾಗಿದ್ದು, ಗುಜರಾತ್ ಮಾದರಿ ಅಳವಡಿಸಿಕೊಳ್ಳುವಂತೆ ಸಲಹೆ ಬಂದಿದೆ’ ಎಂದು ಗೊತ್ತಾಗಿದೆ.

‘ಗುಜರಾತ್‌ನಲ್ಲಿ ತಿದ್ದುಪಡಿ ತಂದಾಗ, ಅದನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಸರ್ಕಾರದ ನಿರ್ಧಾರವನ್ನು ನ್ಯಾಯಾಲಯ ಎತ್ತಿಹಿಡಿ ದಿತ್ತು. ಹೀಗಾಗಿ ಗುಜರಾತ್ ಮಾದರಿ ಅನುಸರಿಸುವುದು ಸೂಕ್ತ ಎಂಬ ಚರ್ಚೆ ನಡೆಯಿತು’ ಎಂದು ಮೂಲಗಳು ಹೇಳಿವೆ.

ರಾಜ್ಯ ಸರ್ಕಾರಕ್ಕೇ ಹೆಚ್ಚು ಅಧಿಕಾರ...

ಕುಲಪತಿ ನೇಮಕಕ್ಕೆ ಸರ್ಕಾರ ರಚಿಸುವ ಶೋಧನಾ ಸಮಿತಿಯು ಮೂವರ ಹೆಸರುಗಳನ್ನು ಸೂಚಿಸಿ ವರದಿ ನೀಡುತ್ತದೆ. ಅದನ್ನು ಆಧರಿಸಿ, ಸರ್ಕಾರ ರಾಜ್ಯಪಾಲರಿಗೆ ಶಿಫಾರಸು ಮಾಡುತ್ತದೆ. ಅವರಲ್ಲಿ ಒಬ್ಬರನ್ನು ನೇಮಕ ಮಾಡಲಾಗುತ್ತದೆ. ಗುಜರಾತ್‌ನಲ್ಲಿ ಶೋಧನಾ ಸಮಿತಿಯನ್ನು ರಾಜ್ಯಪಾಲರು ರಚಿಸುತ್ತಾರೆ. ಸಮಿತಿಯು ಮೂವರ ಹೆಸರುಗಳನ್ನು ಆಯ್ಕೆ ಮಾಡಿ, ರಾಜ್ಯ ಸರ್ಕಾರಕ್ಕೆ ನೇರವಾಗಿ ವರದಿ ನೀಡುತ್ತದೆ. ಅವರಲ್ಲಿ ಒಬ್ಬರನ್ನು ರಾಜ್ಯ ಸರ್ಕಾರ ನೇಮಕ ಮಾಡುತ್ತದೆ.

ಪ್ರಭಾರ ಕುಲಪತಿ ನೇಮಕ: ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕುಲಪತಿ ಹುದ್ದೆಯು ತೆರವಾದಾಗ, ಆಯಾ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ಡೀನ್ ಅವರನ್ನು ಪ್ರಭಾರ ಕುಲಪತಿಯನ್ನಾಗಿ ರಾಜ್ಯಪಾಲರು ನೇಮಕ ಮಾಡುತ್ತಾರೆ.

ಆದರೆ ಗುಜರಾತ್‌ನಲ್ಲಿ ಪ್ರಭಾರ ಕುಲಪತಿಯನ್ನು ನೇಮಕ ಮಾಡುವ ಅಧಿಕಾರವೂ ರಾಜ್ಯ ಸರ್ಕಾರಕ್ಕೇ ಇದೆ. ವಿಶ್ವವಿದ್ಯಾಲಯದ, ಎಲ್ಲ ಡೀನ್‌ಗಳಲ್ಲಿ ಒಬ್ಬರನ್ನು ರಾಜ್ಯ ಸರ್ಕಾರವು ಈ ಹುದ್ದೆಗೆ ನಾಮನಿರ್ದೇಶನ ಮಾಡುತ್ತದೆ. 2015ಕ್ಕೂ ಮುನ್ನ ಈ ಅಧಿಕಾರ ರಾಜ್ಯಪಾಲರಿಗೇ ಇತ್ತು. ಗುಜರಾತ್ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತಂದು, ಆ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೇ ದತ್ತವಾಗುವಂತೆ ಮಾಡಲಾಗಿದೆ.

6ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

‘ಎಚ್‌ಎಸ್‌ಆರ್‌ಪಿ: ನ.20ರವರೆಗೆ ಕ್ರಮ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತಿ ಸುರಕ್ಷಿತ ನೋಂದಣಿ ಫಲಕಗಳನ್ನು (ಹೈ ಸೆಕ್ಯುರಿಟಿ ರಿಜಿಸ್ಟ್ರೇಷನ್ ಪ್ಲೇಟ್-ಎಚ್‌ಎಸ್‌ಆರ್‌ಪಿ) ಅಳವಡಿಸದೇ ಇರುವ ವಾಹನ ಸವಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು’ ಎಂಬ ಮಧ್ಯಂತರ ಆದೇಶವನ್ನು ಹೈಕೋರ್ಟ್ ಮುಂದುವರಿಸಿದೆ. ಮುಂದಿನ ವಿಚಾರಣೆ ವರೆಗೆ ಇದು ಅನ್ವಯವಾಗಲಿದೆ. ಮುಂದಿನ ವಿಚಾರಣೆಯನ್ನು ನವೆಂಬರ್ 20ಕ್ಕೆ ನಿಗದಿ ಮಾಡಲಾಗಿದೆ.

‘ಎಚ್‌ಎಸ್‌ಆರ್‌ಪಿಯನ್ನು ನಿರ್ದಿಷ್ಟ ತಯಾರಕರು ಮಾತ್ರವೇ ಮಾರುಕಟ್ಟೆಗೆ ಪೂರೈಸಬೇಕು ಮತ್ತು ನಿರ್ದಿಷ್ಟ ಡೀಲರ್‌ಗಳು ಮಾತ್ರ ಇವುಗಳನ್ನು ವಾಹನಗಳಿಗೆ ಅಳವಡಿಸಬೇಕು’ ಎಂಬ ಸಾರಿಗೆ ಇಲಾಖೆಯ ಆದೇಶಕ್ಕೆ ತಡೆ ನೀಡಲು ನಿರಾಕರಿಸಿರುವ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ನಡೆಸಿತು.

ಈ ಸಂಬಂಧದ ಮೇಲ್ಮನವಿಗಳನ್ನು ನ್ಯಾಯಮೂರ್ತಿ ಕೆ.ಕಾಮೇಶ್ವರ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ, ಪ್ರತಿವಾದಿಗಳ ಕೋರಿಕೆಯ ಮೇರೆಗೆ ವಿಚಾರಣೆಯನ್ನು ಮುಂದೂಡಿತು.

ಜಮ್ಮು–ಕಾಶ್ಮೀರ: 61% ಮತದಾನ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನ ಬುಧವಾರ ನಡೆದಿದ್ದು, ಮತದಾರರು ಉಲ್ಲಾಸ, ಉತ್ಸಾಹದಿಂದ ಮತ ಚಲಾಯಿಸಿದರು. ರಾತ್ರಿ 11.30ರ ಮಾಹಿತಿ ಪ್ರಕಾರ ಶೇ 61ರಷ್ಟು ಮತದಾನ ನಡೆದಿದೆ.

ಇದು ಹಿಂದಿನ ಏಳು ಚುನಾವಣೆಗಳಲ್ಲಿ (ನಾಲ್ಕು ಲೋಕಸಭಾ ಮತ್ತು ಮೂರು ವಿಧಾನಸಭಾ ಚುನಾವಣೆ) ನಡೆದ ಮತದಾನಕ್ಕಿಂತ ಹೆಚ್ಚು ಎಂದು ಮುಖ್ಯ ಚುನಾವಣಾ ಅಧಿಕಾರಿ ಪಿ.ಕೆ. ಪೋಲೆ ತಿಳಿಸಿದರು. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮತಗಟ್ಟೆಗಳ ಬಳಿ ಬಿಗಿ ಭದ್ರತೆ ಕಲ್ಪಿಸಲಾಗಿತ್ತು ಎಂದರು 11

ಮಹದಾಯಿ: 8 ತಿಂಗಳು ಕಳೆದರೂ ನಿಲುವು ತಿಳಿಸದ ಎನ್‌ಟಿಸಿಎ

ತಜ್ಞರ ಒಪ್ಪಿಗೆ, ಪ್ರಾಧಿಕಾರ ‘ಕಾಲಹರಣ’

● ಮಂಜುನಾಥ ಹೆಬ್ಬಾರ್

ನವದೆಹಲಿ: ಮಹದಾಯಿಯ ಕಳಸಾ ನಾಲಾ ತಿರುವು ಯೋಜನೆಯನ್ನು ಅನುಷ್ಠಾನ ಮಾಡಬಹುದು ಎಂದು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ತಜ್ಞರ ತಂಡ ಶಿಫಾರಸು ಮಾಡಿದೆ. ಆದರೆ, ವರದಿ ಪಡೆದು ಎಂಟು ತಿಂಗಳು ಕಳೆದರೂ ಪ್ರಾಧಿಕಾರವು ಯೋಜನೆ ಬಗ್ಗೆ ತನ್ನ ನಿಲುವು ಪ್ರಕಟಿಸಿಲ್ಲ. ಇದರಿಂದಾಗಿ, ಮಹದಾಯಿ ಯೋಜನೆಯ ಅನುಷ್ಠಾನಕ್ಕೆ ಹಿನ್ನಡೆಯಾಗಿದೆ.

ಯೋಜನೆಯ ಸಾಧಕ–ಬಾಧಕಗಳ ಪರಾಮರ್ಶೆ ನಡೆಸಿ ವರದಿ ಸಲ್ಲಿಸಲು ಪ್ರಾಧಿಕಾರವು ನಾಲ್ವರು ತಜ್ಞರ ಸಮಿತಿಯನ್ನು ಕಳೆದ ವರ್ಷ ಡಿಸೆಂಬರ್ ತಿಂಗಳಲ್ಲಿ ರಚಿಸಿತು. ಈ ಸಮಿತಿಯು ಜನವರಿ ಮೊದಲ ವಾರದಲ್ಲಿ ಯೋಜನಾ ಪ್ರದೇಶಕ್ಕೆ

ಭೇಟಿ ನೀಡಿ ಜಲಸಂಪನ್ಮೂಲ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳ ಜತೆಗೆ ಸಮಾಲೋಚನೆ ನಡೆಸಿ ಪ್ರಾಧಿಕಾರಕ್ಕೆ ಜೂನ್ 23ರಂದು ಎಂಟು ಪುಟಗಳ ವರದಿ ಸಲ್ಲಿಸಿದೆ. ‘ಯೋಜನೆಗೆ ಸಂಬಂಧಿಸಿದ ದೊಡ್ಡ ಪ್ರಯೋಜನಗ-ಳನ್ನು ಪರಿಗಣಿಸಿ (ಬೇಸಿಗೆ ಅವಧಿಯಲ್ಲಿ ವನ್ಯಜೀವಿಗಳಿಗೆ ನೀರಿನ ಲಭ್ಯತೆ ಮತ್ತು ಅಂತರ್ಜಲ ಮರುಪೂರಣ) ವನ್ಯಜೀವಿ ಸಂರಕ್ಷಣಾ ಕಾಯ್ದೆ 1972ರ ಸೆಕ್ಷನ್ 38O(1)(ಜಿ) ಅಡಿಯಲ್ಲಿ ಅನುಷ್ಠಾನಕ್ಕೆ ಶಿಫಾರಸು ಮಾಡಬಹುದು’ ಎಂದು ವರದಿಯಲ್ಲಿ ಉಲ್ಲೇಖಿಸಿದೆ.

5ನೇ ಪುಟ ನೋಡಿ

ತಜ್ಞರ ತಂಡದ ಶಿಫಾರಸುಗಳೇನು?

- ಅರಣ್ಯ ಪ್ರದೇಶದಲ್ಲಿ ಕೊಳವೆ ಮಾರ್ಗವು ನೆಲದೊಳಗೆ ಇರಬೇಕು. ನಿರ್ಮಾಣದ ಅವಶೇಷಗಳನ್ನು ಅರಣ್ಯದ ಹೊರಗೆ ವಿಲೇವಾರಿ ಮಾಡಬೇಕು
- ನಿರ್ಮಾಣ ಕಾರ್ಯವನ್ನು ಸೂರ್ಯೋದಯ ಮತ್ತು ಸೂರ್ಯಾಸ್ತದ ನಡುವೆ ಮಾಡಬೇಕು. ಕಾಡಿನೊಳಗೆ ಕಾರ್ಮಿಕರ ಶಿಬಿರ ಇರಬಾರದು. ನಿರ್ಮಾಣ ಸ್ಥಳ ಹೊರತುಪಡಿಸಿ ಅರಣ್ಯದಲ್ಲಿ ಕಾರ್ಮಿಕರ ಸುತ್ತಾಟ ಬೇಡ
- ಕಾಡು ಪ್ರಾಣಿಗಳಿಗೆ ತೊಂದರೆಯಾಗದಂತೆ ಕೊಳವೆ ಮಾರ್ಗ, ಪ್ರಸರಣ ಮಾರ್ಗದ ಕಂದಕಗಳನ್ನು ಅಗೆಯಬೇಕು. ಕೂಡಲೇ ಮುಚ್ಚಬೇಕು
- ಶಬ್ದ ಮಾಲಿನ್ಯ ಕಡಿಮೆ ಮಾಡಲು ಹುಲಿ ಕಾರಿಡಾರ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಸ್ಫೋಟ ಹಾಗೂ ಭಾರಿ ಯಂತ್ರಗಳ ಬಳಕೆಯನ್ನು ಸಾಧ್ಯವಾದಷ್ಟು ತಪ್ಪಿಸಬೇಕು
- ಭವಿಷ್ಯದಲ್ಲಿ ಕೊಳವೆಮಾರ್ಗಗಳ ನಿರ್ವಹಣಾ ಕಾಮಗಾರಿಗೆ ಅರಣ್ಯ ಇಲಾಖೆಯಿಂದ ಪೂರ್ವಾನುಮತಿ ಪಡೆಯುವುದು ಕಡ್ಡಾಯ
- ಪ್ರಸ್ತಾವಿತ ವನ್ಯಜೀವಿ ಸಂರಕ್ಷಣಾ ಯೋಜನೆಯ ಭಾಗವಾಗಿ ಭೀಮಗಡ ವನ್ಯಜೀವಿಧಾಮ ಹಾಗೂ ಪಕ್ಕದ ಅರಣ್ಯಗಳನ್ನು ಬಲಪಡಿಸಬೇಕು
- ಸಂಭಾವ್ಯ ವನ್ಯಜೀವಿ ಪ್ರದೇಶಗಳನ್ನು ಭೀಮಗಡ ವನ್ಯಜೀವಿಧಾಮಕ್ಕೆ ಯಾವುದೇ ಸಮಯದಲ್ಲಿ ಸೇರಿಸಬಹುದು. ಜತೆಗೆ, ಜನವಸತಿ ಇರುವ ದೊಡ್ಡ ಪ್ರದೇಶಗಳನ್ನು ಸೇರಿಸುವ ಮೂಲಕ ಭೀಮಗಡ ವನ್ಯಜೀವಿಧಾಮದ ಗಾತ್ರ ಹೆಚ್ಚಿಸುವ ಬದಲು ಹಳ್ಳಿಗಳಲ್ಲಿ ಜನರ ಪುನರ್ವಸತಿ ಕಾರ್ಯ ಕೈಗೆತ್ತಿಕೊಂಡು ಕಾಡು ಪ್ರಾಣಿಗಳಿಗೆ ಹೆಚ್ಚು ಆವಾಸಸ್ಥಾನಗಳನ್ನು ಸೃಷ್ಟಿಸುವುದು ಉತ್ತಮ

21ಕ್ಕೆ ರೇಷ್ಮೆ ಕೃಷಿ ಪಾಲುದಾರರ ಸಭೆ

ಬೆಂಗಳೂರು: ಕೇಂದ್ರ ರೇಷ್ಮೆ ಮಂಡಳಿ 75 ವರ್ಷ ಪೂರೈಸಿದ ಪ್ರಯುಕ್ತ ಇದೇ 21ರ ಮಧ್ಯಾಹ್ನ 2.30ಕ್ಕೆ ಜಿಕೆವಿಕೆಯಲ್ಲಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಸಭಾಂಗಣದಲ್ಲಿ 'ರೇಷ್ಮೆ ಕೃಷಿ-ಪಾಲುದಾರ' ಸಭೆ ಹಾಗೂ ಅಮೃತ ಮಹೋತ್ಸವ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಳಿಯ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್, ಕಾರ್ಯಕ್ರಮವನ್ನು ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಉದ್ಘಾಟಿಸುತ್ತಾರೆ. ಕೇಂದ್ರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ (ಎಂಎಸ್ಎಂಇ) ಮತ್ತು ಕಾರ್ಮಿಕ ಮತ್ತು ಉದ್ಯೋಗ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್ ಭಾಗವಹಿಸುತ್ತಾರೆ' ಎಂದು ಹೇಳಿದರು.

'1948ರಲ್ಲಿ ಪ್ರಾರಂಭವಾದ ಕೇಂದ್ರ ರೇಷ್ಮೆ ಮಂಡಳಿ ದೇಶದಾದ್ಯಂತ 159 ಘಟಕಗಳನ್ನು ಹೊಂದಿದ್ದು, 9 ಸಂಶೋಧನಾ ಸಂಸ್ಥೆಗಳು ವಿವಿಧ ರಾಜ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ದೇಶದ 27 ರಾಜ್ಯಗಳಲ್ಲಿ ರೇಷ್ಮೆ ಉತ್ಪಾದನೆಯಾಗುತ್ತಿದೆ. ಪ್ರಸ್ತುತ ರೇಷ್ಮೆ ಉತ್ಪಾದನೆಯಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ' ಎಂದು ತಿಳಿಸಿದರು.

ರಾಜ್ಯಮಟ್ಟದ ಶಾಲಾ ಮಕ್ಕಳ ಸಮಾಲೋಚನೆ ಸಭೆ: ಸರ್ಕಾರಕ್ಕೆ ಮಕ್ಕಳ ಮನವಿ

'ವರ್ಷಕ್ಕೆ 2 ಬಾರಿ ಗ್ರಾಮಸಭೆ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಹಕ್ಕುಗಳ ಗ್ರಾಮಸಭೆಯಿಂದ ನಮ್ಮ ಸಮಸ್ಯೆಗಳನ್ನು ಅಧಿಕಾರಿಗಳ ಮುಂದೆ ಹೇಳಿಕೊಳ್ಳಲು ಸಾಧ್ಯವಾಗುತ್ತಿದೆ. ಈ ಸಭೆಯು ವರ್ಷಕ್ಕೆ ಎರಡರಿಂದ ಮೂರು ಬಾರಿಯಾದರೂ ನಡೆಯಬೇಕು...'

–ಹೀಗೆ ಮನವಿ ಮಾಡಿಕೊಂಡಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಪೆರುವಾಜೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿ ಆತ್ಮೀಯ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಆಯುಕ್ತಾಲಯ, ಎಡುಕೊ ಮತ್ತು ಚೈಲ್ಡ್ ರೈಟ್ಸ್ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಬುಧವಾರ ಹಮ್ಮಿಕೊಂಡ 'ಮಕ್ಕಳ ಹಕ್ಕುಗಳ ಗ್ರಾಮಸಭೆಯ ಪರಿಣಾಮಕಾರಿ ಆಯೋಜನೆ ಮತ್ತು ಜಾರಿ' ಕುರಿತ ರಾಜ್ಯ ಮಟ್ಟದ ಸಮಾಲೋಚನೆ ಸಭೆಯಲ್ಲಿ ಮಕ್ಕಳು ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಇಲಾಖೆ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರು, ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರು, ಶಿಕ್ಷಕರು, ವಕೀಲರು, ಸರ್ಕಾರೇತರ ಸಂಸ್ಥೆಗಳ ಪ್ರತಿನಿಧಿಗಳು, ಅಂಗನವಾಡಿ ಕಾರ್ಯಕರ್ತೆಯರು ಪಾಲ್ಗೊಂಡಿದ್ದರು.

'ವರ್ಷಕ್ಕೆ ಒಮ್ಮೆ ನಡೆಯುತ್ತಿರುವ ಮಕ್ಕಳ ಹಕ್ಕುಗಳ ಗ್ರಾಮಸಭೆಯು ನಮ್ಮ ಸಮಸ್ಯೆಗಳಿಗೆ ವೇದಿಕೆ ಕಲ್ಪಿಸುತ್ತಿದೆ. ಈ ಸಂದರ್ಭದಲ್ಲಿ ನಮ್ಮ ಸಹಪಾಠಿಗಳು ಬಾಲಕಾರ್ಮಿಕ ಪದ್ಧತಿಗೆ, ಬಾಲ್ಯವಿವಾಹಕ್ಕೆ ಒಳಗಾಗಿದ್ದನ್ನೂ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಇದರಿಂದ ಅವರು ಶಾಲೆಗೆ ಮತ್ತೆ ಮರಳಲು ಸಾಧ್ಯವಾಗಿದೆ. ಶಾಲಾ ಕಾಂಪೌಂಡು, ಶೌಚಾಲಯ ಸೇರಿ ವಿವಿಧ ಮೂಲಸೌಕರ್ಯದ ಬಗ್ಗೆಯೂ ಪ್ರಸ್ತಾಪಿಸಿದ್ದೇವೆ. ಈ ಸಭೆಯು ವರ್ಷಕ್ಕೆ ಎರಡು ಅಥವಾ ಮೂರು ಬಾರಿ ನಡೆದರೆ ಅನುಕೂಲ ಆಗಲಿದೆ' ಎಂದು ವಿವಿಧ ಶಾಲೆಗಳ ಮಕ್ಕಳು ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಉಪನಿರ್ದೇಶಕಿ ನಾಗವೇಣಿ ಅವರು (ಎಡದಿಂದ ಐದನೆಯವರು) 'ಮಕ್ಕಳ ಹಕ್ಕುಗಳ ಗ್ರಾಮಸಭೆ' ಯೋಜನೆಯ ಸಾಧ್ಯತೆಗಳು ಮತ್ತು ಸಾಧನೆಗಳನ್ನು ಪರಿಚಯಿಸುವ ಪುಸ್ತಕಗಳನ್ನು ಬಿಡುಗಡೆ ಮಾಡಿದರು. (ಎಡದಿಂದ) ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿನ ಮೆಟ್ರಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕುಮಾರ್, ಎಡುಕೊ ಸಂಸ್ಥೆಯ ನಿರ್ದೇಶಕ ಗುರುಪ್ರಸಾದ್, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್, ಪುತ್ತೂರು ತಾಲ್ಲೂಕಿನ ಒಳಮರಗಿನ ಗ್ರಾಮ ಪಂಚಾಯಿತಿ ಅಧ್ಯಕ್ಷೆ ತ್ರಿವೇಣಿ, ವಿದ್ಯಾರ್ಥಿನಿ ಚಿತ್ರಾ, ವಿದ್ಯಾರ್ಥಿ ಆತ್ಮೀಯ ಕೆ., ಚೈಲ್ಡ್ ರೈಟ್ಸ್ ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕ ವಾಸುದೇವ ಶರ್ಮ ಎನ್.ವಿ. ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸಭೆಯ ಪ್ರಮುಖ ಶಿಫಾರಸುಗಳು

- ಮಕ್ಕಳ ಹಕ್ಕುಗಳ ಗ್ರಾಮಸಭೆಯು ವರ್ಷಕ್ಕೆ ಎರಡು ಸಲ ನಡೆಯಬೇಕು
- ಗ್ರಾಮೀಣ ಮಕ್ಕಳ ದಿನ ಆಚರಿಸಬೇಕು
- ಶಾಲಾ ಪಠ್ಯಕ್ಕೆ ಮಕ್ಕಳ ಹಕ್ಕುಗಳ ಗ್ರಾಮಸಭೆ ವಿಷಯ ಸೇರ್ಪಡೆ ಮಾಡಬೇಕು
- ಮಕ್ಕಳ ಬಗೆಗಿನ ದತ್ತಾಂಶವನ್ನು 'ಪಂಚತಂತ್ರ' ತಂತ್ರಾಂಶದಲ್ಲಿ ಅಪ್ಡೇಟ್ ಮಾಡಬೇಕು
- ಮಕ್ಕಳ ಹಕ್ಕುಗಳ ಗ್ರಾಮಸಭೆಯ ಬಗ್ಗೆ ನಿಗಾ ವ್ಯವಸ್ಥೆ ರೂಪಿಸಬೇಕು
- ಶಾಲೆ ಬಿಡುತ್ತಿರುವುದು, ವಲಸೆ ಸೇರಿ ವಿವಿಧ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚೆಗಳು ನಡೆಯಬೇಕು

ಮಕ್ಕಳ ಹಕ್ಕುಗಳ ಗ್ರಾಮಸಭೆಯು ಮಕ್ಕಳ ನೋವು, ದುಃಖ, ಸಮಸ್ಯೆ ಅರಿಯಲು ಸಹಕಾರಿ. ಇದನ್ನು ಇನ್ನಷ್ಟು ಪರಿಣಾಮಕಾರಿಯಾಗಿ ನಡೆಸಬೇಕಿದೆ

ವಾಸುದೇವ ಶರ್ಮಾ ಎನ್.ವಿ., ಚೈಲ್ಡ್ ರೈಟ್ಸ್ ಟ್ರಸ್ಟ್ ಕಾರ್ಯಕಾರಿ ನಿರ್ದೇಶಕ

'ಗ್ರಾಮ ಸಭೆಗಳಲ್ಲಿ ಶಾಲೆಗೆ ಅಗತ್ಯವಿರುವ ಮೂಲಸೌಕರ್ಯದ ಬಗ್ಗೆ ಚರ್ಚಿಸುವ ಬದಲು, ಮಕ್ಕಳ ಸಮಸ್ಯೆ ಹಾಗೂ ಅವರ ಅಹವಾಲುಗಳಿಗೆ ವೇದಿಕೆ ಕಲ್ಪಿಸಬೇಕು. ಮೂಲಸೌಕರ್ಯ ಒದಗಿಸುವುದು ಇಲಾಖೆಗಳ ಹೊಣೆಯಾಗಿದೆ. ಹಾಗಾಗಿ, ಈ ಬಗ್ಗೆ ಒತ್ತಾಯಿಸಲು ನವೆಂಬರ್‌ವರೆಗೆ ಕಾಯಬೇಕಾಗಿಲ್ಲ' ಎಂಬ ಅಭಿಪ್ರಾಯವನ್ನು ಸರ್ಕಾರೇತರ ಸಂಸ್ಥೆಗಳ ಪ್ರಮುಖರು ತಿಳಿಸಿದರು.

'ಮಕ್ಕಳಿಗೆ ನ್ಯಾಯ ಒದಗಿಸಬೇಕು'

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್, 'ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು ಸೇರಿ ಸಂಬಂಧಪಟ್ಟವರು ಮಕ್ಕಳ ಹಕ್ಕುಗಳ ಗ್ರಾಮಸಭೆಯಲ್ಲಿ ಪರಿಣಾಮಕಾರಿಯಾಗಿ ತಮ್ಮನ್ನು ತೊಡಗಿಸಿಕೊಂಡು, ಮಕ್ಕಳಿಗೆ ನ್ಯಾಯ ಒದಗಿಸಬೇಕು. ಶಾಲೆ ಬಿಡುತ್ತಿರುವುದು, ವಲಸೆ ಸೇರಿ ವಿವಿಧ ಸಮಸ್ಯೆಗಳ ಬಗ್ಗೆ ಸಭೆಯಲ್ಲಿ ಚರ್ಚೆಗಳು ನಡೆಯಬೇಕು' ಎಂದರು.

ವಕೀಲ ಅನಿಲ್, 'ರಸ್ತೆ ಸೇರಿ ವಿವಿಧ ಮೂಲಭೂತ ಸೌಕರ್ಯಗಳ ಬಗ್ಗೆ ಶಾಲೆಯ ಮುಖ್ಯ ಶಿಕ್ಷಕರು ಇಲಾಖೆಗಳ ಮೇಲಾಧಿಕಾರಿಗಳ ಗಮನಕ್ಕೆ ತರಬೇಕು. ಇದನ್ನು ಮಕ್ಕಳಿಂದ ಹೇಳಿಸುವುದು ಸರಿಯಲ್ಲ. ಈಗಲೂ ಬೆಂಗಳೂರಿನಲ್ಲಿಯೇ ವಿವಿಧ ಗ್ಯಾರೇಜ್, ಬಾರ್‌ಗಳಲ್ಲಿ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕೆ ಈ ಬಗ್ಗೆ ದೂರು ನೀಡಿದರೂ ಯಾವುದೇ ಕ್ರಮವಾಗಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಕ್ಷಿಣ ಕನ್ನಡ, ಬಳ್ಳಾರಿ, ಚಿಕ್ಕಬಳ್ಳಾಪುರ ಹಾಗೂ ಗದಗ ಜಿಲ್ಲೆಯ ಆಯ್ದ 11 ತಾಲ್ಲೂಕಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಸುದ್ದಿ 2 ನಿಮಿಷ

ಮಾನ್ಯತಾ ಟೆಕ್‌ಪಾರ್ಕ್ ಸುತ್ತ ಇಂದು ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ ಮಾನ್ಯತಾ ಟೆಕ್ ಪಾರ್ಕ್‌ನ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ನಿರ್ವಹಣಾ ಕೆಲಸಗಳನ್ನು ಕೈಗೊಳ್ಳುವುದರಿಂದ ಗುರುವಾರ ಬೆಳಿಗ್ಗೆ 11ರಿಂದ ಸಂಜೆ 5 ಗಂಟೆವರೆಗೆ, ಉಪಕೇಂದ್ರ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಮಾನ್ಯತಾ ಟೆಕ್ ಪಾರ್ಕ್, ಕಾಫಿ ಬರ್ಡ್ ಲೇಔಟ್, ಮರಿಯನಪಾಳ್ಯ, ಮಾನ್ಯತಾ ರೆಸಿಡೆನ್ಸಿ, ಭಾಗ್ಯಶ್ರೀ ಲೇಔಟ್ ಮತ್ತು ರಾಚೇನಹಳ್ಳಿ, ಐಬ್ರಾಕ್ಸ್, ಅಮರಜ್ಯೋತಿ ಲೇಔಟ್, ಫಾತಿಮಾ ಲೇಔಟ್, ಅಂಜನಾದ್ರಿ ಲೇಔಟ್, ಮಂತ್ರಿ ಲಿಥೋಸ್, ಫಿಡಿಲಿಟಿ, ಫೀಲಿಪ್ಸ್, ಇನಕ್ಯುಬೇಟರ್, ಐಬಿಎಂ –ಡಿ-1-4 ಬ್ಲಾಕ್, ಎಲ್-6 ಸೀಮನ್ಸ್, ಬಿ.ಟಿ.ಎಸ್ ಲೌಸೆಂಟ್, ಚಿರಂಜಿವಿ ಲೇಔಟ್, ವೆಂಕಟಗೌಡ ಲೇಔಟ್, ಜೆಎನ್‌ಸಿ, ಎಲ್-5 ನೋಕಿಯಾ ಬ್ಲಾಕ್, ಥಣಿಸಂದ್ರ, ಮೆಸ್ತರಿ ಪಾಳ್ಯ ಮತ್ತು ಜೆಎನ್‌ಸಿ, ಗೋದ್ರೇಜ್ ಅಪಾರ್ಟ್‌ಮೆಂಟ್, ಬ್ರಿಗೇಡ್ ಕೆಲಾಡಿಯಂ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕಾಂಗ್ರೆಸ್‌ನಿಂದ ಕವಿತಾ ರೆಡ್ಡಿ ಅಮಾನತು

ಬೆಂಗಳೂರು: ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕವಿತಾ ರೆಡ್ಡಿ ಅವರನ್ನು ಕಾಂಗ್ರೆಸ್‌ನಿಂದ ಅಮಾನತು ಮಾಡಲಾಗಿದೆ.

ಪಕ್ಷದ ನಿರ್ಣಯಗಳನ್ನು ಸಾರ್ವಜನಿಕವಾಗಿ ಪ್ರಶ್ನಿಸಿ ಮತ್ತು ಟೀಕಿಸಿ, ಪಕ್ಷದ ಶಿಸ್ತನ್ನು ಉಲ್ಲಂಘಿಸಿದ ಕಾರಣಕ್ಕೆ ಅವರನ್ನು ಪಕ್ಷದಿಂದ ಮತ್ತು ಪಕ್ಷದಲ್ಲಿ ಅವರಿಗೆ ನೀಡಲಾಗಿದ್ದ ಎಲ್ಲ ಹುದ್ದೆಗಳಿಂದ ಅಮಾನತು ಮಾಡಲಾಗಿದೆ ಎಂದು ಕೆಪಿಸಿಸಿ ಶಿಸ್ತುಪಾಲನಾ ಸಮಿತಿ ಹೇಳಿದೆ.

ಲೋಕಸಭಾ ಚುನಾವಣೆಯಲ್ಲಿ ಅಭ್ಯರ್ಥಿಗಳ ಆಯ್ಕೆ ಪ್ರಶ್ನಿಸಿ ಅವರು ಫೇಸ್‌ಬುಕ್‌ನಲ್ಲಿ ಬರೆದಿದ್ದರು. ಪಕ್ಷಕ್ಕೆ ಸಂಬಂಧಿಸಿದ ವಿಚಾರ ಬಹಿರಂಗವಾಗಿ ಚರ್ಚಿಸಬೇಡಿ ಎಂದು ಆಗ ಎಚ್ಚರಿಕೆ ನೀಡಲಾಗಿತ್ತು. ಆದರೆ ಕೆಪಿಸಿಸಿ ಮಹಿಳಾ ಘಟಕಕ್ಕೆ ಸೌಮ್ಯಾ ರೆಡ್ಡಿ ಅವರ ನೇಮಕವನ್ನು ಬಹಿರಂಗವಾಗಿ ಟೀಕಿಸಿದ್ದರು ಎಂದು ಮೂಲಗಳು ಹೇಳಿವೆ.

ಮಾತು ನಿಲ್ಲಿಸುವುದಿಲ್ಲ: 'ನನ್ನಂತ ಮಹಿಳೆ, ಅತ್ಯಂತ ಪ್ರಭಾವಿಶಾಲಿಗಳಿಗೂ ಹೆದರುವುದಿಲ್ಲ. ಲಿಂಗ ತಾರತಮ್ಯ ಮತ್ತು ಅನ್ಯಾಯದ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಮಾತನಾಡುವುದನ್ನು ನಿಲ್ಲಿಸುವುದಿಲ್ಲ' ಎಂದು ಕವಿತಾ ರೆಡ್ಡಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

1ನೇ ವರ್ಷದ ಪುಣ್ಯಸ್ಮರಣೆ

ಶ್ರೀ ನರಸಿಂಹಲು
ವಿಧಾನಸೌಧ
ನಿಧನ: 19.09.2023
ನಿಮ್ಮ ನೆನಪು ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗೇ ಇರುತ್ತದೆ.
ಇಂತಿ,
ದುಃಖತಪ್ತ ಕುಟುಂಬದವರು

ನೈಋತ್ಯ ರೈಲ್ವೆ
ಇ–ಟೆಂಡರು ಸೂಚನೆ ಸಂ.: CAO/CN/BNC/10/2024
ಮೇಲಿನ ತಿದ್ದುಪಡಿ–2. ದಿನಾಂಕ: 31.05.2024

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ನಿರ್ಮಾಣ ಸಂಸ್ಥೆಗೆ ಸಾಮಾನ್ಯ ಸಲಹೆಗಾರರ ನೇಮಕಾತಿಗಾಗಿ ಸಲ್ಲಿಸಿದ ಪ್ರಸ್ತಾವನೆಯ ಬೇಡಿಕೆ. (ಟೆಂಡರು ಉಲ್ಲೇಖ ಸಂ. GENL-CONSULTANCY-CON-SWR)	ರೂ. 76,10,78,356/-

ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕರಣೆ
18.09.2024 (15:00 ಗಂಟೆಗೆ)	04.10.2024 (15.00 ಗಂಟೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ ಬೆಂಗಳೂರು ದಂಡು
PUB/436/AAF/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. 45/2024, ದಿನಾಂಕ: 12.09.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್'82366710	ರೈಲ್ವೆ ಪ್ರಯಾಣಿಕರ ಬಳಕೆ ಹಾಗೂ ಸೆಮಿ ಔಟ್‌ಡೋರ್ ಅಪ್ಲಿಕೇಶನ್‌ಗಾಗಿ ಆರ್‌ಡಿಎಸ್‌ಒ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಒ / ಪಿಇ / ಎಸ್‌ಪಿಇಸಿ / ಟಿಎಲ್ / 0095 (ರೆವ್3) – 2019 ರ ಅನ್ವಯ 2 ವರ್ಷಗಳ ವಾರಂಟಿಯೊಂದಿಗೆ ಹೆವಿ ಡ್ಯೂಟಿ ರಿವರ್ಸಬಲ್ ಟೈಪ್ ಎಸ್ಕಲೇಟರ್‌ನ ಪೂರೈಕೆ, ವಿನ್ಯಾಸ, ತಯಾರಿಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಗೊಳಿಸುವಿಕೆ ಮತ್ತು ನಿರ್ವಹಣೆ. ಪೂರೈಕೆಗೆ ಮುನ್ನ ಆವಶ್ಯವಾದ ಆರ್‌ಐಟಿಇಎಸ್ / ಆರ್‌ಡಿಎಸ್‌ಒ ಪರೀಕ್ಷೆಲನಾ ಪ್ರಮಾಣ ಪತ್ರ ಹಾಗೂ ಸಂಬಂಧಿತ ಖರ್ಚುಗಳು ಗುತ್ತಿಗೆದಾರರದೇ ಹೊಣೆಯಾಗಿದೆ. ಸಮಗ್ರವಾದ ವಾರ್ಷಿಕ ನಿರ್ವಹಣಾ ಅನುಬಂಧ (ಸಿಎಎಂಸಿ) ಯೊಂದಿಗೆ ಆರ್‌ಡಿಎಸ್‌ಒ ಪ್ರೋಟೋಟೈಪ್ ಟೆಸ್ಟಿಂಗ್‌ಅನ್ನು ಗುತ್ತಿಗೆದಾರರ ಖರ್ಚಿನಿಂದಲೇ ಮಾಡಬೇಕಾಗುವುದು. (ಪರಿಮಾಣ: 23 ನಂ.)

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 14.10.2024, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/426/AAMO/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. CAO/CN/BNC/24/2024 ರಲ್ಲಿ ಪ್ರಕಟವಾದ ಸೂಚನೆಯ ತಿದ್ದುಪಡಿ
ದಿನಾಂಕ: 28.08.2024

	ಸಂಕ್ಷಿಪ್ತವಾದ ವಿವರಣೆ	ಅಂದಾಜು ಮೌಲ್ಯ
ಪ್ರಸ್ತುತ	ಬಾಗಲಕೋಟೆ (ಬಿಜಿಕೆ) – ಕುಡಚಿ (ಕೆಯುಡಿ) ಹೊಸ ಲೈನ್ ಯೋಜನೆಯಡಿ (142 ಕಿಮೀ) ಲೋಕಾಪುರ (ಹೊರತುಪಡಿಸಿ) & ಯಾದವಾಡ (ಒಳಪಡಿಸಿ) (21 ಕಿಮೀ.) ನಡುವೆ ಹೊಸ ಬ್ರಾಡ್‌ಗೇಜ್ ಲೈನ್ ಮತ್ತು ಎಲೆಕ್ಟ್ರಿಕಲ್ & ದೂರಸಂಪರ್ಕ ಕಾಮಗಾರಿಗಳನ್ನೊಳಗೊಂಡಂತೆ ಯೋಜನಾ ನಿರ್ವಹಣಾ ಸೇವೆಗಳು. (ಟೆಂಡರು ಉಲ್ಲೇಖ ಸಂ. PMS-BGK-KUD-02)	ರೂ. 13,24,71,937/-
ಪರಿಷ್ಕೃತ	ಬಾಗಲಕೋಟೆ (ಬಿಜಿಕೆ) – ಕುಡಚಿ (ಕೆಯುಡಿ) ಹೊಸ ಲೈನ್ ಯೋಜನೆಯಡಿ (142 ಕಿಮೀ) ಯಾದವಾಡ (ಹೊರತುಪಡಿಸಿ) (60.000 ಕಿಮೀ) ಮತ್ತು ಕುಡಚಿ (ಹೊರತುಪಡಿಸಿ) (142.000 ಕಿಮೀ) – 82.000 ಕಿಮೀ. ನಡುವೆ ಹೊಸ ಬ್ರಾಡ್‌ಗೇಜ್ ಲೈನ್ ಮತ್ತು ಎಲೆಕ್ಟ್ರಿಕಲ್ & ದೂರಸಂಪರ್ಕ ಕಾಮಗಾರಿಗಳ ನ್ನೊಳಗೊಂಡಂತೆ ಯೋಜನಾ ನಿರ್ವಹಣಾ ಸೇವೆಗಳನ್ನು ಒದಗಿಸುವ ಸಲುವಾಗಿ ಅಧಿಕೃತ ಇಂಜಿನಿಯರ್‌ರವರ ನೇಮಕಾತಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯ ಬೇಡಿಕೆ. (ಟೆಂಡರು ಉಲ್ಲೇಖ ಸಂ. PMS-BGK-KUD-02)	

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/435/AAF/PRB/SWR/2024-25 ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ/ಬೆಂಗಳೂರು ದಂಡು
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ
ಟೆಂಡರು ಸೂಚನೆ ಸಂ. 43/2024, ದಿನಾಂಕ: 09.09.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್'82458110	ಕೆಎಸ್‌ಆರ್ ಬೆಂಗಳೂರು (ಎಸ್‌ಬಿಸಿ) ವಿಭಾಗದಲ್ಲಿ ಬರುವ ರೈಲ್ವೆ ನಿಲ್ದಾಣದಲ್ಲಿ ಪ್ರತೀ 100 ಲೀ. ಸಾಮರ್ಥ್ಯವುಳ್ಳ ಸ್ಟೈನ್‌ಲೆಸ್ ಸ್ಟೀಲ್ ಕಸದ (ಒಣ / ಹಸಿ) ಬುಟ್ಟಿಗಳನ್ನು ಪೂರೈಕೆ ಮತ್ತು ಸ್ಥಾಪನೆ ಮಾಡುವುದು (ಪರಿಮಾಣ: 765 ಜೋಡಿಗಳು).

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: 04.10.2024, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/421/AAMO/PRB/SWR/2024-25 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
South Western Railway - SWR | SWRRLY | SWRRLY

ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತ
ASHOKANAGAR CO-OPERATIVE BANK LTD.,
ನಂ. 1380/ಬಿ, 6ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ, 2ನೇ ಘಟ್ಟ, ಬೆಂಗಳೂರು–560050. ಫೋನ್: 080–26506213, 26606365, ಮೊಬೈಲ್: 99642 16663
2023–24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನಾ ಪತ್ರ
ಬ್ಯಾಂಕಿನ 2023–24ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ದಿನಾಂಕ 22–09–2024ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಕುಚಲಾಂಬ ಕಲ್ಯಾಣ ಮಹಲ್, ಜಯನಗರ 2ನೇ ಬ್ಲಾಕ್, ಮಾಧವನ್ ಪಾರ್ಕ್ ಹತ್ತಿರ, ಬೆಂಗಳೂರು–560011, ಇಲ್ಲಿ ನಡೆಸಲು ನಿರ್ಣಯಿಸಲಾಗಿದೆ. ಮಾನ್ಯ ಸದಸ್ಯರುಗಳಿಗೆ ಅಂಚೆಯ ಮೂಲಕ ಸೂಚನಾ ಪತ್ರವನ್ನು ಕಳುಹಿಸಲಾಗಿದೆ. ಒಂದು ವೇಳೆ ಸೂಚನಾ ಪತ್ರ ತಲುಪದೇ ಇದ್ದಲ್ಲಿ ಇದನ್ನೇ ಸೂಚನಾ ಪತ್ರ ಎಂದು ಪರಿಗಣಿಸಿ ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ವಿನಂತಿ.
ಸ್ಥಳ: ಬೆಂಗಳೂರು — ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
ದಿನಾಂಕ: 18–09–2024 — ಎಸ್.ಟಿ. ಮಂಗಳ, ಕಾರ್ಯದರ್ಶಿ

ತಿರುಪತಿ ಲಡ್ಡುಗೆ ಕೊಬ್ಬು ಬಳಕೆ: ನಾಯ್ಡು ಆರೋಪ

ಅಮರಾವತಿ (ಪಿಟಿಐ): ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರವು ವಿಶ್ವವಿಖ್ಯಾತ ತಿರುಪತಿ ಲಡ್ಡು ತಯಾರಿಸಲು ಗುಣಮಟ್ಟವಿಲ್ಲದ ಪದಾರ್ಥಗಳು ಮತ್ತು ಪ್ರಾಣಿಗಳ ಕೊಬ್ಬನ್ನು ಬಳಸಿತ್ತು ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಬುಧವಾರ ಆರೋಪಿಸಿದ್ದಾರೆ.

'ತಿರುಮಲ ಲಡ್ಡು ಕೂಡ ಗುಣಮಟ್ಟವಿಲ್ಲದ ಪದಾರ್ಥಗಳಿಂದ ತಯಾರಿಸಲ್ಪಟ್ಟಿದೆ. ಅವರು ತುಪ್ಪದ ಬದಲಿಗೆ ಪ್ರಾಣಿಗಳ ಕೊಬ್ಬನ್ನು ಬಳಸಿದ್ದಾರೆ' ಎಂದು ನಾಯ್ಡು ಅವರು ಎನ್‌ಡಿಎ ಶಾಸಕಾಂಗ ಪಕ್ಷದ ಸಭೆಯಲ್ಲಿ ಹೇಳಿದರು.

ಆದರೆ, ಈಗ ಶುದ್ಧ ತುಪ್ಪ ಬಳಸಲಾಗುತ್ತಿದೆ. ದೇವಸ್ಥಾನದಲ್ಲಿ ಎಲ್ಲವನ್ನೂ ಶುದ್ಧೀಕರಿಸಲಾಗಿದೆ. ಇದು ಸುಧಾರಿತ ಗುಣಮಟ್ಟಕ್ಕೆ ಕಾರಣವಾಗುತ್ತದೆ ಎಂದು ನಾಯ್ಡು ಹೇಳಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಕರ್ನಾಟಕ ನಿವೃತ್ತ ನೌಕರರ ವೇದಿಕೆ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು ಪ್ರಜಾವಾಣಿ ಚಿತ್ರ

ನಿವೃತ್ತ ನೌಕರರ ಪ್ರತಿಭಟನೆ

ಪರಿಷ್ಕೃತ ಆದೇಶ ಹೊರಡಿಸಿ ಸೌಲಭ್ಯ ಕಲ್ಪಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತಿ ಸೌಲಭ್ಯ ಕಲ್ಪಿಸಲು ಆಗ್ರಹಿಸಿ ಕರ್ನಾಟಕ ನಿವೃತ್ತ ನೌಕರರ ವೇದಿಕೆ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಜಿಲ್ಲೆಗಳ ನಿವೃತ್ತ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

2022ರ ಜುಲೈ 1ರಿಂದ 2024ರ ಜುಲೈ 31ರ ಮಧ್ಯೆ ನಡುವೆ ನಿವೃತ್ತಿಯಾಗಿರುವ ನೌಕರರಿಗೆ 7ನೇ ವೇತನ ಆಯೋಗದ ಪರಿಷ್ಕೃತ ವೇತನದ ಅನ್ವಯ ನಿವೃತ್ತಿ ಸೌಲಭ್ಯಗಳನ್ನು ನೀಡಬೇಕು ಎಂದು ಕೋರಿದರು.

ಈ 25 ತಿಂಗಳ ಅವಧಿಯಲ್ಲಿ 17,963 ಮಂದಿ ನಿವೃತ್ತರಾಗಿದ್ದಾರೆ. ಆ ಪೈಕಿ ಶೇ 40 ಶಿಕ್ಷಕರು, ಶೇ 12ರಷ್ಟು ಆರೋಗ್ಯ ಇಲಾಖೆ ನೌಕರರು, ಶೇ 10 ಪೊಲೀಸ್ ಇಲಾಖೆ ಸಿಬ್ಬಂದಿ, ಉಳಿದಂತೆ ಶೇ 38ರಷ್ಟು ನೌಕರರು ವಿವಿಧ ಇಲಾಖೆಗಳಿಗೆ ಸೇರಿದ್ದಾರೆ. ಈ ಎಲ್ಲ ನೌಕರರು 7ನೇ ವೇತನ ಆಯೋಗದ ಪರಿಷ್ಕೃತ ವೇತನದ ಮೇಲೆ ಆರ್ಥಿಕ ಸೌಲಭ್ಯ ಪಡೆಯಲು ಅರ್ಹರಿದ್ದಾರೆ. ಆಯೋಗದ ಆದೇಶವನ್ನು ಪರಿಶೀಲಿಸಿ ಪರಿಷ್ಕೃತ ಆದೇಶ ಹೊರಡಿಸಿ ಆರ್ಥಿಕ ಸೌಲಭ್ಯ ಕಲ್ಪಿಸುವಂತೆ ಪ್ರತಿಭಟನಕಾರರು ಆಗ್ರಹಿಸಿದರು.

ವೇದಿಕೆ ರಾಜ್ಯ ಸಂಚಾಲಕ ಅಶೋಕ ಎಂ. ಸಜ್ಜನ, ರಾಜ್ಯ ಮಹಾಪ್ರಧಾನ ಸಂಚಾಲಕ ಎಂ.ಪಿ. ಎಂ ಷಣ್ಮುಖಯ್ಯ, ಅಶೋಕ ಎಂ. ಸಜ್ಜನ, ಗುರು ತಿಗಡಿ, ಶಂಕರಪ್ಪ ಲಮಾಣಿ, ಎಸ್.ಜಿ.ಬೆಸೆರೊಟ್ಟಿ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಬೆಸ್ಕಾಂ: 21ರಂದು ಗ್ರಾಹಕ ಸಂವಾದ ಸಭೆ

ಬೆಂಗಳೂರು: ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಇದೇ ಶನಿವಾರ (ಸೆ.21) ಮಧ್ಯಾಹ್ನ 3 ರಿಂದ 5.30ರವರೆಗೆ ಗ್ರಾಹಕ ಸಂವಾದ ಸಭೆ ಹಮ್ಮಿಕೊಂಡಿದೆ.

ಬೆಸ್ಕಾಂನ ಎಲ್ಲ ಕಾರ್ಯ ಮತ್ತು ಪಾಲನಾ ವಿಭಾಗಗಳಲ್ಲಿ ನಡೆಯುವ ಈ ಸಭೆಯಲ್ಲಿ ಗ್ರಾಹಕರು ವಿದ್ಯುತ್ ಸಂಬಂಧಿತ ಸಮಸ್ಯೆ ಪರಿಹರಿಸಿಕೊಳ್ಳಬಹುದು ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

PRIDEMAN SECURITY SERVICES
REQUIRED
Manager Business Development, Field Officers, Security Officers for Near Electronic City Bangalore.
Call: 97864 33233 99933 34571

PUBLIC NOTICE

THE TOWN CO-OPERATIVE BANK LTD., HOSKOTE
Sahakara Bhavana, K.R.Road, Hoskote-562114, Bangalore Rural District
111th ANNUAL GENERAL BODY MEETING NOTICE
The 111th Annual General Body Meeting for the year 2023-24 is scheduled on 22.09.2024, Sunday at 10.45 a.m at "HJSS Convention Hall", Near Sree Avimukteshwara swamy Temple, Kote, Sulibele Road, Hoskote under the Chairmanship of Shri B.Nagaraj, President. The notices have been posted in time to the addresses of the Members. In case not received the notices the respected members are requested to treat this as Meeting Notice and attend the above scheduled Annual General Body meeting along with ID Card issued by the bank.
By order of the Board,
Sd/- (M.ANJINAPPA)
General Manager
Place : Hoskote; Date: 17/09/2024

BUSINESS

Business Offers

General

MONTHLY REVENUE is assured by buying Data Particle. WA: 7019246661

REAL ESTATE SELLING

Industrial & Factory

Tumkur Road

SALE, 45000 sqft, near Taj Hotel, Goraguntepalya Ring Road. Suitable for High Range Apartment, Hotel, Mall. Brokers Excuse. 9141326819

PERSONAL

Change of Name

I,POOJA Ramesh Ganadinni W/o Pavan A Shandilya R/o No-23 Ground Floor Hasiru, 1st main, Near Sagardeep Apartment, Spoorthi Nagara Arehalli, Subramanyapura, Bengaluru-560061 have changed my name to G Pooja vide affidavit no IN-KA16518414455652W dated 17.09.2024, for all purposes. Notary, B.K.R.Krishnamurthy, Bangalore.

I, SRINIVAS. E.J. Residing at #17, 16th cross, Nagasandra, Bangalore-73 have changed my name as SREENIVASA, vide affidavit dated 18/09/2024 before Notary V.Anjanappa, Bangalore

I, GIRDHAR GOPAL Residing at No.4, 2nd Floor,5th Main, Behind Chandra Layout, Water Tank,BCC Layout, Bengaluru-560040. Have Changed my Name as GIRDHAR GOPAL BAGRI vide affidavit Dated:18.09.2024 before Notary B.M.CHANDRASHEKAR,Bangalore

I, M AJAY KUMAR, have changed my name to M AJAYA KUMAR, Vide Affidavit dated 18.09.2024 sworn before advocate and notary Ambujakshi, Bangalore

Lost

DOCUMENT LOST
I, B.M. ANAND, aged about 76yrs, S/o Late. B.S. Madhava Rao, R/at No.30 MG, "Anurag" 1st Main Road, KHB Colony, Basaveshwaranagar, Bangalore - 560 069, have lost my Original Sale Deed In my name B.M. Anand, Document No. 3832/1998-99, of Book-1, Volume No. 2145, at pages 85 to 88, in the office Senior Sub-Registrar, Rajajinagar. while in Transit. Finders please Contact: 9845458267/ 9900166057.

CONNECT

How To Profit From STOCK MARKET Moves Through Trading?
DYNAMIC SYSTEM & DYNAMIC LIVE
Spend Less Than 1 MINUTE per HOUR for Futures & Options Market Trades.
FREE Seminar on Advance Revolutionary-2024 DYNAMIC SUPER POWER TRADING
For: Beginners, Day Traders, Investors, Retired people, Housewives and Working Professionals.
Today, Last Seminar Thursday 19th Sep @ 6:30pm
Venue: Manpho Bell Hotel & Convention Center 88, Next to City Railways Station, Bangalore - 560023
"You can attend any one seminar"
Email: enquiry@dynamiclive.in Website: http://dynamiclive.in
*All Stock Market basis Investments are subject to market risk

DOCUMENT LOST
I, K. MADHUSUDHAN REDDY, R/at #2, 1st Cross, Jayanthi Nagar Extension, Bangalore-560 043, have lost my Original Mother Deed Identification Document Bearing No.5251-1992-93 dated: 06-11-1992 Registered in the office of Sub-Registrar Krishnarajpura, while in Transit. Finders please Contact: 9448849079

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

IN THE COURT OF THE XI ADDL. DISTRICT & SESSION COURT BANLORE RURAL, BANGALORE
COM.OS. No. 208/2024
BETWEEN: PLAINTIFF: CANARA BANK, Nelamangala Branch, Roopa Complex, B.H. Road, Nelamangala, Bangalore Rural Dist.
DEFENDANT: M/s Manjunath Bakery & Sweets, by its Proprietor Sri. Manjunath N.
SUMMONS ISSUED UNDER RULE V RULE 20(1A) AND (1-A) OF THE CODE OF CIVIL PROCEDURE
To, Defendant: M/s Manjunath Bakery and Sweets by its Proprietor Sri. Manjunath N. S/o Nagaraju S. Aged about 45 years, At Near Anjaneya Temple, Ground Floor, No.199, Raghavendra Layout, Prasann anjaneya Swamy Layout, Nelamangala, Bengaluru-562123, Also at 6th Cross, 2nd Main, Near TB Bus Stop, Subash Nagara, Nelamangala, Bengaluru Rural District-562123
WHEREAS, the above named Plaintiff bank has instituted suit against you for Recovery of sum of Rs. 6,44,123.00 (Rupees Six Lakhs Forty Four thousand and One Hundred and Twenty Three only) together with the court costs, current and future Interest at contractual rate of interest 12.35% p.m. from dat eof suit till the date of payment. You are hereby called upon to appear before this court in person or By advocate on the 16.10.2024 at 11:00 AM, in the forenoon to defend to defend yourself in Default of your apperance on the day mentioned above; the suit will be heard and determined in your absence. Given under my hand seal of the court this 18th day of September 2024.
By order of the Court
Sign/- Sheristedar
X Addl. District & Sessions Court, Bangalore Rural District, Bangalore
Advocate for Plaintiff: Mohamed Afroze Ahamed Advocate & Legal adviser, Opp.SBI Bank, M.G. Road, Tumkur.

IN THE COURT OF THE XI ADDL. DISTRICT & SESSION COURT BANLORE RURAL, BANGALORE
COM.OS. No. 207/2024
BETWEEN: PLAINTIFF: CANARA BANK, Nelamangala Branch, Roopa Complex, B.H. Road, Nelamangala, Bangalore Rural Dist.
DEFENDANT: M/s A N R Auto Parts by its Proprietor P. Lakshmaiah
SUMMONS ISSUED UNDER RULE V RULE 20(1A) AND (1-A) OF THE CODE OF CIVIL PROCEDURE
To, Defendant: A.N.R. Auto Parts by its Prop. P.Lakshmaiah S/o Sri Pedanna Yellappa, Aged about 55 years, at No.40 Vinobha Nagara, Siddaiah Road, 1st Cross, Nela mangala, Bengaluru. Also at Kempe Gowda Circle, Kunigal Circle, Nelamangala, Bengaluru Rural-562123.
WHEREAS, the above named Plaintiff bank has instituted suit against you for Recovery of sum of Rs. 4,11,831.00 (Rupees Four Lakhs Eleven thousand and Eight Hundred and Thirty One only) together with the court costs, current and future Interest at contractual rate of interest 13% p.m. from date of suit till the date of payment. You are hereby called upon to appear before this court in person or By advocate on the 16.10.2024 at 11:00 AM, in the forenoon to defend to defend yourself in Default of your appearance on the day mentioned above; the suit will be heard and determined in your absence. Given under my hand seal of the court this 18th day of September 2024.
By order of the Court
Sign/- Sheristedar
X Addl. District & Sessions Court, Bangalore Rural District, Bangalore
Advocate for Plaintiff: Mohamed Afroze Ahamed Advocate & Legal adviser, Opp.SBI Bank, M.G. Road, Tumkur.

THE GRAIN MERCHANTS CO-OPERATIVE BANK LTD. Estd:1927
ದಿ ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಪ್ರಧಾನ ಕಛೇರಿ: ನಂ.2, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018
ದೂ: 26677552, 26679041, 42047786, 7411414285
E-mail: gmc@gmcbank.net, Website: www.gmcbank.net
95ನೇ ವಾರ್ಷಿಕ ಸರ್ವಸದಸ್ಯರ ಸಭೆ ನೋಟೀಸು
ಬ್ಯಾಂಕಿನ 2023-24ನೇ ಸಾಲಿನ 95ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ 22.09.2024ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಬ್ಯಾಂಕಿನ ಪ್ರಧಾನ ಕಛೇರಿ ಆವರಣದಲ್ಲಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆರ್.ಪಿ.ಎಂ. ಸತ್ಯನಾರಾಯಣರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಎಲ್ಲಾ ಸದಸ್ಯರುಗಳಿಗೂ ಈಗಾಗಲೇ ಸೂಚನಾ ಪತ್ರವನ್ನು ಅಂಚೆ ಮೂಲಕ ಕಳುಹಿಸಲಾಗಿದೆ, ತಲುಪದಿರುವಂತಹ ಸದಸ್ಯರುಗಳು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.
ಬೆಳಿಗ್ಗೆ 9.00 ಕ್ಕೆ "ಪ್ರತಿಭಾ ಪುರಸ್ಕಾರ"
ಸ್ಥಳ: ಬೆಂಗಳೂರು
ದಿ.28.08.2024
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಉಮಾ ಆರ್.
ಪ್ರಭಾರ ಕಾರ್ಯದರ್ಶಿ
ಸರ್ವಸದಸ್ಯರ ಸಭೆಗೆ ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯ
ಸೂಚನೆ: ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾದ ಸದಸ್ಯರುಗಳ ಖಾತೆಗೆ ಓಡಾಟದ ವೆಚ್ಚವಾಗಿ ರೂ.500/–ಗಳನ್ನು ವರ್ಗಾಯಿಸಲಾಗುವುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ: 17 ಹಳ್ಳಿಗಳಿಗೆ ಮಾರ್ಗಸೂಚಿ ದರದ ಆಧಾರದಲ್ಲಿ ತೆರಿಗೆ ನಿಗದಿ

ಕಾರಂತ ಬಡಾವಣೆ: ಅಭಿವೃದ್ಧಿ ತೆರಿಗೆ ನಿಗದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಶಿವರಾಮಕಾರಂತ ಬಡಾವಣೆ ವ್ಯಾಪ್ತಿಯ 17 ಹಳ್ಳಿಗಳ ವಸತಿ ಉದ್ದೇಶದ ನಿವೇಶನ ಹಾಗೂ ಕಟ್ಟಡಗಳಿಗೆ ಅಭಿವೃದ್ಧಿ ತೆರಿಗೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ನಿಗದಿಗೊಳಿಸಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ ನಿಗದಿಪಡಿಸಿರುವ ಮಾರ್ಗಸೂಚಿ ದರದಂತೆ ಅಭಿವೃದ್ಧಿ ತೆರಿಗೆಯನ್ನು ನಿಗದಿಪಡಿಸಲಾಗಿದೆ. ಬಿಡಿಎ ಕಾಯ್ದೆ 1976ರ ಸೆಕ್ಷನ್ 20 ಮತ್ತು 21ರಂತೆ ಒಂದು ಬಾರಿ ಪಾವತಿಸಲಾಗುವ ಪುರೋಭಿವೃದ್ಧಿ ತೆರಿಗೆಯನ್ನು (ಅಭಿವೃದ್ಧಿ ತೆರಿಗೆ) ಪ್ರತಿ ಚದರ ಮೀಟರ್ ಅಥವಾ ಪ್ರತಿ ಚದರಡಿಗೆ ವಿಧಿಸಲಾಗುತ್ತದೆ.

ಪ್ರಾಧಿಕಾರದ ಸಭೆಯಲ್ಲಿ ಈ ವಿಷಯ ಮಂಡನೆಯಾಗಿ, ಅದನ್ನು ಅನುಮೋದಿಸಲಾಗಿದೆ. ಕೆಲವೇ ದಿನಗಳಲ್ಲಿ ರಾಜ್ಯ ಸರ್ಕಾರದಿಂದ ಅಧಿಸೂಚನೆ ಹೊರಬೀಳಲಿದ್ದು, ಅಭಿವೃದ್ಧಿ ತೆರಿಗೆಯನ್ನು ಪಾವತಿಸಿಕೊಳ್ಳುವ ಪ್ರಕ್ರಿಯೆಯನ್ನು ಬಿಡಿಎ ಆರಂಭಿಸಲಿದೆ.

ಅಭಿವೃದ್ಧಿ ತೆರಿಗೆ ದರವನ್ನು ಆಯಾ ಗ್ರಾಮಗಳ ವಸತಿ ಪ್ರದೇಶಗಳಿಗೆ ನಿಗದಿಪಡಿಸಲಾಗಿದ್ದು, ವಾಣಿಜ್ಯ ಉದ್ದೇಶದ ಪ್ರದೇಶಗಳಿಗೆ ವಸತಿ ನಿವೇಶನಗಳಿಗೆ ನಿಗದಿಯಾಗಿರುವ ತೆರಿಗೆಗಿಂತ ಶೇ 80ರಷ್ಟು ಹೆಚ್ಚು ವಿಧಿಸಲಾಗುತ್ತದೆ. ಕೈಗಾರಿಕೆ ಪ್ರದೇಶಗಳಿಗೆ ಶೇ 60ರಷ್ಟು ತೆರಿಗೆ ಅಧಿಕವಾಗುತ್ತದೆ. ಮೂಲೆ ನಿವೇಶನ ಅಥವಾ ಸ್ವತ್ತಿನ ಎರಡೂ ಕಡೆ ರಸ್ತೆ ಇದ್ದರೆ ವಸತಿ ನಿವೇಶನದ ಅಭಿವೃದ್ಧಿ ತೆರಿಗೆಗಿಂತ ಶೇ 10ರಷ್ಟು ಹೆಚ್ಚು ಪಾವತಿಸಬೇಕಾಗುತ್ತದೆ.

ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ಸಮಿತಿ ಸಕ್ರಮಗೊಳಿಸಿರುವ 5,171 ಕಟ್ಟಡಗಳಿಗೂ ಈ ಅಭಿವೃದ್ಧಿ ತೆರಿಗೆ ಅನ್ವಯವಾಗಲಿದೆ.

ಬೇಡಿಕೆ ನೋಟಿಸ್ ಜಾರಿ: 'ಶಿವರಾಮ ಕಾರಂತ ಬಡಾವಣೆ ವ್ಯಾಪ್ತಿಯ 17 ಹಳ್ಳಿಗಳಲ್ಲಿನ ಆಸ್ತಿ ಮಾಲೀಕರಿಗೆ ಅಭಿವೃದ್ಧಿ ತೆರಿಗೆ ಪಾವತಿಸುವಂತೆ 'ಡಿಮ್ಯಾಂಡ್ ನೋಟಿಸ್' ಜಾರಿ ಮಾಡಲಾಗುತ್ತದೆ. ಅದಕ್ಕಾಗಿ ಒಬ್ಬ ಅಧಿಕಾರಿಯನ್ನು ನೇಮಿಸಲಾಗಿದೆ. ನೋಟಿಸ್‌ನಂತೆ ತೆರಿಗೆ ಪಾವತಿ ಮಾಡಿದರೆ, ಅವರಿಗೆ ಖಾತಾ ನೀಡಲಾಗುತ್ತದೆ. ಕಾನೂನು ತಜ್ಞರ ಸಲಹೆಗಳನ್ನು ಪಡೆದುಕೊಂಡೇ ಈ ತೆರಿಗೆಯನ್ನು ನಿಗದಿ ಮಾಡಲಾಗಿದೆ' ಎಂದು ಬಿಡಿಎ ಆರ್ಥಿಕ ಸದಸ್ಯ ಎ. ಲೋಕೇಶ್ ತಿಳಿಸಿದರು.

ಬಿಡಿಎ ಸೂತ್ರದಂತೆ ಅಭಿವೃದ್ಧಿ ತೆರಿಗೆ

'ಅಭಿವೃದ್ಧಿ ತೆರಿಗೆಯನ್ನು ಬಿಡಿಎ ಸೂತ್ರದಂತೆಯೇ ನಿಗದಿ ಮಾಡಲಾಗಿದೆ. ಹೆಚ್ಚು ಕಡಿಮೆ ಎಂಬುದೇನೂ ಇಲ್ಲ. ಬಿಡಿಎ ಸ್ವಾಧೀನಕ್ಕೆ ಮುನ್ನ ಆ ಹಳ್ಳಿಯಲ್ಲಿದ್ದ ಮಾರ್ಗಸೂಚಿ ದರ ಹಾಗೂ 2024ರಲ್ಲಿನ ಮಾರ್ಗಸೂಚಿ ದರದ ವ್ಯತ್ಯಾಸದಲ್ಲಿ ಮೂರನೇ ಒಂದರಷ್ಟನ್ನು ಅಭಿವೃದ್ಧಿ ತೆರಿಗೆಯನ್ನಾಗಿ ನಿಗದಿ ಮಾಡಲಾಗಿದೆ. ಕಾರಂತ ಬಡಾವಣೆಗಾಗಿ ಬಿಡಿಎ ಅಭಿವೃದ್ಧಿಪಡಿಸಿರುವ ಮೂಲಸೌಕರ್ಯಗಳನ್ನು 17 ಹಳ್ಳಿಗಳ ವ್ಯಾಪ್ತಿಯಲ್ಲಿರುವವರೆಲ್ಲ ಉಪಯೋಗಿಸುತ್ತಿದ್ದಾರೆ. ತೆರಿಗೆ ಪಾವತಿಸಿಕೊಂಡು ಬಿಡಿಎ ಖಾತಾ ನೀಡುವುದರಿಂದ ಭೂಮಿ ಮೌಲ್ಯವೂ ಹೆಚ್ಚುತ್ತದೆ' ಎಂದು ಬಿಡಿಎ ಆಯುಕ್ತ ಎನ್. ಜಯರಾಂ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಮುಖ್ಯಾಂಶಗಳು

- 1200 ಚದರ ಅಡಿಯ ನಿವೇಶನಕ್ಕೆ ₹51 ಸಾವಿರದಿಂದ ₹13.78 ಲಕ್ಷ
- ₹1000 ಸಾವಿರ ಕೋಟಿ ಸಂಗ್ರಹದ ಗುರಿ
- ವಾಣಿಜ್ಯಕ್ಕೆ ಶೇ 80, ಕೈಗಾರಿಕೆಗೆ ಶೇ 60ರಷ್ಟು ಹೆಚ್ಚು

ಅಭಿವೃದ್ಧಿ ತೆರಿಗೆ ಎಲ್ಲೆಲ್ಲಿ ಎಷ್ಟು? (₹ನಲ್ಲಿ)

ಹಳ್ಳಿ	ಪ್ರತಿ ಚದರ ಮೀಟರ್‌ಗೆ	ಪ್ರತಿ ಚದರ ಅಡಿಗೆ
ಸೋಮಶೆಟ್ಟಿಹಳ್ಳಿ	5,000	465
ಗಾಣಿಗರಹಳ್ಳಿ	5,000	465
ಬ್ಯಾಲಕೆರೆ	1,833	170
ರಾಮಗೊಂಡನಹಳ್ಳಿ	11,067	1,028
ದೊಡ್ಡಬೆಟ್ಟಹಳ್ಳಿ	8,667	805
ಕೆಂಪಾಪುರ	12,367	1,149
ಆವಲಹಳ್ಳಿ	6,042	561
ಹಾರೋಹಳ್ಳಿ	1,790	166
ಮೇಡಿ ಅಗ್ರಹಾರ	667	62
ಶಾಮರಾಜಪುರ	1,833	170
ವೀರಸಾಗರ	733	68
ವಡೇರಹಳ್ಳಿ	833	77
ಕೆಂಪನಹಳ್ಳಿ	465	43
ಜೆ.ಬಿ.ಕಾವಲ್	2,000	186
ಕಾಳತಮ್ಮನಹಳ್ಳಿ	1,167	180
ಲಕ್ಷ್ಮೀಪುರ	5,000	465
ಗುಣಿ ಅಗ್ರಹಾರ	2,333	217

ಅಭಿವೃದ್ಧಿಯನ್ನೇ ಮಾಡಿಲ್ಲ, ತೆರಿಗೆ ಏಕೆ?

'ಕಾರಂತ ಬಡಾವಣೆಯ ಸುತ್ತಮುತ್ತ ಹಳ್ಳಿಗಳಿಗೆ ಬಿಡಿಎ ಯಾವ ಮೂಲ ಸೌಕರ್ಯವನ್ನೂ ಒದಗಿಸಿಲ್ಲ. ಗ್ರಾಮ ಪಂಚಾಯಿತಿ ಹಾಗೂ ಕೆಲವು ಭಾಗದಲ್ಲಿ ಬಿಬಿಎಂಪಿ ಸೌಲಭ್ಯ ಕಲ್ಪಿಸಿವೆ. ಆದ್ದರಿಂದ ಬಿಡಿಎಗೆ ಏಕೆ ಅಭಿವೃದ್ಧಿ ತೆರಿಗೆ ಕಟ್ಟಬೇಕು. ಮಾರ್ಗಸೂಚಿ ದರದಂತೆ ತೆರಿಗೆ ನಿಗದಿ ಮಾಡುವವರು ಅದರಂತೆಯೇ ಪರಿಹಾರವನ್ನೂ ನೀಡಬೇಕು ಅಲ್ಲವೇ' ಎಂದು ಡಿಎಸ್‌ಎಸ್‌ನ (ಸಂಯೋಜಿತ) ಬೆಂಗಳೂರು ಜಿಲ್ಲೆಯ ಸಂಯೋಜಕ ಎಂ. ರಮೇಶ್ ರಾಮಗೊಂಡನಹಳ್ಳಿ ಪ್ರಶ್ನಿಸಿದರು.

ಬಿಡಿಎ ನಿರ್ಮಾಣ ಮಾಡುತ್ತಿರುವ ಶಿವರಾಮಕಾರಂತ ಬಡಾವಣೆ (ಸಂಗ್ರಹ ಚಿತ್ರ)

ಸಚಿವೆ ಶೋಭಾ ಕರಂದ್ಲಾಜೆ ಅವರು ರಕ್ತದಾನ ಮಾಡಿದರು.

ಆರೋಗ್ಯವಂತರು ರಕ್ತದಾನ ಮಾಡಿ: ಶೋಭಾ ಕರಂದ್ಲಾಜೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಆರೋಗ್ಯವಾಗಿರುವ ಪ್ರತಿಯೊಬ್ಬರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಬೇಕು' ಎಂದು ಕೇಂದ್ರದ ಅತಿ ಸಣ್ಣ, ಸಣ್ಣ ಹಾಗೂ ಮಧ್ಯಮ ಕೈಗಾರಿಕಾ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮನವಿ ಮಾಡಿದರು.

ಉಲ್ಲಾಳ ವಾರ್ಡ್ ಬಿಜೆಪಿ ಘಟಕ, ಯುವ ಮೋರ್ಚಾ, ಮಹಿಳಾ ಮೋರ್ಚಾ ವತಿಯಿಂದ ಭುವನೇಶ್ವರಿ ನಗರದಲ್ಲಿ ಪ್ರಧಾನಿ ನರೇಂದ್ರ ಮೋದಿ ಹುಟ್ಟು ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಆರೋಗ್ಯ ತಪಾಸಣೆ ಮತ್ತು ರಕ್ತದಾನ ಶಿಬಿರದಲ್ಲಿ ರಕ್ತದಾನ ಮಾಡಿದ ಅವರು ಮಾತನಾಡಿದರು.

ಕೆಂಗೇರಿ ಪುರಸಭೆ ಮಾಜಿ ಉಪಾಧ್ಯಕ್ಷ ಜಿ. ಮುನಿರಾಜು, ಉಲ್ಲಾಳ್ ವಾರ್ಡ್ ಬಿಜೆಪಿ ಅಧ್ಯಕ್ಷ ಟಿ. ಜಯರಾಮು, ಯಶವಂತಪುರ ನಗರ ಮಂಡಲ ಅಧ್ಯಕ್ಷ ಅನಿಲ್ ಚಳಗೇರಿ, ಯುವ ಮೋರ್ಚಾ ಬಿಜೆಪಿ ಅಧ್ಯಕ್ಷ ವಿ. ನಾಗರಾಜು ರಕ್ತದಾನ ಮಾಡಿದರು.

ಶಿಬಿರದಲ್ಲಿ 48 ಮಂದಿ ರಕ್ತದಾನ ಮಾಡಿದರು. ನೂರಕ್ಕೂ ಹೆಚ್ಚು ಜನರು ಆರೋಗ್ಯ ತಪಾಸಣೆಗೊಳಗಾದರು.

ಪಾಲಿಕೆ ಮಾಜಿ ಸದಸ್ಯರಾದ ರ.ಅಂಜನಪ್ಪ, ವಿ.ವಿ.ಸತ್ಯನಾರಾಯಣ, ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಆರ್.ಪಿ. ಪ್ರಕಾಶ್, ದುಬಾಸಿಪಾಳ್ಯ ರಾಮು, ಗಂಗಾ, ಮಹಿಳಾ ಮೋರ್ಚಾ ಅಧ್ಯಕ್ಷೆ ಸ್ವಾತಿ .ಆರ್, ಜಿಲ್ಲಾ ಸಮಿತಿ ಸದಸ್ಯರಾದ ಕದರಪ್ಪ, ಪ್ರೇಮ ನಾಗಯ್ಯ, ಬೆಂಗಳೂರು ಉತ್ತರ ಜಿಲ್ಲಾ ಬಿಜೆಪಿ ಫಲಾನುಭವಿಗಳ ಪ್ರಕೋಷ್ಠ ಅಧ್ಯಕ್ಷೆ ಆಶಾ ಲೋಹಿತ್, ಮಂಡಲ ಅಧ್ಯಕ್ಷೆ ರೂಪ ಇದ್ದರು.

ಮೈಸೂರು ರೇಸ್

ಮೇಯ್ನ್ ಮ್ಯಾಜಿಕ್ ಗೆಲ್ಲುವ ನಿರೀಕ್ಷೆ

ಎಚ್.ಎಚ್. ಶ್ರೀ ಚಾಮರಾಜ ಒಡೆಯರ್ ಮೆಮೋರಿಯಲ್ ಟ್ರೋಫಿ ಗುರುವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೇಯ್ನ್ ಮ್ಯಾಜಿಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ರೂಮರ್ ಲೇಡಿ 1, ಅನುಶ್ಟುಭ 2, ಸಿಟಿ ಆಫ್ ಹನ್ಸ್ 6
2ನೇ ರೇಸ್: ಸೂಪರ್ ಮಾರ್ವೆಲಾ 4, ಐರಿಶ್ ರಾಕ್‌ಸ್ಟಾರ್ 1, ಡಿ ಫ್ರಾಂಕ್ಸ್ 5
3ನೇ ರೇಸ್: ಟ್ರಿಪಿಟಾಕ 4, ಆಸ್ಪೀಸಿಯಸ್ ಕ್ವೀನ್ 8, ರೆಕಾರ್ಡೋ 3
4ನೇ ರೇಸ್: ಮೇಯ್ನ್ ಮ್ಯಾಜಿಕ್ 2, ಸ್ಟೆಂಟೋರಿಯನ್ 4, ಕಾರ್ಟರ್ 1
5ನೇ ರೇಸ್: ಕ್ರಿಮ್ಸನ್ ಫ್ಲೇಮ್ 2, ಲೆಕ್ಸ್ ಲೂಥರ್ 9, ಸೊಕ್ರೆಟಸ್ 10
6ನೇ ರೇಸ್: ಡಿ ರೋಮನ್ ರೀನ್ಸ್ 3, ರೈಸ್ ಎ ಬಕ್ 7, ಹೀರೊಯಿಸ್ಮ್ 4

ಉತ್ತಮ ಬೆಟ್: ಕ್ರಿಮ್ಸನ್ ಫ್ಲೇಮ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಸುಧಾ, ಮಯೂರ ಓದಿರಿ

ಸೌಹಾರ್ದ ಕಾಪಾಡಿ ಅಲ್ಪಸಂಖ್ಯಾತರ ಆಯೋಗ

ನಾಗಮಂಗಲ: 'ಪಟ್ಟಣದಲ್ಲಿ ದುರಾದೃಷ್ಟವಶಾತ್ ಗಲಭೆ ಉಂಟಾಗಿದ್ದು, ಎಲ್ಲಾ ಕೋಮು, ಜನಾಂಗದವರು ಸೌಹಾರ್ದ ಕಾಪಾಡಿ, ಸಹಬಾಳ್ವೆ ನಡೆಸಬೇಕು' ಎಂದು ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು.ನಿಸಾರ್ ಅಹಮ್ಮದ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಮುಸ್ಲಿಂ ಮುಖಂಡರು ಮತ್ತು ಸಾರ್ವಜನಿಕರೊಂದಿಗೆ ಸಮಾಲೋಚನಾ ಸಭೆ ನಡೆಸಿದ ಅವರು, ಗಲಭೆಗೆ ಕಾರಣ ಮತ್ತು ಆಗಿರುವ ಹಾನಿ ಕುರಿತು ಮಾಹಿತಿ ಪಡೆದುಕೊಂಡರು.

'ಅಂದು ಪೊಲೀಸರು ಸರಿಯಾಗಿ ಬಂದೋಬಸ್ತ್ ಆಯೋಜಿಸಿದ್ದರೆ ಗಲಭೆ ಆಗುತ್ತಿರಲಿಲ್ಲ' ಎಂದು ಮುಸ್ಲಿಂ ಮುಖಂಡರು ದೂರಿದರು.

ಅತ್ಯಾಚಾರ: ಶಾಸಕ ಮುನಿರತ್ನ ವಿರುದ್ಧ ಎಫ್‌ಐಆರ್

ನನ್ನನ್ನು ಬಳಸಿಕೊಂಡು ಹನಿಟ್ರ್ಯಾಪ್: ಕಗ್ಗಲಿಪುರ ಪೊಲೀಸ್ ಠಾಣೆಗೆ ಸಂತ್ರಸ್ತ ಮಹಿಳೆ ದೂರು

ಪ್ರಜಾವಾಣಿ ವಾರ್ತೆ

ರಾಮನಗರ: ದಲಿತ ಸಮುದಾಯಕ್ಕೆ ಸೇರಿದ ಗುತ್ತಿಗೆದಾರನಿಗೆ ಜಾತಿನಿಂದನೆ ಹಾಗೂ ಜೀವ ಬೆದರಿಕೆ ಹಾಕಿದ ಆರೋಪದ ಮೇಲೆ ಜೈಲು ಸೇರಿರುವ ರಾಜರಾಜೇಶ್ವರಿ ನಗರದ ಶಾಸಕ ಮುನಿರತ್ನ ವಿರುದ್ಧ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿ, ಹನಿಟ್ರ್ಯಾಪ್‌ಗೆ ಬಳಸಿಕೊಂಡಿರುವ ಆರೋಪ ಕೇಳಿ ಬಂದಿದೆ.

ಸಮಾಜ ಸೇವಕಿಯಾಗಿ ಗುರುತಿಸಿಕೊಂಡು ಬಿಜೆಪಿಯಲ್ಲೂ ಸಕ್ರಿಯವಾಗಿರುವ ರಾಜರಾಜೇಶ್ವರಿ ನಗರದ ಸುಮಾರು 40 ವರ್ಷದ ಮಹಿಳೆ ಬುಧವಾರ ದೂರು ಕೊಟ್ಟಿದ್ದಾರೆ. ಇದನ್ನು ಆಧರಿಸಿ ಮುನಿರತ್ನ, ಕೃತ್ಯಕ್ಕೆ ಸಹಕರಿಸಿದ ಅವರ ಗನ್‌ಮ್ಯಾನ್ ವಿಜಯಕುಮಾರ್, ಸುಧಾಕರ, ಕಿರಣ್ ಕುಮಾರ್, ಲೋಹಿತ್ ಗೌಡ, ಮಂಜುನಾಥ ಹಾಗೂ ಲೋಕಿ ಸೇರಿ 7 ಮಂದಿ ವಿರುದ್ಧ ಪ್ರಕರಣ ದಾಖಲಾಗಿದೆ.

ದೂರು ನೀಡುವ ಸಲುವಾಗಿ ಮಹಿಳೆ ಬುಧವಾರ ಮಧ್ಯಾಹ್ನ ರಾಮನಗರದಲ್ಲಿರುವ ಎಸ್‌ಪಿ ಕಚೇರಿಗೆ ಬಂದಿದ್ದರು. ಮಹಿಳೆಯನ್ನು ವಿಚಾರಿಸಿ ಮಾಹಿತಿ ಪಡೆದ ಪೊಲೀಸರು, ಕೃತ್ಯ ನಡೆದ ಸ್ಥಳ ಕಗ್ಗಲಿಪುರ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವುದರಿಂದ ಅಲ್ಲಿಗೇ ಹೋಗಿ ದೂರು ಕೊಡುವಂತೆ ಸೂಚಿಸಿದರು.

ಅದರಂತೆ, ಕಗ್ಗಲಿಪುರ ಠಾಣೆಗೆ ಬಂದ ಮಹಿಳೆ ತನ್ನ ಮೇಲೆ 2020ರಿಂದ 2022ರವರೆಗೆ ಅತ್ಯಾಚಾರ ನಡೆಸಿ, ಹನಿಟ್ರ್ಯಾಪ್‌ಗೆ ಬಳಸಿಕೊಂಡಿರುವ ಕುರಿತು ದೂರು ಕೊಟ್ಟಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ದೂರು ಪರಿಶೀಲಿಸಿದ ಠಾಣೆಯ ಅಧಿಕಾರಿಗಳು ನಂತರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದೂರಿನಲ್ಲೇನಿದೆ?: ಕೋವಿಡ್ ಸಂದರ್ಭದಲ್ಲಿ ನನ್ನ ಸೇವಾ ಕಾರ್ಯ ಗುರುತಿಸಿ ಕರೆ ಮಾಡಿದ್ದ ಮುನಿರತ್ನ, 'ನಮಸ್ತೆ ಲೀಡರ್ ನಾನು ನಿಮ್ಮ ಭಾಗದ ಶಾಸಕ. ನಿಮ್ಮ ಬಗ್ಗೆ ಕೇಳಿದ್ದೀನಿ. ನನ್ನನ್ನು ಬಂದು ಭೇಟಿ ಮಾಡಿ ಎಂದಿದ್ದರು. ಅದರಂತೆ, ಭೇಟಿ ಮಾಡಿದ ಬಳಿಕ ಇಬ್ಬರ ನಡುವೆ ಆತ್ಮೀಯತೆ ಬೆಳೆದಿತ್ತು. ಆಗಾಗ ವಿಡಿಯೊ ಕಾಲ್ ಮಾಡಿ ಮಾತನಾಡುತ್ತಿದ್ದರು. ನಗ್ನವಾಗಿ ಕರೆ ಮಾಡುವಂತೆ ಒತ್ತಾಯಿಸಿದಾಗ, ನಾನು ನಿರಾಕರಿಸಿದ್ದೆ' ಎಂದು ತಿಳಿಸಿದ್ದಾರೆ.

ಒಮ್ಮೆ ಕರೆ ಮಾಡಿ, ನಿಮ್ಮಿಂದ ಒಂದು ಸಹಾಯವಾಗಬೇಕು ಎಂದು ಕೇಳಿ, ಸ್ಥಳವೊಂದಕ್ಕೆ ಬರಲು ಸೂಚಿಸಿದ್ದರು. ಅದರಂತೆ, ನಾನು ಹೋದಾಗ 'ನಿನ್ನ ನೋಡಿದರೆ ಮೈ ಜುಮ್ ಎನ್ನುತ್ತದೆ' ಎಂದು ಮಾತನಾಡಿ ತಬ್ಬಿಕೊಳ್ಳಲು ಮುಂದಾದರು. ನಾನು ಆಕ್ಷೇಪಿಸಿದಾಗ, 'ರಾಜಕೀಯಕ್ಕೆ ಬರಬೇಕಾದರೆ ಇದೆಲ್ಲಾ ಸಹಜ ಎಂದರು' ಎಂಬುದಾಗಿ ಆರೋಪಿಸಲಾಗಿದೆ.

ನಾನು ಕಿರುಚಿಕೊಳ್ಳುತ್ತೇನೆ ಎಂದು ಹೇಳಿದಾಗ, 'ನಾನು ಶಾಸಕ. ಅಪಾರ ಜನಬೆಂಬಲವಿದೆ. ನಿನ್ನ ವಿರುದ್ಧವೇ ಕಂಪ್ಲೆಂಟ್ ಮಾಡುತ್ತೇನೆ. ಸುಮ್ಮನಿದ್ದರೆ ಸರಿ' ಎಂದು ಹೆದರಿಸಿ ಅತ್ಯಾಚಾರ ಎಸಗಿದ್ದಾರೆ. ಇಲ್ಲಿ ನಡೆದ ವಿಷಯವನ್ನು ಯಾರಿಗೂ ತಿಳಿಸಬೇಡ. ಈ ಕೊಠಡಿಯಲ್ಲಿ ಕ್ಯಾಮೆರಾ ಅಳವಡಿಸಿದ್ದು, ಎಲ್ಲವೂ ರೆಕಾರ್ಡ್ ಆಗಿದೆ. ನಿನ್ನ ವಿಡಿಯೊ ಎಡಿಟ್ ಮಾಡಿ ಹಂಚುತ್ತೇನೆ' ಎಂದು ಹೆದರಿಸಿದ್ದಾರೆ. ಚಿತ್ರೀಕರಿಸಿ ಟಿ.ವಿ.ಯಲ್ಲಿ ಹಾಕಿ ನನಗೆ ತೋರಿಸಿದ್ದಾರೆ' ಎಂದು ಉಲ್ಲೇಖಿಸಲಾಗಿದೆ.

ವಿಡಿಯೊ ಇಟ್ಟುಕೊಂಡು ಹಲವು ಬಾರಿ ಅತ್ಯಾಚಾರ ಎಸಗಿದ್ದು, 'ನಾನು ಹೇಳಿದಂತೆ ಕೇಳಬೇಕು. ಇಲ್ಲದಿದ್ದರೆ ನಿನ್ನ ಗಂಡ ಮತ್ತು ಮಕ್ಕಳಿಗೆ ವಿಡಿಯೊ ತೋರಿಸುತ್ತೇನೆ' ಎಂದು ಬೆದರಿಕೆ ಹಾಕಿದ್ದಾರೆ. ನಂತರ, ಆತನಿಗೆ ಪರಿಚಿತವಿರುವ ಮತ್ತೊಬ್ಬ ಮಹಿಳೆ ಜೊತೆ ಸೇರಿ ಆತ ಹೇಳಿದವರನ್ನು ಹನಿಟ್ರ್ಯಾಪ್ ಮಾಡಿಸಿದ್ದಾರೆ. ಮರ್ಯಾದೆ ಹಾಗೂ ಪ್ರಾಣಕ್ಕೆ ಅಂಜಿ ಅವರು ಹೇಳಿದಂತೆ ಕೇಳಿದ್ದೇನೆ ಎಂದು ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ಕೆಂಗೇರಿ ಉಪನಗರದ ಹೊಯ್ಸಳ ವೃತ್ತದಲ್ಲಿ ನಡೆದ ಪ್ರತಿಭಟನೆಯಲ್ಲಿ ಶಾಸಕ ಎಸ್‌ಟಿ.ಸೋಮಶೇಖರ್, ವಿಧಾನ ಪರಿಷತ್ ಸದಸ್ಯ ರಾಮೋಜಿ ಗೌಡ, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯರೆಡ್ಡಿ, ಹನುಮಂತರಾಯಪ್ಪ, ಆರ್ಯ ಶ್ರೀನಿವಾಸ್, ಶಿವಮಾದಯ್ಯ, ಬಿ.ಎಚ್.ಪ್ರಭು ಪಾಲ್ಗೊಂಡಿದ್ದರು

ಅಧಿಕಾರಿಗಳ ಹನಿಟ್ರ್ಯಾಪ್‌ಗೆ ಬಳಕೆ

ಮಹಾನಗರ ಪಾಲಿಕೆ ಸದಸ್ಯರು, ಪೊಲೀಸರು, ರಾಜಕೀಯ ಎದುರಾಳಿಗಳು, ಅಧಿಕಾರಿಗಳು ಸೇರಿದಂತೆ ಹಲವರನ್ನು ಹನಿಟ್ರ್ಯಾಫ್ ಮಾಡಲು ಮುನಿರತ್ನ ನನ್ನನ್ನು ಹಾಗೂ ಇತರ ಮಹಿಳೆಯರನ್ನು ಬಳಸಿಕೊಂಡಿದ್ದಾರೆ. ರೆಸಾರ್ಟ್, ಹೋಟೆಲ್, ಹೋಂಸ್ಟೇಗಳಿಗೆ ಅವರನ್ನು ಕರೆಯಿಸಿ ಹನಿಟ್ರ್ಯಾಪ್ ಮಾಡಿಸಿದ್ದಾರೆ. ಈ ಪೈಕಿ, ಕೆಲ ಎಚ್‌ಐವಿ ಸೋಂಕು ಇರುವ ಮಹಿಳೆಯರನ್ನು ಸಹ ಬಳಸಿಕೊಂಡಿದ್ದಾರೆ. ಎಲ್ಲದರ ವಿಡಿಯೊಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದಾರೆ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

'ಶಾಸಕ ಸ್ಥಾನದಿಂದ ವಜಾಗೊಳಿಸಿ'

ಕೆ.ಆರ್.ಪುರ: ಜಾತಿನಿಂದನೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಿ ಗಡಿಪಾರು ಮಾಡಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ಕಾರ್ಯಕರ್ತರು ವೈಟ್‌ಫೀಲ್ಡ್ ಉಪ ವಿಭಾಗದ ಡಿಸಿಪಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಮುನಿರತ್ನ ಅವರು ದಲಿತ ಸಮುದಾಯಕ್ಕೆ ಅಪಮಾನ ಮಾಡಿದ್ದಾರೆ. ಅಲ್ಲದೆ ಮಹಿಳೆಯರ ಬಗ್ಗೆ ಅಸಭ್ಯವಾಗಿ ಮಾತನಾಡಿದ್ದಾರೆ. ಸಮಾಜ ತಲೆತಗ್ಗಿಸುವ ಘಟನೆಗೆ ಸಾಕ್ಷಿಯಾಗಿದೆ ಎಂದು ಸಮಿತಿಯ ಬೆಂಗಳೂರು ವಿಭಾಗೀಯ ಉಪ ಪ್ರಧಾನ ಸಂಚಾಲಕ ಮಣಿಪಾಲ್ ರಾಜಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಪ್ರಧಾನ ಸಂಚಾಲಕ ವಿ.ಗೋವಿಂದ ಕುಮಾರ್ ಮಾತನಾಡಿ, ಮುನಿರತ್ನ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕು ಎಂದು ಆಗ್ರಹಿಸಿದರು.

'ಒಕ್ಕಲಿಗ ಸಮಾಜದ ಕ್ಷಮೆ ಕೇಳಲಿ'

ನೆಲಮಂಗಲ: 'ಶಾಸಕ ಮುನಿರತ್ನ ಅವರು ಒಕ್ಕಲಿಗ ಹಾಗೂ ದಲಿತ ಸಮುದಾಯದ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ಮಹಿಳೆಯರ ಬಗ್ಗೆ ಕೀಳು ಭಾವನೆ ಇಟ್ಟುಕೊಂಡಿದ್ದಾರೆ. ಅವರು ಶಾಸಕರಾಗಿರಲು ಅನರ್ಹರಾಗಿದ್ದು ಅವರ ಸದಸ್ಯತ್ವವನ್ನು ಕೂಡಲೇ ರದ್ದು ಪಡಿಸಬೇಕು' ಎಂದು ವಿಧಾನ ಪರಿಷತ್‌ನ ಮಾಜಿ ಸದಸ್ಯ ಬಿಎಂಎಲ್ ಕಾಂತರಾಜು ಆಗ್ರಹಿಸಿದರು.

ಒಕ್ಕಲಿಗ ಸಮಾಜದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, 'ಮುನಿರತ್ನ ಒಕ್ಕಲಿಗ ಸಮಾಜದ ಕ್ಷಮೆ ಕೇಳಬೇಕು. ಅವರ ಸದಸ್ಯತ್ವ ರದ್ದಾಗದಿದ್ದರೆ ರಾಜ್ಯದಾದ್ಯಂತ ಹೋರಾಟ ಮಾಡಲಾಗುವುದು' ಎಂದು ಎಚ್ಚರಿಸಿದರು.

ಬೂದಿಹಾಳ್ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಂ.ಕೆ.ನಾಗರಾಜು ಮಾತನಾಡಿ, 'ಶಾಸಕ ಮುನಿರತ್ನ ಅವರು ರೌಡಿಯ ರೀತಿ ವರ್ತನೆ ತೋರಿದ್ದಾರೆ. ಅವರಿಂದ ಕೂಡಲೇ ರಾಜೀನಾಮೆ ಪಡೆಯಬೇಕು' ಎಂದು ಆಗ್ರಹಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ನಾಗರಾಜು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ನಾರಾಯಣಗೌಡ, ವಕೀಲ ನಾರಾಯಣಗೌಡ, ಮುಖಂಡರಾದ ಗುರುಪ್ರಕಾಶ್, ಮಿಲ್ಟ್ರಿ ಮೂರ್ತಿ, ಎಚ್.ಜಿ.ರಾಜು ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು.

ಕೆಂಗೇರಿಯಲ್ಲಿ ಮೌನ ಪ್ರತಿಭಟನೆ

ಕೆಂಗೇರಿ: ಕೆಂಗೇರಿಯಲ್ಲೂ ಮುನಿರತ್ನ ವಿರುದ್ಧ ಪ್ರತಿಭಟನೆ ನಡೆಯಿತು.

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮುಖಂಡರು ಹಾಗೂ ಕಾರ್ಯಕರ್ತರು ಹೊಯ್ಸಳ ಸರ್ಕಲ್ ಬಳಿ ಮೌನ ಪ್ರತಿಭಟನೆ ನಡೆಸಲು ಸಮಾವೇಶಗೊಂಡಿದ್ದರು.

ಸ್ಥಳಕ್ಕೆ ಆಗಮಿಸಿದ ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಲು ಆರಂಭಿಸಿದರು. ಭಾಷಣಕ್ಕೆ ಪೊಲೀಸರು ಅವಕಾಶ ನೀಡಲಿಲ್ಲ. ಬಳಿಕ ಕ್ಷೇತ್ರದ ನಾನಾ ಕಡೆಗಳಿಂದ ಬಂದ ಕಾರ್ಯಕರ್ತರು ಕೆಂಗೇರಿ ಉಪನಗರದ ಹೊಯ್ಸಳ ವೃತ್ತದಿಂದ ಗಣೇಶ ಆಟದ ಮೈದಾನದವರೆಗೆ ಮೌನ ಪ್ರತಿಭಟನೆ ನಡೆಸಿದರು. ಪ್ರತಿಭಟನೆಗೆ ಅನುಮತಿ ಕೇಳಿದ್ದರೂ ಹೋರಾಟ ಹತ್ತಿಕ್ಕಲು ಮುಂದಾಗಿರುವುದು ಸರಿ ಅಲ್ಲ ಎಂದು ಶಾಸಕರು ಅಸಮಾಧಾನ ಹೊರಹಾಕಿದರು.

ನಗರದಲ್ಲಿ ಇಂದು

ಸುನೀತಾ ವಿಲಿಯಮ್ಸ್ ಜನ್ಮದಿನದ ಅಂಗವಾಗಿ ಗೌರವ ಸಮರ್ಪಣೆ: ಅತಿಥಿ: ಎ.ಎಸ್. ಕಿರಣ್ ಕುಮಾರ್, ಅಧ್ಯಕ್ಷತೆ: ಎನ್. ಕಮಲಮ್ಮ, ಆಯೋಜನೆ ಮತ್ತು ಸ್ಥಳ: ಬಾಪು ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ತ್ರಿವೇಣಿ ರಸ್ತೆ, ಯಶವಂತಪುರ, ಬೆಳಿಗ್ಗೆ 10

'ವೈವಿಧ್ಯಮಯ ಗ್ರಹಿಕೆಗಳು' ಕಲಾಕೃತಿಗಳ ಪ್ರದರ್ಶನ: ಗಣಪತಿ ಅಗ್ನಿಹೋತ್ರಿ, ಹರಿರಾಮ್ ವಿ., ಪ್ರಕಾಶ್ ಎ.ಎಂ., ವೆಂಕಟಾಚಲಪತಿ, ವೇಣುಗೋಪಾಲ್ ಎಚ್.ಎಸ್., ಆಯೋಜನೆ: ಸ್ಟುಡಿಯೊ ಕಲಾವಿಸ್ತಾರ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11

ಕನ್ನಡ ಕಾರ್ಯಕರ್ತರ ಕಾರ್ಯಾಗಾರ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಮಹೇಶ್ ಅಂಗಡಿ, 'ಕನ್ನಡ ಸಂಘಟನೆ ಸ್ವರೂಪ' ವಿಷಯ ಮಂಡನೆ: ರಾ.ನಂ. ಚಂದ್ರಶೇಖರ, 'ಸಾರ್ವಜನಿಕ ಪ್ರದರ್ಶನ-ಹೋರಾಟ, ಸಭೆ ವ್ಯವಸ್ಥೆ-ನಿರ್ವಹಣೆ': ವ.ಚ. ಚನ್ನೇಗೌಡ, 'ಕಾರ್ಯಕ್ರಮಗಳ ಪೂರ್ವ ಸಿದ್ಧತೆ ಜನ ಸಂಪರ್ಕ': ನಾ. ಶ್ರೀಧರ್, 'ಸಭೆ-ಸಮಾರಂಭಗಳ ಆಯೋಜನೆ ಮತ್ತು ನಿರ್ವಹಣೆ ಹಾಗೂ ಸಮೂಹ ಮಾಧ್ಯಮಗಳ ಸಂಪರ್ಕ': ರೀಟಾ ರೀನಿ, ಆಯೋಜನೆ: ಎಚ್‌ಎಎಲ್ ಕೇಂದ್ರೀಯ ಕನ್ನಡ ಸಂಘ, ಸ್ಥಳ: ಎಚ್‌ಎಎಲ್ ಕೇಂದ್ರೀಯ ಸಂಘದ ಬಿ. ವಿಜಯಕುಮಾರ್ ಸಭಾಂಗಣ, ಎಚ್‌ಎಎಲ್, ಮಧ್ಯಾಹ್ನ 3.30

ಅಮರ ಸಂಗೀತ ನಿರ್ದೇಶಕರ ಜನ್ಮ ಶತಮಾನೋತ್ಸವದ ಅಂಗವಾಗಿ 'ವಿಜಯಭಾಸ್ಕರ್ ವಿಶೇಷ ಮತ್ತು ಸಂಗ್ರಾಹ್ಯ ಅಂಚೆ ಲಕೋಟೆ' ಬಿಡುಗಡೆ: ಅತಿಥಿಗಳು: ಎಸ್. ರಾಜೇಂದ್ರ ಕುಮಾರ್, ತುಳಸಿರಾಮ ನಾಯ್ಡು, ಬಿ.ಆರ್. ಛಾಯಾ, ಎನ್.ಎಸ್. ಶ್ರೀಧರ ಮೂರ್ತಿ, ಅಂಚೆ ಇಲಾಖೆ, ಸ್ಥಳ: ಮೇಘದೂತ ಸಭಾಂಗಣ, ಜಿಪಿಒ ಕಟ್ಟಡ, ಮಧ್ಯಾಹ್ನ 3.30

ವಾರ್ಷಿಕ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ಎಸ್. ತಂಗಡಗಿ, ಪಿ.ಸಿ. ಮೋಹನ್, ಅಜಯ್ ನಾಗಭೂಷಣ್ ಎಂ.ಎನ್., ಧರಣಿದೇವಿ ಮಾಲಗತ್ತಿ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ಚಂದ್ರದಾಸನ್, ಗಣೇಶ್ ಯಾದವ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 4.30

ರಂಗಪರಂಪರೋತ್ಸವ: ಸಂಜೆ 5ಕ್ಕೆ 'ಸಾಲದ ಮಗ' ನಾಟಕ ಪ್ರದರ್ಶನ: ಕಥೆ: ಕುವೆಂಪು, ನಿರ್ದೇಶನ: ಗಣಪತಿ ಗೌಡ, ಸಂಜೆ 6ಕ್ಕೆ '36 ಅಲ್ಲ 63' ನಾಟಕ ಪ್ರದರ್ಶನ: ರಚನೆ: ಎನ್.ಎಸ್. ರಾವ್, ನಿರ್ದೇಶನ: ಗಣಪತಿ ಗೌಡ, ಸಂಜೆ 6.30ಕ್ಕೆ ನಾಟಕೋತ್ಸವಕ್ಕೆ ಚಾಲನೆ: ಶಿವಾರ ಉಮೇಶ್, ಅಧ್ಯಕ್ಷತೆ: ಎಸ್. ರಾಜು, ಅತಿಥಿಗಳು: ಡಿ. ವೆಂಕಟೇಶ್, ಆತ್ಮಾನಂದ ಎಚ್.ಎ., ಸಂಜೆ 7ಕ್ಕೆ 'ಶ್ರೀಮನ್ ಮುಖವಾಗಿತ್ತು' ನಾಟಕ ಪ್ರದರ್ಶನ: ಕಥೆ: ಕುವೆಂಪು, ನಿರ್ದೇಶನ: ಗಣಪತಿ ಗೌಡ, ಆಯೋಜನೆ: ರಂಗ ಪರಂಪರೆ ಟ್ರಸ್ಟ್, ಸ್ಥಳ: ಕಲಾಗ್ರಾಮ ಮಲತ್ತಹಳ್ಳಿ

ಹರಿದಾಸ ವೈಭವ: ಶ್ರೀವಿದ್ಯಾ ದೇಸಾಯಿ, ಹಾರ್ಮೋನಿಯಂ: ಸೃಷ್ಟಿ ದೇಸಾಯಿ, ತಬಲಾ: ಋತುಪರ್ಣ ದೇಸಾಯಿ, ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಸಂಜೆ 7

'ಗರುಡ ಪುರಾಣ' ಧಾರ್ಮಿಕ ಪ್ರವಚನ: ಚಿಮ್ಮಲಗಿ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಬಿಬಿಎಂಪಿ ಎಂಜಿನಿಯರ್‌ಗಳಿಗೆ 'ಸರ್ ಎಂ. ವಿಶ್ವೇಶ್ವರಯ್ಯ' ಪ್ರಶಸ್ತಿ ಪ್ರದಾನ

'ಪಾಲಿಕೆ ಸಿಬ್ಬಂದಿಯಿಂದ ಜನಸೇವೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ವಲಯದ ಉದ್ಯೋಗಿಗಳು ಆರ್ಥಿಕವಾಗಿ ಸಂಪಾದನೆ ಮಾಡುತ್ತಾರೆ. ಪಾಲಿಕೆಯ ಅಧಿಕಾರಿ, ಎಂಜಿನಿಯರ್ ಮತ್ತು ನೌಕರರು ಜನ ಸೇವೆ ಮಾಡುತ್ತಿದ್ದಾರೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬುಧವಾರ ಆಯೋಜಿಸಿದ್ದ ಸರ್ ಎಂ. ವಿಶ್ವೇಶ್ವರಯ್ಯ ಜಯಂತಿ, ಎಂಜಿನಿಯರ್ ಜಯಂತಿ ಹಾಗೂ ಪಾಲಿಕೆಯ ಎಂಜಿನಿಯರ್‌ಗಳಿಗೆ 'ಸರ್ ಎಂ.ವಿಶ್ವೇಶ್ವರಯ್ಯ' ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬಿಬಿಎಂಪಿಯಲ್ಲಿ ಕಾರ್ಯ ನಿರ್ವಹಿಸುವುದು ಬಹಳ ಕಷ್ಟ. ನಮ್ಮ ಎಂಜಿನಿಯರ್‌ಗಳು ಕಠಿಣ ಪರಿಸ್ಥಿತಿ ನಿಭಾಯಿಸಿಕೊಂಡು, ಅವಿರತವಾಗಿ ಕೆಲಸ ಮಾಡುತ್ತಿದ್ದಾರೆ' ಎಂದರು.

'ವಿಶ್ವೇಶ್ವರಯ್ಯರವರು ವಿವಿಧ ರಾಜ್ಯಗಳಲ್ಲಿ ಕೆಲಸ ಮಾಡಿದ್ದಾರೆ. ರಾಜ್ಯ ಶ್ರೀಮಂತಗೊಳಿಸಲು ಮೈಸೂರು ಮಹಾರಾಜರು ಹಾಗೂ ವಿಶ್ವೇಶ್ವರಯ್ಯನವರ ಕೊಡುಗೆ ಅಪಾರ' ಎಂದು ಬಣ್ಣಿಸಿದರು.

'ವಿಶ್ವೇಶ್ವರಯ್ಯರವರ ಸ್ಮರಣೆಯ ಅಂಗವಾಗಿ ಸಾಧಕ ಎಂಜಿನಿಯರ್‌ಗಳಿಗೆ ಸನ್ಮಾನ ಮಾಡಲಾಗಿದೆ. ಪೌರ ಕಾರ್ಮಿಕರು, ವೈದ್ಯರನ್ನೂ ಸ್ಮರಿಸಬೇಕು. ಎಲ್ಲಾ ವಲಯಗಳು ಒಟ್ಟುಗೂಡಿ ಕೆಲಸ ಮಾಡಿದರೆ ಮಾತ್ರ ಹೆಚ್ಚು ಅಭಿವೃದ್ಧಿಯಾಗಲು ಸಾಧ್ಯ' ಎಂದು ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ತಾಂತ್ರಿಕ ಸಲಹೆಗಾರ ಕೆ.ಟಿ. ನಾಗರಾಜು ಮಾತನಾಡಿ, 'ವಿಶ್ವೇಶ್ವರಯ್ಯ ಅವರು ಸುಣ್ಣ, ಇಟ್ಟಿಗೆ, ಮಣ್ಣನ್ನು ಬಳಸಿ ಕೆಆರ್‌ಎಸ್ ಅಣೆಕಟ್ಟು ಕಟ್ಟಿದ್ದಾರೆ. 90 ವರ್ಷವಾದರೂ ಅದು ಇಂದೂ ಸುಸ್ಥಿತಿಯಲ್ಲಿದೆ. ಹಿಂದಿನ ಕಾಲದಲ್ಲಿ ಯಾವುದೇ ವ್ಯವಸ್ಥೆ, ತಾಂತ್ರಿಕ ಸಲಕರಣೆ ಇಲ್ಲದೇ ಇದ್ದರೂ ಸರ್‌ಎಂವಿ ಅವರ ತಂತ್ರಜ್ಞಾನಕ್ಕೆ ಕೊರತೆ ಇರಲಿಲ್ಲ' ಎಂದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಅಮೃತ್‌ರಾಜ್ ಮಾತನಾಡಿ, 'ನಗರ ಅಭಿವೃದ್ಧಿ ಯೋಜನೆಗಳಿಗೆ ಕಾರಣರಾಗಿರುವ ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರ ಜನ್ಮದಿನದಂದು ಪ್ರಶಸ್ತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಪಾಲಿಕೆಯ ಎಲ್ಲ ವಿಭಾಗದ ಸಾಧಕರನ್ನೂ ಗೌರವಿಸಲಾಗುತ್ತದೆ' ಎಂದರು.

ವಿಶೇಷ ಆಯುಕ್ತರಾದ ಡಾ. ಕೆ.ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ಉಪ ಆಯುಕ್ತರಾದ ಮಂಜುನಾಥ ಸ್ವಾಮಿ, ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಉಪಸ್ಥಿತರಿದ್ದರು.

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಎಂಜಿನಿಯರ್‌ಗಳಿಗೆ 'ಸರ್ ಎಂ.ವಿಶ್ವೇಶ್ವರಯ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು

ಪ್ರಶಸ್ತಿ ಪುರಸ್ಕೃತರು

ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ ಆರ್. ಕಬಾಡೆ, ಪೂರ್ವ ವಲಯ ಮುಖ್ಯ ಎಂಜಿನಿಯರ್ ಸುಗುಣ, ನಗರ ಯೋಜನೆಯ ಜಂಟಿ ನಿರ್ದೇಶಕ ರಾಕೇಶ್ ಕುಮಾರ್, ಅಧೀಕ್ಷಕ ಎಂಜಿನಿಯರ್ ಎಚ್.ಎಸ್. ಮಹದೇಶ್, ಕಾರ್ಯಪಾಲಕ ಎಂಜಿನಿಯರ್‌ಗಳಾದ ರೂಪೇಶ್, ಮುನಿರೆಡ್ಡಿ, ಎಲ್. ವೆಂಕಟೇಶ್, ಎಚ್.ಎಸ್. ರಾಮಚಂದ್ರಪ್ಪ, ರಾಜಣ್ಣ, ಬಿ. ಶರತ್, ಬಿ.ಎನ್.ಪ್ರದೀಪ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಆಶಾ, ಚಂದ್ರಶೇಖರ್ ನಾಯಕ್.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹599ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ–ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ಪ್ಯಾರಾಮಿಲಿಟರಿ ಪಡೆಗಳಲ್ಲಿ 39,481 ಉದ್ಯೋಗಾವಕಾಶ

ಮಂಜುನಾಥ್ ಭದ್ರಶೆಟ್ಟಿ

- SSC ವತಿಯಿಂದ ನೇಮಕಾತಿ ಪ್ರಕ್ರಿಯೆ ಆರಂಭ
- ಇದೇ ಅಕ್ಟೋಬರ್ 14 ಅರ್ಜಿ ಸಲ್ಲಿಸಲು ಕಡೆಯ ದಿನ
- BSFನಲ್ಲಿ ಅತಿ ಹೆಚ್ಚು 15,654 ಜಿಡಿ ಹುದ್ದೆಗಳು

ಭಾರತದ ಪ್ಯಾರಾ ಮಿಲಿಟರಿ ಪಡೆಗಳಲ್ಲಿ ಯೋಧರಾಗಿ ಸೇವೆ ಮಾಡಬೇಕೆಂಬ ಗುರಿ ಹೊಂದಿರುವ ಯುವಕ–ಯುವತಿಯರಿಗೆ ಮತ್ತೊಂದು ಅವಕಾಶ ಒದಗಿಬಂದಿದೆ. ಗೃಹ ಸಚಿವಾಲಯದಡಿ ಕಾರ್ಯನಿರ್ವಹಿಸುವ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಯ (CAPF) ವಿವಿಧ ವಿಭಾಗಗಳಲ್ಲಿ 'ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ ನೇಮಕಾತಿ –2025' ಪ್ರಕ್ರಿಯೆಯನ್ನು 'ಸಿಬ್ಬಂದಿ ನೇಮಕಾತಿ ಆಯೋಗ' (SSC) ಆರಂಭಿಸಿದೆ.

ಒಟ್ಟು 39,481 ಪುರುಷ ಮತ್ತು ಮಹಿಳಾ ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಆನ್‌ಲೈನ್ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಆರಂಭವಾಗಿದ್ದು ಅಕ್ಟೋಬರ್ 14 ಅರ್ಜಿ ಸಲ್ಲಿಸಲು ಕಡೆಯ ದಿನ.

ಸಿಎಪಿಎಫ್‌ನ ವಿಭಾಗಗಳಾಗಿರುವ ಗಡಿ ಭದ್ರತಾ ಪಡೆ (BSF), ಕೇಂದ್ರೀಯ ಸಶಸ್ತ್ರ ಮೀಸಲು ಪೊಲೀಸ್ ಪಡೆ (CRPF), ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (CISF), ಇಂಡೊ ಟಿಬೆಟಿಯನ್ ಬಾರ್ಡರ್ ಪೊಲೀಸ್ (ITBP), ಸಶಸ್ತ್ರ ಸೀಮಾ ಬಲ (SSB), ಹಾಗೂ ಸಿಎಪಿಎಫ್ ಹೊರತುಪಡಿಸಿ ಗೃಹ ಇಲಾಖೆಯ ಪ್ರತ್ಯೇಕ ಭದ್ರತಾ ಘಟಕಗಳಾದ ಅಸ್ಸಾಂ ರೈಫಲ್ಸ್ (AR) ಸೆಕ್ರೇಟರಿಯೆಟ್ ಸೆಕ್ಯೂರಿಟಿ ಫೋರ್ಸ್ (SSF) ಮತ್ತು ನಾರ್ಕೋಟಿಕ್ ಕಂಟ್ರೋಲಿಂಗ್ ಬ್ಯೂರೊಗಳಲ್ಲಿ (NCB) ಕಾನ್‌ಸ್ಟೆಬಲ್ ಜನರಲ್ ಡ್ಯೂಟಿ ಹುದ್ದೆಗಳನ್ನು ಭರ್ತಿ ಮಾಡಲಾಗುತ್ತಿದೆ.

ಕಾನ್‌ಸ್ಟೆಬಲ್ ಜಿಡಿ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳ ಒಟ್ಟು ಹುದ್ದೆಗಳ ಸಂಖ್ಯೆ 39,481. ಇದರಲ್ಲಿ ಪುರುಷ ಅಭ್ಯರ್ಥಿಗಳಿಗೆ 35,612 ಹುದ್ದೆಗಳು. ಮಹಿಳಾ ಅಭ್ಯರ್ಥಿಗಳಿಗೆ ಮೀಸಲಿರುವ ಹುದ್ದೆಗಳು 3,869.

ಆನ್‌ಲೈನ್ ಅರ್ಜಿ ಸಲ್ಲಿಸಲು ಸಾಮಾನ್ಯ, ಒಬಿಸಿ ಅಭ್ಯರ್ಥಿಗಳಿಗೆ ₹100 ಶುಲ್ಕವಿದ್ದು, ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ, ನಿವೃತ್ತ ಯೋಧರಿಗೆ ಶುಲ್ಕ ವಿನಾಯಿತಿ ಇದೆ. ಯುಪಿಐ ಸೌಲಭ್ಯ ಬಳಸಿಯೂ ಶುಲ್ಕವನ್ನು ಪಾವತಿ ಮಾಡಬಹುದು.

ಅಭ್ಯರ್ಥಿಗಳಿಗೆ ಕನಿಷ್ಠ ವಿದ್ಯಾರ್ಹತೆ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ. ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ ವಯೋಮಿತಿ ಕನಿಷ್ಠ 18 ರಿಂದ ಗರಿಷ್ಠ 23. ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ ಗರಿಷ್ಠ 28, ಒಬಿಸಿ ಅಭ್ಯರ್ಥಿಗಳಿಗೆ ಗರಿಷ್ಠ 25 ವರ್ಷ ವಯೋಮಿತಿ ಸಡಿಲಿಕೆ ಇದೆ. ಸೇನೆಯ ನಿವೃತ್ತ ಯೋಧರು ನಿವೃತ್ತಿ ಆದಾಗಿನಿಂದ ಮೂರು ವರ್ಷದವೊಳಗೆ ಅರ್ಜಿ ಸಲ್ಲಿಸಬಹುದು.

ಇತರೆ ಹೆಚ್ಚಿನ ಮಾಹಿತಿ ಬಗ್ಗೆ ಆಸಕ್ತ ಅಭ್ಯರ್ಥಿಗಳು ಎಸ್‌ಎಸ್‌ಸಿಯ ಅಧಿಕೃತ ವೆಬ್‌ಸೈಟ್ ssc.gov.in ನೋಡಬಹುದು.

ಪರೀಕ್ಷೆ ಹಾಗೂ ನೇಮಕಾತಿ ಪ್ರಕ್ರಿಯೆ

ನಾಲ್ಕು ಹಂತಗಳಲ್ಲಿ ನೇಮಕಾತಿ ಪ್ರಕ್ರಿಯೆ ನಡೆಯಲಿದೆ. ಕಂಪ್ಯೂಟರ್ ಆಧಾರಿತ ಪರೀಕ್ಷೆ (CBT), ದೈಹಿಕ ಸಾಮರ್ಥ್ಯ ಪರೀಕ್ಷೆ (PST/PET), ವೈದ್ಯಕೀಯ ಪರೀಕ್ಷೆ (DME/MRE) ಹಾಗೂ ದಾಖಲಾತಿಗಳ ತಪಾಸಣೆ ಪ್ರಕ್ರಿಯೆಗಳನ್ನು ಪೂರೈಸಬೇಕಾಗುತ್ತದೆ.

ಮೊದಲ ಹಂತವಾದ ಸಿಬಿಟಿ ಪರೀಕ್ಷೆಯಲ್ಲಿ 160 ಅಂಕಗಳಿಗೆ 80 ಪ್ರಶ್ನೆಗಳ 1 ಪತ್ರಿಕೆ ಮಾತ್ರ ಇರುತ್ತದೆ. ಪ್ರತಿ ಪ್ರಶ್ನೆಗೆ 2 ಅಂಕ. ಅವಧಿ 1 ಗಂಟೆ ಮಾತ್ರ. ಪ್ರತಿ 4 ತಪ್ಪು ಉತ್ತರಗಳಿಗೆ 1 ಅಂಕ ಕಳೆಯಲಾಗುತ್ತದೆ. ಬಹುಆಯ್ಕೆ ಮಾದರಿಯ ಪ್ರಶ್ನೆಗಳಿರುತ್ತವೆ.

ಸಿಬಿಟಿ ಪರೀಕ್ಷೆ ಇಂಗ್ಲಿಷ್, ಹಿಂದಿ ಹಾಗೂ ಕನ್ನಡವೂ ಒಳಗೊಂಡಂತೆ ಇತರ 12 ಪ್ರಾದೇಶಿಕ ಭಾಷೆಗಳಲ್ಲಿ ನಡೆಯಲಿದೆ. ಮುಂದಿನ ಹಂತಕ್ಕೆ ಹೋಗಬೇಕಾದರೆ ಅಭ್ಯರ್ಥಿಗಳು ಕನಿಷ್ಠ ಶೇ 30ರಷ್ಟು ಅಂಕಗಳನ್ನು ಇದರಲ್ಲಿ ಪಡೆಯುವುದು ಕಡ್ಡಾಯ.

ಪಾರ್ಟ್	ವಿಷಯ	ಪ್ರಶ್ನೆ	ಅಂಕ
1	ಸಾಮಾನ್ಯ ಗ್ರಹಿಕೆ	20	40
2	ಸಾಮಾನ್ಯ ಜ್ಞಾನ	20	40
3	ಮೂಲ ಗಣಿತ	20	40
4	ಬೇಸಿಕ್ ಇಂಗ್ಲಿಷ್	20	40

ಕರ್ನಾಟಕದವರಿಗೆ ಪರೀಕ್ಷಾ ಕೇಂದ್ರಗಳು

ಸಿಬಿಟಿ ಪರೀಕ್ಷೆಗಳು ಎಸ್‌ಎಸ್‌ಸಿಯ 9 ವಲಯಗಳಿಂದ ನಡೆಯುತ್ತವೆ. ಅದರಲ್ಲಿ ಕರ್ನಾಟಕ, ಕೇರಳ ಅಭ್ಯರ್ಥಿಗಳಿಗೆ 'ಎಸ್‌ಎಸ್‌ಸಿ ಕರ್ನಾಟಕ–ಕೇರಳ ಸರ್ಕಲ್' 14 ಕಡೆ ಸಿಬಿಟಿ ಪರೀಕ್ಷೆ ನಡೆಸಲಿದೆ. ಬೆಂಗಳೂರು, ಬೆಳಗಾವಿ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ಹುಬ್ಬಳ್ಳಿ, ಉಡುಪಿ, ಎರ್ನಾಕುಲಂ, ಕೊಲ್ಲಂ, ಕೊಟ್ಟಾಯಂ, ಕೋಯಿಕ್ಕೋಡ್, ತಿರುವನಂತಪುರಂ, ತ್ರಿಶೂರ್ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಫೆಬ್ರುವರಿ ಅಥವಾ ಮಾರ್ಚ್‌ನಲ್ಲಿ ಪರೀಕ್ಷೆ ನಡೆಯುವ ಸಂಭವವಿದೆ. ಅಭ್ಯರ್ಥಿಗಳು ತಮಗೆ ಸಿಎಪಿಎಫ್‌ನ ಯಾವ ವಿಭಾಗ ಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿದೆ. ಅರ್ಜಿ ಸಲ್ಲಿಸುವಾಗಲೇ ಆದ್ಯತಾನುಸಾರ ಆಯ್ಕೆ ಮಾಡಿಕೊಳ್ಳಬೇಕು.

ಹುದ್ದೆಗಳ ವಿಂಗಡಣೆ	
BSF	15,654
CRPF	11,541
CISF	7,145
ITBP	3,017
SSB	819
AR	1248
SSF	35
NCB	22

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಮಹಿಳೆಯರ ವಿರುದ್ಧ ಎಲ್ಲಾ ಸ್ವರೂಪದ ತಾರತಮ್ಯವನ್ನು ನಿಷೇಧಿಸುವ ಅಂತರರಾಷ್ಟ್ರೀಯ ಒಪ್ಪಂದಕ್ಕೆ ಭಾರತ ಯಾವ ವರ್ಷದಲ್ಲಿ ಅನುಮೋದನೆ ನೀಡಿತು?

ಎ. 1993 ಬಿ. 1998
ಸಿ. 1996 ಡಿ. 2002

ಉತ್ತರ : ಎ

2. ಇಂಟರ್‌ಪೋಲ್ ಸಂಸ್ಥೆ ಮಾನವ ಕಳ್ಳ ಸಾಗಣೆಯ ಪ್ರಕರಣಗಳನ್ನು ಬಯಲಿಗೆಳೆಯಲು ಕೆಳಗಿನ ಯಾವ ಕಾರ್ಯಾಚರಣೆಯನ್ನು ಹಮ್ಮಿಕೊಂಡಿತು?

ಎ. ಆಪರೇಷನ್ ಹ್ಯೂಮನ್ ಟ್ರಾಫಿಕಿಂಗ್.
ಬಿ. ಆಪರೇಷನ್ ಸ್ವಾರ್ಮ್ ಮೇಕರ್ಸ್-2.
ಸಿ. ಆಪರೇಷನ್ ಕ್ವಿಕ್ ಆಕ್ಷನ್.
ಡಿ. ಆಪರೇಷನ್ ಅನಕೊಂಡ.

ಉತ್ತರ : ಬಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಮೌಂಟ್ ಎವರೆಸ್ಟ್ ಪರ್ವತವನ್ನು ನೇಪಾಳದಲ್ಲಿ ಸಾಗರಮಾತಾ ಮತ್ತು ಚೀನಾದಲ್ಲಿ ಚೊಮೊಲುಂಗ್ಮಾ ಅಥವಾ ಕ್ಯೊಮೊಲುಂಗ್ಮಾ ಎಂದು ಕರೆಯುವರು.
ಬಿ. ಸಿಯಾಚಿನ್ ಭಾರತದ ಅತ್ಯಂತ ಉದ್ದವಾದ ಮತ್ತು ದೊಡ್ಡದಾದ ಹಿಮನದಿಯಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಪ್ರತಿ ವರ್ಷ ಸೆಪ್ಟೆಂಬರ್ 9ರಂದು ಹಿಮಾಲಯ ದಿನವನ್ನು ಆಚರಿಸಲಾಗುತ್ತದೆ.
ಬಿ. 2024ರ ಹಿಮಾಲಯ ದಿನಾಚರಣೆಯ ವಸ್ತುವಿಷಯ 'ಸುಸ್ಥಿರ ಹಿಮಾಲಯದ ರಕ್ಷಣೆ'.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಈಗಿರುವ ಹಿಮಾಲಯ ಪರ್ವತ ಪ್ರದೇಶವು ಈ ಹಿಂದೆ ಟೆಥಿಸ್ ಸಮುದ್ರದ ತಳಭಾಗವಾಗಿತ್ತು ಎಂದು ನಂಬಲಾಗಿದೆ.
ಬಿ. ಹಿಮಾಲಯಗಳು ಗೊಂಡ್ವಾನ ಮತ್ತು ಅಂಗಾರ ಭೂ-ಭಾಗಗಳ ಭೂ-ಅಂತರ್ಜನಿತ ಶಕ್ತಿಗಳ ಕಾರ್ಯ ಚಟುವಟಿಕೆಯಿಂದ (ಮಡಿಕೆಗಳು ಮತ್ತು ಸ್ತರಭಂಗ) ನಿರ್ಮಿತವಾಗಿವೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

6. ವೈರಾಣುವಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ವೈರಸ್‌ಗಳು ರೋಗಕಾರಕಗಳಾಗಿದ್ದು ಪ್ರಾಣಿಗಳು, ಸಸ್ಯಗಳು, ಪಾಚಿಗಳು, ಶಿಲೀಂಧ್ರಗಳಲ್ಲಿ ರೋಗವನ್ನು ಉಂಟುಮಾಡುತ್ತವೆ. ಆದರೆ ಬ್ಯಾಕ್ಟೀರಿಯಾಗಳಲ್ಲಿ ರೋಗವನ್ನು ಉಂಟುಮಾಡುವುದಿಲ್ಲ.
ಬಿ. ಸಂಪೂರ್ಣವಾಗಿ ತಯಾರಾಗಿರುವ ಪ್ರಬುದ್ಧ ವೈರಸ್ ಕಣಗಳನ್ನು ವಿರಿಯಾನ್ (Virion) ಎನ್ನುತ್ತಾರೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಬಿ

7 ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಮಾನವರಲ್ಲಿ ಬರುವ ವೈರಸ್ ರೋಗಗಳೆಂದರೆ ಶೀತ, ದಡಾರ, ಮಂಗನಬಾವು , ರೇಬಿಸ್, ಕಾಮಾಲೆ , ಹರ್ಪಿಸ್, ಡೆಂಗಿ ಮತ್ತು ಕೋವಿಡ್.
ಬಿ. ಸಸ್ಯಗಳಲ್ಲಿ ಬರುವ ವೈರಸ್ ರೋಗಗಳೆಂದರೆ ತಂಬಾಕಿನ ಶಬಲಚಿತ್ರ (Mosaic), ಆಲೂಗಡ್ಡೆಯ ಎಲೆ ಸುರುಳಿ (Leaf roll) ಮತ್ತು ಬೆಂಡೆ ಗಿಡದ ಹಳದಿ ನರ ಶಬಲಚಿತ್ರ (Yellow vein mosaic) ರೋಗ ಆಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ: ಡಿ

8. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.

ಎ. ಭಾರತದಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಅಭಿವೃದ್ಧಿಪಡಿಸಿದ ಡೆಂಗಿ ಆಲ್ ಲಸಿಕೆಯ 3ನೇ ಹಂತದ ಕ್ಲಿನಿಕಲ್ ಪ್ರಯೋಗವನ್ನು ಯಶಸ್ವಿಯಾಗಿ ನಡೆಸಲಾಗಿದೆ.
ಬಿ. 1965ರಲ್ಲಿ ಮಹಾರಾಷ್ಟ್ರದ ಚಂಡಿಪುರದಲ್ಲಿ ಮೊದಲ ಬಾರಿಗೆ ಚಂಡಿಪುರ ವೆಸಿಕುಲೋ ವೈರಸ್ ಅನ್ನು ಪತ್ತೆ ಹಚ್ಚಲಾಯಿತು.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.

ಉತ್ತರ : ಡಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಇಂಗ್ಲಿಷ್

ಎಸ್‌ಎಸ್‌ಎಲ್‌ಸಿ – ಕನ್ನಡ ಮಾಧ್ಯಮ

Second Language ENGLISH

POEM

Quality of Mercy

Read and appreciate

Work in pairs and answer the following questions.

3) The speaker compares the power of the king with the power of mercy, saying that mercy is the mightiest of the mightiest. How does she justify this? *(….Contd)*

Ans: The speaker emphasizes that king has only temporal power and keeps his subjects in awe and fear by display of his sceptre and throne. But mercy being quality attributed to God is mightier than mightiest king. It when king's justice is tempered by mercy that it raises king to Godliness

4) This text has fourteen lines. But it is not a sonnet. Look at the ending of the lines and justify the above statement.

Ans: A sonnet is divided into octave and sestet. An octave deals with a problem and sestet gives solution to it. The poem 'Quality of Mercy' does not follow that pattern. It talks about virtues of mercy. Therefore though poem has fourteen lines, it does not follow the pattern of a sonnet

5) What is the earthly power referred to?

Ans: The speaker refers to authority that is vested in mortal beings like judges or kings as earthly power.

6) What is an attribute to God Himself?

Ans: Mercy.

7) What attributes does the speaker liken to the sceptre?

Ans: The speaker attributes awe and majesty to the sceptre.

8) When do you find earthly power resembling God's power?

Ans: We find earthly power resembling God's power when the quality of mercy is enthroned in the heart of kings.

9) What power of the king does the sceptre stand for?

Ans: The sceptre stands for both earthly power. the symbol of royal authority and temporal power. the symbol of awe and majesty

Multiple Choice Questions

1) The quality of mercy is…………………..

A) strain'd B) not train'd
C) train'd D) not strain'd

Ans:(D) not strain'd

2) Mercy droppeth as the gentle rain from

A) the sky B) heaven
C) clouds D) the horizon

Ans: (B) heaven

3) Mercy droppeth as the gentle rain from heaven……………….

A) upon the heads of people
B) upon the ground
C) upon the place beneath
D) upon the trees and leaves

Ans:(C) upon the place beneath

4. The throned monarch better than his……….

A) queen B) sceptre
C) prince D) crown

Ans:(D) crown

****

Prose

Gentleman of Rio en Medio

YOUR UNDERSTANDING

Share your responses

1. The old man was………… (Fill in the bank with the most appropriate word)

a understanding b. quick
c. unhurried d. witty

Ans: (c) unhurried

2. Do you think the ancestors of the old man lived in Rio en Medio?

Ans: Yes. They had lived there because he tilled the land that they had tilled.

3. A word in line 4 of paragraph 1 suggests that the old man was a farmer. Pick that word.

Ans: The word is filled the land.

4.Study the picture and describe the old man's orchard by using the words given below:

(a small stream, unpleasant, fruit bearing trees, old fashioned house, attractive)

Ans: The old man's orchard was big and beautiful. A small stream was flowing through the orchard. The house was unpleasant to look because it was old fashioned. Many trees were fruit-bearing trees. A number of fruits were more on the tree, so the orchard is attractive.

5.In paragraph 2 the words "who" and "these" refer to ______ and ______ respectively.

Ans: The words 'who' and 'these' refer to senator and people in the mountains.

6. Look at the picture and draw your inference about the old man's appearance and hissocial/living condition.

Ans: The old man was strong and disciplined. Though the dress was old and torn, he wore that to follow his tradition. He had social respect in the Community because he was a highly principled man. He loved his innumerable kins. His appearance was elegant. (Contd…..)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC - CHEMISTRY

The d- and f-Block Elements

46. Which is a stronger reducing agent Cr^{2+} to Fe^{2+} and why?

Ans: The following reactions are involved when Cr^{2+} and Fe^{2+} act as reducing agents.

$$Cr^{2+} \longrightarrow Cr^{3+} \qquad Fe^{2+} \longrightarrow Fe^{3+}$$

The value is -0.41 V and is +0.77 V.

This means that Cr^{2+} can be easily oxidized to Cr^{3+}, but Fe^{2+} does not get oxidized to Fe^{3+} easily. Therefore, Cr^{2+} is a better reducing agent than Fe^{3+}.

47. Which is the stronger reducing agent between Cr^{2+} to Fe^{2+} and why?

Ans: Cr^{2+} is a stronger reducing agent than Fe^{2+}. This is because the configuration of Cr^{2+} changes from d^4 to d^3 and d^3 is stable due to half filled t_{2g} level.

48. Between MnO and Mn_2O_7 which one of these has more covalent character?

Ans: Mn_2O_7 (Higher oxidation state will show covalent character).

49. What is meant by 'disproportionation' of an oxidation state? Give an example.

Ans: When a particular oxidation state becomes less stable relative to other oxidation states, one lower, one higher it is said to undergo disproportionation. For example, manganese (VI) becomes unstable relative to manganese (VII) and manganese (IV) in acidic solution.

50. Which metal in the first series of transition metals exhibits +1 oxidation state most frequently and why?

Ans: In the first series of transition metals, Cu exhibits +1 oxidation state very frequently. We know Cu has an electronic configuration of [Ar] 3d ^{10}, that is, the completely filled d-orbital makes it highly stable.

51. Arrange Cr_2O_3, CrO_3, CrO in increasing order of their acid character.

Ans: Higher oxidation state shows more acidic character.

Hence $CrO < Cr_2O_3 < CrO_3$.

52. The $E^\circ\left(\frac{M^{2+}}{M}\right)$ value for copper is positive (+0.34 V). What is the possible reason for this?

Ans: Copper has high energy of atomization and low hydration energy. The ionization energy needed is not compensated by hydration energy. Hence E° value for copper is +ve.

53. Give examples and suggest reasons for the following features of transition metal chemistry. (i) The lowest oxide of transition metal is basic, and the highest is amphoteric/acidic. (ii) A transition metal exhibits the highest oxidation state in oxides and fluorides. (iii) The highest oxidation state is exhibited in oxoanions of a metal.

Ans: (i) In the case of a lower oxide of a transition metal, the metal atom has a low oxidation state. This means that some of the valence electrons of the metal atom are not involved in bonding. As a result, it can donate electrons and behave as a base. On the other hand, in the case of a higher oxide of a transition metal, the metal atom has a high oxidation state. This means that the valence electrons are involved in bonding, so they are unavailable. There is also a highly effective nuclear charge. As a result, it can accept electrons and behave as an acid. For example, $Mn^{II}O$ is basic and $Mn_2^{VII}O_7$ is acidic.

(ii) Oxygen and fluorine act as strong oxidising agents because of their high electronegativities and small sizes. Hence, they bring out the highest oxidation states from the transition metals. In other words, a transition metal exhibits higher oxidation states in oxides and fluorides. For example, in OsF_6 and V_2O_5, the oxidation states of Os and V are +6 and +5, respectively.

(iii) Oxygen is a strong oxidising agent due to its high electronegativity and small size. So, oxo-anions of metal have the highest oxidation state. For example, in, the oxidation state of Mn is +7.

54. Scandium has less $E^\circ\left(\frac{M^{3+}}{M^{2+}}\right)$ value. why?

Ans: This is due to extra stability of Sc^{3+} which has noble gas configuration $[Ar]^{18}\,3d^0$.

55. What are the different oxidation states exhibited by lanthanoids?

Ans : In the case of lanthanoids, the +3 oxidation state is the most common. That is, Ln(III) compounds are predominant. However, +2 and +4 oxidation states can also be found in the solution or in solid compounds. (Contd…..)

ಅಂಗಡಿ ಮಾಲೀಕನಿಗೆ ಚಾಕು ಇರಿತ

ಪ್ರೇಮಿಗಳ ಬಂಧನ: ಸುದ್ದಗುಂಟೆ ಠಾಣೆ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಟ್ಟೆ ಅಂಗಡಿ ಮಾಲೀಕರೊಬ್ಬರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ ಆರೋಪದ ಅಡಿ ಪ್ರೇಮಿಗಳನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸುದ್ದಗುಂಟೆಪಾಳ್ಯದ ನಿವಾಸಿ ಹಿತೇಂದ್ರ ಕುಮಾರ್(58) ಚಾಕು ಇರಿತಕ್ಕೆ ಒಳಗಾದವರು. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪೊಲೀಸರು ಹೇಳಿದರು.

'ಕೃತ್ಯ ಎಸಗಿದ ಆರೋಪದಡಿ ಬೆಳಗಾವಿಯ ಸಿದ್ದು(28) ಮತ್ತು ಅವರ ಪ್ರೇಯಸಿ ಕಿರಣ ನಿಕ್ಕಂ (24) ಅವರನ್ನು ಬಂಧಿಸಲಾಗಿದೆ. ಆರೋಪಿಗಳ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು. ಬಿಟಿಎಂ ಲೇಔಟ್‌ನ 1ನೇ ಹಂತದ ಕೆಇಬಿ ಉದ್ಯಾನದಲ್ಲಿ ಕೊಲೆಗೆ ಯತ್ನಿಸಲಾಗಿತ್ತು.

'ಸಿದ್ದು ಮತ್ತು ಕಿರಣ ಅವರು ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕಿನವರು. ಇಬ್ಬರೂ ಐದು ವರ್ಷದಿಂದ ಪ್ರೀತಿಸುತ್ತಿದ್ದರು. ಜೂನ್‌ನಲ್ಲಿ ಬೆಂಗಳೂರಿಗೆ ಬಂದಿದ್ದು, ಸುದ್ದಗುಂಟೆಪಾಳ್ಯ ಸಮೀಪದ ತಾವರೆಕೆರೆಯ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು. ಸಹಜೀವನ ನಡೆಸುತ್ತಿದ್ದರು. ಕಿರಣ ಅವರು ಜಯ ನಗರದ 9ನೇ ಬ್ಲಾಕ್‌ನಲ್ಲಿ ಇರುವ ಹಿತೇಂದ್ರ ಕುಮಾರ್ ಅವರ ಬಟ್ಟೆ ಅಂಗಡಿ ಯಲ್ಲಿ ಕೆಲಸ ಮಾಡುತ್ತಿ ದ್ದರು. ಸಿದ್ದು ಬೇರೆಡೆ ಕೆಲಸ ಮಾಡುತ್ತಿ ದ್ದರು. ಈ ಮಧ್ಯೆ ಹಿತೇಂದ್ರ ಕುಮಾರ್, ಕಿರಣಗೆ ತನ್ನನ್ನು ಮದುವೆ ಆಗುವಂತೆ ಪೀಡಿಸುತ್ತಿದ್ದರು ಎನ್ನಲಾಗಿದೆ. ಇದರಿಂದ ಬೇಸರಗೊಂಡಿದ್ದ ಕಿರಣ ಅವರು ಕೆಲಸ ತೊರೆದಿದ್ದರು. ಅದಾದ ಮೇಲೆ ಆರ್ಥಿಕ ಸಹಾಯ ಮಾಡುವುದಾಗಿ ಕಿರಣ ಅವರಿಗೆ ಹಿತೇಂದ್ರ ಆಮಿಷವೊಡ್ಡಿದ್ದರು' ಎಂದು ಪೊಲೀಸರು ಹೇಳಿದರು.

'ಹಿತೇಂದ್ರ ಕುಮಾರ್ ಆಕೆಗೆ ಪ್ರೀತಿಯ ಸಂದೇಶಗಳು ಮತ್ತು ವಿಡಿಯೊಗಳನ್ನು ಕಳುಹಿಸುತ್ತಿದ್ದರು' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

'ಸೆ.14ರಂದು ಹಿತೇಂದ್ರ ಕುಮಾರ್ ಅವರು ಕಿರಣಗೆ ಕರೆ ಮಾಡಿ, ಭೇಟಿ ಮಾಡುವಂತೆ ಕೇಳಿದ್ದರು. ಅದಕ್ಕೆ ಆಕೆಯೂ ಕೂಡ ಒಪ್ಪಿಕೊಂಡಿದ್ದರು ಎನ್ನಲಾಗಿದೆ. ಅಂದು ರಾತ್ರಿ ಕೆಇಬಿ ಉದ್ಯಾನದಲ್ಲಿ ಭೇಟಿ ಆಗಿದ್ದರು. ಆಗ ಹಿತೇಂದ್ರ ಅವರು ಮತ್ತೊಮ್ಮೆ ಪ್ರೇಮ ನಿವೇದನೆ ಮಾಡಿಕೊಂಡಿದ್ದರು. ಉದ್ಯಾನದಲ್ಲೇ ಸಮಯ ಕಳೆದು ಮನೆಗೆ ಹೋಗಿದ್ದರು' ಎಂದು ಮೂಲಗಳು ತಿಳಿಸಿವೆ. 'ತಡರಾತ್ರಿ ಮನೆಗೆ ಹೋದಾಗ ಕಿರಣ ಅವರನ್ನು ಸಿದ್ದು ಪ್ರಶ್ನಿಸಿದ್ದರು. ಹಿತೇಂದ್ರ ಕುಮಾರ್ ಪ್ರೀತಿಸುವಂತೆ ಪೀಡಿಸುತ್ತಿರುವ ವಿಷಯ ಹೇಳಿಕೊಂಡಿದ್ದರು. ಆಗ ಕೋಪಗೊಂಡಿದ್ದ ಸಿದ್ದು ಕೊಲೆಗೆ ಸಂಚು ರೂಪಿಸಿದ್ದರು. ತನ್ನ ಪ್ರೇಯಸಿಯಿಂದಲೇ ಹಿತೇಂದ್ರ ಕುಮಾರ್‌ಗೆ ಕರೆ ಮಾಡಿಸಿ, ಉದ್ಯಾನಕ್ಕೆ ಬರುವಂತೆ ಹೇಳಿದ್ದರು. ಅಲ್ಲಿ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದರು' ಎಂದು ಪೊಲೀಸರು ಹೇಳಿದರು.

ಮಿಲಿಟರಿ ಶಾಲೆಗೆ ಹುಸಿ ಬಾಂಬ್ ಬೆದರಿಕೆ ಸಂದೇಶ

ಬೆಂಗಳೂರು: ನಗರದ ಜಾನ್ಸನ್ ಮಾರುಕಟ್ಟೆ ಬಳಿ ಮಿಲಿಟರಿ ಕಾಂಪೌಂಡ್‌ನಲ್ಲಿ ಇರುವ ರಾಷ್ಟ್ರೀಯ ಮಿಲಿಟರಿ ಶಾಲೆಗೆ ಬುಧವಾರ ಮಧ್ಯಾಹ್ನ ಹುಸಿ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಮಧ್ಯಾಹ್ನ ಶಾಲೆ ನಡೆಯುತ್ತಿದ್ದ ಸಂದರ್ಭದಲ್ಲಿ ಇ-ಮೇಲ್‌ನಲ್ಲಿ ಬೆದರಿಕೆ ಸಂದೇಶ ಬಂದಿತ್ತು. ಶಾಲಾ ಆವರಣದಲ್ಲಿ ಬಾಂಬ್ ಇಡಲಾಗಿದೆ. ಅದು ಸ್ಫೋಟಗೊಳ್ಳಲಿದೆ ಎಂದು ಇ-ಮೇಲ್ ಮೂಲಕ ಸಂದೇಶ ರವಾನಿಸಲಾಗಿತ್ತು. ಇ-ಮೇಲ್ ಪರಿಶೀಲಿಸಿದ ಶಾಲಾ ಸಿಬ್ಬಂದಿ ಮಕ್ಕಳನ್ನು ಹೊರಕ್ಕೆ ಕಳುಹಿಸಿದ್ದರು.

ನಂತರ, ಅಶೋಕನಗರ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದ ಬಾಂಬ್ ಪತ್ತೆದಳ, ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ಸಿಬ್ಬಂದಿ ಪರಿಶೀಲನೆ ನಡೆಸಿದರು.

'ಶಾಲಾ ಆವರಣದಲ್ಲಿ ಯಾವುದೇ ಸ್ಫೋಟಕ ವಸ್ತುಗಳಾಗಲಿ, ರಾಸಾಯನಿಕ ಪದಾರ್ಥಗಳಾಗಲಿ ಪತ್ತೆ ಆಗಿಲ್ಲ. ಇದೊಂದು ಹುಸಿ ಬಾಂಬ್ ಬೆದರಿಕೆ ಎಂಬುದು ದೃಢವಾಯಿತು. ನಂತರ, ಯಥಾಪ್ರಕಾರ ತರಗತಿಗಳು ನಡೆದವು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. ಇ-ಮೇಲ್ ಅನ್ನು ಸೈಬರ್ ತಜ್ಞರಿಗೆ ಕಳುಹಿಸಲಾಗಿದೆ. ಎಲ್ಲಿಂದ ಇ-ಮೇಲ್ ಬಂದಿದೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಬಕೆಟ್ ಜಗಳ' ಕೊಲೆಯಲ್ಲಿ ಅಂತ್ಯ

ಪ್ರಜಾವಾಣಿ ವಾರ್ತೆ

ಆನೇಕಲ್: ಇಂಡ್ಲವಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸಿದ್ದನಪಾಳ್ಯದಲ್ಲಿ ಮಂಗಳವಾರ ಬಟ್ಟೆ ತೊಳೆಯಲು ಬಕೆಟ್‌ಗಾಗಿ ಸಹೋದ್ಯೋಗಿಗಳ ಮಧ್ಯೆ ಆರಂಭವಾದ ಜಗಳ ಕೊಲೆಯಲ್ಲಿ ಅಂತ್ಯವಾಗಿದೆ.

ಬಿಹಾರದ ನಿತೀಶ್ (23) ಕೊಲೆಯಾದ ವ್ಯಕ್ತಿ. ಕೊಲೆ ಆರೋಪದ ಮೇಲೆ ಆತನ ಸಹೋದ್ಯೋಗಿ ಬಿಹಾರದ ಸೋಮನಾಥ್ ಅಂಗರಿಯನ್ನು ಆನೇಕಲ್ ಪೊಲೀಸರು ಬಂಧಿಸಿದ್ದಾರೆ.

ಇಂಡ್ಲವಾಡಿ ಸಮೀಪದ ಮದರ್ ಇಂಡಿಯಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಬಿಹಾರದ ನಿತೀಶ್ ಮತ್ತು ಸೋಮನಾಥ್ ಇಬ್ಬರೂ ಒಂದೇ ಕಟ್ಟಡದಲ್ಲಿ ಅಕ್ಕಪಕ್ಕದ ಕೊಠಡಿಗಳಲ್ಲಿ ವಾಸವಾಗಿದ್ದರು.

ಭಾನುವಾರ ಬಟ್ಟೆ ತೊಳೆಯಲು ಬಕೆಟ್‌ಗಾಗಿ ಇಬ್ಬರ ನಡುವೆ ಜಗಳವಾಗಿ ಶುರುವಾಗಿ ಕೈ ಕೈ ಮಿಲಾಯಿಸಿದ್ದರು. ಇದೇ ವಿಚಾರವಾಗಿ ಸೋಮನಾಥ್ ಮಂಗಳವಾರ ರಾತ್ರಿ ನಿತೀಶ್ ತಲೆ ಮೇಲೆ ಸಿಮೆಂಟ್ ಇಟ್ಟಿಗೆ ಎತ್ತಿ ಹಾಕಿದ್ದಾನೆ. ತೀವ್ರ ರಕ್ತಸ್ರಾವದಿಂದ ಬಳಲುತ್ತಿದ್ದ ನಿತೀಶ್‌ನನ್ನು ಆನೇಕಲ್ ಆಸ್ಪತ್ರೆಗೆ ಸಾಗಿಸಲಾಯಿತು. ಮಾರ್ಗಮಧ್ಯೆಯೇ ನಿತೀಶ್ ಮೃತಪಟ್ಟ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಗಳೂರು ಗ್ರಾಮಾಂತರ ಪೊಲೀಸ್ ಎಸ್.ಪಿ ಸಿ.ಕೆ.ಬಾಬಾ, ಎಎಸ್‌ಪಿ ನಾಗೇಶ್ ಕುಮಾರ್, ಡಿವೈಎಸ್‌ಪಿ ಮೋಹನ್ ಕುಮಾರ್, ಆನೇಕಲ್ ಪೊಲೀಸ್ ವೃತ್ತ ನಿರೀಕ್ಷಕ ತಿಪ್ಪೇಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸಂಚಾರ ನಿಯಮ ಉಲ್ಲಂಘನೆ: 391 ಪ್ರಕರಣ ದಾಖಲು

ಬೆಂಗಳೂರು: ಸಂಚಾರ ಪೂರ್ವ ವಿಭಾಗದ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದು, ಸಂಚಾರ ನಿಯಮ ಉಲ್ಲಂಘಿಸಿದ ವಾಹನ ಸವಾರರು ಹಾಗೂ ಚಾಲಕರ ವಿರುದ್ಧ 391 ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎಫ್‌ಐಆರ್ ದಾಖಲು ಜತೆಗೆ ನಿಯಮ ಉಲ್ಲಂಘಿಸಿದವರಿಂದ ₹1.95 ಲಕ್ಷ ದಂಡ ಸಂಗ್ರಹಿಸಲಾಗಿದೆ. ಸಂಚಾರ ನಿಯಮಗಳನ್ನು ಕಡ್ಡಾಯವಾಗಿ ಪಾಲನೆ ಮಾಡುವಂತೆ ಹಾಗೂ ಸಂಚಾರ ನಿಯಮಗಳ ಮಹತ್ವದ ಬಗ್ಗೆ ಚಾಲಕರಿಗೆ ಅರಿವು ಮೂಡಿಸಲಾಯಿತು. ಮುಂದಿನ ದಿನಗಳಲ್ಲಿಯೂ ಈ ವಿಶೇಷ ಕಾರ್ಯಾಚರಣೆ ಮುಂದುವರಿಸಲಾಗುವುದು ಎಂದು ಸಂಚಾರ ವಿಭಾಗದ (ಪೂರ್ವ) ಡಿಸಿಪಿ ಕುಲದೀಪ್ ಕುಮಾರ್ ಆರ್ ಜೈನ್ ತಿಳಿಸಿದ್ದಾರೆ.

ಛಾಯಾಗ್ರಾಹಕರ ಸಮ್ಮೇಳನ 20ರಿಂದ

ಬೆಂಗಳೂರು: ಕರ್ನಾಟಕ ಛಾಯಾಗ್ರಾಹಕರ ಸಂಘವು ದಶಮಾನೋತ್ಸವ ಸಂಭ್ರಮದ ಪ್ರಯುಕ್ತ ಇದೇ 20ರಿಂದ 22ರವರೆಗೆ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಛಾಯಾಗ್ರಾಹಕರ ಸಮ್ಮೇಳನ ಹಾಗೂ ಅಂತರ ರಾಷ್ಟ್ರೀಯ ವಸ್ತು ಪ್ರದರ್ಶನ ಹಮ್ಮಿಕೊಂಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಚ್.ಎಸ್. ನಾಗೇಶ್, '20ರಂದು ಬೆಳಿಗ್ಗೆ 10 ಗಂಟೆಗೆ ಧರ್ಮಸ್ಥಳ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಸಮ್ಮೇಳನ ಉದ್ಘಾಟಿಸುತ್ತಾರೆ. ಗೃಹ ಸಚಿವ ಜಿ. ಪರಮೇಶ್ವರ, ಸಂಸದ ಡಾ.ಸಿ.ಎನ್. ಮಂಜುನಾಥ್, ಚಲನಚಿತ್ರ ನಿರ್ಮಾಪಕಿ ಅಶ್ವಿನಿ ಪುನೀತ್ ರಾಜಕುಮಾರ್ ಭಾಗವಹಿ ಸುತ್ತಾರೆ. ಸೆ.21ರಂದು ನಡೆಯುವ ರಾಷ್ಟ್ರ ಮಟ್ಟದ ಛಾಯಾಚಿತ್ರ ಸ್ಪರ್ಧೆಯನ್ನು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಉದ್ಘಾಟಿಸುತ್ತಾರೆ' ಎಂದು ತಿಳಿಸಿದರು.

ಬೆಂಗಳೂರಿನ ಪೂರ್ಣ ವಿಕಾಸ ವಿದ್ಯಾಲಯ ತಂಡವು ಕೆ.ಎಂ.ರಾಮಪ್ರಸಾದ್ ಶೀಲ್ಡ್‌ನ 16 ವರ್ಷದೊಳಗಿನವರ ಅಂತರ ಶಾಲಾ ಎರಡನೇ ಡಿವಿಷನ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ದಿ ಸ್ಪೋರ್ಟ್ಸ್ ಸ್ಕೂಲ್ ತಂಡವನ್ನು 78 ರನ್‌ಗಳಿಂದ ಮಣಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ನಿಂತಿರುವವರು (ಎಡದಿಂದ) ಸುವಿಕ್ ಗಿಲ್, ಪ್ರನೀಲ್ ಜಿ, ಮಲಿಕಾರ್ಜುನ್ ಎಸ್, ಪ್ರಮೋದ್ ಡಿ, ಅಥರ್ವ್ ಎಸ್. ದೇಶಪಾಂಡೆ, ಚಿರಾಯು ಎಸ್, ಪ್ರಥಮ್ ಬಿ, ಮಂದರ್ ಪೈ, ಆಯುಷ್ ಕುಮಾರ್, ಸಿದ್ಧಾರ್ಥ್ ಆರ್, ಲಿಖಿತ್ ಜಿ, ನಿಖಿಲ್ ಎಸ್. ಗೌಡ; ಕುಳಿತಿರುವವರು ಗೌತಮ್ ಎಸ್, ಸೈಯದ್ (ಕೋಚ್), ಕುಮಾರ್ ಟಿ.ವಿ. (ಮ್ಯಾನೇಜರ್), ವಿನೀತ್ ಎಂ. (ಸಿಇಒ), ವಿಶ್ವನಾಥ್ ಎಚ್.ಕೆ, ಮಿಥುನ್ ಎಂ; ಮಂಡಿಯೂರಿದವರು ಆದಿತ್ಯನ್ ಎಸ್, ಹೃಷಿ ಎಂ, ಮಿಕಿಲ್ ಶ್ರೇಯಲ್, ಧ್ಯಾನ್ ಮಹೇಶ್ ಹಿರೇಮಠ್, ಆರ್ಯನ್ಶ್ ಪರೀಕ್, ಆದಿರಾಜ್, ಶೌರ್ಯ ಎನ್.ಎಸ್.

₹30 ಸಾವಿರ ಲಂಚ ಪಡೆದ ಬೆಸ್ಕಾಂ ಎಂಜಿನಿಯರ್ ಸೆರೆ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ಕೇಬಲ್ ಅಳವಡಿಕೆಗೆ ಅನುಮತಿ ನೀಡಲು ವಿದ್ಯುತ್ ಗುತ್ತಿಗೆದಾರನಿಂದ ಕಚೇರಿಯಲ್ಲಿ ₹30 ಸಾವಿರ ಲಂಚ ಪಡೆಯುತ್ತಿದ್ದ ಬೆಸ್ಕಾಂನ ಬಿಡದಿ ಉಪ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಪುಟ್ಟಸ್ವಾಮಿಯನ್ನು ಲೋಕಾಯುಕ್ತ ಪೊಲೀಸರು ಬುಧವಾರ ಹಣದ ಸಮೇತ ಬಂಧಿಸಿದ್ದಾರೆ.

ವಿದ್ಯುತ್ ಗುತ್ತಿಗೆದಾರ ಅನಂತರಾಜ್ ಎಂಬುವರು ಬಿಡದಿ ಭಾಗದಲ್ಲಿ ಕೇಬಲ್ ಅಳವಡಿಸಲು ಗುತ್ತಿಗೆ ಪಡೆದಿದ್ದರು. ಗುತ್ತಿಗೆ ಮಂಜೂರಾತಿಯ ಪತ್ರಕ್ಕೆ ಸಹಿ ಮಾಡಲು ₹1.50 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಪುಟ್ಟಸ್ವಾಮಿ, ಮುಂಗಡವಾಗಿ ₹30 ಸಾವಿರ ತಂದು ಕೊಡುವಂತೆ ಹೇಳಿದ್ದರು. ಗುತ್ತಿಗೆದಾರ ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದರು. ಬೆಳಗ್ಗೆ ಅನಂತರಾಜ್‌ಗೆ ಕರೆ ಮಾಡಿದ್ದ ಪುಟ್ಟಸ್ವಾಮಿ, ಛತ್ರ ಗ್ರಾಮದಲ್ಲಿರುವ ತನ್ನ ಕಚೇರಿಗೆ ಹಣ ತಲುಪಿಸುವಂತೆ ಸೂಚಿಸಿದ್ದರು. ಈ ಕುರಿತು ಮಾಹಿತಿ ಪಡೆದಿದ್ದ ಲೋಕಾಯುಕ್ತ ತಂಡ ಮುಂಚಿತವಾಗಿಯೇ ಕಚೇರಿಗೆ ತೆರಳಿತ್ತು.

ಪುಟ್ಟಸ್ವಾಮಿ ಕಚೇರಿಯಲ್ಲಿ ಅನಂತರಾಜ್ ಅವರಿಂದ ₹30 ಸಾವಿರ ಲಂಚ ಪಡೆಯುತ್ತಿದ್ದಾಗ ಬಂಧಿಸಲಾಯಿತು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಭಯೋತ್ಪಾದನಾ ಚಟುವಟಿಕೆ ಆರೋಪ: ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವಲ್ ಬೈರಸಂದ್ರದಲ್ಲಿರುವ ದಾರುಲ್ ಉಲೂಮ್ ಸಯಿದಿಯಾ ಮುಸ್ಲಿಂ ಅನಾಥಾಲಯ ಹಾಗೂ ಮದರಸಾದಲ್ಲಿ ಭಯೋತ್ಪಾದಕ ಚಟುವಟಿಕೆ ನಡೆಯುತ್ತಿವೆ' ಎಂಬ ಹೇಳಿಕೆ ನೀಡಿದ ಆರೋಪದಡಿ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಪ್ರಿಯಾಂಕ್ ಕಾನುಂಗೊ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಪ್ರಿಯಾಂಕ್ ಕಾನುಂಗೊ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಫಿರ್ಯಾದುದಾರರ ಪರ ವಕೀಲರು, 'ಪ್ರಿಯಾಂಕ ಕಾನುಂಗೊ ಹಾಗೂ ಇತರರು ತಮ್ಮನ್ನು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದವರು ಎಂದು ಹೇಳಿಕೊಂಡು 2023ರ ನವೆಂಬರ್ 19ರಂದು ಮದರಸಾದೊಳಗೆ ಅಕ್ರಮ ಪ್ರವೇಶ ಮಾಡಿದ್ದಾರೆ. ನಂತರ ಇಲ್ಲಿನ ಕೆಲವು ಫೋಟೊಗಳನ್ನು ತೆಗೆದುಕೊಂಡು ಹೋಗಿ ಇಲ್ಲಿ ಭಯೋತ್ಪಾದನಾ ಚಟುವಟಿಕೆ ನಡೆಯುತ್ತಿವೆ ಎಂದು ಆರೋಪಿಸಿದ್ದಾರೆ' ಎಂದರು.

ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, 'ದೂರು ಹಾಗೂ ಟ್ವೀಟ್ ಅನ್ನು ತಪ್ಪಾಗಿ ಅನುವಾದಿಸಲಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಪ್ರಕರಣ ರದ್ದುಗೊಳಿಸಿ ಆದೇಶಿಸಿತು.

ಅತಿಕ್ರಮ ಪ್ರವೇಶದ ಆರೋಪ ಹೊರಿಸಿ ಅನಾಥಾಲಯ ಮತ್ತು ಮದರಸಾದ ಕಾರ್ಯದರ್ಶಿ ಅಶ್ರಫ್ ಖಾನ್ ದೇವರ ಜೀವನಹಳ್ಳಿ ಪೊಲೀಸ್ ಠಾಣೆಯಲ್ಲಿ 2023ರ ನವೆಂಬರ್ 21ರಂದು ಪ್ರಿಯಾಂಕ್ ಕಾನುಂಗೊ ವಿರುದ್ಧ ದೂರು ದಾಖಲಿಸಿದ್ದರು.

ಬಿಎಂಟಿಸಿ ಬಸ್ ಡಿಕ್ಕಿಯಾಗಿ ಅಂಗವಿಕಲ ಸ್ಥಳದಲ್ಲೇ ಸಾವು: ಚಾಲಕ ವಶಕ್ಕೆ

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ್ಪಾರಪೇಟೆ ಹಾಗೂ ಮಹದೇವಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಎರಡು ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಮೆಜೆಸ್ಟಿಕ್ ಬಳಿಯ ಅಮರ್ ಜಂಕ್ಷನ್ ಬಳಿ ಬಿಎಂಟಿಸಿ ಬಸ್ ಡಿಕ್ಕಿಯಾಗಿ ಪಾದಚಾರಿಯೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಮೃತರಿಗೆ 40ರಿಂದ 45 ವರ್ಷ ಇರಬಹುದು ಎಂದು ಅಂದಾಜಿಸಲಾಗಿದೆ.

ಮಂಗಳವಾರ ರಾತ್ರಿ 11.30ರ ಸುಮಾರಿಗೆ ವ್ಯಕ್ತಿಯೊಬ್ಬರು ಸರ್ವೀಸ್ ರಸ್ತೆಯ ಬಳಿ ನಡೆದು ತೆರಳುತ್ತಿದ್ದರು. ಅದೇ ವೇಳೆಗೆ ವೇಗವಾಗಿ ಬಂದ ಯಶವಂತಪುರ ಡಿಪೊಗೆ ಸೇರಿದ ಬಸ್ ಡಿಕ್ಕಿಯಾಗಿದೆ. ತಲೆ, ದೇಹದ ಮೇಲೆ ಬಸ್ಸಿನ ಚಕ್ರಗಳು ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಮೃತ ವ್ಯಕ್ತಿ ಅಂಗವಿಕಲರಾಗಿದ್ದರು. ಮೃತದೇಹವನ್ನು ಶವಾಗಾರದಲ್ಲಿ ಇಡಲಾಗಿದೆ. ಅವರ ಕುಟುಂಬಸ್ಥರನ್ನು ಪತ್ತೆ ಮಾಡಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಬಸ್ ಚಾಲಕ ಗೋಪಾಲ್‌ನನ್ನು ಉಪ್ಪಾರಪೇಟೆ ಸಂಚಾರ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಬಸ್ ಚಾಲಕನ ಅತಿ ವೇಗ ಹಾಗೂ ಅಜಾಗರೂಕತೆಯ ಚಾಲನೆಯೇ ಅಪಘಾತಕ್ಕೆ ಕಾರಣವಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಉಪ್ಪಾರಪೇಟೆ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಯಾಣಿಕರ ಆಕ್ರೋಶ: 'ವ್ಯಕ್ತಿ ನಡೆದುಕೊಂಡು ಹೋಗುತ್ತಿದ್ದರು. ಆದರೆ, ಚಾಲಕ ವೇಗವಾಗಿ ಬಸ್ ಚಲಾಯಿಸಿದ್ದರಿಂದ ಅಪಘಾತ ಸಂಭವಿಸಿದೆ. ವ್ಯಕ್ತಿಗೆ ಬಸ್ ಡಿಕ್ಕಿಯಾದರೂ ಬಸ್ ನಿಲ್ಲಿಸಲಿಲ್ಲ. ಪ್ರಯಾಣಿಕರು ಕಿರುಚಾಡಿದ ಮೇಲೆ ಬಸ್ ನಿಲುಗಡೆ ಮಾಡಲಾಯಿತು' ಎಂದು ಪ್ರಯಾಣಿಕರು ಆಕ್ರೋಶ ಹೊರಹಾಕಿದರು.

ದ್ವಿಚಕ್ರ ವಾಹನ ಸವಾರ ಸಾವು

ಮಹದೇವಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಉದಯ ನಗರದಲ್ಲಿ ನಡೆದ ದ್ವಿಚಕ್ರ ವಾಹನ ಹಾಗೂ ವಾಟರ್ ಟ್ಯಾಂಕರ್ ವಾಹನ ನಡುವೆ ಸಂಭವಿಸಿದ ಅಪಘಾತದಲ್ಲಿ ಸವಾರ ಮೃತಪಟ್ಟಿದ್ದಾರೆ.

ಉದಯನಗರದ ನಿವಾಸಿ ಶೇಖರ್(55) ಮೃತಪಟ್ಟವರು.

ಶೇಖರ್ ಅವರು ಗಾರೆ ಕೆಲಸ ಮಾಡುತ್ತಿದ್ದರು. ಮಂಗಳವಾರ ಸಂಜೆ ಕೆಲಸ ಮುಗಿಸಿಕೊಂಡು ಮನೆಯತ್ತ ಹೊರಟಿದ್ದರು. ಐಟಿಪಿಎಲ್ ಮುಖ್ಯರಸ್ತೆಯ ಹೂಡಿ ಜಂಕ್ಷನ್‌ನ ಸುಜುಕಿ ಶೋರೂಂ ಬಳಿ ಅಪಘಾತ ನಡೆದಿದೆ.

'ವೇಗವಾಗಿ ಬಂದ ವಾಟರ್ ಟ್ಯಾಂಕರ್ ವಾಹನವು ಸ್ಕೂಟರ್‌ಗೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಶೇಖರ್ ಅವರ ತಲೆಗೆ ಗಂಭೀರ ಸ್ವರೂಪದ ಗಾಯವಾಗಿತ್ತು. ಸ್ಥಳೀಯರು ಅವರನ್ನು ಆಸ್ಪತ್ರೆಗೆ ಕರೆದೊಯ್ದರು. ಅಷ್ಟರಲ್ಲಿ ಅವರು ಮೃತಪಟ್ಟಿದ್ದರು' ಎಂದು ಪೊಲೀಸರು ಹೇಳಿದರು.

ಬಾಹ್ಯಾಕಾಶ ತಂತ್ರಜ್ಞಾನ ಉದ್ದಿಮೆಗಳು, ನವೋದ್ಯಮಗಳಿಗೆ ಉತ್ತೇಜನ

‘ಉತ್ಕೃಷ್ಟತಾ ಕೇಂದ್ರ ಸ್ಥಾಪನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು ಬಾಹ್ಯಾಕಾಶ ಪ್ರದರ್ಶನದಲ್ಲಿ ಇಟ್ಟಿರುವ ಚಂದ್ರಯಾನದ ಲ್ಯಾಂಡರ್ ಮಾದರಿ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಬಾಹ್ಯಾಕಾಶ ತಂತ್ರಜ್ಞಾನ ಉದ್ದಿಮೆಗಳು ಮತ್ತು ನವೋದ್ಯಮಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ರಾಜ್ಯದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗುತ್ತದೆ’ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

‘ಬೆಂಗಳೂರು ಬಾಹ್ಯಾಕಾಶ ಪ್ರದರ್ಶನ–2024’ ಅನ್ನು ಬುಧವಾರ ಉದ್ಘಾಟಿಸಿ ಮಾತನಾಡಿದ ಅವರು, ‘ಈ ಕೇಂದ್ರಗಳನ್ನು ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ), ನಾವೀನ್ಯತಾ ಮತ್ತು ನವೋದ್ಯಮಗಳ ಉತ್ತೇಜನ ಕೇಂದ್ರವಾಗಿ ಬಳಸಿಕೊಳ್ಳಬಹುದು. ಬಾಹ್ಯಾಕಾಶ ಕ್ಷೇತ್ರದಲ್ಲಿ ದೇಶದ ಒಟ್ಟು ಉತ್ಪಾದನೆಯಲ್ಲಿ ಕರ್ನಾಟಕದ ಪಾಲು ಶೇ 65ಕ್ಕಿಂತಲೂ ಹೆಚ್ಚು. ಅದನ್ನು ಹಾಗೇ ಕಾಯ್ದುಕೊಳ್ಳಲಾಗುವುದು’ ಎಂದರು.

‘ಕೃಷಿ, ಗಣಿಗಾರಿಕೆ, ಹವಾಮಾನ ಬದಲಾವಣೆ ನಿಯಂತ್ರಣ, ಶಿಕ್ಷಣ, ಆರೋಗ್ಯ ಸೇವೆ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಬಾಹ್ಯಾಕಾಶ ತಂತ್ರಜ್ಞಾನದ ಪಾತ್ರ ಮಹತ್ವದ್ದು. ಹೀಗಾಗಿ ಈ ಕ್ಷೇತ್ರದ ಪ್ರಗತಿಗೆ ಒತ್ತು ನೀಡುವುದು ಅಗತ್ಯ’ ಎಂದರು.

ನಗರದ ‘ಬೆಂಗಳೂರು ಅಂತರ ರಾಷ್ಟ್ರೀಯ ಪ್ರದರ್ಶನ ಕೇಂದ್ರ’ದಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ ಪ್ರದರ್ಶನದಲ್ಲಿ ದೇಶ–ವಿದೇಶಗಳ 200ಕ್ಕೂ ಹೆಚ್ಚು ಕಂಪನಿಗಳು ಭಾಗಿಯಾಗಿವೆ.

ಉಪಗ್ರಹಗಳ ಮಾದರಿಗಳು, ತಂತ್ರಜ್ಞಾನಗಳ ಪ್ರಾತಕ್ಷಿಕೆ, ಬಾಹ್ಯಾಕಾಶ ಸಂಶೋಧನಾ ಉಪಕರಣ ಮತ್ತು ಸಾಮಗ್ರಿಗಳನ್ನು ಪ್ರದರ್ಶಿಸಲಾಗಿದೆ.

ಸಿಐಐ, ಇಸ್ರೊ, ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನ ಕೇಂದ್ರ ಮತ್ತು ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ ಸಹಯೋಗದಲ್ಲಿ ಪ್ರದರ್ಶನ ಏರ್ಪಡಿಸಲಾಗಿದೆ.

‘ಭವಿಷ್ಯ ರೂಪಿಸುವ ಪ್ರಾಥಮಿಕ ಶಿಕ್ಷಣ’

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಬಿ.ಬಿ. ಕಾವೇರಿ ಮಾತನಾಡಿದರು. ರಘುವೀರ ಬಿ.ಎಸ್ ಹಾಗೂ ಅಧಿಕಾರಿಗಳು ಇದ್ದರು

ಬೆಂಗಳೂರು: ‘ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಣವು ವಿದ್ಯಾರ್ಥಿಯ ಬದುಕಿನಲ್ಲಿ ಪ್ರಮುಖ ಪಾತ್ರವಹಿಸಲಿದ್ದು, ವಿದ್ಯಾರ್ಥಿಯ ಭವಿಷ್ಯ ರೂಪಿಸಲು ಸಹಕಾರಿಯಾಗಿದೆ’ ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ. ಕಾವೇರಿ ತಿಳಿಸಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು (ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ) ಕೇರಿಂಗ್ ವಿತ್ ಕಲರ್-ಎ ಮಾನಸಿ ಕಿರ್ಲೋಸ್ಕರ್ ಇನಿಷಿಯೆಟಿವ್ (ಸರ್ಕಾರೇತರ ಸಂಸ್ಥೆ) ಸಹಯೋಗದಲ್ಲಿ ಡಿಜಿಟಲ್ ಸಂಪನ್ಮೂಲ ಸಾಹಿತ್ಯ ಅಭಿವೃದ್ಧಿಪಡಿಸಿದೆ. ಉರ್ದು ಮಾಧ್ಯಮದಲ್ಲಿರುವ ಇದು, 4ರಿಂದ 7ನೇ ತರಗತಿವರೆಗಿನ ಗಣಿತ ಹಾಗೂ ವಿಜ್ಞಾನದ ವಿಷಯ ಒಳಗೊಂಡಿದೆ.

ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಿಜಿಟಲ್ ಸಂಪನ್ಮೂಲ ಸಾಹಿತ್ಯ ಲೋಕಾರ್ಪಣೆ ಮಾಡಿ ಮಾತನಾಡಿದ ಕಾವೇರಿ, ‘ಅಭಿವೃದ್ಧಿಪಡಿಸಲಾದ ಡಿಜಿಟಲ್ ಸಂಪನ್ಮೂಲ ಸಾಹಿತ್ಯವು ‘ಟಿಚೋಪಿಯಾ’ ಎಂಬ ಆ್ಯಪ್‌ನಲ್ಲಿ ಲಭ್ಯವಿದೆ. ಶೈಕ್ಷಣಿಕ ಜಿಲ್ಲಾವಾರು ಡಯಟ್ ಸಂಸ್ಥೆಯ ಪ್ರಾಂಶುಪಾಲರು ಹಾಗೂ ಬೋಧಕರು ತಮ್ಮ ಜಿಲ್ಲೆಗಳಲ್ಲಿನ ಉರ್ದು ಶಾಲೆಗಳ ಶಿಕ್ಷಕರಿಗೆ ಈ ಸಂಪನ್ಮೂಲಗಳು ತಲುಪುವಂತೆ ಮಾಡಿ, ಆ ಮೂಲಕ ಶೈಕ್ಷಣಿಕ ಬಲವರ್ಧನೆಗೆ ಶ್ರಮಿಸಬೇಕು’ ಎಂದರು.

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯದ ನಿರ್ದೇಶಕ ರಘುವೀರ ಬಿ.ಎಸ್., ‘ಅನುಭವಾತ್ಮಕ ಕಲಿಕಾ ಬೋಧನಾ ವಿಧಾನಕ್ಕೆ ಅನುಗುಣವಾಗಿ ಸಂಪನ್ಮೂಲ ಸಾಹಿತ್ಯವನ್ನು ಉರ್ದು ಮಾಧ್ಯಮದಲ್ಲಿ ಸಿದ್ಧಪಡಿಸಲಾಗಿದೆ. ರಾಜ್ಯದ ಎಲ್ಲ ಉರ್ದು ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಇದರ ಪ್ರಯೋಜನ ದೊರೆಯಬೇಕು’ ಎಂದು ತಿಳಿಸಿದರು.

ನಿರ್ದೇಶನಾಲಯದ ಉಪ ನಿರ್ದೇಶಕ ರಾಮು ಎನ್.ಎಂ., ಸಹಾಯಕ ನಿರ್ದೇಶಕರಾದ ಅಸ್ಮಾ ಬೇಗಂ ಮತ್ತು ಕುಮಾರಸ್ವಾಮಿ, ಕೇರಿಂಗ್ ವಿತ್ ಕಲರ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಾಜೀವ್ ಅನ್ನಲೂರು, ಯೋಜನಾ ಅನುಷ್ಠಾನ ವ್ಯವಸ್ಥಾಪಕ ಡಿ.ಆರ್. ಪ್ರಸನ್ನಕುಮಾರ್, ಸೈಯದ್ ಅತೀಕುಲ್ಲಾ ಉಪಸ್ಥಿತರಿದ್ದರು.

ಸೆ.21ಕ್ಕೆ ಆತಿಶಿ ಪ್ರಮಾಣ ವಚನ?

ಆತಿಶಿ

ನವದೆಹಲಿ (ಪಿಟಿಐ): ದೆಹಲಿಯ ನಿಯೋಜಿತ ಮುಖ್ಯಮಂತ್ರಿ ಆತಿಶಿ ಅವರು ಸೆಪ್ಟೆಂಬರ್ 21ರಂದು ಪ್ರಮಾಣವಚನ ಸ್ವೀಕರಿಸಲು ದಿನಾಂಕ ನಿಗದಿ ಮಾಡುವ ಬಗ್ಗೆ ಲೆಫ್ಟಿನೆಂಟ್ ಗವರ್ನರ್ (ಎಲ್.ಜಿ) ವಿ.ಕೆ.ಸಕ್ಸೇನಾ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರೊಂದಿಗೆ ಮಾತುಕತೆ ನಡೆಸಿದರು ಎಂದು ಮೂಲಗಳು ಬುಧವಾರ ತಿಳಿಸಿವೆ.

ನಿರ್ಗಮಿತ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ರಾಜೀನಾಮೆ ಪತ್ರವನ್ನೂ ರಾಷ್ಟ್ರಪತಿ ಅವರಿಗೆ ನೀಡಲಾಗಿದೆ ಎಂದು ಮಾಹಿತಿ ನೀಡಿವೆ.

ಮುಖ್ಯಮಂತ್ರಿ ಅವರ ಪ್ರಮಾಣವಚನ ಸ್ವೀಕಾರ ದಿನಾಂಕದ ಬಗ್ಗೆ ಎಎಪಿ ಯಾವುದೇ ಪ್ರಸ್ತಾವ ಇಟ್ಟಿಲ್ಲ ಎಂದು ತಿಳಿಸಿವೆ.

ಕೇಜ್ರಿವಾಲ್ ಅವರು ಮಂಗಳವಾರ ತಮ್ಮ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ಬಟ್ಟೆಯಿಂದ ಮುಚ್ಚಲಾಗಿದೆ

ರಾಯಣ್ಣ ಪ್ರತಿಮೆ ವಿರೂಪ: ಬಂಧನ

ನವಲಗುಂದ (ಧಾರವಾಡ ಜಿಲ್ಲೆ): ತಾಲ್ಲೂಕಿನ ಅಳಗವಾಡಿಯಲ್ಲಿ ಮಂಗಳವಾರ ರಾತ್ರಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ವಿರೂಪಗೊಳಿಸಲಾಗಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಅಶೋಕ ಕಾಲವಾರ (44) ಎಂಬುವರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಗ್ರಾಮಸ್ಥರ ನೀಡಿದ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ, ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲಾಗಿದೆ. ಪ್ರತಿಮೆಗೆ ಬಟ್ಟೆ ಸುತ್ತಲಾಗಿದೆ’ ಎಂದು ನವಲಗುಂದ ಠಾಣೆ ಪೊಲೀಸರು ತಿಳಿಸಿದ್ದಾರೆ.

ವಿಷ್ಣುವರ್ಧನ್ ಜನ್ಮದಿನ ಆಚರಣೆ

ಪ್ರಜಾವಾಣಿ ವಾರ್ತೆ

ಉತ್ತರಹಳ್ಳಿ–ಕೆಂಗೇರಿ ರಸ್ತೆಯಲ್ಲಿರುವ ಅಭಿಮಾನ್ ಸ್ಟುಡಿಯೊದಲ್ಲಿರುವ ವಿಷ್ಣುವರ್ಧನ್ ಸಮಾಧಿಗೆ ಅಭಿಮಾನಿಗಳು ಪುಷ್ಪಗುಚ್ಛ ಇರಿಸಿ ನಮನ ಸಲ್ಲಿಸಿದರು

ಬೆಂಗಳೂರು: ದಿವಂಗತ ವಿಷ್ಣುವರ್ಧನ್ ಅವರ 74ನೇ ವರ್ಷದ ಜನ್ಮದಿನವನ್ನು ಬುಧವಾರ ನಗರದೆಲ್ಲೆಡೆ ಅಭಿಮಾನಿಗಳು ಸಂಭ್ರಮದಿಂದ ಆಚರಿಸಿದರು.

ಹಲವೆಡೆ ಕೇಕ್ ಕತ್ತರಿಸಿ, ರಕ್ತದಾನ ಮಾಡಿದರು. ಅಭಿಮಾನ್ ಸ್ಟುಡಿಯೋದಲ್ಲಿರುವ ಅವರ ಸಮಾಧಿಗೆ ಅಭಿಮಾನಿಗಳು ಪುಷ್ಪಗುಚ್ಛ ಇರಿಸಿ ನಮನ ಸಲ್ಲಿಸಿದರು.

ಇದಕ್ಕೂ ಮುನ್ನ ಸಮಾಧಿ ದರ್ಶನಕ್ಕೆ ಅವಕಾಶ ಸಿಗದೆ ಪ್ರತಿಭಟನೆ ನಡೆದು ಗದ್ದಲ ಉಂಟಾಯಿತು. ಕೆಂಗೇರಿಯಲ್ಲಿರುವ ಅಭಿಮಾನ್ ಸ್ಟುಡಿಯೊ ಹೊರಗೆ ವಿಷ್ಣುವರ್ಧನ್ ಪುಣ್ಯಭೂಮಿ ಟ್ರಸ್ಟ್ ವತಿಯಿಂದ ಅನ್ನದಾನ, ರಕ್ತದಾನ ಶಿಬಿರ, ಇತರೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸ್ಟುಡಿಯೊ ಹೊರಭಾಗದ ಕಾರ್ಯಕ್ರಮಕ್ಕೆ ಮಾತ್ರ ಜಿಲ್ಲಾಧಿಕಾರಿ ಅನುಮತಿ ನೀಡಿದ್ದರು. ಆದ್ದರಿಂದ, ಸಮಾಧಿಗೆ ಪೂಜೆ ಸಲ್ಲಿಸದಂತೆ ಸ್ಟುಡಿಯೊದ ಸಿಬ್ಬಂದಿ ತಡೆಯೊಡ್ಡಿ ಗೇಟ್ ಬೀಗ ಹಾಕಿದರು. ಇದರಿಂದ ಆಕ್ರೋಶಗೊಂಡ ಅಭಿಮಾನಿಗಳು ಸ್ಮಾರಕದ ಗೇಟ್ ಬಳಿ ಪ್ರತಿಭಟನೆಗೆ ಮುಂದಾದರು. ಪೊಲೀಸರ ಮಧ್ಯಪ್ರವೇಶದಿಂದ ದರ್ಶನಕ್ಕೆ ಮಾತ್ರ ಅವಕಾಶ ಕಲ್ಪಿಸಿದ ನಂತರ ವಾತಾವರಣ ತಿಳಿಗೊಂಡಿತು. ವಿಷ್ಣುವರ್ಧನ್ ಮಂಟಪಕ್ಕೆ ಹೂವಿನ ಅಲಂಕಾರ ಮಾಡಲಾಗಿತ್ತು. ಸ್ಟುಡಿಯೊದ ಹೊರಗಡೆ ಪೆಂಡಲ್ ಹಾಕಿ ಆಯೋಜಕರು ವಿವಿಧ ಕಾರ್ಯಕ್ರಮ ನಡೆಸಿದರು.

‘ಸಮಾಧಿ ಹಾಗೂ ಸುತ್ತಮುತ್ತ ಹೂವಿನ ಅಲಂಕಾರ ಮಾಡುವುದು ಸ್ವಲ್ಪ ತಡವಾಗಿತ್ತು. ಈ ಕಾರಣಕ್ಕೆ ಪ್ರವೇಶ ಸಿಕ್ಕಿರಲಿಲ್ಲ. ನಂತರ, ಅಭಿಮಾನಿಗಳಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು. ಯಾವುದೇ ಸಮಸ್ಯೆ ಆಗಿಲ್ಲ’ ಎಂದು ಪೊಲೀಸರು ಹೇಳಿದರು.

15 ದಿನದಲ್ಲಿ ಕಾವೇರಿ 5ನೇ ಹಂತಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ಐದನೇ ಹಂತದ ಯೋಜನೆ 15 ದಿನಗಳಲ್ಲಿ ಉದ್ಘಾಟನೆಯಾಗಲಿದ್ದು, ಈ ಭಾಗದ ಬಹುಕಾಲದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ’ ಎಂದು ಕಾಂಗ್ರೆಸ್ ಮುಖಂಡ ಡಿ.ಕೆ.ಸುರೇಶ್ ಹೇಳಿದರು.

ಬುಧವಾರ ಬೇಗೂರಿನಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ಸಮಿತಿ ಕಚೇರಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಕಾವೇರಿ ನೀರು 5ನೇ ಹಂತದ ಯೋಜನೆಯನ್ನು ಉದ್ಘಾಟಿಸಲಿದ್ದಾರೆ’ ಎಂದರು.

‘ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯ ಸರ್ಕಾರ ವಾರ್ಷಿಕ ₹56 ಸಾವಿರ ಕೋಟಿ ಹಣವನ್ನು ಜನರಿಗೆ ನೀಡುತ್ತಿದೆ, ನನೆಗುದಿಗೆ ಬಿದ್ದಿದ್ದ ಹಲವು ಮೂಲ ಸೌಕರ್ಯ ಆಧಾರಿತ ಕಾಮಗಾರಿಗಳು ನಡೆಯುತ್ತಿವೆ. ಇಷ್ಟೆಲ್ಲ ಅಭಿವೃದ್ಧಿಕಾರ್ಯಗಳು ನಡೆಯುತ್ತಿದ್ದರೂ ಬಿಜೆಪಿಯವರು ಸುಳ್ಳು ಮಾಹಿತಿ ಹಂಚುವುದರಲ್ಲಿ ಮಗ್ನರಾಗಿದ್ದಾರೆ’ ಎಂದು ಕಿಡಿಕಾರಿದರು.

ಬಿಬಿಎಂಪಿ ವ್ಯಾಪ್ತಿಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೃಷ್ಣಪ್ಪ ‘ಗೃಹಲಕ್ಷ್ಮಿ ಯೋಜನೆಗೆ ಬೆಂಗಳೂರಿನಲ್ಲಿ ₹9.21 ಲಕ್ಷ ಮಹಿಳೆಯರು ನೋಂದಾಯಿಸಿದ್ದಾರೆ. ಇವರಿಗೆ ಜೂನ್‌ವರೆಗೆ ಹಣ ಪಾವತಿಸಲಾಗಿದೆ. ಶಕ್ತಿ ಯೋಜನೆಯಡಿ ಸರ್ಕಾರ ಬೆಂಗಳೂರು ನಗರಕ್ಕೆ ₹1,110 ಕೋಟಿ ಖರ್ಚು ಮಾಡಿದೆ. ಅನ್ನಭಾಗ್ಯ ಯೋಜನೆಯಡಿ ₹7,762 ಕೋಟಿ, ಗೃಹಜ್ಯೋತಿಗೆ ₹2580 ಕೋಟಿ ಹಾಗೂ ಯುವನಿಧಿ ಯೋಜನೆಗೆ ಈವರೆಗೆ ₹90 ಕೋಟಿ ಖರ್ಚಾಗಿದೆ’ ಎಂದು ಮಾಹಿತಿ ಒದಗಿಸಿದರು.

ಗ್ಯಾರಂಟಿ ಯೋಜನೆಗಳು ತಲುಪದ ಫಲಾನುಭವಿಗಳು 9480683972ಕ್ಕೆ ಕರೆ ಮಾಡಿ ದೂರು ದಾಖಲಿಸಬಹುದು ಎಂದರು. ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಆಂಜನಪ್ಪ, ಕಾಂಗ್ರೆಸ್‌ನ ಬೆಂಗಳೂರು ಜಿಲ್ಲಾಧ್ಯಕ್ಷ ಓ.ಮಂಜುನಾಥ್, ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್, ಸುಜಯ್ ಕುಮಾರ್, ಟಿ.ವಾಸುದೇವರೆಡ್ಡಿ ಇದ್ದರು.

1 ಸಾವಿರ ಇ.ವಿ ಬಸ್ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಗರದಲ್ಲಿ 1,027 ಎಲೆಕ್ಟ್ರಿಕ್ ಬಸ್
- ಫೇಮ್ 2: 12ಮೀಟರ್ ಉದ್ದದ 300 ಇ.ವಿ ಬಸ್ ಸಂಚಾರ
- ಫೇಮ್ 3: 637 ಎ.ಸಿ ರಹಿತ ಇ.ವಿ ಬಸ್

ಬಿಎಂಟಿಸಿ ಸುದ್ದಿ

ಬೆಂಗಳೂರು: ವಾಯು ಮಾಲಿನ್ಯ ತಗ್ಗಿಸುವ ಮತ್ತು ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ಬಿಎಂಟಿಸಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳಡಿಯಲ್ಲಿ ಜಿಸಿಸಿ (ಗ್ರಾಸ್ ಕಾಸ್ಟ್ ಕಾಂಟ್ರ್ಯಾಕ್ಟ್) ಒಂದು ಸಾವಿರ ಎಲೆಕ್ಟ್ರಿಕ್ (ಇ.ವಿ) ಬಸ್‌ಗಳ ಕಾರ್ಯಾಚರಣೆ ನಡೆಸುತ್ತಿದೆ.

ಬೆಂಗಳೂರು ಸ್ಮಾರ್ಟ್ ಸಿಟಿ ಯೋಜನೆಯಡಿಯಲ್ಲಿ ಒಂಬತ್ತು ಮೀಟರ್ ಉದ್ದದ 90 ಹವಾನಿಯಂತ್ರಣ ರಹಿತ ಇ.ವಿ ಬಸ್‌ಗಳು ಮೆಟ್ರೊ-ಫೀಡರ್ ಸೇವೆ ನೀಡುತ್ತಿವೆ. ಫೇಮ್–2 ಯೋಜನೆಯಡಿಯಲ್ಲಿ 12 ಮೀಟರ್ ಉದ್ದದ 300 ಹವಾನಿಯಂತ್ರಣ ರಹಿತ ಇ.ವಿ ಬಸ್‌ಗಳು ಬೆಂಗಳೂರು ನಗರ ಪ್ರದೇಶದಲ್ಲಿ ಸಂಚರಿಸುತ್ತಿವೆ. ಫೇಮ್–3 ಯೋಜನೆಯಡಿಯಲ್ಲಿ 637 ಹವಾನಿಯಂತ್ರಿತ ರಹಿತ ಇ.ವಿ ಬಸ್‌ಗಳನ್ನು ಪರಿಚಯಿಸಲಾಗಿದೆ. ನವೆಂಬರ್ ಅಂತ್ಯದ ವೇಳೆಗೆ ಇನ್ನೂ 287 ಇ.ವಿ ಬಸ್‌ಗಳು ಕಾರ್ಯಚರಣೆ ನಡೆಸಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ 1,027 ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸುತ್ತಿವೆ. ನಗರ ಭೂ ಸಾರಿಗೆ ನಿರ್ದೇಶನಾಲಯದ (ಡಲ್ಟ್) ನಿಧಿ ಬಂಡವಾಳ ಹೂಡಿಕೆ ಯೋಜನೆಯಡಿಯಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚುವರಿಯಾಗಿ 12 ಮೀಟರ್ ಉದ್ದದ 760 ಇ.ವಿ ಬಸ್‌ಗಳು ಬಿಎಂಟಿಸಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸಲಿವೆ. ಇದರಲ್ಲಿ 320 ಹವಾನಿಯಂತ್ರಿತ ಮತ್ತು 148 ಹವಾನಿಯಂತ್ರಣರಹಿತ ಬಸ್‌ಗಳು ಇರಲಿವೆ ಎಂದು ಹೇಳಿದ್ದಾರೆ.

ಇ.ವಿ ಬಸ್‌ಗಳ ಬಳಕೆಯಿಂದ ನಗರದಲ್ಲಿ ಇಂಗಾಲದ ಹೊರಸೂಸುವಿಕೆ ಕಡಿಮೆಯಾಗಿದೆ. ಸದ್ಯ ನಗರದಲ್ಲಿ ಒಂದು ಸಾವಿರ ಇ.ವಿ ಬಸ್‌ಗಳು ಸಂಚರಿಸುತ್ತಿದ್ದು, ಇದರಿಂದ ಬಿಎಂಟಿಸಿಗೆ ಪ್ರತಿದಿನ 51 ಸಾವಿರ ಲೀಟರ್ ಡೀಸೆಲ್ ಉಳಿತಾಯವಾಗುತ್ತಿದೆ. ಹಳೆ ಡೀಸೆಲ್ ಬಸ್‌ಗಳಿಗೆ ಹೋಲಿಸಿದರೆ ಇ.ವಿ ಬಸ್‌ಗಳಿಂದ ಶಬ್ದ ಮಾಲಿನ್ಯ ಕಡಿಮೆಯಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಧ್ಯಾ ಸುರಕ್ಷಾ ಯೋಜನೆ: 1,504 ಪ್ರಕರಣ ಅನಧಿಕೃತ, ವರ್ಷಕ್ಕೆ ₹2.16 ಕೋಟಿ ನಷ್ಟ

ಮಧ್ಯ ವಯಸ್ಸಿನವರಿಗೂ ವೃದ್ಧಾಪ್ಯ ವೇತನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಮಧ್ಯ ವಯಸ್ಸಿನವರಿಗೂ ವೃದ್ಧಾಪ್ಯ ವೇತನ ಮಂಜೂರು ಮಾಡಿರುವ 1,504 ಪ್ರಕರಣಗಳು ಕಡೂರು ತಾಲ್ಲೂಕಿನಲ್ಲಿ ಪತ್ತೆಯಾಗಿವೆ. ವಿಶೇಷ ಎಂದರೆ 1,156 ಪ್ರಕರಣಗಳಿಗೆ ಸಂಬಂಧಿಸಿದ ಕಡತಗಳೇ ನಾಪತ್ತೆಯಾಗಿವೆ.

ಸಂಧ್ಯಾ ಸುರಕ್ಷಾ ಯೋಜನೆಯಡಿ ವೃದ್ಧಾಪ್ಯ ವೇತನವನ್ನು 60 ವರ್ಷ ಮೇಲ್ಪಟ್ಟವರಿಗೆ ನೀಡಲಾಗುತ್ತಿದೆ. ಬಡತನ ರೇಖೆಗಿಂತ ಕೆಳಗಿನವರು ಮಾತ್ರ ಈ ಯೋಜನೆಗೆ ಅರ್ಹರು. ಆದರೆ, ಸಾಮಾಜಿಕ ಭದ್ರತಾ ವಿಭಾಗದ ಶಿರಸ್ತೇದಾರ್ (ಉಪತಹಶೀಲ್ದಾರ್) ಬಿ.ಸಿ.ಕಲ್ಮರುಡಪ್ಪ ಮತ್ತು ಇತರೆ ಸಿಬ್ಬಂದಿ ತಮ್ಮ ಲಾಗಿನ್ ದುರ್ಬಳಕೆ ಮಾಡಿಕೊಂಡು 35-40 ವಯಸ್ಸಿನವರಿಗೂ ವೇತನ ಮಂಜೂರು ಮಾಡಿದ್ದಾರೆ ಎಂಬ ದೂರುಗಳು ಜಿಲ್ಲಾಧಿಕಾರಿಗೆ ಸಲ್ಲಿಕೆಯಾಗಿದ್ದವು.

> 1504 ಪ್ರಕರಣಗಳಲ್ಲೂ 60 ವರ್ಷ ತುಂಬದವರಿಗೆ ವೃದ್ಧಾಪ್ಯ ವೇತನ ಮಂಜೂರು ಮಾಡಿರುವುದು ತನಿಖೆಯಿಂದ ಪತ್ತೆಯಾಗಿದ್ದು, ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಲಾಗಿದೆ
> **ಕೆ.ಜೆ.ಕಾಂತರಾಜ್**, ಉಪವಿಭಾಗಾಧಿಕಾರಿ, ತರೀಕೆರೆ

ಇದನ್ನು ಆಧರಿಸಿ ತನಿಖೆ ನಡೆಸುವಂತೆ ತರೀಕೆರೆ ಉಪವಿಭಾಗಾಧಿಕಾರಿ ಕೆ.ಜೆ.ಕಾಂತರಾಜ್ ಅವರಿಗೆ ಜಿಲ್ಲಾಧಿಕಾರಿ ಮೀನಾ ನಾಗರಾಜ್ ಆದೇಶಿಸಿದ್ದರು. ಒಂದು ವರ್ಷದ ಅವಧಿಯಲ್ಲಿ ಶಿರಸ್ತೇದಾರ್ ಬಿ.ಸಿ.ಕಲ್ಮರುಡಪ್ಪ ಅವರ ಲಾಗಿನ್‌ನಲ್ಲಿ ಮಂಜೂರಾಗಿರುವ ವೃದ್ಧಾಪ್ಯ ವೇತನ ಪ್ರಕರಣಗಳ ಕುರಿತು ತನಿಖೆ ನಡೆಸಿರುವ ಕಾಂತರಾಜ್, ವರದಿ ಸಲ್ಲಿಸಿದ್ದಾರೆ.

ವೃದ್ಧಾಪ್ಯ ವೇತನ ಮಂಜೂರು ಮಾಡಲು ಫಲಾನುಭವಿಗೆ 60 ವರ್ಷ ವಯಸ್ಸಾಗಿರಬೇಕು. ಗ್ರಾಮ ಆಡಳಿತಾಧಿಕಾರಿ, ಕಂದಾಯ ಅಧಿಕಾರಿ, ಕಚೇರಿ ವಿಷಯ ನಿರೀಕ್ಷಕರ ವರದಿ ಆಧರಿಸಿ ಅನುಮೋದನೆ ನೀಡುವ ಅಧಿಕಾರ ಉಪತಹಶೀಲ್ದಾರ್‌ಗೆ ಇದೆ.

ಆದರೆ, 'ಕಲ್ಮರುಡಪ್ಪ ಅವರ ಲಾಗಿನ್‌ನಲ್ಲಿ 1,504 ಜನರಿಗೆ ವೃದ್ಧಾಪ್ಯ ವೇತನ ಮಂಜೂರು ಮಾಡಲಾಗಿದೆ. ಅದರಲ್ಲಿ 1,156 ಜನರಿಗೆ ಸಂಬಂಧಿಸಿದ ಒಂದೇ ಒಂದು ಪತ್ರ ಕಚೇರಿಯಲ್ಲಿ ಲಭ್ಯವಿಲ್ಲ. ಲಭ್ಯವಿರುವ 348 ಕಡತಗಳೂ ಅಕ್ರಮ ಮಂಜೂರಾತಿ' ಎಂದು ವರದಿಯಲ್ಲಿ ಉಪವಿಭಾಗಾಧಿಕಾರಿ ತಿಳಿಸಿದ್ದಾರೆ.

'ಯಾವ ಕಡತದಲ್ಲೂ ಗ್ರಾಮ ಆಡಳಿತಾಧಿಕಾರಿ, ಕಂದಾಯ ಅಧಿಕಾರಿ, ಕಚೇರಿ ವಿಷಯ ನಿರೀಕ್ಷಕರ ವರದಿಗಳು ಲಭ್ಯವಿಲ್ಲ. ಕಲ್ಮರುಡಪ್ಪ ಅವರೇ ನೇರವಾಗಿ ತಂತ್ರಾಂಶದಲ್ಲಿ ನಮೂದಿಸಿ ಅನುಮೋದಿಸಿರುವುದು ಕಂಡು ಬಂದಿದೆ' ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಕಡೂರು ತಾಲ್ಲೂಕು ಕಚೇರಿ ಮತ್ತು ಬೀರೂರಿನ ನಾಡಕಚೇರಿಯ ದ್ವಿತೀಯ ದರ್ಜೆ ಸಹಾಯಕರು, ವಿಷಯ ನಿರ್ವಾಹಕರಿಗೆ ನೋಟಿಸ್ ನೀಡಿ ಕಡತಗಳ ಬಗ್ಗೆ ತಹಶೀಲ್ದಾರ್ ಮಾಹಿತಿ ಕೇಳಿದ್ದಾರೆ. ವರದಿಯಲ್ಲಿರುವ ಅವರ ಸಮಜಾಯಿಷಿ ಪತ್ರಗಳ ಪ್ರಕಾರ, ನಾಪತ್ತೆಯಾಗಿರುವ 1,156 ಕಡತಗಳ ಬಗ್ಗೆ ಯಾರಿಗೂ ಮಾಹಿತಿ ಇಲ್ಲ.

'ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಶಿರಸ್ತೇದಾರ್ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬಹುದು' ಎಂದು ವರದಿಯಲ್ಲಿ ಉಪವಿಭಾಗಾಧಿಕಾರಿ ಅವರು ತಿಳಿಸಿದ್ದಾರೆ. ಅಕ್ರಮ ಮಂಜೂರಾತಿ ಕಾನೂನು ಬಾಹಿರ ಆಗಿರುವುದರಿಂದ ಸರ್ಕಾರಕ್ಕೆ ತಿಂಗಳಿಗೆ ₹18 ಲಕ್ಷ, ವರ್ಷಕ್ಕೆ ₹2.16 ಕೋಟಿಯಷ್ಟು ನಷ್ಟವಾಗಿದೆ ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ.

ಲಾಗಿನ್, ಪಾಸ್‌ವರ್ಡ್ ದುರ್ಬಳಕೆ

ಬೀರೂರು ನಾಡಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿರುವ ಪಿ.ಗಿರೀಶ್ ಅವರ ಲಾಗಿನ್ ಮತ್ತು ಪಾಸ್‌ವರ್ಡ್ ದುರ್ಬಳಕೆಯಾಗಿರುವುದು ವರದಿಯಲ್ಲಿ ಉಲ್ಲೇಖವಾಗಿದೆ.

ತಹಶೀಲ್ದಾರ್ ನೀಡಿದ್ದ ನೋಟಿಸ್‌ಗೆ ಗಿರೀಶ್ ಉತ್ತರ ನೀಡಿದ್ದು, 'ಹಿಂದಿನ ತಹಶೀಲ್ದಾರ್ ಎಂ.ಪಿ.ಕವಿರಾಜ್ ಅವರ ಮೌಖಿಕ ಆದೇಶದಂತೆ ತಹಶೀಲ್ದಾರ್ ಅವರ ವಾಹನ ಚಾಲಕರಾಗಿ ಕೆಲಸ ಮಾಡುತ್ತಿದ್ದೆ. ಆ ಸಂದರ್ಭದಲ್ಲಿ ಗ್ರೇಡ್-2 ತಹಶೀಲ್ದಾರ್ ಆಗಿದ್ದ ಕಲ್ಮರುಡಪ್ಪ ಅವರು ಲಾಗಿನ್ ಮತ್ತು ಪಾಸ್‌ವರ್ಡ್ ಬಳಸಿದ್ದಾರೆ. ಸಾರ್ವಜನಿಕರ ಕೆಲಸಕ್ಕೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಲಾಗಿನ್ ಮತ್ತು ಪಾಸ್‌ವರ್ಡ್ ನೀಡಿದ್ದೆ, ಕಡತಗಳ ನಾಪತ್ತೆ ಬಗ್ಗೆ ಮಾಹಿತಿ ಇಲ್ಲ' ಎಂದು ಸಮಜಾಯಿಷಿ ನೀಡಿದ್ದಾರೆ.

ಮೃತರ ಚಿತ್ರದ ಬದಲು ಬೇರೊಬ್ಬ ಲೇಖಕರ ಭಾವಚಿತ್ರ ಬಳಕೆ

ಪ್ರಜಾವಾಣಿ ವಾರ್ತೆ

ರಾಜಶೇಖರ ನೀರಮಾನ್ವಿ

ಕಲಬುರಗಿ: ಕಲ್ಯಾಣ ಕರ್ನಾಟಕ ಉತ್ಸವದ ಅಂಗವಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು (ಕೆಕೆಆರ್‌ಟಿಸಿ) ಕೇಂದ್ರ ಬಸ್ ನಿಲ್ದಾಣದಲ್ಲಿ ಆಯೋಜಿಸಿದ್ದ ಸಾಧಕರ ಛಾಯಾಚಿತ್ರ ಪ್ರದರ್ಶನದಲ್ಲಿ ಮೃತಪಟ್ಟ ಸಾಧಕರ ಬದಲಿಗೆ ಜೀವಂತವಿರುವ ಬೇರೊಬ್ಬ ಲೇಖಕರ ಭಾವಚಿತ್ರವನ್ನು ಬಳಸಿಕೊಂಡು ಎಡವಟ್ಟು ಮಾಡಿಕೊಂಡಿದೆ.

ಕೆಕೆಆರ್‌ಟಿಸಿ 'ದಶಕದ ಸಂಭ್ರಮ' ಅಡಿ ಸಾಧಕರ, ಪ್ರವಾಸಿ ತಾಣಗಳ ಛಾಯಾಚಿತ್ರ ಪ್ರದರ್ಶನ ಆಯೋಜಿಸಿದೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ನೀರಮಾನ್ವಿ ಗ್ರಾಮದ ಕಥೆಗಾರ ರಾಜಶೇಖರ ನೀರಮಾನ್ವಿ ಅವರ ಭಾವಚಿತ್ರದ ಬದಲಿಗೆ ಬಳ್ಳಾರಿಯ ಲೇಖಕ ಚಂದ್ರಕಾಂತ ವಡ್ಡು ಅವರ ಭಾವಚಿತ್ರವನ್ನು ಬಳಸಿಕೊಂಡಿದ್ದು ಚರ್ಚೆಗೆ ಗ್ರಾಸವಾಗಿದೆ. ರಾಜಶೇಖರ ಅವರು ಕಳೆದ ತಿಂಗಳಷ್ಟೇ ನಿಧನರಾದ್ದರು. ಆಯೋಜಕರಿಗೆ ಸಾಹಿತ್ಯ ಅಕಾಡೆಮಿ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ರಾಜಶೇಖರ ಅವರ ಭಾವಚಿತ್ರದ ಗುರುತು ಸಿಗಲಿಲ್ಲವೇ ಎಂಬ ಆಕ್ರೋಶ ವ್ಯಕ್ತವಾಗಿದೆ.

'ರಾಜಶೇಖರ ನೀರಮಾನ್ವಿ ಅವರು ನಮ್ಮ ಭಾಗದ ಶ್ರೇಷ್ಠ ಕಥೆಗಾರ. ಪ್ರದರ್ಶನದ ಜವಾಬ್ದಾರಿ ವಹಿಸಿಕೊಂಡವರಿಗೆ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ವ್ಯಕ್ತಿಗಳ ಬಗ್ಗೆ ಪರಿಚಯ ಇರಬೇಕು. ಇದು ರಾಜಶೇಖರ ಅವರಿಗೆ ಮಾಡಿದ ಅಪಮಾನ' ಎಂದು ಚಂದ್ರಕಾಂತ ವಡ್ಡು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸಹೋದರರು ತಮ್ಮ ತಂದೆಯ ಶವವನ್ನು ಬೈಕ್‌ನಲ್ಲಿ ಸಾಗಿಸಿದರು

ಬೈಕ್‌ನಲ್ಲಿ ಶವ ಸಾಗಣೆ

ಪ್ರಜಾವಾಣಿ ವಾರ್ತೆ

ವೈ.ಎನ್.ಹೊಸಕೋಟೆ (ತುಮಕೂರು): ಪಾವಗಡ ತಾಲ್ಲೂಕಿನ ವೈ.ಎನ್.ಹೊಸಕೋಟೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬುಧವಾರ ಆಂಬುಲೆನ್ಸ್ ಸಿಗದ ಕಾರಣ ಮಕ್ಕಳಿಬ್ಬರು ತಂದೆಯ ಶವವನ್ನು ಬೈಕ್‌ನಲ್ಲಿ ತಮ್ಮ ಗ್ರಾಮಕ್ಕೆ ಕೊಂಡೊಯ್ದಿದ್ದಾರೆ.

ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ದಳವಾಯಿ ಗ್ರಾಮದ ಗುಡುಕಲ್ಲು ಹೊನ್ನೂರಪ್ಪ(80) ಅವರನ್ನು ಆರೋಗ್ಯದಲ್ಲಿ ಏರುಪೇರಾದ ಕಾರಣ ಬುಧವಾರ ಮಧ್ಯಾಹ್ನ ಚಿಕಿತ್ಸೆಗಾಗಿ ಇಲ್ಲಿಯ ಆರೋಗ್ಯ ಕೇಂದ್ರಕ್ಕೆ ಕರೆತರಲಾಗಿತ್ತು. ಅವರನ್ನು ತಪಾಸಣೆ ಮಾಡಿದ ವೈದ್ಯರು, ಅದಾಗಲೇ ಅವರು ಮೃತಪಟ್ಟಿರುವುದಾಗಿ ತಿಳಿಸಿದರು.

ತಮ್ಮ ತಂದೆಯ ಶವ ಸಾಗಿಸಲು ಹೊನ್ನೂರಪ್ಪ ಅವರ ಮಗ ಗೋಪಾಲಪ್ಪ ಆಂಬುಲೆನ್ಸ್ ಬಗ್ಗೆ ಆರೋಗ್ಯ ಕೇಂದ್ರದಲ್ಲಿ ವಿಚಾರಿಸಿದ್ದಾರೆ. ಆಂಬುಲೆನ್ಸ್ ಇಲ್ಲ ಎಂದು ಗೊತ್ತಾದಾಗ '108' ಆಂಬುಲೆನ್ಸ್‌ಗೆ ಕರೆ ಮಾಡಿದ್ದಾರೆ. 'ಶವ ಸಾಗಿಸಲು ಅವಕಾಶ ಇಲ್ಲ' ಎಂದು 108 ಆಂಬುಲೆನ್ಸ್ ಚಾಲಕರು ಹೇಳಿದ್ದಾರೆ.

ಹಾಗಾಗಿ ಗೋಪಾಲಪ್ಪ ಹಾಗೂ ಅವರ ಸಹೋದರ ಆಸ್ಪತ್ರೆಯಿಂದ ಸುಮಾರು 5 ಕಿ.ಮೀ ದೂರದಲ್ಲಿರುವ ಗ್ರಾಮಕ್ಕೆ ಬೈಕ್‌ನಲ್ಲೇ ತಂದೆಯ ಶವವನ್ನು ಕೊಂಡೊಯ್ದಿದ್ದಾರೆ.

'ಅಪ್ಪನಿಗೆ ಗೌರವಯುತವಾಗಿ ಬೀಳ್ಕೊಡಲು ಆಗುತ್ತಿಲ್ಲ' ಎಂದು ಕೊರಗುತ್ತಲೇ ಗೋಪಾಲಪ್ಪ ತಂದೆಯ ಶವವನ್ನು ಭುಜದ ಮೇಲೆ ಹೊತ್ತು, ಕಣ್ಣೀರು ಸುರಿಸುತ್ತ ಆಸ್ಪತ್ರೆಯಿಂದ ಹೊರ ಬಂದರು. ಒಬ್ಬರು ಬೈಕ್ ಓಡಿಸಿದರೆ, ಮತ್ತೊಬ್ಬರು ಹಿಂದೆ ಕುಳಿತು ನಡುವೆ ತಂದೆಯ ಶವ ಇರಿಸಿಕೊಂಡು ತೆರಳಿದರು.

ತಜ್ಞರ ಒಪ್ಪಿಗೆ, ಪ್ರಾಧಿಕಾರ 'ಕಾಲಹರಣ'

ಒಂದನೇ ಪುಟದಿಂದ...

ವನ್ಯಜೀವಿ ಧಾಮದಿಂದ ಈ ಯೋಜನೆಗೆ ನೀರು ಹರಿಸಲಾಗುತ್ತಿದೆ ಎಂದು ಗೋವಾ ಸರ್ಕಾರವು ತಗಾದೆ ಎತ್ತಿರುವುದರಿಂದ 'ವನ್ಯಜೀವಿ' ಅನುಮೋದನೆ ಪಡೆಯಬೇಕಿದೆ. ಇದಕ್ಕಾಗಿ ರಾಷ್ಟ್ರೀಯ ವನ್ಯಜೀವಿ ಮಂಡಳಿಗೆ ಕರ್ನಾಟಕ ಸರ್ಕಾರ ಪ್ರಸ್ತಾವ ಸಲ್ಲಿಸಿತ್ತು. 'ಯೋಜನೆಯ ಅನುಷ್ಠಾನಕ್ಕೆ 26.92 ಹೆಕ್ಟೇರ್ ಅರಣ್ಯ ಬಳಸಿಕೊಳ್ಳಲಾಗುತ್ತಿದೆ. ಯೋಜನೆಗಾಗಿ ಕಾಳಿ ಹುಲಿ ಕಾರಿಡಾರ್ ಹಾಗೂ ಸಹ್ಯಾದ್ರಿ ಹುಲಿ ಸಂರಕ್ಷಿತ ಪ್ರದೇಶದ 7.96 ಹೆಕ್ಟೇರ್ ಅರಣ್ಯ ಹಾಗೂ 2.71 ಹೆಕ್ಟೇರ್ ಬಳಸಿಕೊಳ್ಳಲು ಉದ್ದೇಶಿಸಲಾಗಿದೆ' ಎಂದೂ ರಾಜ್ಯ ಸರ್ಕಾರವು ಪ್ರಸ್ತಾವದಲ್ಲಿ ತಿಳಿಸಿತ್ತು.

'ಮುಂದೂಡಿಕೆ'ಯೇ ಸಭೆಯ 'ಕಾರ್ಯತಂತ್ರ': ಯೋಜನೆಗೆ ಸಂಬಂಧಿಸಿ, ವನ್ಯಜೀವಿ ಮಂಡಳಿಯು ಹುಲಿ ಸಂರಕ್ಷಣಾ ಪ್ರಾಧಿಕಾರದ ಅಭಿಪ್ರಾಯ ಕೇಳಿತ್ತು. ತಜ್ಞರ ಸಮಿತಿ ವರದಿ ಸಲ್ಲಿಸಿದ ಬಳಿಕ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಮೂರು ಸಭೆಗಳು ನಡೆದಿವೆ. ಪ್ರಾಧಿಕಾರವು ಅಭಿಪ್ರಾಯ ನೀಡಿಲ್ಲ ಎಂಬ ಕಾರಣ ನೀಡಿ ಕಾರ್ಯಸೂಚಿಯನ್ನು ಮುಂದೂಡಿ ಮಂಡಳಿ ಕೈತೊಳೆದುಕೊಂಡಿದೆ.

ಮೊದಲ ಸಭೆ: ಜನವರಿ 30ರಂದು ನಡೆದ ಮಂಡಳಿಯ ಸಭೆಯಲ್ಲಿ ಮಹದಾಯಿ ವಿಷಯ ಚರ್ಚೆಗೆ ಬಂದಿತ್ತು. 'ಈ ವಿಷಯವು ನ್ಯಾಯಿಕ ಪ್ರಕ್ರಿಯೆಯಲ್ಲಿನ ಮಧ್ಯಪ್ರವೇಶ (ಸಬ್‌ಜುಡೀಸ್) ಆಗುತ್ತದೆ ಎಂದು ಎನ್‌ಟಿಸಿಎ ತಿಳಿಸಿದೆ. ಹೀಗಾಗಿ, ಪ್ರಾಧಿಕಾರವು ಯೋಜನೆ ಕುರಿತು ಯಾವುದೇ ಅಭಿಪ್ರಾಯ ನೀಡಿಲ್ಲ. 1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 38ರ ಪ್ರಕಾರ, ಪ್ರಾಧಿಕಾರದಿಂದ ಮತ್ತೆ ಅಭಿಪ್ರಾಯ ಪಡೆಯಲು ಮಂಡಳಿ ನಿರ್ಧರಿಸಿತ್ತು. ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮುಂದೂಡಲಾಗಿತ್ತು.

ಎರಡನೇ ಸಭೆ: ಫೆಬ್ರುವರಿ 22ರಂದು ನಡೆದ ಮಂಡಳಿಯ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿರಲಿಲ್ಲ.

ಮೂರನೇ ಸಭೆ: ಜುಲೈ 31ರಂದು ನಡೆದ ಮಂಡಳಿಯ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು. 'ಮಹದಾಯಿ ಯೋಜನಾ ಪ್ರದೇಶದ ವಾಸ್ತವಾಂಶದ ಅಧ್ಯಯನಕ್ಕೆ ಪ್ರಾಧಿಕಾರವು ತಜ್ಞರ ತಂಡವನ್ನು ಕಳುಹಿಸಿತ್ತು. ಈ ಸಮಿತಿಯು ಹಲವು ಶಿಫಾರಸುಗಳನ್ನು ಮಾಡಿದೆ. ಈ ಬಗ್ಗೆ ಪ್ರಾಧಿಕಾರದಿಂದ ಪ್ರತಿಕ್ರಿಯೆ ಕೇಳಲಾಗಿತ್ತು. ಸಬ್‌ಜುಡೀಸ್ ಆಗುತ್ತದೆ ಎಂಬ ಕಾರಣ ಮುಂದಿಟ್ಟು ಈವರೆಗೆ ಪ್ರತಿಕ್ರಿಯೆ ನೀಡಿಲ್ಲ' ಎಂದು ಸಭೆಯಲ್ಲಿ ಅಭಿಪ್ರಾಯಪಡಲಾಗಿತ್ತು. ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಗಿತ್ತು. ಹೀಗಾಗಿ, ಯೋಜನೆಗೆ ವನ್ಯಜೀವಿ ಅನುಮೋದನೆ ಸಿಕ್ಕಿರಲಿಲ್ಲ.

ಸಮಿತಿಯ ಅವಲೋಕನ

- ಕಳಸಾ, ಹಲ್ತಾರ ಹಾಗೂ ಸುರ್ಲಾ ನದಿಗಳು ಬೇಸಿಗೆಯಲ್ಲಿ ಬತ್ತಿ ಹೋಗುತ್ತವೆ. ಹೀಗಾಗಿ, ಕಡು-ಬೇಸಿಗೆಯಲ್ಲಿ ಕಾಡು ಪ್ರಾಣಿಗಳಿಗೆ ಕುಡಿಯಲು ನೀರು ಸಿಗುವುದಿಲ್ಲ
- ಯೋಜನೆಯ ಅನುಷ್ಠಾನದಿಂದ 13.20 ಹೆಕ್ಟೇರ್ ಪ್ರದೇಶ ಮುಳುಗಡೆಯಾಗಲಿದೆ
- ಸಣ್ಣ ಜಲಾಶಯಗಳಲ್ಲಿ ಸಂಗ್ರಹವಾಗುವ ನೀರನ್ನು ಪ್ರತಿವರ್ಷ 5 ತಿಂಗಳ ವರೆಗೆ (ಜೂನ್‌ನಿಂದ ಅಕ್ಟೋಬರ್ ವರೆಗೆ) ನದಿ ತಿರುವಿಗೆ ಬಳಸಲಾಗುತ್ತದೆ. ಇದರಿಂದಾಗಿ, ಕೆಳಭಾಗದ ಪ್ರದೇಶಗಳಲ್ಲಿ ಪ್ರವಾಹ ತಡೆಗಟ್ಟಬಹುದು. ಮಹಾದಾಯಿ ನ್ಯಾಯಮಂಡಳಿ ರಾಜ್ಯಕ್ಕೆ ಹಂಚಿಕೆ ಮಾಡಿರುವಷ್ಟೇ ನೀರನ್ನು ಬಳಕೆ ಮಾಡಲಾಗುತ್ತದೆ. ಜತೆಗೆ, ಜಲಾಶಯಗಳಲ್ಲಿನ ನೀರು ಕಡು ಬೇಸಿಗೆಯಲ್ಲಿ ಕಾಡು ಪ್ರಾಣಿಗಳಿಗೆ ಲಭ್ಯ ಇರುತ್ತದೆ
- ಕೊಳವೆ ಮಾರ್ಗ ಹಾಗೂ ಪ್ರಸರಣ ಮಾರ್ಗಗಳನ್ನು ನೆಲದಡಿ ಹಾಕುವುದರಿಂದ ಕಾಡು ಪ್ರಾಣಿಗಳಿಗೆ ಹೆಚ್ಚಿನ ತೊಂದರೆ ಆಗುವುದಿಲ್ಲ.
- ಯೋಜನಾ ಸ್ಥಳವು ಭೀಮಗಡ ವನ್ಯಜೀವಿ ಧಾಮದಿಂದ 5.6 ಕಿ.ಮೀ. ದೂರದಲ್ಲಿದೆ. ಅಪರೂಪಕ್ಕೊಮ್ಮೆ ಹುಲಿಗಳು ಹಾಗೂ ಆನೆಗಳು ಈ ಮಾರ್ಗದಲ್ಲಿ ಸಂಚಾರ ಮಾಡುತ್ತವೆ
- ಕಳಸಾ ನಾಲಾ ತಿರುವು ಯೋಜನೆಗೆ ಸಮಾನಾಂತರವಾಗಿ ಹಾದು ಹೋಗುವ ಹೆದ್ದಾರಿಯ ಎರಡು ಭಾಗಗಳು ಈ ಯೋಜನೆಯ ಅನುಷ್ಠಾನದಿಂದ ಮುಳುಗಡೆಯಾಗುವ ಸಾಧ್ಯತೆಯಿದೆ. ಈ ಮುಳುಗಡೆ ಪ್ರದೇಶದಲ್ಲಿ ಸಂಚಾರಕ್ಕಾಗಿ ಎರಡು ಸೇತುವೆಗಳನ್ನು ನಿರ್ಮಿಸಲು ಕರ್ನಾಟಕ ನೀರಾವರಿ ನಿಗಮ ಯೋಜಿಸಿದೆ.
- ಅರಣ್ಯ ಇಲಾಖೆ ರೂಪಿಸಿರುವ ವನ್ಯಜೀವಿ ಸಂರಕ್ಷಣಾ ಯೋಜನೆ ಸಮಗ್ರವಾಗಿದೆ

ತಜ್ಞರ ತಂಡದಲ್ಲಿದ್ದವರು

- ಹರಿಣಿ ವೇಣುಗೋಪಾಲ್, ಸಹಾಯಕ ಮಹಾನಿರ್ದೇಶಕಿ (ಅರಣ್ಯ), ಎನ್‌ಟಿಸಿಎ
- ಡಾ.ಕೌಶಿಕ್ ಬ್ಯಾನರ್ಜಿ, ವಿಜ್ಞಾನಿ, ಎನ್‌ಟಿಸಿಎ ಹುಲಿ ಘಟಕ
- ವಿಜಯಕುಮಾರ್ ಗೋಗಿ, ಕರ್ನಾಟಕ ನೀರಾವರಿ ನಿಗಮದ ಪ್ರತಿನಿಧಿ
- ಮಂಜುನಾಥ ಚವಾಣ್, ಬೆಳಗಾವಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ಆರ್.ಅಶೋಕ, ಶೋಭಾ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮಂಡ್ಯ: 'ಜಿಲ್ಲೆಯ ನಾಗಮಂಗಲದಲ್ಲಿ ಇತ್ತೀಚೆಗೆ ನಡೆದ ಗಲಭೆ ಕುರಿತು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡಿದ್ದಾರೆ' ಎಂಬ ಆರೋಪದ ಮೇರೆಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಗಲಭೆಯು ನಿಯಂತ್ರಣಕ್ಕೆ ಬಂದಿದ್ದರೂ, ಎಲ್ಲೋ ನಡೆದಿರುವ ಘಟನೆಯ ಚಿತ್ರಗಳನ್ನು ಪಟ್ಟಣದಲ್ಲಿ ನಡೆದಿದೆ ಎಂದು ಬಿಂಬಿಸಿ ಸಮಾಜದಲ್ಲಿ ದೊಂಬಿ, ಗಲಭೆಗೆ ಪ್ರಚೋದನೆ ಉಂಟು ಮಾಡುವ ಉದ್ದೇಶದಿಂದ ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನಿಸಿದ್ದಾರೆ' ಎಂದು ದೂರಲಾಗಿದೆ.

ಪೊಲೀಸ್ ಅಧಿಕಾರಿಯೊಬ್ಬರು ಗಣೇಶ ಮೂರ್ತಿಯನ್ನು ತಬ್ಬಿ ಹಿಡಿದು ಹೋಗುತ್ತಿರುವ, ಪೊಲೀಸ್ ವಾಹನದಲ್ಲಿ ಮೂರ್ತಿಯನ್ನು ಇಟ್ಟಿರುವ ಫೋಟೊಗಳನ್ನು ತಮ್ಮ ಎಕ್ಸ್ ಖಾತೆಯಲ್ಲಿ ಶೋಭಾ ಕರಂದ್ಲಾಜೆ ಹಂಚಿಕೊಂಡಿದ್ದರು. 'ಕಲ್ಲುತೂರಿ, ಬೆಂಕಿ ಹಚ್ಚಿದವರನ್ನು ರಕ್ಷಿಸಿ, ಗಣೇಶ ಮೂರ್ತಿಯನ್ನು ಬಂಧಿಸಲಾಗಿದೆ' ಎಂದು ಸುಳ್ಳು ಮಾಹಿತಿಯನ್ನು ಪೋಸ್ಟ್ ಮಾಡಿದ್ದರು' ಎಂದು ಆರೋಪಿಸಲಾಗಿದೆ.

ಆರ್.ಅಶೋಕ ಅವರು ಯಾವುದೋ ಎರಡು ವಿಡಿಯೊ ತುಣುಕುಗಳನ್ನು ಪೋಸ್ಟ್ ಮಾಡಿ, 'ನಾಗಮಂಗಲ ಗಲಭೆ ವೇಳೆ ಮೂವರು ಕಿಡಿಗೇಡಿಗಳು 'ಪಾಕಿಸ್ತಾನ್ ಜಿಂದಾಬಾದ್' ಘೋಷಣೆ ಕೂಗಿದ್ದಾರೆ' ಎಂದು ಪೋಸ್ಟ್ ಮಾಡಿದ್ದರು. ಪಟ್ಟಣ ಠಾಣೆಯ ಪೊಲೀಸ್ ಸಿಬ್ಬಂದಿ ರಮೇಶ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಾಗಿದೆ.

ಗಲಭೆ: ₹2.66 ಕೋಟಿ ನಷ್ಟ

'ನಾಗಮಂಗಲ ಗಲಭೆಯಲ್ಲಿ ಒಟ್ಟು 26 ಅಂಗಡಿಗಳಿಗೆ ಹಾನಿಯಾಗಿದ್ದು, ₹2.66 ಕೋಟಿ ನಷ್ಟವಾಗಿದೆ' ಎಂದು ಜಿಲ್ಲಾಧಿಕಾರಿ ಕುಮಾರ ಅವರು ತಿಳಿಸಿದರು.

ಮರಳು ಗಣಿಗಾರಿಕೆ ಸಂಬಂಧ ಗಲಭೆ: ಕೊಲೆ

ಪ್ರಜಾವಾಣಿ ವಾರ್ತೆ

ನ್ಯಾಮತಿ (ದಾವಣಗೆರೆ ಜಿಲ್ಲೆ): ಮರಳು ಗಣಿಗಾರಿಕೆ ಸಂಬಂಧ ತಾಲ್ಲೂಕಿನ ಚೀಲೂರು ಕಡದಕಟ್ಟೆ ಹಾಗೂ ಮರಿಗೊಂಡನಹಳ್ಳಿ ಗ್ರಾಮಸ್ಥರ ನಡುವೆ ಬುಧವಾರ ಘರ್ಷಣೆ ನಡೆದಿದೆ. ಘಟನೆಯನ್ನು ವೀಕ್ಷಿಸುತ್ತಿದ್ದ ವ್ಯಕ್ತಿಯೊಬ್ಬರು ದುಷ್ಕರ್ಮಿಗಳು ಚಾಕುವಿನಿಂದ ಇರಿದ ಪರಿಣಾಮ ಮೃತಪಟ್ಟಿದ್ದು, ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಚೀಲೂರು ಕಡದಕಟ್ಟೆ ಗ್ರಾಮದ ಶಿವರಾಜ ಟಿ. (33) ಮೃತ ವ್ಯಕ್ತಿ. ಭರತ್ ಆರ್. ಎಂಬುವವರು ಇದೇ ವೇಳೆ ಗಾಯಗೊಂಡಿದ್ದು, ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚೀಲೂರು ಕಡದಕಟ್ಟೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮರಿಗೊಂಡನಹಳ್ಳಿ ಗ್ರಾಮದ ಬಳಿ ಹರಿದಿರುವ ತುಂಗಭದ್ರಾ ನದಿ ದಡದಲ್ಲಿ ಮರಳು ತೆಗೆಯುವುದಕ್ಕೆ ಸಂಬಂಧಿಸಿದಂತೆ ಎರಡೂ ಗ್ರಾಮಗಳ ಜನರ ಮಧ್ಯೆ ವೈಷಮ್ಯ ಇತ್ತು. ಇದೇ ವಿಷಯಕ್ಕಾಗಿ ಬುಧವಾರ ಮಧ್ಯಾಹ್ನ ಗ್ರಾಮಸ್ಥರ ನಡುವೆ ಗಲಭೆಯಾಗಿದೆ. ಇದೇ ವೇಳೆ ಹೊಲದಿಂದ ಮನೆಯತ್ತ ಮರಳುತ್ತಿದ್ದ ಶಿವರಾಜ ಹಾಗೂ ಭರತ್ ಅವರಿಗೆ ಗಲಭೆಕೋರರು ಚಾಕುವಿನಿಂದ ಇರಿದಿದ್ದಾರೆ ಎಂದು ಮೃತ ವ್ಯಕ್ತಿಯ ತಾಯಿ ತಿಳಿಸಿದ್ದಾರೆ.

'ಚೀಲೂರು ಕಡದಕಟ್ಟೆ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಸತೀಶ ಅವರ ಪುತ್ರ ಅಭಿಷೇಕ ಮತ್ತಿತರರು ಕೊಲೆ ಮಾಡಿದ್ದಾರೆ. ಅವರನ್ನು ಬಂಧಿಸಬೇಕು' ಎಂದು ಗ್ರಾಮದ ಕೆಲವರು ಆಗ್ರಹಿಸಿದ್ದಾರೆ.

ನೋಂ/34190/2004-05, ದಿನಾಂಕ : 31-08-2004

ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.)

ನಂ. 2166, ನ್ಯೂ ನಂ. 38, ಅಕ್ಬರ್ ರಸ್ತೆ, ಮಂಡಿ ಮೊಹಲ್ಲಾ, ಮೈಸೂರು-01

ಮೇಲ್ಕಂಡ ಸಹಕಾರ ಸಂಘದ 2023-24ನೇ ಸಾಲಿನ 20ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು **ದಿ: 22-09-2024ನೇ ಭಾನುವಾರ ಸಮಯ : ಬೆಳಿಗ್ಗೆ : 11.00 ಗಂಟೆಗೆ ದಿ ಪ್ರೆಸಿಡೆಂಟ್ ಹೋಟೆಲ್, ಬೆಂಗಳೂರು ನೀಲಗಿರಿ ರಸ್ತೆ, ಸೆಂಟ್ರಲ್ ಮಾಲ್ ಎದುರು, ಕೆ.ಎಸ್.ಆರ್.ಟಿ.ಸಿ ಬಸ್ ಸ್ಟ್ಯಾಂಡ್ ಹತ್ತಿರ, ಮೈಸೂರು** ಇಲ್ಲಿ ಸಂಘದ ಅಧ್ಯಕ್ಷರಾದ **ಶ್ರೀ ಎಲ್.ಎಸ್. ಚಲುವರಾಜ್‌ಕುಮಾರ್‌ರವರ** ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಹಾಜರಾಗಬೇಕೆಂದು ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇವೆ. ಮೊಬೈಲ್ ನಂ. 9742471439

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ
ನೇಕಾರರ ಗೃಹ ನಿರ್ಮಾಣ ಸಹಕಾರ ಸಂಘ (ನಿ.), ಮೈಸೂರು-01.

NATIONAL INSTITUTE OF MENTAL HEALTH AND NEURO SCIENCES
INSTITUTE OF NATIONAL IMPORTANCE
Hosur Road, Bengaluru, India-560 029. Website: http://www.nimhans.ac.in

Ref. No.: NIMH:A&E-EA:ADMSN:2024-25:Jan Session Date: 18.09.2024

ADMISSION NOTICE

Applications are invited for admission to the following courses under External Funding Category for January, 2025 session of the Academic Year 2024-25:

Sl. No.	Name of the Course	Availability of guideship slots under External Funding Category *
1	Ph.D. in Biophysics	5
2	Ph.D. in Biostatistics	5
3	Ph.D. in Child & Adolescent Psychiatry	4
4	Ph.D. in Clinical Psychology	17
5	Ph.D. in Clinical Psychopharmacology and Toxicology	3
6	Ph.D. in Epidemiology Ph.D. in Public Health	6
7	Ph.D. in Human Genetics	5
8	Ph.D. in Integrative Medicine	4
9	Ph.D. in Mental Health Education	2
10	Ph.D. in Neuroanaesthesia and Neurocritical Care	4
11	Ph.D. in Neurochemistry	4
12	Ph.D. in Neuroimaging and Interventional Radiology	7
13	Ph.D. in Neurology	17
14	Ph.D. in Neurological Rehabilitation	2
15	Ph.D. in Neuromicrobiology	3
16	Ph.D. in Neuropathology	4
17	Ph.D. in Neurophysiology	5
18	Ph.D. in Neurovirology	3
19	Ph.D. in Nursing	4
20	Ph.D. in Psychiatric Social Work	20
21	Ph.D. in Psychiatry Ph.D. in History of Psychiatry Ph.D. in Mental Health Rehabilitation	26
22	Ph.D. in Psychosocial Support in Disaster Management	5
23	Ph.D. in Speech Pathology & Audiology	5

** External Funding Category includes applicants applying with Fellowship from External Funding Agencies, Foreign Nationals and permanent/tenured employees Sponsored/Deputed from various Government Institutions/Universities including candidates working under various projects at NIMHANS. For complete details regarding the same please refer to January, 2025 session Prospectus 2024-25. The no. of seats under external funding category may vary depending on the availability of research & other facilities and the faculty- scholar ratio of the respective department.*

The Entrance test for January 2025 Session will be conducted @ NIMHANS Campus, Bengaluru city only.

Please refer to NIMHANS website http://www.nimhans.ac.in for more details.

Sd/-, DIRECTOR, NIMHANS

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ

ನಂ. 164, 4ನೇ ಮಹಡಿ, ದೇವರಾಜ ಅರಸು ಭವನ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು- 52. ದೂರವಾಣಿ: 080-22374832, 22374834, ಫ್ಯಾಕ್ಸ್: 080-22374833
ಇ-ಮೇಲ್: md.dbcdc@gmail.com, ವೆಬ್‌ಸೈಟ್: www.dbcdc.karnataka.gov.in

ಸಂಖ್ಯೆ : ದೇಹಿನಿ/ಎಂ.ಪ್ಯಾ/ಟೆಂ/ಕೊ.ಬಾ/ಸಿ.ಆರ್-73/2024-25 ದಿನಾಂಕ : 18.09.2024

ಟೆಂಡರ್ ಪ್ರಕಟಣೆ

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

2023-24 ಮತ್ತು 2024-25ನೇ ಸಾಲಿನಲ್ಲಿ ನಿಗದಿಪಡಿಸಿದ ಗುರಿಯನ್ವಯ ಕೊಳವೆ ಬಾವಿಗಳನ್ನು ಕೊರೆಯಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಒಳಪಡುವ 1) ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, 2) ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ 3) ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, 4) ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ, 5) ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ, 6) ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ, 7) ಕರ್ನಾಟಕ ಒಕ್ಕಲಿಗ ಅಭಿವೃದ್ಧಿ ನಿಗಮ. 8) ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ, 9) ಕರ್ನಾಟಕ ಮರಾಠ ಸಮುಯದಾಯಗಳ ಅಭಿವೃದ್ಧಿ ಹಾಗೂ 10) ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ, 11) ಕಾಡುಗೊಲ್ಲ ಅಭಿವೃದ್ಧಿ ನಿಗಮಗಳಿಂದ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯಲು ಡ್ರಿಲ್ಲಿಂಗ್ ಏಜೆನ್ಸಿಗಳನ್ನು ಎಂಪ್ಯಾಲ್‌ಮೆಂಟ್ ಮಾಡಲು ಎರಡು ಡಾಕ್ಯೂಮೆಂಟ್ ವಿಧಾನದಲ್ಲಿ ಬಿಡ್‌ಗಳನ್ನು ಆಹ್ವಾನಿಸಿ ಟೆಂಡರ್ ಪ್ರಕಟಣೆ ಹೊರಡಿಸಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ. ಟೆಂಡರ್ ನಲ್ಲಿ ಭಾಗವಹಿಸಲು ಬೇಕಾದ ಅರ್ಹತೆ, ಟೆಂಡರ್ ಸಲ್ಲಿಸುವ ವಿಧಾನ, ನಿಬಂಧನೆಗಳು, ಇ.ಎಂ.ಡಿ ಮೊತ್ತ ಕೊರೆಯಬೇಕಾದ ಕೊಳವೆ ಬಾವಿಗಳ ಸಂಖ್ಯೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲ ತಾಣ https://kppp.karnataka.gov.in ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

1) ಪ್ರಿ-ಬಿಡ್ ಪ್ರಶ್ನೆಗಳನ್ನು (Querries) ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ: 27.09.2024ರ 15:00 ಗಂಟೆಯವರೆಗೆ. 2) ಪ್ರಿ-ಬಿಡ್ ಸಭೆಯ ದಿನಾಂಕ: 30.09.2024ರ ಬೆಳಿಗ್ಗೆ 11.30 ಗಂಟೆಗೆ. 3) ಇ-ಪೋರ್ಟಲ್ ಮುಖಾಂತರ ಬಿಡ್ ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕ: 18.10.2024 ರ 17:00 ಗಂಟೆಯವರೆಗೆ. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.10.2024ರ ಬೆಳಿಗ್ಗೆ 11:00 ಗಂಟೆಗೆ. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 4.11.2024 ಬೆಳಿಗ್ಗೆ 11:00 ಗಂಟೆಗೆ. 6) ಸದರಿ ಟೆಂಡರ್ ಪ್ರಕಟಣೆಯನ್ನು ತಿರಸ್ಕರಿಸುವ/ ರದ್ದುಪಡಿಸುವ ಪೂರ್ಣ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ವಾ.ಸಾ.ಸಂ.ಇ/ವಾಪ್ರ/2061/ಆಕಾರ್/2024-25

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ

ದೂರವಾಣಿ ಸಂಖ್ಯೆ : 08392-273479 /278168
ಫ್ಯಾಕ್ಸ್ : 08392-273477
ವೆಬ್‌ಸೈಟ್ : www.bellarycity.gov.in
ಇ-ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ-583101

ಸಂ:ಮನಪಾಬ/ಆಶಾ/ ಸ್ವಚ್ಛ ಭಾರತ್ / ಎಂ.ಆರ್ ಎಫ್ /01/2024-25 ದಿನಾಂಕ:- .09.2024

ಟೆಂಡರ್ ಪ್ರಕಟಣೆ

ಬಳ್ಳಾರಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ ನಗರ- 2ರ ಅಡಿಯಲ್ಲಿ ಪಾಲಿಕೆಗೆ ಅನುಮೋದನೆಗೊಂಡ ಒಣ ತ್ಯಾಜ್ಯ ನಿರ್ವಹಣೆಗಾಗಿ ಮೆಟೀರಿಯಲ್ ರಿಕವರಿ ಫೆಸಿಲಿಟಿಯನ್ನು (MRF) ಸ್ಥಾಪಿಸುವ ಸಿವಿಲ್ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆಯಲಾಗಿದ್ದು, ಅರ್ಹ ಏಜೆನ್ಸಿ/ಸರಬರಾಜುದಾರರಿಗೆ ಈ ಕೆಳಕಂಡ ದಿನಾಂಕದೊಳಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್(KPPP) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಕ್ರ.ಸಂ	ವಿಷಯ	ದಿನಾಂಕ	ಸಮಯ
1	ಇಂಡೆಂಟ್ ಸಂಖ್ಯೆ:- DMA/2024-25/BD/WORK_INDENT20423		
2	ಟೆಂಡರ್ ಪೂರ್ವಭಾವಿ ಸಭೆ	05/09/2024	ಮಹಾನಗರಪಾಲಿಕೆಯ ಸಭಾಂಗಣದಲ್ಲಿ
3	ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ	21/10/2024	4.30 PM ಗಂಟೆವರೆಗೆ
4	ತಾಂತ್ರಿಕ ಬಿಡ್ ತೆರೆಯುವ ದಿನಾಂಕ	22/10/2024	05.00 PM ನಂತರ
5	ಆರ್ಥಿಕ ಬಿಡ್ ತರೆಯುವ ದಿನಾಂಕ	25/10/2024	11.30 AM ನಂತರ

ಸದರಿ ಟೆಂಡರ್‌ನ್ನು ಆನ್‌ಲೈನ್ ಮುಖಾಂತರ ಡೌನ್‌ಲೋಡ್ ಮಾಡಿ ಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮಹಾನಗರಪಾಲಿಕೆ, ಬಳ್ಳಾರಿ ಕಛೇರಿಯ ಕೆಲಸದ ವೇಳೆಯಲ್ಲಿ ದೂರವಾಣಿ ಸಂಖ್ಯೆ: 08392-273477/9535555247/ವೆಬ್‌ಸೈಟ್‌ನಲ್ಲಿ http://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿದೆ.

ತಮ್ಮ ವಿಶ್ವಾಸಿ
ಆಯುಕ್ತರು, ಬಳ್ಳಾರಿ ಮಹಾನಗರ ಪಾಲಿಕೆ, ಬಳ್ಳಾರಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ, ಘಟಕಾನಿ ವಿಭಾಗ ನಂ. 2, ಹಿಡಕಲ್ ಡ್ಯಾಂ
ಕಚೇರಿ ದೂರವಾಣಿ ಸಂ:08333-2200119 / ಫ್ಯಾಕ್ಸ ಸಂ:08333-263405 /
ಇ-ಮೇಲ್: eegrbc2@gmail.com

ಸಂ: ಕನೀನಿನಿ/ಜಿಆರ್‌ಬಿಸಿಸಿ-2/ಡಿಬಿ/ಟೆಂಡರ್/2024-25/1393 ದಿನಾಂಕ:13-09-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

2024-25 ನೇ ಸಾಲಿನಲ್ಲಿ ಈ ವಿಭಾಗ ಕಚೇರಿ ವ್ಯಾಪ್ತಿಯಲ್ಲಿ 02 ಸಂಖ್ಯೆ ಆಣೆಕಟ್ಟು ಸಂಬಂಧಿತ ಕಾಮಗಾರಿಗಳ ಟೆಂಡರ್ ಪ್ರಕಟಣೆ ಹೊರಡಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ. (ಅಂದಾಜು ಮೊತ್ತ ರೂ.311.89 ರಿಂದ 322.43 ಲಕ್ಷಗಳವರಗೆ) 1)ಇಂಡೆಂಟ ನಂ.1084 & 1295 2ನೇ ಕರೆ 2) ಕರ್ನಾಟಕ ಸರ್ಕಾರದ https://kppp.karnataka.gov.in ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: 13/09/2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 3)ಕರ್ನಾಟಕಸರ್ಕಾರದ ಕೆ.ಪಿ.ಪಿ.ಪಿ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ:03/10/2024 ವೇಳೆ:17.30 ಗಂಟೆಯೊಳಗೆ ಸಲ್ಲಿಸುವುದು 4) ಟೆಂಡರಗಳನ್ನು ತೆರೆಯುವ ದಿನಾಂಕ :05/10/2024 ವೇಳೆ : 10.30 ಗಂಟೆ

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

Note: Here after any change with reference to this Notification will be Notified in https://kppp.karnataka.gov.in Portl Only.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು,
ಕನೀನಿನಿ, ಘಟಪ್ರಭಾಕಾನಿ ವಿಭಾಗ ನಂ.2, ಹಿಡಕಲ್-ಡ್ಯಾಮ

DIPR/BGM/RO-NO-820/KSMCA/2024-25

ಮಹಾನಗರ ಪಾಲಿಕೆ, ಕಲಬುರಗಿ

ದೂ:08472/ 278675, ಫ್ಯಾಕ್ಸ: 08472 / 260776 ಇ ಮೇಲ್- itstaff_ulb_gulbarga@yahoo.com

No: KMP/EE/TS-02/NMPC &15th FC/05/2024-25 ದಿನಾಂಕ: 18.09.2024.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ.

1) ಕಾಮಗಾರಿಯ ವಿವರ : ಕಲಬುರಗಿ ಮಹಾನಗರ ಪಾಲಿಕೆಯಿಂದ 2021-22ನೇ ಸಾಲಿನ Million Plus city (BBMP) ಗೆ ಹಂಚಿಕೆಯಾದ 15ನೇ ಹಣಕಾಸು ಆಯೋಗದ ಅನುದಾನವನ್ನು Non-Million Plus city ಗಳಿಗೆ ಮರು ಹಂಚಿಕೆ ಮಾಡಿ ಬಿಡುಗಡೆಗೊಳಿಸಿರುವ ಅನುದಾನದಲ್ಲಿ ಹಾಗೂ 2022-23ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಹಾಗೂ 2023-24ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಅನುಮೋದನೆಗೊಂಡ ಒಟ್ಟು (06) ಕಾಮಗಾರಿಗಳಿಗೆ ಕೆ.ಪಿ.ಪಿ. ಪ್ರೋರ್ಟಲ್-2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ-1 & 3ರ ಮೂಲಕ 7 ದಿನಗಳ ಅಲ್ಪಾವಧಿ ಟೆಂಡರ್‌ನ್ನು ದ್ವಿ ಲಕೋಟೆಯಲ್ಲಿ (Two Cover) ಟೆಂಡರವನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ **ರೂ. 15.00 ಲಕ್ಷಗಳು** ಹಾಗೂ ಗರಿಷ್ಠ ಮೊತ್ತ **ರೂ. 100.00 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರ: 3ನೇ ದರ್ಜೆ: 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 37,500.00 ಗಳು ಹಾಗೂ ಗರಿಷ್ಠ ರೂ. 1,58,200.00 ಗಳು. 5) ಪೂರ್ವಭಾವಿ ಸಭೆ ದಿನಾಂಕ: **25.09.2024 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **25.09.2024ರಂದು ಸಾಯಂಕಾಲ 4:30 ಗಂಟೆಗೆ,** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **26.09.2024 ರಂದು ಸಾಯಂಕಾಲ 04:35 ಗಂಟೆಗೆ,** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **27.09.2024 ರಂದು ಬೆಳಿಗ್ಗೆ 11:30 ಗಂಟೆಗೆ.** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.kamataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ : ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/445/ಕೆ.ಎಸ್.ಎಂ.ಸಿ.&ಎ/2024-25

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ
3ನೇ ಮಹಡಿ, "ಗ್ರಾಮೀಣಾಭಿವೃದ್ಧಿ ಭವನ", ಆನಂದರಾವ್ ವೃತ್ತ, ಬೆಂಗಳೂರು - 560009.
ದೂರವಾಣಿ ಸಂಖ್ಯೆ: 080-29710021/22/23/24 ಫ್ಯಾಕ್ಸ್: 080-29710025
ಇ-ಮೇಲ್: coo.krrda.karbng@kar.nic.in ವೆಬ್‌ಸೈಟ್: http://www.krrda.in

ಸಂಖ್ಯೆ:ಕೆಆರ್‌ಆರ್‌ಡಿಎ/ತಾಂತ್ರಿಕ/11/208/ಟೆಂಡರ್ ನೋ-2/2024-25/1345 ದಿನಾಂಕ: 18-09-2024

ಅಲ್ಪಾವಧಿ ಟೆಂಡರ್ ಪ್ರಕಟಣೆ-2

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ **ಕಲ್ಯಾಣ ಪಥ ಯೋಜನೆಯ ಕಾಮಗಾರಿಗಳಿಗೆ** ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ಯಾಕೇಜ್ ಕಾಮಗಾರಿಗಳಿಗೆ ಐಟಂ ರೇಟ್ ದರಗಳ ಟೆಂಡರ್‌ನ್ನು ಕರೆದಿದ್ದು, ಟೆಂಡರ್ ವೇಳಾಪಟ್ಟಿಯ ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಯೋಜನೆ	ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ)		ಇ.ಎಂ.ಡಿ. ಮೊತ್ತ, ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ	ಕಾಮಗಾರಿ ಪೂರ್ಣಗೊಳಿಸುವ ಅವಧಿ
		ಕನಿಷ್ಠ	ಗರಿಷ್ಠ		
1	ಕಲ್ಯಾಣ ಪಥ	800.00	1600.00	• ರೂ. 100.00 ಲಕ್ಷದಿಂದ ರೂ. 1000.00 ಲಕ್ಷ ವರೆಗಿನ ಮೊತ್ತದ ಕಾಮಗಾರಿಗಳಿಗೆ - ಶೇ. 1.50%, ಕನಿಷ್ಠ ರೂ. 2.00 ಲಕ್ಷ ವರೆಗೆ. • ರೂ. 1000.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಗಳಿಗೆ - ಶೇ. 1.00%, ಕನಿಷ್ಠ ರೂ. 15.00 ಲಕ್ಷವರೆಗೆ	9/11 ತಿಂಗಳು (ಮಳೆಗಾಲ ಸೇರಿ)

I) ಟೆಂಡರ್ ಪ್ಯಾಕೇಜಿನ ಇಂಡೆಂಟ್ ಸಂಖ್ಯೆಗಳು: KRRDA/2024-25/RD/WORK_INDENT113 to 117, 119 to 121, 123 to 124, 126 to 128

ಟೆಂಡರ್ ಪ್ರಕ್ರಿಯೆಯ ವೇಳಪಟ್ಟಿಯ ವಿವರಗಳು ಕೆಳಕಂಡಂತಿವೆ:

1	ಪ್ರಿ-ಬಿಡ್ ಸಭೆಯ ದಿನಾಂಕ	24-09-2024, ಮಧ್ಯಾಹ್ನ 12.00 ಗಂಟೆಗೆ.
2	ಬಿಡ್‌ಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ	ಕೆಪಿಪಿ ಪೋರ್ಟಲ್‌ನಲ್ಲಿರುವಂತೆ
3	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	ಕೆಪಿಪಿ ಪೋರ್ಟಲ್‌ನಲ್ಲಿರುವಂತೆ
4	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	ಆಯಾ ಕಾಮಗಾರಿಗಳ ತಾಂತ್ರಿಕ ಬಿಡ್ ಪರಿಶೀಲನೆ ಪೂರ್ಣಗೊಂಡ ನಂತರ.

II) ಇದಲ್ಲದೆ ಟೆಂಡರ್ ಅಧಿಸೂಚನೆ ಸಂಖ್ಯೆ: KRRDA/TECH/11/208/TND NOT-1/2024-25/1125, ದಿನಾಂಕ: 09-09-2024 ರಲ್ಲಿ ಹೊರಡಿಸಲಾದ ಟೆಂಡರ್ ಪ್ಯಾಕೇಜ್‌ಗಳಿಗೆ ಟೆಂಡರ್‌ಗಳನ್ನು ಸ್ವೀಕರಿಲು ನಿಗದಿಪಡಿಸಿರುವ ಪರಿಷ್ಕೃತ ದಿನಾಂಕಗಳ ವಿವರಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ನೋಡಬಹುದು.

1) ಲೋಕೋಪಯೋಗಿ ಇಲಾಖೆ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿಕೊಂಡ ಒಂದನೇ ದರ್ಜೆ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು. ಗುತ್ತಿಗೆ ನೀಡುವಿಕೆಯು ಗುತ್ತಿಗೆ ನಿಯಮಗಳಂತೆ, ಗುತ್ತಿಗೆದಾರರ ತಾಂತ್ರಿಕ, ಆರ್ಥಿಕ ಸಂಪನ್ಮೂಲ ಮತ್ತು ಕಾಮಗಾರಿ ನಿರ್ವಹಿಸುವ ಸಾಮರ್ಥ್ಯಗಳ ಮೇಲೆ ಅವಲಂಬಿತವಾಗಿರುತ್ತದೆ. **2)** ಕೆ.ಆರ್.ಆರ್.ಡಿ.ಎ ಸಂಸ್ಥೆ ವತಿಯಿಂದ ಪಿ.ಎಂ.ಜಿ.ಎಸ್.ವೈ / ಎನ್.ಜಿ.ಎನ್.ಆರ್.ವೈ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಫಲವಾದ ಹಾಗೂ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸದೇ ಟೆಂಡರ್ ರದ್ದುಪಡಿಸಲಾದ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ. **3)** ಟೆಂಡರ್ ಕರೆಯಲಾದ ಕಾಮಗಾರಿಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ ಇವರನ್ನು ಸಂಪರ್ಕಿಸಬಹುದು. **4)** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಪ್ರಕ್ರಿಯೆ ಮುಂದೂಡುವಿಕೆ / ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **5)** ಪ್ಯಾಕೇಜ್ ಕಾಮಗಾರಿಗಳ ವಿವರಗಳನ್ನು ಹಾಗೂ ಹೆಚ್ಚಿನ ಮಾಹಿತಿಯನ್ನು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಟೆಂಡರಿಂಗ್ ಅಧಿಕಾರಿ ಮತ್ತು ಕಾರ್ಯಪಾಲಕ ಇಂಜಿನಿಯರ್,
ಕ.ಗ್ರಾ.ರ.ಅ.ಸಂ, ಬೆಂಗಳೂರು.

ವಾಸಾಸಂಇ/ವಾ.ಪ್ರ/2056/ಅಡ್ವಟೋರ್/2024-25

ಸಂಕ್ಷಿಪ್ತ ಸುದ್ದಿ

ಪುಸ್ತಕ ಬಹುಮಾನಕ್ಕೆ ಪುಸ್ತಕಗಳ ಆಹ್ವಾನ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ಪುಸ್ತಕ ಬಹುಮಾನಕ್ಕೆ 2023ರಲ್ಲಿ ಪ್ರಕಟವಾದ ಚಿತ್ರಕಲೆಗೆ ಸಂಬಂಧಿಸಿದ ಕನ್ನಡ ಪುಸ್ತಕಗಳನ್ನು ಆಹ್ವಾನಿಸಿದೆ.

ಪುಸ್ತಕ ಬಹುಮಾನವು ₹25 ಸಾವಿರ ನಗದು ಒಳಗೊಂಡಿದೆ.2023ರ ಜ.1ರಿಂದ 2023ರ ಡಿ.31ರೊಳಗೆ ಪ್ರಥಮ ಆವೃತ್ತಿಯಾಗಿ ಪ್ರಕಟಗೊಂಡ ಪುಸ್ತಕಗಳನ್ನು ಕಳುಹಿಸಬಹುದಾಗಿದೆ. ಪುಸ್ತಕವು ಕನಿಷ್ಠ 100 ಪುಟಗಳನ್ನಾದರೂ ಹೊಂದಿರಬೇಕು. ಪುಸ್ತಕ ಬಹುಮಾನಕ್ಕೆ ಅರ್ಜಿ ಸಲ್ಲಿಸುವವರು ಪುಸ್ತಕದ ನಾಲ್ಕು ಪ್ರತಿಗಳನ್ನು ಉಚಿತವಾಗಿ ಅಕಾಡೆಮಿಗೆ ನೀಡಬೇಕು ಎಂದು ಅಕಾಡೆಮಿ ರಿಜಿಸ್ಟ್ರಾರ್ ಹೇಳಿದ್ದಾರೆ.

ಪುಸ್ತಕಗಳನ್ನು ಅ.30ರೊಳಗೆ ಅಕಾಡೆಮಿ ಕಚೇರಿಗೆ ಖುದ್ದಾಗಿ ಅಥವಾ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–580 002 ಈ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಬೇಕು. ಪುಸ್ತಕದ ಮೇಲೆ ಮತ್ತು ಒಳಪುಟದ ಮೇಲೆ, ಪುಸ್ತಕ ಯಾವ ಚಿತ್ರಕಲಾ ಪ್ರಕಾರಕ್ಕೆ ಸೇರುತ್ತದೆ ಎನ್ನುವುದನ್ನು ಸ್ಪಷ್ಟವಾಗಿ ಬರೆದಿರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಈದ್ ವೇಳೆಯೂ ಡಿ.ಜೆ.ಗಳಿಂದ ತೊಂದರೆ’

ಮುಂಬೈ (ಪಿಟಿಐ): ಗಣೇಶ ಉತ್ಸವದ ಸಂದರ್ಭದಲ್ಲಿ ಧ್ವನಿವರ್ಧಕಗಳನ್ನು ಅನುಮತಿಯ ಮಿತಿಗಿಂತ ಹೆಚ್ಚಿನ ಮಟ್ಟದಲ್ಲಿ ಬಳಕೆ ಮಾಡುವುದರಿಂದ ಸಮಸ್ಯೆ ಉಂಟಾಗುತ್ತದೆ ಎಂದಾದರೆ, ಈದ್-ಎ-ಮಿಲಾದ್-ಉನ್-ನಬಿ ಮೆರವಣಿಗೆಗಳ ವೇಳೆಯೂ ಅವುಗಳ ಬಳಕೆಯಿಂದ ಸಮಸ್ಯೆ ಆಗುತ್ತದೆ ಎಂದು ಬಾಂಬೆ ಹೈಕೋರ್ಟ್ ಬುಧವಾರ ಹೇಳಿದೆ.

ಈದ್-ಎ-ಮಿಲಾದ್-ಉನ್-ನಬಿ ಮೆರವಣಿಗೆಗಳ ಸಂದರ್ಭದಲ್ಲಿ ಡಿ.ಜೆ., ನೃತ್ಯ, ಲೇಸರ್ ಬೆಳಕಿನ ಕಿರಣಗಳ ಬಳಕೆ ನಿಷೇಧಿಸಬೇಕು ಎಂಬ ಕೋರಿಕೆ ಇರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಮತ್ತು ನ್ಯಾಯಮೂರ್ತಿ ಅಮಿತ್ ಬೋರ್ಕರ್ ಅವರು ಇದ್ದ ವಿಭಾಗೀಯ ಪೀಠವು ಈ ಮಾತು ಹೇಳಿದೆ. ಗಣೇಶ ಉತ್ಸವಕ್ಕೆ ಕೆಲವು ದಿನಗಳ ಮೊದಲು ತಾನು ನೀಡಿದ್ದ ಆದೇಶವೊಂದನ್ನು ಪೀಠವು ಉಲ್ಲೇಖಿಸಿತು. ಶಬ್ದ ಮಾಲಿನ್ಯ (ನಿಯಂತ್ರಣ ಮತ್ತು ಹತೋಟಿ) ನಿಯಮಗಳ ಅಡಿಯಲ್ಲಿ ಅನುಮತಿ ನೀಡಲಾಗಿರುವ ಮಿತಿಗಿಂತ ಹೆಚ್ಚು ಶಬ್ದ ಮಾಡುವ ಧ್ವನಿವರ್ಧಕಗಳ ಬಳಕೆಯನ್ನು ಹಬ್ಬಗಳ ಸಂದರ್ಭದಲ್ಲಿ ನಿಷೇಧಿಸಲು ಆ ಆದೇಶದಲ್ಲಿ ಒತ್ತು ನೀಡಲಾಗಿದೆ.

ಗೃಹ ಸಚಿವ ಜಿ. ಪರಮೇಶ್ವರ ಅಧ್ಯಕ್ಷ, ನಾಲ್ವರು ಸಚಿವರು ಸದಸ್ಯರು: ಸಿದ್ದರಾಮಯ್ಯ ಹೇಳಿಕೆ

ಡ್ರಗ್ಸ್ ನಿಯಂತ್ರಣಕ್ಕೆ ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮಾದಕವಸ್ತು (ಡ್ರಗ್ಸ್) ಪೂರೈಕೆ, ಮಾರಾಟ ಜಾಲಕ್ಕೆ ಸಂಪೂರ್ಣ ಕಡಿವಾಣ ಹಾಕಲು ಗೃಹ ಸಚಿವ ಜಿ. ಪರಮೇಶ್ವರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಲಾಗಿದೆ.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ್ ಪಾಟೀಲ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಕಾರ್ಯಪಡೆ ರಚನೆ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ಸಮಿತಿ ಪ್ರತಿ ತಿಂಗಳು ಸಭೆ ನಡೆಸಿ ಮಾದಕವಸ್ತು ಪೂರೈಕೆ, ಮಾರಾಟ, ಸೇವನೆ ಪ್ರಕರಣಗಳ ಕುರಿತು ಅವಲೋಕನ ನಡೆಸಲಿದೆ. ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡಲಿದೆ ಎಂದರು.

ಇದುವರೆಗೂ ಅಧಿಕಾರಿಗಳ ನೇತೃತ್ವದಲ್ಲಿ ಮಾದಕವಸ್ತು ಜಾಲದ ಮೇಲೆ ನಿಗಾ ಇಡಲಾಗುತ್ತಿತ್ತು. ಇದೇ ಮೊದಲ ಬಾರಿ ಸಚಿವ ನೇತೃತ್ವದಲ್ಲಿ ಕಾರ್ಯಪಡೆ ರಚಿಸಲಾಗುತ್ತಿದೆ. ಪ್ರತಿ ಠಾಣೆಯ ಠಾಣಾಧಿಕಾರಿಗಳಿಗೆ ಹೊಣೆ ನಿಗದಿ ಮಾಡಲಾಗುತ್ತದೆ. ಹೊಣೆ ನಿಭಾಯಿಸದ ಪೊಲೀಸರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ. ಜಿಲ್ಲಾ ಸಮಿತಿಗಳನ್ನೂ ಸಕ್ರಿಯಗೊಳಿಸಲಾಗುತ್ತದೆ ಎಂದರು.

ಮಾದಕ ವಸ್ತು ಜಾಲದ ವಿರುದ್ಧ ದಾಖಲಾದ ಪ್ರಕರಣಗಳಲ್ಲಿ ಶೇ 50ರಷ್ಟು ಬೆಂಗಳೂರು ಹಾಗೂ ಶೇ 22ರಷ್ಟು ಮಂಗಳೂರಿನಲ್ಲಿ ವರದಿಯಾಗಿವೆ. ಉಳಿದ ಶೇ 28ರಷ್ಟು ಪ್ರಕರಣಗಳು ರಾಜ್ಯದ ಇತರೆ ಜಿಲ್ಲೆಗಳಲ್ಲಿ ದಾಖಲಾಗಿವೆ. ಬೆಂಗಳೂರು ಪೂರ್ವ ವಲಯ ದಂಧೆಯ ತಾಣವಾಗಿದೆ. ಜಾಲದಲ್ಲಿ ತೊಡಗಿಸಿಕೊಂಡಿರುವವರಲ್ಲಿ ಭಾರತೀಯರು ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ವಿದೇಶಿರ ಸಂಖ್ಯೆ ಕಡಿಮೆ ಇದೆ. 2023ರಲ್ಲಿ 8,542 ಭಾರತೀಯರು, 106 ವಿದೇಶಿಯರನ್ನು ಬಂಧಿಸಲಾಗಿತ್ತು ಎಂದು ಮಾಹಿತಿ ನೀಡಿದರು.

ಅಗತ್ಯಬಿದ್ದರೆ ಕಾನೂನಿಗೆ ತಿದ್ದುಪಡಿ ಮಾಡಲಾಗುವುದು. ಮಾದಕ ವಸ್ತು ಪೂರೈಕೆ ಮಾಡುವವರಿಗೆ ಕನಿಷ್ಠ 10 ವರ್ಷಗಳ ಶಿಕ್ಷೆ ಅಥವಾ ಜೀವಾವಧಿ ಶಿಕ್ಷೆ ನಿಗದಿ ಮಾಡಲು ಕ್ರಮವಹಿಸಲಾಗುವುದು ಎಂದು ಹೇಳಿದರು.

ಮಾದಕ ವಸ್ತುಗಳ ಹಾವಳಿ ಹಾಗೂ ನಿಯಂತ್ರಣದ ಕುರಿತು ಬುಧವಾರ ನಡೆದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಜಿ. ಪರಮೇಶ್ವರ ಅಧಿಕಾರಿಗಳಿಂದ ಮಾಹಿತಿ ಪಡೆದರು.

ಡ್ರಗ್ಸ್ ಪ್ರಕರಣಗಳು



‘ಪ್ರಜಾವಾಣಿ’ ಓದ್ತೀರಾ: ಮುಖ್ಯಮಂತ್ರಿ ಪ್ರಶ್ನೆ

ಮಾದಕ ವಸ್ತುಗಳ ಹಾವಳಿ ಹಾಗೂ ನಿಯಂತ್ರಣ ಕುರಿತು ಬುಧವಾರ ನಡೆದ ಸಭೆಯಲ್ಲಿ ಈಚೆಗೆ ‘ಪ್ರಜಾವಾಣಿ’ಯಲ್ಲಿ ಪ್ರಕಟಗೊಂಡ ‘ಸಿಲಿಕಾನ್ ಸಿಟಿ ಡ್ರಗ್ಸ್ ಮಾಫಿಯಾ ವ್ಯಾಪಕ’ ವಿಶೇಷ ವರದಿಯನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವರದಿಯ ಶೀರ್ಷಿಕೆ ಹಾಗೂ ಮೊದಲ ಪ್ಯಾರಾವನ್ನು ಓದಿದ ಅವರು, ‘ನಿತ್ಯ ‘ಪ್ರಜಾವಾಣಿ’ ಓದುತ್ತೀರಾ? ಡ್ರಗ್ಸ್ ಮಾಫಿಯಾ ವರದಿ ಗಮನಿಸಿದ್ದೀರಾ? ಗಮನಿಸಿದ್ದರೆ ನಿಯಂತ್ರಣಕ್ಕೆ ಏನು ಕ್ರಮ ಕೈಗೊಂಡಿದ್ದೀರಿ’ ಎಂದು ಪ್ರಶ್ನಿಸಿದರು.

‘ನೋ ಇಂಗ್ಲಿಷ್, ಓನ್ಲಿ ಕನ್ನಡ’..

‘ನೋ ಇಂಗ್ಲಿಷ್, ಓನ್ಲಿ ಕನ್ನಡ.. ಇದು ಕರ್ನಾಟಕ. ನಾನು ಕನ್ನಡದಲ್ಲಷ್ಟೇ ಹೇಳೋದು. ನೀವು ಇಂಗ್ಲಿಷ್, ಹಿಂದಿಗೆ ಭಾಷಾಂತರಿಸಿಕೊಳ್ಳಿ. . .’

ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗೋಷ್ಠಿಯ ನಂತರ ಇಂಗ್ಲಿಷ್ ನಲ್ಲೂ‘ಬೈಟ್’ ನೀಡುವಂತೆ ರಾಷ್ಟ್ರೀಯ ಸುದ್ದಿವಾಹಿನಿಗಳ ಪತ್ರಕರ್ತರು ಕೇಳಿದಾಗ ಸಿದ್ದರಾಮಯ್ಯ ನೀಡಿದ ಪ್ರತಿಕ್ರಿಯೆ.

ಮಾಧ್ಯಮ ಪ್ರತಿನಿಧಿಗಳು ಎಷ್ಟು ವಿನಂತಿಸಿದರೂ, ಬೇರೆ ಭಾಷೆಗಳಲ್ಲಿ ವಿವರ ನೀಡಲು ನಿರಾಕರಿಸಿದ ಅವರು ಸ್ಥಳದಿಂದ ನಿರ್ಗಮಿಸಿದರು.

ಸುದ್ದಿ 2 ನಿಮಿಷ

ದಸರಾ:ಹಗರಣಕ್ಕೆ ವೇದಿಕೆ ಆಗದಿರಲಿ– ಅಶೋಕ

ಬೆಂಗಳೂರು: ನಾಡಹಬ್ಬ ಮೈಸೂರು ದಸರಾ ಉತ್ಸವವನ್ನು ಅದ್ದೂರಿಯಾಗಿ ಆಚರಿಸಬೇಕು ಎಂಬ ಸರ್ಕಾರದ ನಿರ್ಧಾರ ಸ್ವಾಗತಾರ್ಹ. ಆದರೆ, ಉತ್ಸವ ಅದ್ದೂರಿ ಹಗರಣಕ್ಕೂ ವೇದಿಕೆ ಆಗದಿರಲಿ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಹೇಳಿದ್ದಾರೆ.

ಈ ಕುರಿತು ‘ಎಕ್ಸ್’ನಲ್ಲಿ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಕಳೆದ ವರ್ಷ ಅಂತರ-ರಾಷ್ಟ್ರೀಯ ಖ್ಯಾತಿಯ ಸರೋದ್ ವಾದಕ ಪಂಡಿತ್ ತಾರಾನಾಥ್ ಅವರ ಬಳಿಯೂ ಪರ್ಸಂಟೇಜ್ ಕೇಳಿ ಕರ್ನಾಟಕದ ಮಾನ ಹಾರಾಜು ಹಾಕಿದ್ದ ಕಾಂಗ್ರೆಸ್ ಸರ್ಕಾರ, ಈ ವರ್ಷವಾದರೂ ಭ್ರಷ್ಟಾಚಾರದ ಸೋಂಕು ತಗುಲಿಸದೆ ನಾಡಿನ ಸಂಸ್ಕೃತಿ, ಪರಂಪರೆಯ ಗೌರವ ಉಳಿಸಬೇಕು ಎಂದು ಸಲಹೆ ನೀಡಿದ್ದಾರೆ.

‘ಮೈಸೂರು ದಸರಾ ಕರ್ನಾಟಕದ ಭವ್ಯ ಸಾಂಸ್ಕೃತಿಕ, ಪರಂಪರೆಯ ಪ್ರತೀಕ. ಇಡೀ ದೇಶ, ಪ್ರಪಂಚವೇ ಎದುರು ನೋಡುವ ಇಂತಹ ಉತ್ಸವವನ್ನು ರಾಜ್ಯ ಸರ್ಕಾರ ಶ್ರದ್ಧೆ, ಭಕ್ತಿಗಳಿಂದ ಆಚರಿಸಬೇಕು’ ಎಂದಿದ್ದಾರೆ.

ಮುನಿರತ್ನಗೆ ಜಾಮೀನು

ಬೆಂಗಳೂರು: ‘ಘನತ್ಯಾಜ್ಯ ಸಂಗ್ರಹ ಮತ್ತು ವಿಲೇವಾರಿ ನಿರ್ವಹಣೆ ಕೆಲಸಕ್ಕೆ ಸಂಬಂಧಿಸಿದಂತೆ ಲಂಚ ನೀಡಬೇಕು ಎಂದು ನನಗೆ ತೊಂದರೆ ಯೊಡ್ಡಿದ್ದಾರೆ’ ಎಂಬ ಆರೋಪದಡಿ ಗುತ್ತಿಗೆದಾರ ಚೆಲುವರಾಜು ದಾಖಲಿಸಿರುವ ಕ್ರಿಮಿನಲ್ ಪ್ರಕರಣದಲ್ಲಿ ರಾಜರಾಜೇಶ್ವರಿ ನಗರದ ಬಿಜೆಪಿ ಶಾಸಕ ಮುನಿರತ್ನ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ನಿರೀಕ್ಷಣಾ ಜಾಮೀನು ನೀಡಿದೆ.

ಈ ಸಂಬಂಧ ಮುನಿರತ್ನ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಬುಧವಾರ ವಿಚಾರಣೆ ನಡೆಸಿದರು.

ಇದೇ ವೇಳೆ ಪರಿಶಿಷ್ಟ ಜಾತಿ ನಿಂದನೆ ಆರೋಪದಡಿ ವೇಲುನಾಯ್ಕರ್ ದಾಖಲಿಸಿರುವ ದೂರಿಗೆ ಸಂಬಂಧಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ನಿಂದನೆ ಪ್ರಕರಣದಲ್ಲಿ ನಿಯಮಿತ ಜಾಮೀನು ಅರ್ಜಿ ಮೇಲಿನ ವಿಚಾರಣೆ ಆಲಿಸಿ ಮುಕ್ತಾಯಗೊಳಿಸಿದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಆದೇಶ ಕಾಯ್ದಿರಿಸಿದರು.

ಮುನಿರತ್ನ ಪರ ಹೈಕೋರ್ಟ್‌ನ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಹಾಗೂ ಪ್ರಾಸಿಕ್ಯೂಷನ್ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಸಿ.ಎಸ್.ಪ್ರದೀಪ್ ವಾದ ಮಂಡಿಸಿದರು.

‘ಚಿತ್ರ ನಗರಿ’ ಕಾಮಗಾರಿ ಆರಂಭಿಸಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನಲ್ಲಿ ಚಿತ್ರನಗರಿಯ ಮೊದಲ ಹಂತದ ಯೋಜನೆಯನ್ನು ಕೂಡಲೇ ಪ್ರಾರಂಭಿಸಬೇಕು ಹಾಗೂ ಎರಡನೇ ಹಂತಕ್ಕೆ 50 ಎಕರೆ ಭೂಮಿ ಗುರುತಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಮೈಸೂರು ಜಿಲ್ಲೆಯ ಇಮ್ಮಾವು ಗ್ರಾಮದಲ್ಲಿ ಚಿತ್ರನಗರಿ ನಿರ್ಮಿಸುವ ಕುರಿತು ಬುಧವಾರ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಗುರುತಿಸಿರುವ 110 ಎಕರೆ ಭೂಮಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಗೆ ಹಸ್ತಾಂತರಿಸಲು ಆದೇಶಿಸಿದರು.

ಚಿತ್ರನಗರಿ ಯೋಜನೆಯನ್ನು 2015–16ನೇ ಸಾಲಿನ ಆಯವ್ಯಯದಲ್ಲಿ ಘೋಷಣೆ ಮಾಡಲಾಗಿತ್ತು. ಅದು ಇನ್ನೂ ಕಾರ್ಯರೂಪಕ್ಕೆ ಬಂದಿಲ್ಲ. ಭೂಮಿ ಹಸ್ತಾಂತರವಾದ ಕೂಡಲೇ ಸಾರ್ವಜನಿಕ– ಖಾಸಗಿ ಸಹಭಾಗಿತ್ವ (ಪಿಪಿಪಿ) ಮಾದರಿಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲು ಟೆಂಡರ್ ಕರೆಯಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಥಿಯೇಟರ್, ಸ್ಟುಡಿಯೊ, ಮಲ್ಟಿಪ್ಲೆಕ್ಸ್, ಥೀಮ್ ಪಾರ್ಕ್, ಹೋಟೆಲ್‌ಗಳೂ ಸೇರಿದಂತೆ ಚಿತ್ರರಂಗಕ್ಕೆ ಅಗತ್ಯವಿರುವ ತಂತ್ರಜ್ಞಾನಗಳನ್ನು ಒಳಗೊಂಡ ಅತ್ಯಾಧುನಿಕ ಮಾದರಿಯ ಚಿತ್ರನಗರಿ ನಿರ್ಮಿಸಬೇಕು. ಚಿತ್ರರಂಗದ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ ಚಿತ್ರನಗರಿಯ ರೂಪುರೇಷೆಗಳನ್ನು ಅಂತಿಮಗೊಳಿಸುವಂತೆ ಸಿದ್ದರಾಮಯ್ಯ ನಿರ್ದೇಶನ ನೀಡಿದರು.

ಚಿತ್ರನಗರಿಯಿಂದ ಪ್ರವಾಸೋದ್ಯಮಕ್ಕೂ ಉತ್ತೇಜನ ದೊರೆಯಬೇಕು. ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಚಿತ್ರ ಪ್ರವಾಸೋದ್ಯಮಕ್ಕೂ ಒತ್ತು ನೀಡಬೇಕು ಎಂದು ಸೂಚಿಸಿದರು. ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ, ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸಾಧು ಕೋಕಿಲ, ಮುಖ್ಯಮಂತ್ರಿಯವರ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಡಾ. ಕೆ.ವಿ. ತ್ರಿಲೋಕ್ ಚಂದ್ರ, ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಸಭೆಯಲ್ಲಿ ಭಾಗವಹಿಸಿದ್ದರು.

‘ರಾಹುಲ್ ಮುಗಿಸಲು ಬಿಜೆಪಿ ಸಂಚು’

ಬೆಂಗಳೂರು: ರಾಹುಲ್ ಗಾಂಧಿ ಅವರ ಜನಪ್ರಿಯತೆ ಸಹಿಸದ ಬಿಜೆಪಿ ಅವರನ್ನು ಮುಗಿಸಲು ಸಂಚು ರೂಪಿಸಿದೆ. ಹಲವರು ಜೀವ ಬೆದರಿಕೆಯನ್ನೂ ಹಾಕಿದ್ದಾರೆ. ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ರಾಹುಲ್ ಗಾಂಧಿ ಅವರದು ತ್ಯಾಗ, ಬಲಿದಾನದ ಕುಟುಂಬ. ಇಂದಿರಾ, ರಾಜೀವ್ ಅವರು ದೇಶಕ್ಕಾಗಿ ಜೀವ ತೆತ್ತಿದ್ದಾರೆ. ಅವರ ಕುಟುಂಬದ ಕುಡಿ ರಾಹುಲ್ ದೇಶಕ್ಕಾಗಿ ಅವಿರತ ಹೋರಾಟ ನಡೆಸಿದ್ದಾರೆ. ಅವರ ಜನಪ್ರಿಯತೆ ಬಿಜೆಪಿ ಹಾಗೂ ಅದರ ಮಿತ್ರ ಪಕ್ಷಗಳಿಗೆ ಸಹಿಸಲು ಆಗುತ್ತಿಲ್ಲ ಎಂದು ದೂರಿದರು.

‘ಇಂದಿರಾ ಗಾಂಧಿಗೆ ಆದ ಗತಿ ನಿಮಗೂ ಆಗುತ್ತದೆ. ನಾಲಿಗೆ ಕತ್ತರಿಸಿದರೆ ₹11 ಲಕ್ಷ ಬಹುಮಾನ ನೀಡಲಾಗುವುದು, ರಾಹುಲ್ ಭಯೋತ್ಪಾದಕ. ಅವರನ್ನು ಕೊಲ್ಲಬೇಕು’ ಎಂಬ ಸರಣಿ ಬೆದರಿಕೆ ಹಾಕಲಾಗಿದೆ. ಹೀಗೆ ಬೆದರಿಕೆ ಹಾಕಿದವರಲ್ಲಿ ಕೇಂದ್ರ ಸಚಿವರು, ಕೆಲವು ರಾಜ್ಯಗಳ ಶಾಸಕರು ಇದ್ದಾರೆ. ಇಂತಹ ಹೇಳಿಕೆ ನೀಡಿದ ಎಲ್ಲರ ವಿರುದ್ಧ ಪ್ರಕರಣ ದಾಖಲಿಸಬೇಕು. ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಮೋದಿ ಐದು ವರ್ಷ ಪೂರೈಸಲ್ಲ: ತೆಲುಗುದೇಶಂ, ಜೆಡಿಯು ಪಕ್ಷಗಳ ನೆರವಿನಿಂದ ಸರ್ಕಾರ ರಚಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಐದು ವರ್ಷಗಳನ್ನು ಪೂರೈಸುವುದು ಅನುಮಾನ. ನಿತೀಶ್ ಕುಮಾರ್, ಚಂದ್ರಬಾಬು ನಾಯ್ಡು ಹೆಚ್ಚು ಸಮಯ ಅವರ ಜತೆ ಇರುವುದಿಲ್ಲ. ಬೆಂಬಲ ಹಿಂಪಡೆದರೆ ಸರ್ಕಾರ ಪತನವಾಗಲಿದೆ. ಕಾಂಗ್ರೆಸ್ ಅಧಿಕಾರ ಪಡೆಯಲೂಬಹುದು ಎಂದು ಹೇಳಿದರು.

ಮಹಿಳಾ ಸಮುದಾಯ, ದಲಿತ ಜನಾಂಗ ಹಾಗೂ ಒಕ್ಕಲಿಗ ಸಮುದಾಯವನ್ನು ಅತ್ಯಂತ ಕೆಟ್ಟದಾಗಿ ಅವಹೇಳನ ಮಾಡಿರುವ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು ಎನ್ನುವ ಬೇಡಿಕೆ ಕುರಿತು ಪರಿಶೀಲಿಸಲಾಗುವುದು ಎಂದರು.

ಶಾಸಕ ಬಸನಗೌಡ ಯತ್ನಾಳ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ನಿಂದಿಸಿದ್ದಾರೆ ಎಂಬ ಆರೋಪದಡಿ ವಿಜಯಪುರ ನಗರ ಕ್ಷೇತ್ರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ನಗರದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಬುಧವಾರ ರಾತ್ರಿ ಎಫ್ಐಆರ್ ದಾಖಲಾಗಿದೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್ ಅವರು ನೀಡಿದ ದೂರು ಆಧರಿಸಿ, ಪೊಲೀಸರು ಎಫ್ಐಆರ್ ದಾಖಲು ಮಾಡಿಕೊಂಡಿದ್ದಾರೆ.

‘ವಿಚಾರಣೆಗೆ ಹಾಜರಾಗುವಂತೆ ಯತ್ನಾಳ ಅವರಿಗೆ ನೋಟಿಸ್ ಜಾರಿ ಮಾಡಲಾಗುವುದು. ಹೇಳಿಕೆ ದಾಖಲು ಮಾಡಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪೊಲೀಸರು ಹೇಳಿದರು.

‘ರಾಹುಲ್ ಗಾಂಧಿ ಅವರ ಬಗ್ಗೆ ಕೀಳು ಪದ ಬಳಸಿ ಮಾತನಾಡಿದ್ದಾರೆ. ಧರ್ಮಗಳ ಹೆಸರು ಪ್ರಸ್ತಾಪಿಸಿ ಅವಹೇಳನ ಮಾಡಿದ್ದಾರೆ. ಅವರ ಹೇಳಿಕೆಯೂ ಅನೇಕ ಮಾಧ್ಯಮದಲ್ಲೂ ಪ್ರಸಾರವಾಗಿದೆ. ಅಲ್ಲದೇ ಕೋಮು ಗಲಭೆ ಸೃಷ್ಟಿಸುವಂತೆಯೂ ಹೇಳಿಕೆ ನೀಡಿದ್ದಾರೆ’ ಎಂದು ಎಫ್ಐಆರ್ ನಲ್ಲಿ ಉಲ್ಲೇಖಿಸಲಾಗಿದೆ.

ಸಾಹಿತ್ಯ ಪರೀಕ್ಷೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು 2024–25ನೇ ಸಾಲಿನ ‘ಕನ್ನಡ ಪ್ರವೇಶ’, ‘ಕಾವ’, ‘ಜಾಣ’ ಹಾಗೂ ‘ರತ್ನ’ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಇದೇ 30ರವರೆಗೆ ವಿಸ್ತರಿಸಿದೆ.

ಈ ಮೊದಲು ಸೆ.15ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿತ್ತು.



ಸಾರ್ವಜನಿಕರ ಹಿತಾಸಕ್ತಿ ಮೇರೆಗೆ ಅವಧಿ ವಿಸ್ತರಿಸಲಾಗಿದೆ. 2024ರ ಡಿಸೆಂಬರ್ ಕೊನೆಯ ವಾರದಲ್ಲಿ ಪರೀಕ್ಷೆ ನಡೆಯಲಿದೆ. ಪರಿಷತ್ತಿನ ಮಾರಾಟ ಮಳಿಗೆಯಲ್ಲಿ ₹ 25 ಪಾವತಿಸಿ, ಪರೀಕ್ಷಾ ನಿಯಮಾವಳಿ ಹಾಗೂ ಅರ್ಜಿ ನಮೂನೆ ಪಡೆಯಬಹುದು. ಪರೀಕ್ಷಾ ಅರ್ಜಿಗಳನ್ನು ಅಂತರ್ಜಾಲ ತಾಣ www.kasapa.in ಮೂಲಕವೂ ಪಡೆದುಕೊಳ್ಳಬಹುದು. ಪರೀಕ್ಷಾ ಶುಲ್ಕದೊಂದಿಗೆ ₹ 25 ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 26623584 ಅಥವಾ 26612991

ಚುನಾವಣೆ ವೇಳೆ ವಶಪಡಿಸಿಕೊಂಡಿದ್ದ ₹98 ಕೋಟಿ ಮೌಲ್ಯದ ಮದ್ಯ

ಅಕ್ರಮ ಮದ್ಯ: ಕಾಯ್ದಿರಿಸಿದ ತೀರ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಲೋಕಸಭೆ ಚುನಾವಣೆ ಸಂದರ್ಭದಲ್ಲಿ ₹ 98 ಕೋಟಿ ಮೌಲ್ಯದ ಅಕ್ರಮ ಮದ್ಯ ವಶಪಡಿಸಿಕೊಂಡ ಪ್ರಕರಣದಲ್ಲಿ, ನಂಜನಗೂಡು ವ್ಯಾಪ್ತಿಯ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿರುವ ಯುನೈಟೆಡ್ ಬ್ರೀವರಿಸ್ ಲಿಮಿಟೆಡ್ ಕಂಪನಿ ವಿರುದ್ಧ ಅಬಕಾರಿ ಇಲಾಖೆ ಅಧಿಕಾರಿಗಳು ದಾಖಲಿಸಿದ್ದ ಕ್ರಿಮಿನಲ್ ಪ್ರಕರಣದ ಮೇಲಿನ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ.

‘ನಂಜನಗೂಡು ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಎಫ್ಐಆರ್ ಹಾಗೂ ಅದಕ್ಕೆ ಸಂಬಂಧಿಸಿದಂತೆ ನಂಜನಗೂಡು ಜೆಎಂಎಫ್‌ಸಿ ನ್ಯಾಯಾಲಯದಲ್ಲಿನ ವಿಚಾರಣಾ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ಯುನೈಟೆಡ್ ಬ್ರೀವರಿಸ್ ಲಿಮಿಟೆಡ್ ಕಂಪನಿ ಪ್ರತಿನಿಧಿ ಎಂ.ವಿ.ಕಾರ್ತಿಕ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ತೀರ್ಪು ಕಾಯ್ದಿರಿಸಿ ಆದೇಶಿಸಿತು.

ಅಂತೆಯೇ, ತೀರ್ಪು ಪ್ರಕಟವಾಗುವವರೆಗೆ ಪ್ರಕರಣದ ವಿಚಾರಣೆಗೆ ಸಂಪೂರ್ಣ ತಡೆ ನೀಡಿತು. ಅರ್ಜಿದಾರರ ಪರ ಹಿರಿಯ ವಕೀಲ ಸಂದೇಶ್ ಜೆ.ಚೌಟ ಹಾಗೂ ಪ್ರಾಸಿಕ್ಯೂಷನ್ ಪರ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ವಾದ ಮಂಡಿಸಿದರು.

ನಕಲಿ ನೋಟು: ಶಿಕ್ಷೆ ಎತ್ತಿ ಹಿಡಿದ ಕೋರ್ಟ್

ಬೆಂಗಳೂರು: ಹದಿನಾಲ್ಕು ವರ್ಷಗಳ ಹಿಂದೆ ₹500 ಮುಖಬೆಲೆಯ ನಕಲಿ ನೋಟುಗಳ ಚಲಾವಣೆಗೆ ಯತ್ನಿಸಿದ ಪ್ರಕರಣದಲ್ಲಿ ವ್ಯಕ್ತಿಯೊಬ್ಬರಿಗೆ ಸೆಷನ್ಸ್ ನ್ಯಾಯಾಲಯ ವಿಧಿಸಿದ್ದ 5 ವರ್ಷಗಳ ಜೈಲು ಶಿಕ್ಷೆಯನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಶಿಕ್ಷೆ ರದ್ದು ಕೋರಿ ಮೈಸೂರಿನ ಟಿ.ಎನ್.ಕುಮಾರ (31) ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ಏಕಸದಸ್ಯ ನ್ಯಾಯಪೀಠ ತಿರಸ್ಕರಿಸಿದೆ.

ಪ್ರಕರಣವೇನು?: ಟಿ.ಎನ್.ಕುಮಾರ ಅವರನ್ನು ಲಕ್ಷ್ಮೀಪುರ ಠಾಣೆ ಪೊಲೀಸರು ಮೈಸೂರಿನ ಎಂಜಿನಿಯರಿಂಗ್ ಸಂಸ್ಥೆಯ ಬಳಿ 2010ರ ಮಾರ್ಚ್ 3ರಂದು ಬಂಧಿಸಿದ್ದರು. ಒಂದೇ ಸರಣಿ ಸಂಖ್ಯೆಯನ್ನು (2ಬಿಇ901745) ಹೊಂದಿದ್ದ ₹500 ಮುಖಬೆಲೆಯ 30 ನಕಲಿ ನೋಟುಗಳನ್ನು ಅವರಿಂದ ವಶಪಡಿಸಿಕೊಂಡಿದ್ದರು.

ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 489 ಸಿ (ಖೋಟಾ ಅಥವಾ ನಕಲಿ ನೋಟುಗಳನ್ನು ಹೊಂದಿದ) ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದ ಪೊಲೀಸರು, ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ್ದ ಮೈಸೂರು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ 2013ರ ಜನವರಿ 3ರಂದು 5 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಆದೇಶಿಸಿತ್ತು.

ನೀಟ್, ಸಿಇಟಿ: 2ನೇ ಸುತ್ತಿನ ತಾತ್ಕಾಲಿಕ ಸೀಟು ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು:ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶದ ಎರಡನೇ ಸುತ್ತಿನ ಸೀಟು ಹಂಚಿಕೆಯ ತಾತ್ಕಾಲಿಕ ಫಲಿತಾಂಶವನ್ನು ಪ್ರಕಟಿಸಲಾಗಿದೆ.

ಒಟ್ಟು 1,29,417 ಸೀಟುಗಳಲ್ಲಿ 1,12,677 ಸೀಟು ಹಂಚಿಕೆಯಾಗಿವೆ. ಎಂಜಿನಿಯರಿಂಗ್ ಕೋರ್ಸ್‌ಗಳಿಗೆ 73,847 ಸೀಟು ಹಂಚಿಕೆಯಾಗಿದ್ದು, 3,126 ಸೀಟು ಉಳಿದಿವೆ. ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ 8,798 ಸೀಟು ಹಂಚಿಕೆಯಾಗಿದ್ದು, 383 ಆಡಳಿತ ಮಂಡಳಿ ಸೀಟುಗಳು ಮಾತ್ರ ಹಂಚಿಕೆಗೆ ಬಾಕಿ ಇವೆ. ನರ್ಸಿಂಗ್ ಕೋರ್ಸ್‌ಗಳಲ್ಲಿ 14,448 ಸೀಟು ಹಂಚಿಕೆಯಾಗಿ, 10,194 ಸೀಟು ಬಾಕಿ ಉಳಿದಿವೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಎರಡನೇ ಸುತ್ತಿನ ಸೀಟು ಹಂಚಿಕೆಗೆ ಸೆ.13ರ ಮಧ್ಯಾಹ್ನ 2ರವರೆಗೆ ನಮೂದಿಸಿದ ಆಯ್ಕೆಗಳನ್ನು ಪರಿಗಣಿಸಲಾಗಿದೆ. ಆಕ್ಷೇಪಣೆಗಳು ಇದ್ದಲ್ಲಿ ಸೆ.19ರ ಬೆಳಿಗ್ಗೆ 10ರ ಒಳಗೆ ಇ–ಮೇಲ್ keauthority-ka@nic.inಗೆ ಸಲ್ಲಿಸಬಹುದು.

ಕುಲಪತಿ: ರಾಜ್ಯಪಾಲರ ಅಧಿಕಾರ ಮೊಟಕು?

ಒಂದನೇ ಪುಟದಿಂದ...

ಗುಜರಾತ್ ವಿಶ್ವವಿದ್ಯಾಲಯಗಳ ಕಾಯ್ದೆ ಪ್ರಕಾರ, ಕುಲಪತಿ, ಪ್ರಭಾರ ಕುಲಪತಿ, ನೇಮಕಾತಿಯಲ್ಲಿ ರಾಜ್ಯಪಾಲರಿಗಿಂತ ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಅಧಿಕಾರವಿದೆ. ಕುಲಸಚಿವ, ಮೌಲ್ಯಮಾಪನ ಕುಲಸಚಿವ, ಹಣಕಾಸು ಅಧಿಕಾರಿ, ಸಿಂಡಿಕೇಟ್ ಸದಸ್ಯರ ನೇಮಕಾತಿಯಲ್ಲೂ ರಾಜ್ಯ ಸರ್ಕಾರಕ್ಕೇ ಹೆಚ್ಚಿನ ಅಧಿಕಾರವಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕನಿಷ್ಠ 10 ವರ್ಷ ಬೋಧನೆ ಮಾಡಿದ ಅನುಭವ ಇರುವವರನ್ನು ಮಾತ್ರ ಕುಲಪತಿ ಹುದ್ದೆಗೆ ನೇಮಕ ಮಾಡಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ ಮಾರ್ಗಸೂಚಿಗಳು ಹೇಳುತ್ತವೆ. ಈ ನಿಯಮವನ್ನು ಅಳವಡಿಸಿಕೊಳ್ಳುವ ಬಗ್ಗೆ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಸಂಘರ್ಷಕ್ಕೆ ದಾರಿ?

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಿಚಾರಣೆ ನಡೆಸಲು ಅನುಮತಿ ನೀಡಿದ ವಿಷಯ ಈಗಾಗಲೇ, ರಾಜಭವನ ಮತ್ತು ಸರ್ಕಾರದ ಮಧ್ಯೆ ಸಂಘರ್ಷಕ್ಕೆ ದಾರಿ ಮಾಡಿಕೊಟ್ಟಿದೆ. ಅದರ ಬೆನ್ನಲ್ಲೇ, ಕ್ರಿಮಿನಲ್ ಮೊಕದ್ದಮೆ ದಾಖಲೆ ಹಾಗೂ ದೋಷಾರೋಪ ಪಟ್ಟಿ ಸಲ್ಲಿಕೆಗೆ ಅನುಮತಿ ಕೋರಿ ಲೋಕಾಯುಕ್ತ ಸಂಸ್ಥೆ ಸಲ್ಲಿಸಿರುವ ಎಷ್ಟು ಪ್ರಸ್ತಾವನೆಗಳು ಸರ್ಕಾರದ ಮುಂದಿವೆ ಎಂಬ ವಿವರಣೆ ಕೇಳಿ, ರಾಜ್ಯಪಾಲರು ಸರ್ಕಾರಕ್ಕೆ ಪತ್ರ ಬರೆದಿದ್ದರು.

ಈ ಬೆಳವಣಿಗೆಯ ಮಧ್ಯೆಯೇ, ರಾಜ್ಯಪಾಲರ ಅಧಿಕಾರವನ್ನೇ ಮೊಟಕು ಮಾಡುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ.

ವೈವಾಹಿಕ ಅತ್ಯಾಚಾರ: ಪರಿಶೀಲನೆಗೆ ಒಪ್ಪಿಗೆ

ನವದೆಹಲಿ: ವಿವಾಹ ಸಂಬಂಧದ ಒಳಗೆ ನಡೆಯುವ ಅತ್ಯಾಚಾರ ಪ್ರಕರಣಗಳಲ್ಲಿ ಪತಿಗೆ ಕಾನೂನಿನ ಕ್ರಮದಿಂದ ನೀಡಿರುವ ರಕ್ಷಣೆಯು ಎಷ್ಟರಮಟ್ಟಿಗೆ ಕಾನೂನುಬದ್ಧ ಎಂಬುದನ್ನು ಪರಿಶೀಲಿಸುವುದಾಗಿ ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಈ ವಿಚಾರವಾಗಿ ಪ್ರಮಾಣಪತ್ರ ಸಲ್ಲಿಸದೆ ಇರಲು ಕೇಂದ್ರ ಸರ್ಕಾರ ತೀರ್ಮಾನಿಸಿದರೂ, ಕಾನೂನಿನ ತತ್ವಗಳನ್ನು ಮಾತ್ರ ಆಧರಿಸಿ ಈ ಪರಿಶೀಲನೆ ನಡೆಸಲಾಗುತ್ತದೆ ಎಂದು ಕೋರ್ಟ್ ಸ್ಪಷ್ಟಪಡಿಸಿದೆ.

ಈ ವಿಚಾರದ ಬಗ್ಗೆ ಆದಷ್ಟು ಬೇಗ ವಿಚಾರಣೆ ನಡೆಸಬೇಕು ಎಂದು ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಮನವಿ ಮಾಡಿದರು. ವೈವಾಹಿಕ ಸಂಬಂಧದಲ್ಲಿ ನಡೆಯುವ ಅತ್ಯಾಚಾರವನ್ನು ಕ್ರಿಮಿನಲ್ ಅಪರಾಧವೆಂದು ಪರಿಗಣಿಸುವುದಕ್ಕೆ ಸಂಬಂಧಿಸಿದ ಅರ್ಜಿಗಳಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಕೋರ್ಟ್ 2023ರಲ್ಲಿ ಕೇಂದ್ರ ಸರ್ಕಾರಕ್ಕೆ ಸೂಚಿಸಿತ್ತು.

ಶಾಲೆಗಳಲ್ಲೂ ಬಯೊಮೆಟ್ರಿಕ್ ಹಾಜರಾತಿಗೆ ಸಿದ್ಧತೆ

ಬೆಂಗಳೂರು: ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬಯೊಮೆಟ್ರಿಕ್ ಹಾಜರಾತಿ ವ್ಯವಸ್ಥೆ ಜಾರಿಗೊಳಿಸಲು ಶಾಲಾ ಶಿಕ್ಷಣ ಇಲಾಖೆ ಸಿದ್ಧತೆ ನಡೆಸಿದೆ. ಪ್ರತಿ ಜಿಲ್ಲೆಯ ಒಂದೊಂದು ಶಾಲೆಯಲ್ಲಿ ಪ್ರಾಯೋಗಿಕವಾಗಿ ಬಯೊಮೆಟ್ರಿಕ್ ಅಳವಡಿಸಿ, ಹಾಜರಾತಿ ಪಡೆಯಲಾಗಿತ್ತು. ಯಾವುದೇ ತಾಂತ್ರಿಕ ದೋಷಗಳಿಲ್ಲದೆ ಪ್ರಯೋಗ ಯಶಸ್ವಿಯಾಗಿತ್ತು. ಹಾಗಾಗಿ, ರಾಜ್ಯದ ಎಲ್ಲ ಶಾಲೆಗಳಲ್ಲೂ ಬಯೊಮೆಟ್ರಿಕ್ ಹಾಜರಾತಿ ಕಡ್ಡಾಯಗೊಳಿಸುವ ಕುರಿತು ಇಲಾಖೆ ಯೋಜನಾ ವರದಿ ಸಿದ್ಧಪಡಿಸಿದೆ.

ಬೇಡಿಕೆ ಈಡೇರಿಕೆಗೆ ಗ್ರಾ.ಪಂ ನೌಕರರ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಅಧಿಕಾರಿಗಳು ಮತ್ತು ನೌಕರರ ನ್ಯಾಯಯುತ ಬೇಡಿಕೆಗಳನ್ನು ಇದೇ 30ರೊಳಗೆ ಈಡೇರಿಸದಿದ್ದರೆ ಅಕ್ಟೋಬರ್ 4ರಿಂದ ರಾಜ್ಯದಾದ್ಯಂತ ಗ್ರಾಮ ಪಂಚಾಯಿತಿಯ ಸೇವೆಗಳನ್ನು ಸ್ಥಗಿತಗೊಳಿಸಿ ಅನಿರ್ದಿಷ್ಟಾವಧಿ ಹೋರಾಟ ಮಾಡುವುದಾಗಿ ಕರ್ನಾಟಕ ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಹಾಗೂ ಸಂಬಂಧಪಟ್ಟ ಸಂಘಟನೆಗಳು ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿವೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘಟನೆಗಳ ಮುಖಂಡರು, ‘ಈಗಾಗಲೇ, ಹಲವು ಬಾರಿ ಸರ್ಕಾರಕ್ಕೆ ಸಮಸ್ಯೆಗಳನ್ನು ಪರಿಹರಿಸುವಂತೆ ಮನವಿ ಸಲ್ಲಿಸಿದ್ದೇವೆ. ಈವರೆಗೆ ಸೂಕ್ತ ಸ್ಪಂದನೆ ದೊರೆತಿಲ್ಲ. ಇವತ್ತಿನ ಒಕ್ಕೂಟದ ಸಭೆಯ ಮೂಲಕ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡುತ್ತಿದ್ದೇವೆ ಎಂದರು.

ಸಮುದ್ರದ ಉಬ್ಬರ, ಇಳಿತ ಆಧರಿಸಿ ನದಿಯತ್ತ ಪಯಣ

ಶಿರೂರು: ಹೂಳೆತ್ತಲು ಬಂತು ಬಾರ್ಜ್

● ಗಣಪತಿ ಹೆಗಡೆ

ಕಾರವಾರ: ಅಂಕೋಲಾ ತಾಲ್ಲೂಕಿನ ಶಿರೂರಿನ ಗಂಗಾವಳಿ ನದಿಯಲ್ಲಿ ಸಂಗ್ರಹಗೊಂಡ ಮಣ್ಣಿನ ದಿಬ್ಬ ತೆರವುಗೊಳಿಸಿ, ಹೂಳೆತ್ತುವ ಕಾರ್ಯಾಚರಣೆಗೆ ಗೋವಾದಿಂದ ಬಾರ್ಜ್ ಮತ್ತು ಬೋಟ್ ಬುಧವಾರ ಇಲ್ಲಿನ ವಾಣಿಜ್ಯ ಬಂದರಿಗೆ ಬಂದಿದೆ. ಅಲ್ಲಿಂದ ಇಲ್ಲಿಗೆ ಬರಲು 12 ಗಂಟೆ ಸಮಯ ತಗುಲಿದೆ.

ಗೋವಾದ ಡೀಪ್ ಡ್ರೆಡ್ಜ್ ಎಂಬ ಖಾಸಗಿ ಕಂಪನಿಗೆ ಸೇರಿದ ಕ್ರೇನ್ ಮತ್ತು ಬ್ಯಾಕ್ ಹೋ (ಹೂಳು ತೆರವುಗೊಳಿಸುವ ಜೆಸಿಬಿ ಮಾದರಿ ಯಂತ್ರ) ಒಳಗೊಂಡ ಬಾರ್ಜ್‌ನ್ನು ಅದೇ ಕಂಪನಿಯ ಟಗ್ ಬೋಟ್ ಎಳೆದು ತಂದಿದೆ. ಬಾರ್ಜ್ ಸಮುದ್ರ ಮತ್ತು ನದಿ ಮೂಲಕ ಶಿರೂರಿಗೆ ಸಾಗಬೇಕಿದ್ದು, ಹಲವು ಸವಾಲಿನಿಂದ ಕೂಡಿದೆ.

‘ಸಮುದ್ರದಿಂದ ಗಂಗಾವಳಿ ನದಿ ಸೇರಲು ಮಂಜಗುಣಿ ಮತ್ತು ಗಂಗೆಕೊಳ್ಳದ ಅಳಿವೆ ಪ್ರದೇಶದಲ್ಲಿ ಸಾಗಬೇಕು. ಸಮುದ್ರ ಉಬ್ಬರ ಇದ್ದಾಗ ಮಾತ್ರ ಅಳಿವೆ ದಾಟಿ, ನದಿ ಸೇರಬೇಕು. ಅಲ್ಲಿಂದ ಸ್ವಲ್ಪ ದೂರದಲ್ಲೇ ಎದುರಾಗುವ ಗಂಗಾವಳಿ–ಮಂಜಗುಣಿ ಸೇತುವೆ ಮತ್ತು ಶಿರೂರು ಸಮೀಪದ ರೈಲ್ವೆ ಸೇತುವೆ ದಾಟಲು ಸಮುದ್ರ ಇಳಿತ ಇರಬೇಕು. ಪ್ರತಿ ಹಂತದಲ್ಲೂ ವಾತಾವರಣದ ಅನುಕೂಲ ಮತ್ತು ನೀರಿನ ಹರಿವನ್ನು ಗಮನಿಸುತ್ತ ಸಾಗಬೇಕು’ ಎಂದು ಟಗ್ ಬೋಟ್‌ನ ಕ್ಯಾಪ್ಟನ್ ಚಂದ್ರಕಾಂತ ‘ಪ್ರಜಾವಾಣಿ’ಗೆ ತಿಳಿಸಿದರು.

ಜುಲೈ16 ರಂದು ಶಿರೂರಿನಲ್ಲಿ ಗುಡ್ಡ ಕುಸಿತ ದುರಂತ ಸಂಭವಿಸಿ, ಅಪಾರ ಪ್ರಮಾಣದ ಮಣ್ಣು, ಕಲ್ಲಿನ ರಾಶಿ ನದಿಗೆ ಬಿದ್ದು ಕೃತಕ ದಿಬ್ಬ ಸೃಷ್ಟಿಯಾಗಿದೆ. ಅದರಡಿ ಕೇರಳದ ಲಾರಿ ಸಿಲುಕಿದೆ. ಮಣ್ಣಿನ ದಿಬ್ಬ ತೆರವುಗೊಳಿಸುವ ಹೊಣೆ ಕಾರವಾರದ ಅಭಿಷೇನಿಯಾ ಓಶನ್ ಸರ್ವಿಸಸ್ ಎಂಬ ಕಂಪನಿಗೆ ವಹಿಸಿಕೊಂಡಿದ್ದು, ಅದೇ ಸಂಸ್ಥೆಯು ಗೋವಾದಿಂದ ಹೂಳೆತ್ತುವ ಬಾರ್ಜ್ ತರಿಸಿದೆ. ಸಂಪೂರ್ಣ ದಿಬ್ಬ ತೆರವುಗೊಳಿಸಲು ಕನಿಷ್ಠ 10 ದಿನ ಕಾರ್ಯಾಚರಣೆ ನಡೆಸಬೇಕಾಗಬಹುದು ಎಂದು ಕಂಪನಿಯು ಅಂದಾಜಿಸಿದೆ.

ಹೂಳೆತ್ತುವ ಬಾರ್ಜ್‌ನ ಅಡಿಪಾಯ ನೀರಿನಿಂದ ಒಂದು ಮೀಟರ್ ಆಳದವರೆಗೆ ಇರಲಿದೆ.ಸಮುದ್ರದಂತೆನದಿಯಲ್ಲಿ ಸಾಗುವುದು ಸವಾಲು. ಪ್ರತಿ ಹಂತದಲ್ಲಿ ಸುರಕ್ಷತೆ ಮೇಲೆ ನಿಗಾ ಇರಿಸಿ ಚಲಿಸಬೇಕು ಎಂದು ಬಂದರು ಜಲಸಾರಿಗೆ ಮಂಡಳಿ ನಿರ್ದೇಶಕ ಕ್ಯಾಪ್ಟನ್ ಸಿ.ಸ್ವಾಮಿ ಅವರು ಹೇಳಿದರು.

ಕಾರವಾರದ ವಾಣಿಜ್ಯ ಬಂದರಿನಲ್ಲಿ ಲಂಗರು ಹಾಕಿರುವ ಕ್ರೇನ್ ಮತ್ತು ಬ್ಯಾಕ್ ಹೊ ಸಹಿತ ಹೂಳೆತ್ತುವ ಬಾರ್ಜ್ ಮತ್ತು ಟಗ್ ಬೋಟ್

–ಪ್ರಜಾವಾಣಿ ಚಿತ್ರ:ಗಣಪತಿ ಹೆಗಡೆ

ಜಿಲ್ಲಾನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ ವಿಜಯನಗರ ಜಿಲ್ಲೆ ಹೊಸಪೇಟೆ–583201

ಸಂ:ಜನಕೊವಿ/ಕೆ.ಕೆ.ಆರ್.ಡಿ.ಬಿ./ವಿ.ಚಾ.ವಾ/2024–25 ದಿನಾಂಕ :18.09.2024

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

2022–23ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಯೋಜನೆಯ (ಮೈಕ್ರೊ) ಎಸ್.ಡಿ.ಪಿ. ಘಟಕದಡಿ ವಿಜಯನಗರ ಜಿಲ್ಲೆಯ ಹಂಪಿಯ ವಿಜಯ ವಿಠಲ ದೇವಸ್ಥಾನದ ವೀಕ್ಷಣೆಗಾಗಿ ಪ್ರವಾಸಿಗರನ್ನು ಕರೆದೊಯ್ಯಲು ಪರಿಸರ ಸ್ನೇಹಿ ವಿದ್ಯುತ್ ಚಾಲಿತ ವಾಹನ / ಬಸ್ ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳ ಪ್ರಕಾರ ಟೆಂಡರ್ ದಸ್ತಾವೇಜು ಗಳನ್ವಯ ಈ ಕೆಳಕಾಣಿಸಿದಂತೆ **Public Procurement Portal** ಮೂಲಕ ಟೆಂಡರ್ ಅಹ್ವಾನಿಸಲಾಗಿರುತ್ತದೆ.

ವಿವರ: 01 Supplying Of 06 Nos 23 Seater Electrical Open Bus Half Body And Customize With LithiIon Eco Friendly Electric Vehicle Bus to take tourists for sightseeing of Vijaya Vithala Temple in Hampi (Indent No:- DMA/2024-25/IND2368/Call-2). ಟೆಂಡರ್‌ಗಿಟ್ಟ ಮೊತ್ತ(ರೂ.ಲಕ್ಷಗಳಲ್ಲಿ): 140.80. ಇ.ಎಂ.ಡಿ.(ರೂ.ಗಳಲ್ಲಿ): 2,11,200.00

02. Supplying Of 04 Nos 23 Seater Electrical Open Bus Half Body And Customize With LithiIon Eco Friendly Electric Vehicle Bus to take tourists for sightseeing of Vijaya Vithala Temple in Hampi(Indent No:- DMA/2024-25/IND2371/Call-2). ಟೆಂಡರ್‌ಗಿಟ್ಟ ಮೊತ್ತ(ರೂ.ಲಕ್ಷಗಳಲ್ಲಿ): 93.87. ಇ.ಎಂ.ಡಿ.(ರೂ.ಗಳಲ್ಲಿ): 1,87,740.00.

Pre-Bid Meeting Date and time: **24-09-2024 at 11.00 Hrs**
Last date & time for tender queries / clarifications: **24-09-2024 at 17.30 Hrs**
Last date and time for receipt of tenders: **30-09-2024 at 16.30 Hrs**
Date & time for opening of Technical bids: **01-10-2024 at 17.30 Hrs**
Auto extension of tender schedule : **03 days**

ಮೇಲ್ಕಂಡ ದಿನಾಂಕಗಳಲ್ಲಿ ಆಕಸ್ಮಿಕ ರಜೆಗಳು ಬಂದಲ್ಲಿ ಮರುದಿನವನ್ನು ಪರಿಗಣಿಸಲಾಗುವುದು. ಟೆಂಡರ್ ದಾಖಲಾತಿ ಮತ್ತು ಷರತ್ತುಗಳಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಪರಿಶೀಲಿಸಿ, ಟೆಂಡರ್ ಭರ್ತಿ ಮಾಡುವುದು ಹೆಚ್ಚಿನ ವಿವರಗಳಿಗೆ ಶ್ರೀ ಬಿ.ವೀರೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, (ದೂ ಸಂ: 9731867295) ಇವರನ್ನು ಸಂಪರ್ಕಿಸಿ ಪಡೆಯಬಹುದು.

ವಾ.ಸಾ.ಸಂ.ಇ/ವಿಜಯನಗರ/2024–25/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/270

ಸಹಿ/–ಯೋಜನಾ ನಿರ್ದೇಶಕರು ಜಿಲ್ಲಾನಗರಾಭಿವೃದ್ಧಿ ಕೋಶ, ವಿಜಯನಗರ ಜಿಲ್ಲೆ.

ಗೃಹಿಣಿ ಆತ್ಮಹತ್ಯೆ: ಧರ್ಮಸ್ಥಳ ಸಂಘದ ಕಿರುಕುಳ–ಆರೋಪ

ಮಹಾಲಕ್ಷ್ಮಿ

ಮಳವಳ್ಳಿ (ಮಂಡ್ಯ): ತಾಲ್ಲೂಕಿನ ಮಲಿಯೂರಿನ ಗೃಹಿಣಿ ಮಹಾಲಕ್ಷ್ಮಿ (35) ಬುಧವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, 'ಸಾಲದ ಕಂತಿನ ಹಣ ತುಂಬುವಂತೆ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯವರು ನೀಡಿದ ಕಿರುಕುಳವೇ ಕಾರಣ' ಎಂದು ಅವರ ಪತಿ ಮಲ್ಲು ಕಿರುಗಾವಲು ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

'ಪತ್ನಿಯು ಐದು ತಿಂಗಳ ಹಿಂದೆ ಧರ್ಮಸ್ಥಳ ಸಂಘದಲ್ಲಿ ₹2 ಲಕ್ಷ ಸಾಲ ಪಡೆದಿದ್ದರು. ಪ್ರತಿ ಬುಧವಾರ ₹1,700 ಕಂತು ತುಂಬಬೇಕಿತ್ತು. ಸಂಸ್ಥೆಯ ಪ್ರತಿನಿಧಿಯೊಬ್ಬರು ಮನೆಯ ಬಳಿ ಬಂದು ಕೂಡಲೇ ಕಂತಿನ ಹಣ ನೀಡುವಂತೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಅದರಿಂದ ಮನನೊಂದ ಪತ್ನಿ ಆತ್ಮಹತ್ಯೆ ಮಾಡಿಕೊಂಡರು' ಎಂದು ಆರೋಪಿಸಿದ್ದಾರೆ. ಹಾಡ್ಲಿಯಲ್ಲಿ ಈಚೆಗೆ ಕಾರ್ಯಕ್ರಮದಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ, 'ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧಿಕ ಬಡ್ಡಿ ಪಡೆಯುತ್ತಿದೆ. ಜನ ಸರ್ಕಾರಿ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು' ಎಂದಿದ್ದರು.

ಗಣೇಶ ಮೂರ್ತಿಗಳ ವಿಸರ್ಜನಾ ಕಾರ್ಯಕ್ರಮ ವೇಳೆ ಅವಘಡ

ಟ್ರಾಲಿಗೆ ಸಿಲುಕಿ ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಪಾಟೀಲ ಗಲ್ಲಿಯಲ್ಲಿ ಬುಧವಾರವೂ ಮುಂದುವರಿದ ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನೆ ಮೆರವಣಿಗೆಯಲ್ಲಿ ಟ್ರ್ಯಾಕ್ಟರ್ ಮತ್ತು ಟ್ರಾಲಿ ಮಧ್ಯೆ ಸಿಲುಕಿ ವ್ಯಕ್ತಿಯೊಬ್ಬರು ಮೃತಪಟ್ಟು, ಇನ್ನೊಬ್ಬರಿಗೆ ಗಾಯವಾಗಿದೆ.

ಪಾಟೀಲ ಗಲ್ಲಿಯ ನಿವಾಸಿ ಸದಾನಂದ ಚವ್ಹಾಣ ಪಾಟೀಲ (48) ಮೃತರು. ವಿಜಯ ರಾಜಗೋಳ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಮೂವರಿಗೆ ಚಾಕು ಇರಿತ: ಮಂಗಳವಾರ ತಡರಾತ್ರಿ ಮೆರವಣಿಗೆ ವೇಳೆ ರಾಣಿ ಚನ್ನಮ್ಮ ವೃತ್ತದಲ್ಲಿ ಅಪರಿಚಿತರ ಗುಂಪೊಂದು ಚಾಕುವಿನಿಂದ ಇರಿದ ಪರಿಣಾಮ ದರ್ಶನ್ ಪಾಟೀಲ, ಸತೀಶ ಪೂಜಾರಿ ಮತ್ತು ಪ್ರವೀಣ್ ಗುಂಡ್ಯಾಗೋಳ ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ. ಮೂವರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಇದರಿಂದ ಕೆಲ ಹೊತ್ತು ಪರಿಸ್ಥಿತಿ ಉದ್ವಿಗ್ನವಾಗಿತ್ತು.

ಆರೋಪಿಗಳಾದ ಸೂರಜ್ ವಿಶ್ವಕರ್ಮ, ಬಸವರಾಜ ಮೇಟಿ ಹಾಗೂ ಕಾನೂನು ಸಂಘರ್ಷಕ್ಕೆ ಒಳಪಟ್ಟ ಒಬ್ಬ ಬಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಪ್ರಕರಣಕ್ಕೂ ಮೆರವಣಿಗೆಗೆ ಸಂಬಂಧ ಇಲ್ಲ: ಚಾಕು ಇರಿದ ಪ್ರಕರಣಕ್ಕೂ ಮೆರವಣಿಗೆಗೆ ಸಂಬಂಧ ಇಲ್ಲ. ಅದು ವೈಯಕ್ತಿಕ ಕಾರಣಗಳಿಗೆ ನಡೆದ ಘಟನೆ. ಎಷ್ಟು ದಿನ ಮೆರವಣಿಗೆ ನಡೆಸಿದರೂ ಪೊಲೀಸ್ ಕಾವಲು ಮುಂದುವರಿಸುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರು ಹೇಳಿದರು.

ಬೆಳಗಾವಿಯಲ್ಲಿ ಬುಧವಾರ ಕೂಡ ಮುಂದುವರಿದ ಗಣಪತಿ ಮೂರ್ತಿಗಳ ವಿಸರ್ಜನಾ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯ ಜನ ಪಾಲ್ಗೊಂಡರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ನಕಲಿ ಪ್ರಮಾಣ ಪತ್ರ ವಿತರಣೆ: ನೂರಾರು ಮಂದಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಹನೂರು(ಚಾಮರಾಜನಗರ ಜಿಲ್ಲೆ): 'ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ವಂಚಕರು ಹಣ ಪಡೆದು ಸಾಮಾಜಿಕ ಭದ್ರತಾ ಯೋಜನೆಗಳ ನಕಲಿ ಮಂಜೂರಾತಿ ಆದೇಶ ಪತ್ರ ನೀಡಿದ್ದಾರೆ' ಎಂದು ಆರೋಪಿಸಿ ಸಂತ್ರಸ್ತರು ಬುಧವಾರ ತಹಶೀಲ್ದಾರ್ ವೈ.ಕೆ.ಗುರುಪ್ರಸಾದ್ ಅವರಿಗೆ ದೂರು ಸಲ್ಲಿಸಿದರು.

ಅಜ್ಜೀಪುರ, ಕಾಂಚಳ್ಳಿ, ಬಸಪ್ಪನ ದೊಡ್ಡಿ, ಕೆ.ಗುಂಡಾಪುರ, ಗಂಗನದೊಡ್ಡಿ ಸೇರಿದಂತೆ ಹಲವು ಗ್ರಾಮಗಳ ಜನ ವಂಚನೆ ಜಾಲಕ್ಕೆ ಬಲಿಯಾಗಿದ್ದಾರೆ. ಮೂರು ವರ್ಷಗಳಿಂದ ಹಣ ಬಾರದ ಹಿನ್ನೆಲೆಯಲ್ಲಿ ನಾಗರಿಕರು ಆದೇಶ ಪ್ರತಿಗಳನ್ನು ಅಧಿಕಾರಿಗಳಿಗೆ ನೀಡಿದರು. ಅವುಗಳನ್ನು ಪರಿಶೀಲಿಸಿದ ನಂತರ ನಕಲಿ ಎಂಬುದು ಸಾಬೀತಾಗಿದೆ.

ವಂಚನೆಗೊಳಗಾದ ಸಂತ್ರಸ್ತರು ರೈತ ಸಂಘದ ಮುಖಂಡರ ಜೊತೆಗೂಡಿ ತಹಶೀಲ್ದಾರ್ ಕಚೇರಿಗೆ ಆಗಮಿಸಿ ಅಧಿಕಾರಿಗಳ ಮುಂದೆ ಅಳಲು ತೋಡಿಕೊಂಡರು.

2022ರಲ್ಲಿ ಅಂಬಿಕಾಪುರದ ತೋಟದ ಮನೆಯಲ್ಲಿ ಕಚೇರಿ ತೆರೆದಿದ್ದ ವಂಚಕರು ವೃದ್ಧಾಪ್ಯ ವೇತನ, ಪಿಂಚಣಿ ಸೌಲಭ್ಯ ಕೊಡಿಸುವುದಾಗಿ ಪ್ರತಿಯೊಬ್ಬರ ಬಳಿ ₹6 ಸಾವಿರದಿಂದ 8 ಸಾವಿರ ವಸೂಲಿ ಮಾಡಿದ್ದರು. ಬಳಿಕ ನಕಲಿ ಮಂಜೂರಾತಿ ಪತ್ರಗಳನ್ನು ವಿತರಿಸಿದ್ದರು. ನಾಲ್ಕೈದು ಗ್ರಾಮಗಳ ಸುಮಾರು 200 ಮಂದಿಗೆ ವಂಚನೆ ಎಸಗಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದರು.

ಮಧ್ಯವರ್ತಿಗಳಿಂದ ದೂರ: 'ಜನಸಾಮಾನ್ಯರು ಸರ್ಕಾರಿ ಕಚೇರಿಗಳಲ್ಲಿ ದೊರೆಯುವ ಸರ್ಕಾರದ ಸೌಲಭ್ಯವನ್ನು ಮಧ್ಯವರ್ತಿಗಳಿಂದ ಪಡೆಯದೆ ನೇರವಾಗಿ ಕಚೇರಿಗಳಿಗೆ ತೆರಳಿ ಪಡೆಯಬೇಕು. ವಂಚನೆ ಸಂಬಂಧ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ತಹಶೀಲ್ದಾರ್ ವೈ.ಕೆ.ಗುರುಪ್ರಸಾದ್ ತಿಳಿಸಿದರು.

'ಕಸಾಪ ತಾಲ್ಲೂಕು ಅಧ್ಯಕ್ಷರ ಆಯ್ಕೆಗೆ ಚುನಾವಣೆ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ತಾಲ್ಲೂಕು ಘಟಕದ ಅಧ್ಯಕ್ಷರನ್ನು ಚುನಾವಣೆ ಮೂಲಕವೇ ಆಯ್ಕೆ ಮಾಡಲು ಬೈಲಾಗೆ ತಿದ್ದುಪಡಿ ತರಲಾಗುವುದು' ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಹೇಳಿದರು.

ಬುಧವಾರ 'ಮಾಧ್ಯಮ ಸಂವಾದ'ದಲ್ಲಿ ಮಾತನಾಡಿ, 'ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವವರನ್ನು ಪರಿಷತ್ತಿನ ಸ್ಥಾನದಿಂದ ನಿರ್ದಾಕ್ಷಿಣ್ಯವಾಗಿ ತೆಗೆಯಲಾಗುವುದು' ಎಂದು ಹೇಳಿದರು.

'ಸಮ್ಮೇಳನಗಳ ನಿರ್ಣಯಗಳು ಗೊಂದಲದಿಂದಾಗಿ ಪೂರ್ಣ ಅನುಷ್ಠಾನಗೊಂಡಿಲ್ಲ. ಮಂಡ್ಯ ಸಮ್ಮೇಳನದ ನಿರ್ಣಯಗಳನ್ನು ಜಾರಿಗೊಳಿಸುವಂತೆ ಸರ್ಕಾರಕ್ಕೆ ಒತ್ತಡ ಹೇರುತ್ತೇವೆ. ಸಮ್ಮೇಳನದಲ್ಲಿ ಮಹತ್ವದ ಗೋಷ್ಠಿಗಳನ್ನು ಆಯೋಜಿಸಿ, ಸರ್ಕಾರಕ್ಕೆ ಹೊಸ ದಿಕ್ಕು ತೋರುವ ಪ್ರಯತ್ನ ಮಾಡಲಾಗುವುದು' ಎಂದರು.

ಮುಖ್ಯಮಂತ್ರಿ ಸಲಹೆಗಾರ ಪಾಟೀಲ ಸಮಾಧಾನ

'ಸಂಪುಟ ಸಭೆ ತೃಪ್ತಿ ತಂದಿಲ್ಲ'

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿ ನಡೆದ ಸಚಿವ ಸಂಪುಟ ಸಭೆಯ ನಿರ್ಣಯಗಳು ಸಮಾಧಾನ ತಂದಿದೆ. ಆದರೆ, ತೃಪ್ತಿ ತಂದಿಲ್ಲ' ಎಂದು ಮುಖ್ಯಮಂತ್ರಿ ಸಲಹೆಗಾರ, ಆಳಂದ ಶಾಸಕ ಬಿ.ಆರ್. ಪಾಟೀಲ ಬೇಸರ ವ್ಯಕ್ತಪಡಿಸಿದರು.

'ತರಾತುರಿಯಲ್ಲಿ ಸಂಪುಟ ಸಭೆ ನಿರ್ಧಾರವಾಗಿದ್ದರಿಂದ ಈ ಭಾಗದ ಅಭಿವೃದ್ಧಿಗೆ ಬೇಕಾದ ಕೊಡುಗೆಗಳನ್ನು ನೀಡಲು ಸಾಧ್ಯವಾಗಿಲ್ಲ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಾಕ್ಷರತೆ ತೀರಾ ಕೆಳಮಟ್ಟದಲ್ಲಿದೆ. ಮೊದಲು ಶಿಕ್ಷಕರ ಹುದ್ದೆಗಳ ನೇಮಕಾತಿ ಆಗಬೇಕು ಎಂಬುದು ನಮ್ಮ ಒತ್ತಾಯವಾಗಿತ್ತು. ಸಂಪುಟದಲ್ಲಿ ನೇಮಕಾತಿ ಬಗ್ಗೆ ಯಾವುದೇ ಸ್ಪಷ್ಟತೆ ನೀಡಿಲ್ಲ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಶೇ 80ರಷ್ಟು ಉಪನ್ಯಾಸಕರ ಹುದ್ದೆ ಖಾಲಿ ಇವೆ. ಇಲ್ಲಿ ವಿದ್ಯಾರ್ಥಿಗಳು ಕಲಿತು ಬೇರೆ ಭಾಗದ ವಿದ್ಯಾರ್ಥಿಗಳೊಂದಿಗೆ ಸ್ಪರ್ಧೆ ಮಾಡುವುದು ಹೇಗೆ' ಎಂದು ಪ್ರಶ್ನಿಸಿದ ಅವರು, 'ಮುಂದಿನ ಸಂಪುಟ ಸಭೆಯಲ್ಲಿ 22 ಸಾವಿರ ಶಿಕ್ಷಕರ ಭರ್ತಿಗೆ ನಿರ್ಣಯ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ದ್ವಿದಳ ಧಾನ್ಯಗಳ ಅಭಿವೃದ್ಧಿ ಮಂಡಳಿಯು ಅಸ್ಥಿಪಂಜರದಂತಾಗಿದೆ. ತೊಗರಿ ಮಂಡಳಿ ಬಲವರ್ಧನೆ, ಸಂಶೋಧನೆಗೆ ಹೆಚ್ಚಿನ ಕ್ರಮದ ಬಗ್ಗೆ ಏನನ್ನೂ ಹೇಳಿಲ್ಲ. ತೊಗರಿ ಬೆಳೆಯ ಬಗ್ಗೆ ಸಂಪುಟದಲ್ಲಿ ಪ್ರಸ್ತಾಪಿಸಿ ನೆರವು ಘೋಷಣೆ ನಿರೀಕ್ಷೆಯಲ್ಲಿದ್ದವು' ಎಂದರು.

'ಬೀದರ್, ಕಲಬುರಗಿಗೆ ₹7,200 ಕೋಟಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗೆ ಒಪ್ಪಿಗೆ ನೀಡಲಾಗಿದೆ. ಇಲ್ಲಿವರೆಗೆ ಎಲ್ಲಿಯೂ ಬಹುಗ್ರಾಮ ನೀರಿನ ಯೋಜನೆ ಯಶಸ್ವಿಯಾಗಿಲ್ಲ. ಈ ಯೋಜನೆಗೆ ಕೇಂದ್ರ ಸರ್ಕಾರ ಅರ್ಧ ಹಣ ನೀಡಬೇಕು. ಕೇಂದ್ರ ಸರ್ಕಾರ ನೀಡುತ್ತದೆಯೇ? ಅಂತರ್ಜಲ ಹೆಚ್ಚಳಕ್ಕೆ ಕ್ರಮ ಕೈಗೊಂಡ ನಂತರ ಈ ಯೋಜನೆ ಬಗ್ಗೆ ಯೋಚಿಸಬೇಕು' ಎಂದರು.

'ಖರ್ಗೆ ಓಲೈಕೆಗೆ ಕಲಬುರಗಿಯಲ್ಲಿ ಸಭೆ'

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಿಎಂ ಕುರ್ಚಿ ಅಲುಗಾಡುತ್ತಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಓಲೈಸಲು ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದಾರೆ. ಇದರಿಂದ ಅಭಿವೃದ್ಧಿಯಾಗಲು ಸಾಧ್ಯವಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಇಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾದರೂ ಕಲ್ಯಾಣ ಕರ್ನಾಟಕ ನೆನಪಾಗಲಿಲ್ಲ. ಸಿ.ಎಂ ಸೇರಿ ಯಾವೊಬ್ಬ ಸಚಿವರೂ ಈ ಭಾಗದಲ್ಲಿ ಪ್ರವಾಸ ಮಾಡಿ, ಅಭಿವೃದ್ಧಿಯ ಚಿಂತನೆ ಮಾಡಲಿಲ್ಲ. ಯಾವುದೇ ಹೊಸ ವಿಚಾರಗಳನ್ನು ಹೇಳದೆ ಸಚಿವ ಸಂಪುಟ ಸಭೆಯ ನಾಟಕ ಮಾಡಿದ್ದಾರೆ' ಎಂದು ಟೀಕಿಸಿದರು.

'ರಮೇಶ್ ಜಾರಕಿಹೊಳಿ ಅವರು ನನ್ನನ್ನು ನಾಯಕನಾಗಿ ಒಪ್ಪಿಕೊಳ್ಳುವುದಿಲ್ಲ ಎನ್ನುವುದನ್ನು ಸ್ವಾಗತಿಸುತ್ತೇನೆ. ಪಕ್ಷದ ವರಿಷ್ಠರು ನನ್ನನ್ನು ರಾಜ್ಯ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ರಮೇಶ್ ಅವರ ಬಾಯಲ್ಲಿ ಪಕ್ಷ, ಪಕ್ಷದ ಸಿದ್ಧಾಂತದ ಮಾತು ಬರುತ್ತಿರುವುದು ಒಳ್ಳೆಯದು' ಎಂದರು.

ಮಾನವ ಸರಪಳಿ: ಮರಳುವಾಗ ಅಪಘಾತ, ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಗಿರಿಜಾ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನವಾದ ಸೆಪ್ಟೆಂಬರ್ 15ರಂದು ಮಾನವ ಸರಪಳಿ ನಿರ್ಮಿಸಲು ಶ್ರೀರಂಗಪಟ್ಟಣಕ್ಕೆ ಹೋಗಿ ವಾಪಸಾಗುತ್ತಿದ್ದಾಗ ನಡೆದ ಅಪಘಾತದಲ್ಲಿ ತಾಲ್ಲೂಕಿನ ತೆಂಡೇಕೆರೆ ಪಂಚಾಯಿತಿಯ ಎಚ್.ಬಳ್ಳೇಕೆರೆಯ ನಿವಾಸಿ, ನೀರುಗಂಟಿ ಗಿರಿಜಾ (35) ಮೃತಪಟ್ಟಿದ್ದು, ಅವರ ಮಕ್ಕಳಾದ ಸುಕನ್ಯಾ (12) ಮತ್ತು ಸಿದ್ದಾರ್ಥ (7) ಅನಾಥರಾಗಿದ್ದಾರೆ. ದೊಡ್ಡಪ್ಪ ಹಾಗೂ ಅಜ್ಜಿಯೂ ಇತ್ತೀಚೆಗೆ ನಿಧನರಾಗಿದ್ದರು.

ಪಂಚಾಯಿತಿಯಲ್ಲಿ ವಾಟರ್‌ಮನ್ ಆಗಿದ್ದ ಪತಿ ಮಹಾದೇವ ಅವರು ಒಂದು ವರ್ಷದ ಹಿಂದೆ ಮೃತಪಟ್ಟ ಬಳಿಕ, ಗಿರಿಜಾ ಅವರಿಗೆ ಅನುಕಂಪದ ಆಧಾರದಲ್ಲಿ ಕೆಲಸ ನೀಡಲಾಗಿತ್ತು.

ತೆಂಡೇಕೆರೆಯಿಂದ 40 ಕಿ.ಮೀ ದೂರದಲ್ಲಿರುವ ಶ್ರೀರಂಗಪಟ್ಟಣ – ಮೈಸೂರು ಗಡಿಯ ಸಮೀಪ ಮಾನವ ಸರಪಳಿ ನಿರ್ಮಿಸಿದ ಬಳಿಕ ಸ್ಕೂಟಿಯಲ್ಲಿ ವಾಪಸಾಗುವಾಗ ಅಪಘಾತವಾಗಿ ಗಿರಿಜಾ ಸ್ಥಳದಲ್ಲೇ ಮೃತಪಟ್ಟಿದ್ದರು. ಅವರ ಜತೆ ಇದ್ದ ಹುಣಸನಹಳ್ಳಿಯ ನೀರುಗಂಟಿ ಪ್ರಭಾವತಿ ಗಾಯಗೊಂಡಿದ್ದರು.

'ಮುಖ್ಯಮಂತ್ರಿ ನಿಧಿಯಿಂದ ವಿಶೇಷ ಪರಿಹಾರ ಒದಗಿಸಬೇಕು. ಮಕ್ಕಳ ಶಿಕ್ಷಣದ ಹೊಣೆಯನ್ನು ವಹಿಸಿಕೊಳ್ಳಬೇಕು. ಪ್ರಭಾವತಿ ಅವರ ವೈದ್ಯಕೀಯ ವೆಚ್ಚ ಭರಿಸಿ, ಪರಿಹಾರ ಒದಗಿಸಬೇಕು' ಎಂದು ಶಾಸಕ ಎಚ್.ಟಿ.ಮಂಜು ಒತ್ತಾಯಿಸಿದ್ದಾರೆ.

'ಗಿರಿಜಾ ಅವರ ಸಾವಿನ ಕುರಿತು ಸರ್ಕಾರಕ್ಕೆ ವರದಿ ನೀಡಿದ್ದು, ಸೌಲಭ್ಯಗಳನ್ನು ಕುಟುಂಬಕ್ಕೆ ಒದಗಿಸಲಾಗುವುದು' ಎಂದು ಅಭಿವೃದ್ಧಿ ಅಧಿಕಾರಿ ಸತೀಶ್ ಕುಮಾರ್ ತಿಳಿಸಿದ್ದಾರೆ.

ಅನುಚಿತ ವರ್ತನೆ: ಶಿಕ್ಷಕರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಗುರುಮಠಕಲ್ (ಯಾದಗಿರಿ ಜಿಲ್ಲೆ): ಇಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ವಿದ್ಯಾರ್ಥಿನಿಯರ ಜತೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ಇಬ್ಬರು ಶಿಕ್ಷಕರ ವಿರುದ್ಧ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪೋಕ್ಸೊ ಪ್ರಕರಣ ದಾಖಲಾಗಿದೆ.

ಶಾಲೆಯ ಪ್ರಾಂಶುಪಾಲರು ನೀಡಿದ ದೂರು ಆಧರಿಸಿ ಶಿಕ್ಷಕ ಶಾಂತಪ್ಪ ಮ್ಯಾಗೇರಿ ಮತ್ತು ಅತಿಥಿ ಶಿಕ್ಷಕ ಅಂಬರೀಶ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಾರ್ಡನ್ ಅಮಾನತು: ಪ್ರಕರಣಕ್ಕೆ ಸಂಬಂಧಿಸಿದಂತೆ ವಸತಿ ಶಾಲೆಯ ವಾರ್ಡನ್ ಮೀರನ್ ಅಲಿ ಅವರನ್ನು ಅಮಾನತು ಮಾಡಿ ಜಿಲ್ಲಾ ಪಂಚಾಯಿತಿ ಸಿಇಒ ಲವೀಶ್ ಒರ್ಡಿಯಾ ಆದೇಶಿಸಿದ್ದಾರೆ. ಜಿಲ್ಲಾ ವಸತಿ ಶಿಕ್ಷಣ ಸಂಸ್ಥೆಗಳ ಸಮನ್ವಯಾಧಿಕಾರಿ ಸುರೇಶ ತಡಿಬಿಡಿ ಅವರು ಪರಿಶೀಲನಾ ವರದಿ ಸಲ್ಲಿಸಿದ್ದರು.

ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಯೋಗಕ್ಷೇಮದ ಜವಾಬ್ದಾರಿ ನಿರ್ವಹಿಸದೇ ವಾರ್ಡನ್ ಲೋಪವೆಸಗಿದ್ದಾರೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ರಾಮನಗರ ವಿಶೇಷ ವಿಭಾಗ, ರಾಮನಗರ.

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 14/2024–25 ದಿನಾಂಕ : 17–09–2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2024–25 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 14 ಸಂಖ್ಯೆಯ ಅಂದಾಜು ಮೊತ್ತ ರೂ. 130.00 ಲಕ್ಷದಿಂದ 800.00 ಲಕ್ಷಗಳ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯೂಮೆಂಟ್ ಅನ್ನು ದಿನಾಂಕ : 20–09–2024 ರಿಂದ 30–09–2024 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ : 30–09–2024 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು. 3) ಪೂರ್ವಭಾವಿ ಸಭೆಯ ದಿನಾಂಕ : 25–09–2024 ರ ಬೆಳಿಗ್ಗೆ 11.30 ಗಂಟೆಗೆ, 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ : 01–10–2024 ವೇಳೆ 16.30 ಗಂಟೆ (ಸಾಧ್ಯವಾದಲ್ಲಿ).

ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ,
ರಾಮನಗರ ವಿಶೇಷ ವಿಭಾಗ, ರಾಮನಗರ.

ಡಿಐಪಿಆರ್/ರಾಮನಗರ/326/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಆಯುಕ್ತರ ಕಾರ್ಯಾಲಯ
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, 22211246 ಫ್ಯಾಕ್ಸ್ : 22215602

ಸಂಖ್ಯೆ: ಸಂ. ಡಿವೈಇಎಸ್/ಕ್ರೀಚಪ್ರೋ/08/2024–25 ದಿನಾಂಕ : 18.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ:– ದಸರಾ ಕ್ರೀಡಾಕೂಟ ಸಿಎಂ ಕಪ್ – 2024ರ ಸಂದರ್ಭದಲ್ಲಿ ಊಟೋಪಹಾರವನ್ನು ತಯಾರಿಸಿ ಸರಬರಾಜು ಮಾಡಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಮೈಸೂರಿನಲ್ಲಿ ಆಯೋಜಿಸುವ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ ಸಿಎಂ ಕಪ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳು / ತಾಂತ್ರಿಕ ಅಧಿಕಾರಿಗಳು/ ತರಬೇತುದಾರರಿಗೆ ನಿಗಧಿಪಡಿಸಿರುವ ಮೆನುವಿನ ಪ್ರಕಾರ ಊಟೋಪಹಾರವನ್ನು ತಯಾರಿಸಿ ಸರಬರಾಜು ಮಾಡಲು ಅರ್ಹ ಸಂಸ್ಥೆಯವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000ರ ಪ್ರಕಾರ ಅರ್ಹ ಸಂಸ್ಥೆಯಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಇ–ಟೆಂಡರ್ ನ್ನು ಆಹ್ವಾನಿಸಲಾಗಿದೆ.

ವಿವರ : ಟೆಂಡರ್ ಅಂದಾಜು ಮೊತ್ತದ ಬಗ್ಗೆ (ದಿನ ಒಂದಕ್ಕೆ ಒಬ್ಬರಿಗೆ ರೂ 400 * 4 ದಿನಗಳು * 4000 ಮಂದಿಗೆ), ಒಟ್ಟು ಮೊತ್ತ ರೂ 64.00 ಲಕ್ಷಗಳು, ಇ ಎಂ ಡಿ ಮೊತ್ತ : 1,28,000/–, ಟೆಂಡರ್ ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ : 25.09.2024 ಬೆಳಿಗ್ಗೆ 11.00 ಗಂಟೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 26.09.2024, ಬೆಳಿಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ : 27.09.2024 ಸಂಜೆ 4.30 ಗಂಟೆಗೆ, ಪ್ರಮಾಣ : 4000 ಮಂದಿಗೆ ಉಪಹಾರ ಮತ್ತು 500 ಮಂದಿಗೆ ಲಘು ಉಪಹಾರ. ಮೆನು ಪ್ರಕಾರ ದಿನ ಒಂದಕ್ಕೆ, ಒಬ್ಬರಿಗೆ (ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಮತ್ತು ರಾತ್ರಿ ಊಟ ಸೇರಿದಂತೆ) ಗರಿಷ್ಠ ನಿಗಧಿಪಡಿಸಿರುವ ದರ : ರೂ. 400–00 ಜಿಎಸ್ ಟಿ ಸೇರಿದಂತೆ. ಟೆಂಡರ್ ತೆರೆಯುವ ಸ್ಥಳ ಮತ್ತು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಆಯುಕ್ತರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001, 080–22215601.

ಸಹಿ/–
ಉಪ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

DIPR/CP/2057/Zen/2024-25

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ
ದೂರವಾಣಿ / ಫ್ಯಾಕ್ಸ್ : 0831-2470342, 2470257.
ಇ-ಮೇಲ್ : belagavibuda@gmail.com

ನಂ.: ಬೆ.ನ.ಪ್ರಾ./ಲೋ.ಇ./ಇ–ಟೆಂಡರ್/2024–25/1833 ದಿನಾಂಕ : 17–09–2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ ಮತ್ತು ನಿಯಮಾವಳಿಗಳಲ್ಲಿನ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಅನ್ವಯ ಇ–ಪ್ರೊಕ್ಯೂರ್‌ಮೆಂಟ್–2 ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಇ–ಟೆಂಡರ್‌ನಲ್ಲಿ ಭಾಗವಹಿಸಬಹುದು.

1) ಕಾಮಗಾರಿಯ ಹೆಸರು : ಬೆಳಗಾವಿ ಉತ್ತರ ಮತಕ್ಷೇತ್ರದಡಿ ಬರುವ ಹನುಮಾನ ನಗರದಲ್ಲಿಯ ಉದ್ಯಾನವನದಲ್ಲಿ ಫುಡ್ ಕಿಯೋಸ್ಕ್, ಗಜಿಬೋ, ಪರಗೋಲಾ ನಿರ್ಮಾಣ ಮಾಡುವುದು ಹಾಗೂ ಇತರೆ ಕಾಮಗಾರಿ, ಇಂಡೆಂಟ್ ನಂ. : ಇಂಡೆಂಟ್ 53, ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 89.00, ಮುಂಗಡ ಠೇವಣಿ (ರೂ. ಗಳಲ್ಲಿ) : 1,50,000/–, ಕಾಮಗಾರಿಯನ್ನು ನಿರ್ವಹಿಸುವ ಅವಧಿ : 06 ತಿಂಗಳು, 2) ಕಾಮಗಾರಿಯ ಹೆಸರು : ಬೆಳಗಾವಿ ಉತ್ತರ ಮತಕ್ಷೇತ್ರದಡಿ ಬರುವ ನವಿಲುತೀರ್ಥ ಉದ್ಯಾನವನದಲ್ಲಿ ಶೌಚಾಲಯಗಳು, ಫುಡ್ ಕಿಯೋಸ್ಕ್, ನಿರ್ಮಾಣ ಮಾಡುವುದು ಹಾಗೂ ಇತರೆ ಕಾಮಗಾರಿ, ಇಂಡೆಂಟ್ ನಂ. : ಇಂಡೆಂಟ್ 54, ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 71.00, ಮುಂಗಡ ಠೇವಣಿ (ರೂ. ಗಳಲ್ಲಿ) : 1,21,000/–, ಕಾಮಗಾರಿಯನ್ನು ನಿರ್ವಹಿಸುವ ಅವಧಿ : 06 ತಿಂಗಳು, 3) ಕಾಮಗಾರಿಯ ಹೆಸರು : ಬೆಳಗಾವಿ ಉತ್ತರ ಮತಕ್ಷೇತ್ರದಡಿ ಬರುವ ಮಳಮಾರುತಿ ಉದ್ಯಾನವನದಲ್ಲಿ ಸಿಟಿಂಗ್ ಕಟ್ಟಾ ನಿರ್ಮಾಣ ಮಾಡುವುದು ಹಾಗೂ ಇತರೆ ಕಾಮಗಾರಿ, ಇಂಡೆಂಟ್ ನಂ. : ಇಂಡೆಂಟ್ 55, ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 55.00, ಮುಂಗಡ ಠೇವಣಿ (ರೂ. ಗಳಲ್ಲಿ) : 93,000/–, ಕಾಮಗಾರಿಯನ್ನು ನಿರ್ವಹಿಸುವ ಅವಧಿ : 06 ತಿಂಗಳು, 4) ಕಾಮಗಾರಿಯ ಹೆಸರು : ಬೆಳಗಾವಿ ಉತ್ತರ ಮತಕ್ಷೇತ್ರದಡಿ ಬರುವ ನವಿಲುತೀರ್ಥ ಉದ್ಯಾನವನದಲ್ಲಿ ಟ್ರಿ ಕಟ್ಟಾ ಮತ್ತು ಕಂಪೌಂಡ ಗೋಡೆಯನ್ನು ನಿರ್ಮಾಣ ಮಾಡುವುದು ಹಾಗೂ ಇತರೆ ಕಾಮಗಾರಿ, ಇಂಡೆಂಟ್ ನಂ. : ಇಂಡೆಂಟ್ 56, ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 67.00, ಮುಂಗಡ ಠೇವಣಿ (ರೂ. ಗಳಲ್ಲಿ) : 1,14,000/–, ಕಾಮಗಾರಿಯನ್ನು ನಿರ್ವಹಿಸುವ ಅವಧಿ : 06 ತಿಂಗಳು.

ಟೆಂಡರ್ ಫಾರ್ಮ ಬೆಲೆ ಇ–ಪ್ರೋಕ್ಯೂರಮೆಂಟ್‌ದಲ್ಲಿದ್ದಂತೆ
1) ಟೆಂಡರ್ ಕ್ವಾರೀಸ್ ಸಲ್ಲಿಸಲು ಕೊನೆಯ ದಿನಾಂಕ : 15–10–2024 ರ ಸಂಜೆ 4.30 ಘಂಟೆವರೆಗೆ, 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 21–10–2024 ರ ಸಂಜೆ 4.30 ಘಂಟೆವರೆಗೆ, 3) ತಾಂತ್ರಿಕ ಬಿಡನ್ನು ತೆರೆಯುವ ದಿನಾಂಕ : 22–10–2024 ರ ಸಂಜೆ 5.00 ಘಂಟೆಗೆ, 4) ಆರ್ಥಿಕ ಬಿಡನ್ನು ತೆರೆಯುವ ದಿನಾಂಕ ಇ–ಪೋರ್ಟಲ್ ಮುಖಾಂತರ ಮಾಹಿತಿಯನ್ನು ಪಡೆಯಬಹುದಾಗಿದೆ, 5) ಯಾವ ಕಾರಣವನ್ನು ಸಹ ನೀಡಿದ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಅಂಗೀಕರಿಸುವ ಅಥವಾ ನಿರಾಕರಿಸುವ ಅಧಿಕಾರವನ್ನು ಈ ಕೆಳಗಿನ ಅಧಿಕಾರಿಯವರು ಕಾಯ್ದಿರಿಸಿಕೊಂಡಿದ್ದಾರೆ, 6) ಟೆಂಡರ್ ಮೊತ್ತಕ್ಕೆ ಜಿ.ಎಸ್.ಟಿ. ಮೊತ್ತವನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು, ಕಾರ್ಯಕಾರಿ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ ಇವರಿಂದ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ, (ದೂರವಾಣಿ ಸಂಖ್ಯೆ : 0831 – 2470342) ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ : kppp.karanataka.gov.in ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.
ಸಹಿ/– ಆಯುಕ್ತರು, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/821/ಮಣಿಪಾಲ್/2024–25

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ, ಮಲ್ಲತ್ತಹಳ್ಳಿ, ಬೆಂಗಳೂರು – 560 056.
ದೂರವಾಣಿ: 080–23183311/12 ಇ–ಮೇಲ್: kbbp-bengaluru@ka.gov.in

ಸಂಖ್ಯೆ: ಕುಭಾಪ್ರಾ/28/ಅಂ.ವಿಫಯೋ–ಪ್ರಕಟಣೆ/23–24/24–25 ದಿನಾಂಕ: 19.09.2024

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ವತಿಯಿಂದ ಡಾ. ಬಿ.ಆರ್. ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು ಒಟ್ಟು 22 ಸಂಪುಟಗಳನ್ನು ಮರುಮುದ್ರಿಸುವ ಸಲುವಾಗಿ ಆಫ್‌ಸೆಟ್ ಮುದ್ರಣ ಸೌಲಭ್ಯವುಳ್ಳ ಅರ್ಹ ಮುದ್ರಣಾಲಯಗಳಿಂದ ನಿಗದಿತ ನಮೂನೆಯಲ್ಲಿ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್) ಮೂಲಕ ಎರಡು (2) ಬಿಡ್ ವಿಧಾನದಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಅಂದಾಜು ಮೊತ್ತ: ರೂ.1,09,49,279.00 (ರೂಪಾಯಿ ಒಂದು ಕೋಟಿ ಒಂಭತ್ತು ಲಕ್ಷದ ನಲವತ್ತೊಂಭತ್ತು ಸಾವಿರದ ಎರಡು ನೂರ ಎಪ್ಪತ್ತೊಂಭತ್ತು ಮಾತ್ರ) ಗಳು. ನಿಗದಿಪಡಿಸಿದ ಇಎಂಡಿ ಮೊತ್ತ: ರೂ.2,73,732.00 ಟೆಂಡರನ್ನು ನಿಗದಿಪಡಿಸಲಾದ ನಮೂನೆಯಲ್ಲಿ ಭರ್ತಿಮಾಡಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವುದು. ಟೆಂಡರ್ ಫಾರಂ ಇತರೆ ಷರತ್ತು ಮತ್ತು ನಿಬಂಧನೆಗಳ ಇತ್ಯಾದಿ ವಿವರಗಳನ್ನು ವೆಬ್‌ಸೈಟ್: https://kppp.karnataka.gov.in ಅಂತರ್ಜಾಲದ ಮೂಲಕ ಪಡೆದು ದಿನಾಂಕ: 19.10.2024 ರೊಳಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 080–23183311/12

ಸಹಿ/– ರಿಜಿಸ್ಟ್ರಾರ್

DIPR/CP/BCPL/2047/2024-25

ಕಾರ್ಯಪಾಲಕ ಇಂಜಿನಿಯರ್‌ರವವ ಕಚೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು.
ಸಂಖ್ಯೆ: ಕಾಇಂ/ಪಂರಾಇಂವಿ/ತುಮ/ಎಇ–1/ಟೆಂಡರ್/2024–25 ದಿನಾಂಕ: 27.03.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–06/2024–25
(ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ–ದ್ವಿಲಕೋಟೆ ಪದ್ದತಿ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ಹಾಗೂ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹಾಗೂ ಕೆ.ಪಿ.ಪಿ.ಪೋರ್ಟಲ್ ಪೋರ್ಟಲ್ ಸಪೋರ್ಟ್‌ಗಾಗಿ 1/1, ಸನ್‌ಬೀಮ್ ಬಿಲ್ಡಿಂಗ್, ಈಗಲ್ ಸ್ಟ್ರೀಟ್, ಲಾಂಗ್‌ಫೋರ್ಡ್ ರೋಡ್, ಲಾಂಗ್‌ಫೋರ್ಡ್ ಟೌನ್, ಬೆಂಗಳೂರು–560 025, ದೂರವಾಣಿ: 080–22485867, 080–22485927 ರಲ್ಲಿ ನೊಂದಾಯಿಸಿದ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ತುಮಕೂರು ವಿಭಾಗ ವ್ಯಾಪ್ತಿಯ 2022–23ನೇ ಸಾಲಿನ 5054–ಮಾನ್ಯ ಮುಖ್ಯ ಮಂತ್ರಿಗಳ ವಿಶೇಷ ಮಂಜೂರಾತಿ ಯೋಜನೆ ಮತ್ತು 2021–22ನೇ ಸಾಲಿನ ಸ್ವಚ್ಛಭಾರತ್ ಮಿಷನ್ (ಗ್ರಾ) ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಟೆಂಡರ್‌ನ್ನು ಕೆ.ಪಿ.ಪಿ.ಪೋರ್ಟಲ್‌ನಲ್ಲಿ ದ್ವಿ ಲಕೋಟೆ ಮೂಲಕ ಮಾತ್ರ ಆಹ್ವಾನಿಸಲಾಗಿದೆ..

ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಗುತ್ತಿಗೆದಾರರು ಕಾಮಗಾರಿಗಳ ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ www.eproc.karnataka.gov.in ಮುಖಾಂತರ ದಿನಾಂಕ: 13.09.2024. ರಿಂದ 27.09.2024. ಸಂಜೆ 5.00 ಗಂಟೆವರೆಗೆ ಫಾರಂ ಫೀ ಕೆ.ಪಿ.ಪಿ.ಪೋರ್ಟಲ್ ಮುಖಾಂತರ (ಹಿಂತಿರುಗಿಸಲಾಗುವುದಿಲ್ಲ) ಸಲ್ಲಿಸಿ ನಿಗದಿತ ಇ.ಎಂ.ಡಿ. ಪಾವತಿಸಿ ಟೆಂಡರ್‌ಗಳನ್ನು ಪಡೆಯಬಹುದಾಗಿದೆ ಹಾಗೂ ಸಲ್ಲಿಸಬಹುದಾಗಿದೆ. ಹಾಗೂ ಈ ಕೆಳ ಸಹಿದಾರರಿಂದ ಕಚೇರಿ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿರುತ್ತದೆ. ದೂರವಾಣಿ ಸಂಖ್ಯೆ: 0816–2272620 ಟೆಂಡರ್‌ಗೆ ಯಾವುದೇ ಮಾರ್ಪಾಟು, ತಿದ್ದುಪಡಿಗಳ ಮಾಹಿತಿಗಳನ್ನು ಕೆ.ಪಿ.ಪಿ.–ಪೋರ್ಟಲ್ ಮುಖಾಂತರವೇ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ. ವಿಭಾಗ, ತುಮಕೂರು.

DIPR/TUM/328/KSMCA/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರು(ಕಾವೇರಿ–ಕಾ&ನಿ)ರವರ ಕಛೇರಿ
6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009
ಸಂ:ಬೆಂ.ಜ.ಮಂ/ಮುಅಕಾ(ಕಾ&ನಿ)ತಾಂಅ/ತಾಂಸ–01/82/2022/817/2024–25 ದಿನಾಂಕ: 12.09.2024

ಟೆಂಡರ್‌ಗಾಗಿ ಆಹ್ವಾನ(ಐಎಫ್‌ಟಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ಟಿ.ಕೆ. ಹಳ್ಳಿಯಲ್ಲಿ 06 ಮನೆಗಳ (ಜಿ+2) ಕ್ವಾರ್ಟರ್ಸ್ 2 ಬ್ಲಾಕ್ ಕಟ್ಟಡಗಳ ನಿರ್ಮಾಣ ಕಾಮಗಾರಿಗಾಗಿ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ.
ಟೆಂಡರಿಗಿಟ್ಟ ಮೊತ್ತ : ರೂ. 263.22 ಲಕ್ಷಗಳು ಇಎಂಡಿ: ರೂ. 3.95 ಲಕ್ಷಗಳು
ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 18.10.2024 ರ ಮಧ್ಯಾಹ್ನ 3.00 ಗಂಟೆಯವರೆಗೆ. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 19.10.2024ರ ಸಂಜೆ 4.00 ಗಂಟೆಗೆ. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು(ಕಾವೇರಿ–ಕಾ&ನಿ)

ವಾಸಾಸಂಇ/ವಾಪ್ರ/ಜಿಎ/2040/2024–25

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಸಅಸಂ/ತಾಂಸ/ಬೆವಿ/Rescue Center/ಟೆಂಡರ್/2024–25
ದಿನಾಂಕ: 12–09–2024.

ಟೆಂಡರ್ ಪ್ರಕಟಣೆ

ಸನ್ 2024–25 ನೇ ಸಾಲಿನಲ್ಲಿ ಬೆಳಗಾವಿ (ಪ್ರಾದೇಶಿಕ) ವಿಭಾಗದ Rescue Center ಹಾಲಭಾವಿ (ಚಿಗರಿಮಾಳ) ದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕುರಿತು ಟೆಂಡರ್ ಕರೆಯುವ ಬಗ್ಗೆ.

ಟೆಂಡರ್‌ದಾರರು ಹಾಗೂ ಬಿಡ್ಡರ್‌ಗಳ ಅವಗಾಹನೆಗಾಗಿ ಈ ಮೂಲಕ ಪ್ರಕಟಿಸುವುದೇನೆಂದರೆ, ಸನ್2024–25 ನೇ ಸಾಲಿನಲ್ಲಿ ಬೆಳಗಾವಿ (ಪ್ರಾದೇಶಿಕ) ವಿಭಾಗದ Rescue Center ಹಾಲಭಾವಿ (ಚಿಗರಿಮಾಳ) ದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ Indent No. KFD/2023-24/OW/WORK_INDENT 4596, 4597 & 4599 ಗಳಿಗೆ ದಿನಾಂಕ: 10–10–2024 ರಂದು ಟೆಂಡರ್‌ನ್ನು ಕರೆಯಲಾಗಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳ ಸಹಿದಾರರ ಕಛೇರಿಗೆ ರಜಾ ದಿನಗಳನ್ನು ಹೊರತುಪಡಿಸಿ ಸಂಪರ್ಕಿಸಬಹುದಾಗಿದೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವಿಭಾಗ, ಬೆಳಗಾವಿರವರ
ತಾಂತ್ರಿಕ ಸಹಾಯಕರು.

ಡಿಐಪಿಆರ್/ಬೆಳಗಾವಿ/822/ಮಣಿಪಾಲ್/2024–25

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ,
ಮೈಸೂರು–570017, ದೂರವಾಣಿ: 9448994705
ಇ–ಮೇಲ್: gmpurc@cescmysore.org, ವೆಬ್‌ಸೈಟ್: cescmysore.karnataka.gov.in

ಸಂಖ್ಯೆ: ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–2/2024–25/13390 ದಿನಾಂಕ: 18.09.2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು ಅಲ್ಪಾವಧಿ ಟೆಂಡರನ್ನು ಆಹ್ವಾನಿಸಿದೆ.

ಕ್ರ. ಸಂ.	ವಿವರಗಳು	ವಿಚಾರಣೆ ಸಂಖ್ಯೆ/ ದಿನಾಂಕ
1	ಮೈಸೂರು ನಗರದಲ್ಲಿ ದಸರಾ ಉತ್ಸವ 2024ರ ಸಂದರ್ಭದಲ್ಲಿ ಡ್ರೋನ್ ಶೋ ಕಾರ್ಯಕ್ರಮವನ್ನು ಪ್ರದರ್ಶಿಸಲು	ಸಿ2–5897/ 18–09–2024

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://kppp.karnataka.gov.in/ ನಲ್ಲಿ ದಿನಾಂಕ: 21–09–2024 ಅಥವಾ ನಂತರ ಪಡೆಯಬಹುದಾಗಿದೆ. ಹಚ್ಚಿನ ಮಾಹಿತಿಗಾಗಿ ಸಹಾಯವಾಣಿ +91–8046010000/ 8068948777ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/–
ಪ್ರಧಾನ ವ್ಯವಸ್ಥಾಪಕರು (ಖರೀದಿ)
ಚಾವಿಸನಿನಿ, ಮೈಸೂರು

DIPR/MYS/KAVITA/581/2024-25

ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ
ಅಣೆಕಟ್ಟು ಸುರಕ್ಷತಾ ಸಂಸ್ಥೆ (ಡಿ.ಎಸ್.ಓ)
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ,
ಗೊರೂರು, ಹಾಸನ ಜಿಲ್ಲೆ. ದೂ: 08172–225424,
ಇ–ಮೇಲ್–: ee.cmogorur@gmail.com

ಸಂಖ್ಯೆ: RFP/MANPOWER/2024-25/02 ದಿನಾಂಕ: 18–09–2024.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ)

2024–25 ನೇ ಸಾಲಿಗೆ ಅ.ಸು.ಸಂ ಮುಖ್ಯ ಇಂಜಿನಿಯರ್‌ರವರ ಕಛೇರಿ ಮತ್ತು ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ, ಗೊರೂರು ಕಛೇರಿ ಅಧೀನದ ಉಪ–ವಿಭಾಗಗಳಿಗೆ ಡಾಟಾ ಎಂಟ್ರಿ ಆಪರೇಟರ್ (03 ಸಂಖ್ಯೆ) ಮತ್ತು ಗ್ರೂಪ್–ಡಿ ನೌಕರರ (19 ಸಂಖ್ಯೆ) ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಏಜೆನ್ಸಿದಾರರು / ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ (WRD/2024-25/SE0068) ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 25–09–2024 ಸಂಜೆ 5:30 ಗಂಟೆಗಳಾಗಿದ್ದು, ಆರ್ಥಿಕ ಬಿಡ್ಡನ್ನು ದಿನಾಂಕ: 27–09–2024 ರಂದು ಬೆಳಗ್ಗೆ 11:00 ಗಂಟೆಗೆ ತೆರೆಯಲಾಗುವುದು.

ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ http://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/–
ಕಾರ್ಯಪಾಲಕ ಇಂಜಿನಿಯರ್
ಕೇಂದ್ರ ಯಾಂತ್ರಿಕ ಸಂಸ್ಥೆ ವಿಭಾಗ,
ಗೊರೂರು.

ವಾ.ಸಾ.ಸಂ.ಇ/ವಾಪ್ರ/2039/ಆಕಾರ್/2024–25

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ
ಸ.ನೀ. ಮತ್ತು ಅಂ.ಅ ವಿಭಾಗ, ಮಂಡ್ಯ
ಸಂಖ್ಯೆ:ಕಾಸಮೈ:ಡಿಎಂ1:ಅಟೆಂಪ್ರ:2024–25:870 ದಿನಾಂಕ :13.09.2024

ಟೆಂಡರ್ ಅಧಿಸೂಚನೆ ಸಂಖ್ಯೆ : 04/2024–25,
ದಿನಾಂಕ : 13–09–2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ–571401 ಇವರು ಕೆಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯು–3 ಹಾಗೂ ಕೆ.ಡಬ್ಲ್ಯು–4ರ ಪ್ರಕಾರ "ಕೆಪಿಪಿ" – ಪ್ರಕ್ಯೂರ್‌ಮೆಂಟ್‌ನಲ್ಲಿ ಐಟಂವಾರು ಟೆಂಡರ್ ಅನ್ನು ಅಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 4702– ಕೆರೆಗಳ ಆಧುನೀಕರಣ–ಪ್ರಧಾನ ಕಾಮಗರಿಗಳು ಯಡಿಯಲ್ಲಿ ಒಟ್ಟು–01 ಕಾಮಗಾರಿಗಳು, 4702– ಅಣೆಕಟ್ಟು ಪಿಕಪ್–ಪ್ರಧಾನ ಕಾಮಗರಿಗಳಡಿಯಲ್ಲಿ ಒಟ್ಟು–01 ಕಾಮಗಾರಿ 4711– ಪ್ರವಾಹ ನಿಯಂತ್ರಣ ಯಡಿಯಲ್ಲಿ ಒಟ್ಟು–01 ಕಾಮಗಾರಿ ಹಾಗೂ 2245–08–101–0–01–059–ರಾಜ್ಯ ವಿಪತ್ತು ಉಪಶಮನ ನಿಧಿಯ (SDMF) ಯಡಿಯಲ್ಲಿ ಒಟ್ಟು–01 ಕಾಮಗಾರಿಗಳಿದ್ದು ಟೆಂಡರಿಗಿಟ್ಟ ಕನಿಷ್ಠ ರೂ. 100.00 ಲಕ್ಷಗಳಿಂದ ಗರಿಷ್ಠ ರೂ. 750.00 ಲಕ್ಷಗಳಾಗಿರುತ್ತದೆ. ಗುತ್ತಿಗೆದಾರರು ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಯನ್ನು ಈ ಕಛೇರಿ ವೇಳೆಯಲ್ಲಿ ದಿನಾಂಕ : 21–09–2024 ರವರಗೆ ಪಡೆಯಬಹುದಾಗಿದೆ. ದಿನಾಂಕ: 23.09.2024 ರ 17–30 ಗಂಟೆವರೆಗೆ ಟೆಂಡರ್‌ನ ನಿಗದಿತ ನಮೂನೆಗಳನ್ನು "www.kppp.karnataka. gov.in" ರಲ್ಲಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗದಿತ ಇ.ಎಂ.ಡಿ.ಯೊಂದಿಗೆ ಕೆಳಕಂಡ ಕಾಲಂಗಳನ್ವಯ ಬಿಡ್ಡನ್ನು ಅಪ್ ಲೋಡ್ ಮಾಡಬಹುದಾಗಿದೆ. ಈ ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ದಿನಾಂಕ : 24–09–2024 ರಂದು ಬೆಳಿಗ್ಗೆ : 17–00 ಗಂಟೆಗೆ ತೆರೆಯಲಾಗುವುದು. ಈ ಟೆಂಡರ್‌ನ ಆರ್ಥಿಕ ಬಿಡ್ಡನ್ನು ದಿನಾಂಕ : 26.09.2024 ರಂದು ಬೆಳಿಗ್ಗೆ : 17–00 ಗಂಟೆಗೆ ತೆರೆಯಲಾಗುವುದು. ಟೆಂಡರ್ ದಾಖಲಾತಿಗಳನ್ನು ವೆಬ್ ಸೈಟ್ "www.kppp.karnataka.gov.in" ನಲ್ಲಿ ಡೌನ್ ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ವಿ.ಸೂ : ಸದರಿ ಟೆಂಡರ್‌ನ ಕಾಮಗಾರಿಯನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮಂಡ್ಯ ಇವರಿಗೆ ಕಾಯ್ದಿರಿಸಲಾಗಿದೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಷರತ್ತು ಮತ್ತು ನಿಬಂಧನೆಗಳನ್ನು "ಕೆಪಿಪಿಪಿ" – ಪ್ರಕಟಣೆಯಲ್ಲಿಯೇ ಪ್ರಕಟಿಸಲಾಗುವುದು. ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸ.ನೀ.ಮತ್ತು ಅಂ.ಅ.ವಿಭಾಗ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/311/2024–25

ಸುಭಾಷಿತ

ಟೀಕೆಗಳಿಗೆ ನಮ್ಮ ಜೀವನ, ವ್ಯಕ್ತಿತ್ವ, ನಡವಳಿಕೆಗಳ ಮೂಲಕ ಉತ್ತರ ಹೇಳಬೇಕೇ ವಿನಾ ಮಾತಿನಿಂದ ಹೇಳಿ ಪ್ರಯೋಜನವಿಲ್ಲ. –ಪೂರ್ಣಚಂದ್ರ ತೇಜಸ್ವಿ

ಕಲ್ಯಾಣ ಕರ್ನಾಟಕ: ಯೋಜನೆಗಳ ಅನುಷ್ಠಾನಕ್ಕೆ ಕಾಲಮಿತಿ ಇರಲಿ

ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಿ, ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳ ಅಭಿವೃದ್ಧಿಗೆ ಪೂರಕವಾದ 46 ನಿರ್ಣಯಗಳನ್ನು ಕೈಗೊಂಡಿದೆ. ದಶಕದ ಹಿಂದೆ ಇಲ್ಲಿ ನಡೆದಿದ್ದ ಸಚಿವ ಸಂಪುಟ ಸಭೆ ಹಾಗೂ ಆ ನಂತರದ ವರ್ಷಗಳಲ್ಲಿ ಬೆಂಗಳೂರಿನಲ್ಲಿ ನಡೆದ ಸಭೆಗಳಲ್ಲಿ ಆಗಿರುವ ನಿರ್ಧಾರಗಳಿಂದ ಈ ಪ್ರದೇಶದಲ್ಲಿ ದೊಡ್ಡ ಮಟ್ಟದ ಪರಿವರ್ತನೆ ಆದಂತೆ ಕಾಣಿಸುತ್ತಿಲ್ಲ. ಇಂತಿಷ್ಟು ಹಣ ಖರ್ಚು ಮಾಡಿ, ಇವಿಷ್ಟು ಕಾಮಗಾರಿಗಳನ್ನು ನಡೆಸಲಾಗಿದೆ ಎಂಬ ವಿವರವಷ್ಟೇ ಸರ್ಕಾರದ ಬಳಿ ಇದೆ. ಹಣ ವೆಚ್ಚವಾಗಿರುವುದಕ್ಕೆ ಅನುಗುಣವಾಗಿ ಈ ಭಾಗದಲ್ಲಿ ಅಭಿವೃದ್ಧಿಯ ಚಿತ್ರಣ ಗೋಚರಿಸುತ್ತಿಲ್ಲ. ಶಿಕ್ಷಣ, ಆರೋಗ್ಯ, ಕುಡಿಯುವ ನೀರು, ರಸ್ತೆಯಂತಹ ಮೂಲ ಸೌಕರ್ಯಗಳಲ್ಲಿ ಸುಧಾರಣೆಯಾಗಿರುವುದನ್ನು ದೃಢೀಕರಿಸುವ ಸಾಮಾಜಿಕ ಪರಿಶೋಧನೆಯೂ ನಡೆದಂತಿಲ್ಲ. ಕರ್ನಾಟಕಕ್ಕೆ ಸೇರಿ ಪುರೋಭಿವೃದ್ಧಿಯ ಭಾಗವಾಗಬೇಕೆಂಬುದು ಏಕೀಕರಣ ಚಳವಳಿ ರೂವಾರಿಗಳ ಕನಸಾಗಿತ್ತು. ದಶಕಗಳೇ ಕಳೆದರೂ ಆ ಕನಸು ಪೂರ್ಣಪ್ರಮಾಣದಲ್ಲಿ ನನಸಾಗಿಲ್ಲ. ಮೈಸೂರು ಪ್ರಾಂತ್ಯದಲ್ಲಿ ಕಾಣಸಿಗುವಂತಹ ಪ್ರಗತಿಯ ಚಿತ್ರಣವು ಕಲ್ಯಾಣ ಕರ್ನಾಟಕ ಅಥವಾ ಕಿತ್ತೂರು ಕರ್ನಾಟಕ ಭಾಗದಲ್ಲಿ ಕಾಣಿಸುವುದಿಲ್ಲ. ಈ ಭಾಗ ಅವಗಣನೆಗೆ ಒಳಗಾಗಿದೆ ಎಂಬ ಇಲ್ಲಿನವರ ಭಾವನೆಯನ್ನು ಪೂರ್ತಿ ಹೋಗಲಾಡಿಸುವ ಬದ್ಧತೆಯನ್ನು ಆಳುವವರು ತೋರಿಸಿಲ್ಲ. ಈ ಭಾಗದ ಜನಸಮೂಹದ ಆಶೋತ್ತರಗಳಿಗೆ ಸ್ಪಂದಿಸುವ ಉದ್ದೇಶದಿಂದ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಿರುವುದು ಸಕಾರಾತ್ಮಕ ಬೆಳವಣಿಗೆ.

ಅನುದಾನ ಸದ್ಬಳಕೆಯಾದಾಗ ಮಾತ್ರ ಜನರಿಗೆ 'ಕಲ್ಯಾಣ' ರಾಜ್ಯದ ಹಿತಾನುಭವ ದಕ್ಕಲು ಸಾಧ್ಯ

ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ 46 ಯೋಜನೆ-ಕಾಮಗಾರಿಗಳಿಗೆ ಒಪ್ಪಿಗೆ ನೀಡಲಾಗಿದೆ. ಇದಕ್ಕಾಗಿ,₹11,770 ಕೋಟಿ ವಿನಿಯೋಗಿಸಲು ಸಭೆ ಅನುಮೋದನೆ ನೀಡಿದೆ. ಹೊಸದಾಗಿ 45 ಪ್ರಾಥಮಿಕ ಆರೋಗ್ಯ ಕೇಂದ್ರ, 31 ಸಮುದಾಯ ಆರೋಗ್ಯ ಕೇಂದ್ರಗಳನ್ನು ಆರಂಭಿಸಲು ಉದ್ದೇಶಿಸಲಾಗಿದೆ. 9 ತಾಲ್ಲೂಕು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲು ಹಾಗೂ 2 ತಾಲ್ಲೂಕು ಆಸ್ಪತ್ರೆಗಳನ್ನು ಜಿಲ್ಲಾ ಆಸ್ಪತ್ರೆಗಳನ್ನಾಗಿ ಪರಿವರ್ತಿಸಲು ನಿರ್ಧರಿಸಲಾಗಿದೆ. ಜತೆಗೆ, ಶಾಲೆ, ವಸತಿ ನಿಲಯ, ವಸತಿ ಶಾಲೆಗಳ ಆರಂಭ ಹಾಗೂ ಕಟ್ಟಡಗಳ ನಿರ್ಮಾಣಕ್ಕೂ ಆಡಳಿತಾತ್ಮಕ ಒಪ್ಪಿಗೆ ಸೂಚಿಸಲಾಗಿದೆ. ಈ ಭಾಗದ ಬಹುದಿನಗಳ ಬೇಡಿಕೆಯಾಗಿದ್ದ ಪ್ರತ್ಯೇಕ ಸಚಿವಾಲಯ ರಚನೆಗೂ ಸಮ್ಮತಿ ದೊರಕಿದೆ. ಈ ಭಾಗದಲ್ಲಿ ಖಾಲಿ ಇರುವ 17,439 ಹುದ್ದೆಗಳನ್ನು ಹಂತ ಹಂತವಾಗಿ ಭರ್ತಿ ಮಾಡುವ ಭರವಸೆಯನ್ನೂ ನೀಡಲಾಗಿದೆ. ಆರೋಗ್ಯ, ಶಿಕ್ಷಣ, ನೀರಾವರಿ, ಪ್ರವಾಸೋದ್ಯಮ, ಮೂಲಸೌಕರ್ಯಕ್ಕೆ ಆದ್ಯತೆ ನೀಡುವ ಹಲವು ಮಹತ್ವದ ತೀರ್ಮಾನಗಳನ್ನು ಸರ್ಕಾರ ಕೈಗೊಂಡಿರುವುದು ಸ್ವಾಗತಾರ್ಹ.

'ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷ ಸ್ಥಾನಮಾನ ನೀಡಲು ಸಂವಿಧಾನಕ್ಕೆ ತಿದ್ದುಪಡಿ ತಂದು '371 ಜೆ' ಅನ್ನು ಕಾಯ್ದೆ ರೂಪದಲ್ಲಿ ಜಾರಿಗೊಳಿಸಿ 10 ವರ್ಷಗಳಾದವು. ಈ ಅವಧಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸರ್ಕಾರವು ₹19,778 ಕೋಟಿ ಅನುದಾನ ಹಂಚಿಕೆ ಮಾಡಿದೆ. ಆ ಪೈಕಿ ₹13,299 ಕೋಟಿ ಬಿಡುಗಡೆ ಮಾಡಿದೆ. ಇದುವರೆಗೆ ₹11,174 ಕೋಟಿ ಖರ್ಚು ಮಾಡಲಾಗಿದೆ. ಒಟ್ಟು 35,885 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, 27,264 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ' ಎಂದು ಮುಖ್ಯಮಂತ್ರಿ ಈ ಸಂದರ್ಭದಲ್ಲಿ ತಿಳಿಸಿದ್ದಾರೆ. ಇಷ್ಟು ಹಣವನ್ನು ವ್ಯಯ ಮಾಡಿದ್ದರೂ ಈ ಭಾಗದ ಶೈಕ್ಷಣಿಕ ಗುಣಮಟ್ಟ ಉತ್ತಮ ಸ್ಥಿತಿಗೆ ಏರಿಲ್ಲ. ಆರೋಗ್ಯ ವ್ಯವಸ್ಥೆ, ಪೌಷ್ಟಿಕತೆಯಲ್ಲಿ ಸುಧಾರಣೆ ಆಗಿರುವುದನ್ನು ದೃಢಪಡಿಸುವ ಅಂಕಿ ಅಂಶಗಳೂ ಇಲ್ಲ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ನೀಡಿರುವ ಅನುದಾನವು ಕಾಮಗಾರಿಗಳಿಗೆ ಹೆಚ್ಚು ವಿನಿಯೋಗ ಆಗಿದೆಯೇ ವಿನಾ ಮಾನವಸಂಪನ್ಮೂಲದ ಬಲವರ್ಧನೆಗೆ ಬಳಕೆ ಆದಂತಿಲ್ಲ. ಕಾಮಗಾರಿಗಳಿಗೆ ಅನುದಾನ ವಿನಿಯೋಗ ಆಗಿದೆ ಎಂದು ಹೇಳಲಾಗಿದ್ದರೂ ಅದು ಅಭಿವೃದ್ಧಿ ರೂಪದಲ್ಲಿ ಕಾಣಿಸುತ್ತಿಲ್ಲ. ಜನರ ತೆರಿಗೆ ಹಣ ಪೋಲಾಗುವುದನ್ನು ತಪ್ಪಿಸಿ, ಅಭಿವೃದ್ಧಿ ಕಾರ್ಯಗಳು ಪರಿಣಾಮಕಾರಿಯಾಗಿ ನಡೆಯುವಂತೆ ಮತ್ತು ಕಾಲಮಿತಿಯಲ್ಲಿ ಪೂರ್ಣಗೊಳ್ಳುವಂತೆ ನೋಡಿಕೊಳ್ಳಬೇಕು. ಅನುದಾನದ ಪ್ರತಿ ರೂಪಾಯಿಯೂ ಸದ್ಬಳಕೆ ಆಗಬೇಕು. ಅದಕ್ಕೊಂದು ನಿಗಾ ವ್ಯವಸ್ಥೆ ಇರಬೇಕು. ಶಿಕ್ಷಣ ಮತ್ತು ಆರೋಗ್ಯ ವ್ಯವಸ್ಥೆ ಸುಧಾರಣೆಗೆ ಒತ್ತು ಕೊಡಬೇಕು. ಈಗ ಕೈಗೊಂಡಿರುವ ನಿರ್ಣಯಗಳ ಅನುಷ್ಠಾನದ ಬಗೆಯು ನಿರಂತರ ಪರಾಮರ್ಶೆಗೆ ಒಳಗಾಗಬೇಕು. ಆಗಮಾತ್ರ, ನೀಡಿದ ಅನುದಾನ ಸದ್ಬಳಕೆಯಾಗಿ, ಜನರಿಗೆ 'ಕಲ್ಯಾಣ' ರಾಜ್ಯದ ಹಿತಾನುಭವ ದಕ್ಕೀತು.

ದಿನದ ಟ್ವೀಟ್

ಸಹಜ ಸೌಹಾರ್ದದ ಮಾದರಿ

ಕುಣಿಗಲ್‌ನ ಎಂಜಿಎಚ್‌ಎಸ್‌ಕೆ ಶಾಲೆಯಲ್ಲಿ ನಾನು 10ನೇ ತರಗತಿಯಲ್ಲಿದ್ದಾಗ ನನ್ನ ಹಿಂದೂ ಸ್ನೇಹಿತ ಈದ್ ವೇಳೆ ಬಿರಿಯಾನಿ ತಿನ್ನಲು ನಮ್ಮ ಮನೆಗೆ ಬರುತ್ತಿದ್ದ. ದೀಪಾವಳಿ, ಗಣೇಶ ಅಥವಾ ಸಂಕ್ರಾಂತಿ ಹಬ್ಬದಲ್ಲಿ ನಾನು ಮತ್ತು ನನ್ನ ಮುಸಲ್ಮಾನ ಗೆಳೆಯರು ಹಿಂದೂ ಸ್ನೇಹಿತನ ಮನೆಗೆ ಊಟಕ್ಕೆ ಹೋಗುತ್ತಿದ್ದೆವು. ಆಗ ನಾವು ಹಿಂದೂ, ಮುಸ್ಲಿಂ, ಕ್ರೈಸ್ತ ಎಂದೆಲ್ಲ ಚಿಂತಿಸಿದ್ದೇ ಇಲ್ಲ. ನಾವು ಸಹಪಾಠಿಗಳಾಗಿದ್ದೆವು ಅಷ್ಟೆ.

ಎಂ.ನಿಯಾಜ್

ಕಿಡಿನುಡಿ

ಕೇಂದ್ರ ಸರ್ಕಾರ ಮಧ್ಯದಲ್ಲೇ ಬಹುಮತವನ್ನು ಕಳೆದುಕೊಂಡರೆ ಏನಾಗಬಹುದು? 'ಒಂದು ರಾಷ್ಟ್ರ ಒಂದು ಚುನಾವಣೆ'ಯನ್ನು ಸಾಧ್ಯವಾಗಿಸಲು ಎಲ್ಲ ರಾಜ್ಯಗಳ ವಿಧಾನಸಭೆಗಳನ್ನೂ ವಿಸರ್ಜಿಸಲಾಗುವುದೇ? ಎಂತಹ ಮೂರ್ಖ ಕಲ್ಪನೆ!

ಸೋಮನಾಥ್ ನಂದಿ, ಕನ್ಸಲ್ಟಂಟ್

25 ವರ್ಷಗಳ ಹಿಂದೆ

ಭಾನುವಾರ, 19-9-1999

• ಚುನಾವಣಾ ಹಿಂಸೆಗೆ 47 ಜನರ ಬಲಿ

ನವದೆಹಲಿ, ಸೆ. 18 (ಪಿಟಿಐ, ಯುಎನ್‌ಐ)– ಐದು ರಾಜ್ಯಗಳಲ್ಲಿ ಇಂದು ನಡೆದ ಲೋಕಸಭಾ ಚುನಾವಣೆಯ ಮೂರನೇ ಹಂತದ ಮತದಾನದಲ್ಲಿ ಶೇಕಡ 53 ರಷ್ಟು ಮತದಾನ ನಡೆದಿದ್ದು, ವ್ಯಾಪಕ ಹಿಂಸಾಚಾರದಲ್ಲಿ ಇಬ್ಬರು ಮ್ಯಾಜಿಸ್ಟ್ರೇಟರು ಮತ್ತು 31 ಮಂದಿ ಭದ್ರತಾ ಸಿಬ್ಬಂದಿ ಸೇರಿದಂತೆ ಒಟ್ಟು 47 ಮಂದಿ ಸತ್ತಿದ್ದಾರೆ. 38 ಮಂದಿ ಗಾಯಾಳುಗಳ ಪೈಕಿ ಉತ್ತರ ಪ್ರದೇಶದ ಸಮಾಜವಾದಿ ಪಕ್ಷದ ಅಭ್ಯರ್ಥಿಯೂ ಸೇರಿದ್ದಾರೆ.

• ಎಸ್ಸೆನ್‌ಗೆ 'ಕರ್ನಾಟಕ ರತ್ನ'

ಮೈಸೂರು, ಸೆ. 18– ಹಿರಿಯ ಮುತ್ಸದ್ದಿ ಎಸ್. ನಿಜಲಿಂಗಪ್ಪ ಅವರನ್ನು 1999ನೇ ಸಾಲಿನ 'ಕರ್ನಾಟಕ ರತ್ನ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕರ್ನಾಟಕದ ಈ ಅತ್ಯುನ್ನತ ಪ್ರಶಸ್ತಿಯನ್ನು ಸರ್ಕಾರ ಸುಮಾರು ಏಳು ವರ್ಷಗಳ ನಂತರ ನೀಡುತ್ತಿದೆ.

ಹಿರಿಯ ಸಾಹಿತಿ ಕುವೆಂಪು ಮತ್ತು ವರನಟ ಡಾ. ರಾಜ್‌ಕುಮಾರ್ ಅವರಿಗೆ 1992ರಲ್ಲಿ ಈ ಪ್ರಶಸ್ತಿ ನೀಡಲಾಗಿತ್ತು.

• ದರೋಡೆ ಪ್ರಕರಣಗಳಿಂದ ವರ್ತಕರು ತಲ್ಲಣ

ಬೆಂಗಳೂರು, ಸೆ. 18– ವ್ಯವಹಾರ ಮುಗಿಸಿ ನಗದು ಹಣದೊಂದಿಗೆ ರಾತ್ರಿ ಮನೆಗೆ ಹಿಂತಿರುಗುವ ನಗರದ ವ್ಯಾಪಾರಿಗಳು ಮತ್ತು ಶ್ರೀಮಂತರು, ಯಾವ ಕ್ಷಣದಲ್ಲಿ ಎಲ್ಲಿ ದರೋಡೆಕೋರರು ದಾಳಿ ನಡೆಸುತ್ತಾರೊ ಎಂಬ ಭೀತಿಯಿಂದ ನಡುಗುವಂತಾಗಿದೆ.

ಒಂದು ವರ್ಷದಿಂದ ವ್ಯಾಪಾರಿಗಳನ್ನು ಅಡ್ಡಗಟ್ಟಿ ಹಲ್ಲೆ ಮಾಡಿ ಹಣ ದೋಚಿಕೊಂಡು ಓಡಿದ ಹಲವು ಪ್ರಕರಣಗಳು ನಡೆದಿದ್ದು, ಗುರುವಾರ ರಾತ್ರಿ ರಾಜಾಜಿನಗರ ನಾಲ್ಕನೇ ಬ್ಲಾಕ್‌ನಲ್ಲಿ ಪಾನ್‌ಪರಾಗ್ ಸಗಟು ಅಂಗಡಿ ನೌಕರನ ಮೇಲೆ ಗುಂಡು ಹಾರಿಸಿ ಗಾಯಗೊಳಿಸಿ ಮೂರು ಲಕ್ಷ ರೂಪಾಯಿ ದೋಚಿದ ಘಟನೆ ನಂತರ ಈ ಭಯ ಇನ್ನಷ್ಟು ಹೆಚ್ಚಿದೆ.

ಬಹುತೇಕ ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆ ಮಾಡುವಲ್ಲಿ ಪೊಲೀಸರು ವಿಫಲರಾಗಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 19-9-1974

• ಕಳ್ಳಸಾಗಣೆ 'ದೊರೆ' ಹಾಜೀ ಮಸ್ತಾನಾ ನಗರದಲ್ಲಿ ಕೈದು

ಬೆಂಗಳೂರು, ಸೆ. 18– ಕಳ್ಳಸಾಗಾಣಿಕೆ ವ್ಯವಹಾರದ 'ದೊರೆ' ಎನ್ನಲಾದ ಹಾಜೀ ಮಸ್ತಾನಾ ಮಿರ್ಜಾ ಎಂಬುವನನ್ನು ನಗರದ ಪೊಲೀಸರು ಬುಧವಾರ ಬೆಳಗಿನ ಜಾವ ಇಲ್ಲಿ ಬಂಧಿಸಿದರು.

ಕಳ್ಳಸಾಗಾಣಿಕೆ ವ್ಯವಹಾರದ ಪ್ರಕರಣಗಳಲ್ಲಿ ತಮಗೆ ಬೇಕಾಗಿದ್ದಾನೆ ಎಂದು ಮುಂಬಯಿ ಪೊಲೀಸ್ ಕಮಿಷನರ್ ನೀಡಿದ ವಿವರಗಳ ಮೇಲೆ ಆಂತರಿಕ ಭದ್ರತಾ ಶಾಸನದನ್ವಯ ಕಳ್ಳಸಾಗಣೆದಾರರನ್ನು ಸ್ಥಾನಬದ್ಧತೆಯಲ್ಲಿಡಲು ಸಾಧ್ಯವಾಗುವಂತೆ ರಾಷ್ಟ್ರಪತಿಗಳು ಹೊರಡಿಸಿದ ಸುಗ್ರೀವಾಜ್ಞೆಯ ರೀತ್ಯ ನಗರದ ಪೊಲೀಸರು ಹಾಜೀ ಮಸ್ತಾನಾನನ್ನು ರಿಚ್‌ಮಂಡ್ ಟೌನಿನ ಭವ್ಯ ಮನೆಯಲ್ಲಿ ಬಂಧಿಸಿದರು.

• ವಿದ್ಯಾರ್ಥಿಗಳ ಕುಂದುಕೊರತೆ ಪರಿಹರಿಸುವ ಕಾರ್ಯ ಆರಂಭ

ಬೆಂಗಳೂರು, ಸೆ. 18– ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಅರಿತು ಅವನ್ನು ಪರಿಹರಿಸುವ ಕಾರ್ಯವನ್ನು ರಾಜ್ಯ ಸರ್ಕಾರ ಆರಂಭಿಸಿ ಹೊಸ ಹೆಜ್ಜೆಯನ್ನಿಟ್ಟಿದೆ.

ಮುಖ್ಯ ಕಾರ್ಯದರ್ಶಿ ಜಿ. ವಿ. ಕೆ. ರಾವ್ ಅವರ ಅಧ್ಯಕ್ಷತೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳ ಸಭೆ ಆಗಾಗ್ಗೆ ನಡೆಯುತ್ತಿದ್ದು, ಪ್ರತಿವಾರ ಕೈಗೊಳ್ಳುವ ಕ್ರಮಗಳ ಬಗ್ಗೆ ವರದಿ ತರಿಸಿಕೊಳ್ಳಲಾಗುತ್ತಿದೆ.

ಆಘಾತಕಾರಿ ಮಾತುಗಳ ಹಿಂದಿನ ಅಸಹ್ಯ ಮನಃಸ್ಥಿತಿಯ ಬೇರನ್ನು ಕಿತ್ತೆಸೆಯಬೇಕಿದೆ

ಹೀರೊಗಿರಿಯ ಹಿಂದಿನ ಖೂಳ ನಖಗಳು

ವಿಶ್ಲೇಷಣೆ

ಸಬಿತಾ ಬನ್ನಾಡಿ

ಅದೊಂದು ಕಚೇರಿ. ರಾತ್ರಿ ಎರಡು ಗಂಟೆಯ ತನಕವೂ ಕೆಲಸದ ಒತ್ತಡದಲ್ಲಿರುವ ಮೂವರು ಗಂಡಸರು, ಇಬ್ಬರು ಹೆಂಗಸರಿದ್ದಾರೆ. ಈ ನಡುವೆ ಒಬ್ಬಾಕೆಗೆ ಪೀರಿಯಡ್ಸ್ ಕಾಣಿಸಿಕೊಂಡು, ಅವಳು ಅದನ್ನು ಜೋರಾಗಿ ಹೇಳಿದಾಗ ಇನ್ನೊಬ್ಬಳು ಮುಜುಗರಕ್ಕೆ ಒಳಗಾಗುತ್ತಾಳೆ. ಒಬ್ಬ ತಮಾಷೆಯಾಗಿ ನಗುತ್ತಾನೆ. ಅವಳು ಪ್ರತಿಭಟಿಸಿ ವಾಷ್‌ರೂಮಿಗೆ ಹೋಗುತ್ತಾಳೆ. ವಾಪಸ್ ಬಂದಾಗ, ತಮಾಷೆ ಮಾಡಿದವನೇ ಸಮಾಧಾನ ಮಾಡುತ್ತಾನೆ. ಇನ್ನೊಬ್ಬ 'ಪೇನ್‌ಕಿಲ್ಲರ್ ತಂದುಕೊಡಲೇ' ಎನ್ನುತ್ತಾನೆ. ಮತ್ತೊಬ್ಬ 'ಚಿಕ್ಕವನಿದ್ದಾಗಿನಿಂದಲೂ ಅಮ್ಮನಿಗೆ ಸ್ಯಾನಿಟರಿ ಪ್ಯಾಡ್ ನಾನೇ ತಂದುಕೊಡುತ್ತಿದ್ದುದು' ಎಂದಾಗ, ಎಲ್ಲರೂ ನಿರುಮ್ಮಳವಾಗಿ ನಗುತ್ತಾ ತಮ್ಮ ತಮ್ಮ ಕೆಲಸ ಮುಂದುವರಿಸುತ್ತಾರೆ. ಇದು 'ವೆಲ್‌ಕಮ್ ರೆಡ್ ಮೈ ಪೀರಿಯಡ್ಸ್' ಎಂಬ ಹಿಂದಿ ಕಿರುಚಿತ್ರದಲ್ಲಿನ ದೃಶ್ಯ. ಇಂತಹ ಸೇಫ್ ಆದ ವಾತಾವರಣ ನಮ್ಮೆಲ್ಲರ ಕನಸು.

ಆದರೆ ಈಚೆಗೆ ಕೇಳಿಸಿಕೊಂಡ ಎರಡು ಆಡಿಯೊಗಳು ನಮ್ಮ ಒಟ್ಟು ಸಾಂಸ್ಕೃತಿಕ ವಾತಾವರಣವನ್ನು ಮತ್ತು ಭಾರತೀಯರು 'ಸ್ತ್ರೀಯರನ್ನು ಗೌರವಿಸುತ್ತಾರೆ' ಎಂಬ ಮಾತನ್ನು ಹೇಗೆ ವ್ಯಾಖ್ಯಾನಿಸಿಕೊಳ್ಳಬೇಕು ಎಂಬ ಬಗ್ಗೆ ಯೋಚಿಸುವಂತೆ ಮಾಡಿವೆ. ಇಲ್ಲಿ ಎರಡು ಮುಖ್ಯ ಅಂಶಗಳನ್ನು ನಾವು ಗಮನಿಸಬೇಕಾಗಿದೆ. ಒಂದು, ಗಂಡು ಯಾವುದೇ ಹೆಣ್ಣನ್ನು ತನ್ನ ಸಾಕುಪ್ರಾಣಿಗಿಂತಲೂ ಕಡೆ ಎಂದು ಭಾವಿಸುವುದು. ಎರಡನೆಯದು, ಗಂಡಿನ ಈ ವರ್ತನೆಯನ್ನು ಒಪ್ಪಿಕೊಂಡಿರುವ ಹೆಣ್ಣು, ಖಂಡತುಂಡವಾಗಿ ಪ್ರತಿಭಟಿಸದೆ ಅವನನ್ನು ಹೇಗಾದರೂ ಮೆಚ್ಚಿಸುವ ಕೆಳಹಂತಕ್ಕೆ ಜಾರಿರುವುದು. ಈ ಎರಡು ಕಾರಣಗಳಿಂದಲೇ ಹೆಣ್ಣಿನ ಮೇಲಿನ ದೌರ್ಜನ್ಯ ಹೆಚ್ಚುತ್ತಲೇ ಹೋಗುತ್ತದೆ ಎಂಬುದು ಗಂಡಸರಿಗೂ ಹೆಂಗಸರಿಗೂ ತಿಳಿಯದೇ ಹೋಗುವುದು ಮಾತ್ರ ವಿಚಿತ್ರವಾಗಿದೆ.

ಈ ಆಡಿಯೊಗಳಲ್ಲಿ ಗಂಡು ಹೆಣ್ಣಿಗೆ ಬಳಸಿರುವ ಭಾಷೆ ಆಘಾತಕರವಾಗಿದೆ. ಇದು ಮನಃಸ್ಥಿತಿಗಳ ವ್ಯಕ್ತ ರೂಪ. ಇದಕ್ಕೂ, ಇತ್ತೀಚಿನ ದಿನಗಳಲ್ಲಿ ಅತ್ಯಂತ ಸಾಮಾನ್ಯ ಎಂಬಂತೆ ಬರುತ್ತಿರುವ ಅತ್ಯಾಚಾರದ ಸುದ್ದಿಗಳಿಗೂ ನನಗಂತೂ ನೇರ ಸಂಬಂಧ ಕಾಣಿಸುತ್ತಿದೆ. 'ನಾಯಕರು' ಎಂದು ಕರೆಸಿಕೊಳ್ಳುವವರು ಹೆಣ್ಣನ್ನು ಗುರಿಯಾಗಿಸಿರುವ ರೀತಿ ಭಯಾನಕವಾಗಿದೆ.

ಒಬ್ಬ ತನ್ನ ಹೆಂಡತಿಗೇ ಬೇರೆಯವರಿಂದ ರೇಪ್ (ಅದೇ ಅರ್ಥದ ಅಸಹ್ಯ ಪದ ಬಳಕೆಯಾಗಿದೆ) ಮಾಡಿಸ್ತೀನಿ ಅನ್ನುತ್ತಾನೆ. ಇನ್ನೊಬ್ಬ 'ನಾನೇ ರೇಪ್ ಮಾಡ್ತಿದ್ದೆನಲ್ಲ, ನನ್ನ ಬಳಿ ನಿನ್ನ ಹೆಂಡತಿಯನ್ನು ಬಿಡಬೇಕಿತ್ತು' ಅನ್ನುತ್ತಾನೆ. ಹೆಂಡತಿಯನ್ನ, ಅವಳ ತಾಯಿಯನ್ನ, ಅವಳ ಅಕ್ಕನನ್ನ ಒಬ್ಬರನ್ನೂ ಬಿಡದೆ, ಬಾಯಿ ಬಿಟ್ಟರೆ ಎಲ್ಲರಿಗೂ ಇದಲ್ಲದೆ ಬೇರೆ ಪದ ಇಲ್ಲ. ತಾನು ಮದುವೆ ಆದವಳಿಗೇ 'ನಿನ್ನ ಮಗ ನನಗೆ ಹುಟ್ಟಿದ್ದಾ, ನಿನ್ನ ಕ್ಲಾಸ್‌ಮೇಟ್‌ಗಳಿಗೆ ಹುಟ್ಟಿದ್ದಾ?' ಎಂದ ಮಾತು ಕೇಳಿ ನಾನು ತತ್ತರಿಸಿಹೋದೆ. ಇದರಷ್ಟೇ ಆಘಾತಕಾರಿಯಾದುದೆಂದರೆ, ಈ ಬಗ್ಗೆ ಪ್ರತಿಕ್ರಿಯಿಸುವವರು ಅವುಗಳಲ್ಲಿ ಬಳಕೆಯಾದ ಜಾತಿ ನಿಂದನೆಯನ್ನು ತೆಗೆದುಕೊಂಡಷ್ಟು ಗಂಭೀರವಾಗಿ ಹೆಣ್ಣಿನ ನಿಂದನೆಯನ್ನು ತೆಗೆದುಕೊಳ್ಳದೇ ಇರುವುದು. ಹೆಣ್ಣಿಗಿಂತಲೂ ಜಾತಿಯೇ ಜೀವಂತವಾಗಿರುವ ದುರಂತವಿದು.

ಇದನ್ನೆಲ್ಲಾ ಕೇಳಿಸಿಕೊಂಡೂ ಅವರ ಕುಟುಂಬಗಳ ಹೆಂಗಸರು ಪ್ರತಿಭಟಿಸುವುದಿಲ್ಲವೇ? ಶಿಕ್ಷಿಸುವುದಿಲ್ಲವೇ? ಅಥವಾ ಇದನ್ನು ಸಹಜವಾಗಿಸಿಕೊಂಡಿದ್ದಾರೆಯೇ? ಅವರ ಕುಟುಂಬದವರಿಗೆ ಇದು ನಾಚಿಕೆಯ ಸಂಗತಿಯಾಗದೆ ಹೆಮ್ಮೆ ಅಥವಾ ಪೌರುಷದ ಸಂಗತಿಯಾಗಿದೆಯೇ? ಹಾಗೇನಾದರೂ ಆಗಿದೆ ಎಂದರೆ, ರೋಗ ತೀರಾ ಉಲ್ಬಣಿಸಿದೆ ಎಂದೇ ಅರ್ಥ. ಸಾಮಾಜಿಕ ಮಾಧ್ಯಮಗಳ ದಾಸರಾಗಿ ಜನ ಪರಿವರ್ತನೆಯಾಗಿರುವ ಈ ಕಾಲದಲ್ಲಿ, ಚಿಕ್ಕ ಮಕ್ಕಳಿಂದ ಹಿಡಿದು ಬೆಳೆಯುವ ಹರೆಯದವರ ತನಕ ಇದು ದಾಟಿಸುವ ಸಂದೇಶ ಏನು?

ಇವುಗಳೊಂದಿಗೆ, ಒಂದು ಕೊಲೆ ಮತ್ತು ಅತ್ಯಾಚಾರ ಮಾಡಿ ವಿಡಿಯೊ ಮಾಡಿರುವ ಪ್ರಕರಣಗಳ ವರದಿಯನ್ನೂ ಗಮನಿಸಬಹುದು. ವಿಡಿಯೊ ಮಾಡುವವನು ಆಕೆ ನಗುತ್ತಿರಬೇಕು ಎಂದು ಆದೇಶಿಸುತ್ತಾನಂತೆ. ಅಕಸ್ಮಾತ್ ಅದನ್ನು ನೋಡಿದವರು ಅವಳನ್ನೇ ದೂಷಿಸುವಂತಿದೆ ಈ ಯೋಜನೆ! ಇನ್ನು ಕೊಲೆಯಾದ ವ್ಯಕ್ತಿ ತನ್ನ ಪ್ರೇಯಸಿಗೆ ಅಸಭ್ಯ ಸಂದೇಶಗಳನ್ನು ಕಳಿಸಿದ್ದಾನೆ ಎಂಬುದು ಆರೋಪ. ಆ ವ್ಯಕ್ತಿಯ ಮೇಲೆ ಹಲ್ಲೆ ಮಾಡುವಾಗ ಪ್ರೇಯಸಿಯ 'ನಾಯಕ'ನೂ ಬಳಸಿರುವುದು ಅಂತಹದೇ ಮಾತುಗಳನ್ನು. ಅಂದರೆ ಒಬ್ಬ ಕೋಟ್ಯಧೀಶ, ಜನಪ್ರಿಯ ನಟನೂ, ಇನ್ನೊಬ್ಬ ತೀರಾ ಸಾಮಾನ್ಯ ಆರ್ಥಿಕ ಸ್ಥಿತಿ, ಬಡಕಲು ಶರೀರ ಇರುವ ವ್ಯಕ್ತಿಯೂ ಹೆಂಗಸಿನ ಬಗೆಗೆ ಹೊಂದಿರುವ ಅಭಿಪ್ರಾಯ ಒಂದೇ ರೀತಿಯದು. ಅವಳು 'ಭೋಗಿಸಲು' ಇರುವ ಖಾಸಗಿ ಸೊತ್ತು. ಆ ಸೊತ್ತಿಗಾಗಿ ಬಡಿದಾಡಿದ ಈ ಗಂಡಸರು ಪರಸ್ಪರ ಬೈದಾಡುವಾಗ (ಗಂಡಸಿಗೆ ಗಂಡಸೇ ಶತ್ರು!?) ಬಳಸುವುದೆಲ್ಲಾ ಹೆಣ್ಣಿನ ಮರ್ಯಾದೆ ಕಳೆಯುವ ಉವಾಚಗಳನ್ನೇ.

ಮದುವೆಯಾದ ಇಬ್ಬರು 'ಗೃಹಸ್ಥ'ರು ತಮ್ಮ ಹದ್ದು ಮೀರುವುದನ್ನು ಅತ್ಯಂತ ಸಾಮಾನ್ಯ ಸಂಗತಿ ಎಂದು ಸ್ವೀಕರಿಸುವ ಸಮಾಜದಲ್ಲಿ ನಾವಿದ್ದೇವೆ ಮತ್ತು ಅವರವರ ಹೆಂಡತಿಯರು ತಮ್ಮ ತಮ್ಮ ಗಂಡಂದಿರಿಗಾಗಿ ಒದ್ದಾಡುವುದನ್ನು 'ಹೆಣ್ಣು ಇರಬೇಕಾದ್ದೇ ಹೀಗೆ' ಎಂದು ಕಣ್ತೊತ್ತಿಕೊಳ್ಳುವ ಮೂಢತನವೂ ನಮಗಿದೆ. ಹೌದು, ಈ ಮೂಢತನವೇ ಗಂಡಸಿನ ಮತ್ತು ಹೆಂಗಸಿನ ಬದುಕನ್ನು ಹಾಳುಗೆಡವಿರುವುದು. ಕಿವಿಗೆ ಕಠೋರವೆನಿಸಿದರೂ ಯೋಚಿಸಲೇಬೇಕಾದ ಸಂದರ್ಭ ಇದು. ಇಲ್ಲದಿದ್ದಲ್ಲಿ ಈ ಅತ್ಯಾಚಾರಗಳಿಂದ ಹೆಣ್ಣುಮಕ್ಕಳನ್ನೂ ಕ್ರಿಮಿನಲ್‌ಗಳಾಗುವುದರಿಂದ ಗಂಡುಮಕ್ಕಳನ್ನೂ ಬಚಾವು ಮಾಡುವುದು ಸಾಧ್ಯವೇ ಇಲ್ಲ.



'ಕಳ್ಳನ ತಾಯಿ' ಎನ್ನುವ ಪ್ರಸಿದ್ಧ ಕತೆ ಎಲ್ಲರಿಗೂ ಗೊತ್ತಿದೆ. ತಪ್ಪಿ ನಡೆದವರು ತಮ್ಮವರು, ತಮ್ಮ ಜಾತಿಯವರು, ಧರ್ಮದವರು, ದೇಶದವರು ಅಂತೆಲ್ಲ ರಿಯಾಯಿತಿ ಕೊಡಬೇಕೆ ಅಥವಾ ತಪ್ಪಿಗೆ ತಕ್ಕ ಶಿಕ್ಷೆ ಇದೆ ಎಂಬ ಕಠಿಣ ಸಂದೇಶ ಕೊಡಬೇಕೆ? ನಾಳೆ ಇಂತಹವರಿಂದ ಮಕ್ಕಳು ಯಾವುದನ್ನು ಮೌಲ್ಯ ಎಂದು ಸ್ವೀಕರಿಸಬೇಕು? 'ಬಾಲ್ಯದಲ್ಲಿ ತನ್ನ ತಾಯಿಯ ಮೇಲೆ ಮತ್ತು ತನ್ನ ಮೇಲೆ ಅಪ್ಪನೆನಿಸಿಕೊಂಡವನು ಮಾಡುವ ದೌರ್ಜನ್ಯವನ್ನು ಸಹಿಸಿಕೊಳ್ಳುವ ಮತ್ತು ಆಕ್ಷೇಪಿಸದೆ ಅವನ ಪರವಾಗಿರುವ ತಾಯಿಯನ್ನು ಗಂಡುಮಕ್ಕಳು ಇಷ್ಟಪಡುವುದಿಲ್ಲ. ಬದಲಿಗೆ, ಹೆಂಗಸೆಂದರೆ ದುರ್ಬಲಳು ಎಂಬ ಸಂದೇಶ ರವಾನಿಸಿಕೊಳ್ಳುತ್ತಾರೆ. ಮಾತ್ರವಲ್ಲ, ಮುಂದೆ ತಮ್ಮ ಹೆಂಡತಿಯರ ಮೇಲೂ ಅದೇ ರೀತಿಯ ದೌರ್ಜನ್ಯ ಎಸಗುತ್ತಾರೆ' ಎನ್ನುವ ಲೇಖಕ ಟೆರೆನ್ಸ್ ರಿಯಲ್ ಇದನ್ನು 'ಪಿತೃಪ್ರಾಧಾನ್ಯದ ನೃತ್ಯ ಸಂಯೋಜನೆ' ಎಂದು ಕರೆಯುತ್ತಾನೆ. ಇದರ ಪರಿಣಾಮವೆಂದರೆ, 'ತಮ್ಮ ಭಾಗೀದಾರಳ ಮೇಲೆ ದೌರ್ಜನ್ಯಗಳನ್ನು ನಡೆಸಿದರೆ ತೊಂದರೆ ಏನೂ ಆಗದು. ಈ ಭಾಗೀದಾರಳು ಕೂಡ ಭಾವನಾತ್ಮಕವಾಗಿ ಹತ್ತಿರ ಬರಲು, ಈ ಸಂಬಂಧವನ್ನು ಉಳಿಸಿಕೊಳ್ಳಲು ಇನ್ನಷ್ಟು ಹೆಚ್ಚಿನ ಪ್ರಯತ್ನ ಮಾಡಿಯೇ ಮಾಡುತ್ತಾಳೆ, ಮತ್ತಷ್ಟು ಹೆಚ್ಚಿನ ಪ್ರೀತಿಯನ್ನೂ ತೋರಿಸುತ್ತಾಳೆ. ಆಗ ಕ್ರಮೇಣವಾಗಿ ತಮ್ಮ ಹಳೆಯ ಗಾಯಗಳು ಮಾಯುತ್ತವೆ ಎಂದೇ ನಂಬಿಕೊಳ್ಳುತ್ತಾರೆ' ಎನ್ನುತ್ತಾಳೆ ಬೆಲ್ ಹುಕ್ಸ್ (ಬಾರಯ್ಯ ಮಮಬಂಧು. ಅನು: ಎಚ್.ಎಸ್.ಶ್ರೀಮತಿ, ಪುಟ: 122).

ಒಂದೆಡೆ, ಹೆಣ್ಣಿಗೆ ದುರ್ಬಲಳು ಎಂಬ ಸಂದೇಶ ರವಾನಿಸುವುದು, ಇನ್ನೊಂದೆಡೆ, ಅವಳಿಗೆ ಕರಾಟೆ ಕಲಿಸಿ ಪ್ರಬಲಳಾಗಿಸಬೇಕು ಎಂದು ಅಲವತ್ತುಕೊಳ್ಳುವುದು ನಮ್ಮಲ್ಲಿರುವ ವೈಚಾರಿಕತೆಯ ಕೊರತೆಯನ್ನು ಹೇಳುತ್ತದೆ. ಕೇ ಹೆಗಾನ್ ಎಂಬಾಕೆಯ ಆತ್ಮಚರಿತ್ರೆಯಲ್ಲಿ ಒಂದು ಸಂಗತಿ ಬರುತ್ತದೆ. ತಾನು ಪ್ರೀತಿಸುವವನು ಕ್ರಮೇಣ ಅವಳನ್ನು ನಿಂದಿಸತೊಡಗುತ್ತಾನೆ. ಆಗ ಆಕೆ ಅವನ ಗೆಳೆಯನ ಹತ್ತಿರ, 'ನಾನು ಅವನನ್ನು ಪ್ರೀತಿಸುವುದು ನಿಜವೇ ಆದರೆ ಅಷ್ಟಿಷ್ಟು ನಿಂದನೆಗಳನ್ನು ಸಹಿಸಿಕೊಳ್ಳಬೇಕಲ್ಲವೇ?' ಎಂದು ಕೇಳುತ್ತಾಳೆ. ಆಗ ಅವನು 'ನಿನಗೆ ಪ್ರೀತಿಯು ಬೇಕಿದೆ ಎಂಬ ಕಾರಣಕ್ಕೆ ಅವನ ಬೈಗುಳ, ನಿಂದನೆಗಳನ್ನು ಸಹಿಸಿಕೊಳ್ಳಬೇಕು ಎಂದೇನೂ ಇಲ್ಲ. ಸಣ್ಣ ಪ್ರಮಾಣದ ನಿಂದನೆಯನ್ನು ಕೂಡ ನೀನು ಸಹಿಸಿಕೊಳ್ಳಬಾರದು' ಎಂದು ಖಡಾಖಂಡಿತವಾಗಿ ಹೇಳುತ್ತಾನೆ. ಇದು, ಪ್ರೀತಿಯೆಂದರೆ ಮೊದಲು ತನ್ನನ್ನು ಗೌರವಿಸಿಕೊಳ್ಳುವುದು ಎಂಬ ಪಾಠ ಕಲಿಸಿತು ಎನ್ನುತ್ತಾಳವಳು.

ಇಂತಹ ನಿಲುವು ಪ್ರತಿ ಮನೆಯಲ್ಲೂ ಬಾಲ್ಯದಿಂದಲೇ ರವಾನೆಯಾದರೆ ಮಾತ್ರ ವಿಪರೀತಕ್ಕೆ ಹೋಗಿರುವ ಇಂದಿನ ಹೊಲಸು ಮಾತು, ವರ್ತನೆ, ಮನಃಸ್ಥಿತಿಗಳು ಬದಲಾಗುವುದು, ಅತ್ಯಾಚಾರಗಳು ನಿಲ್ಲುವುದು ಮತ್ತು ಆರಂಭದಲ್ಲಿ ನಾನು ಉಲ್ಲೇಖಿಸಿದ ಕಿರುಚಿತ್ರದಂತೆ ಗಂಡಸರೂ ಹೆಂಗಸರೂ ಸೇಫ್ ಅನ್ನುವ ಭಾವನೆಯಿಂದ ನಿರುಮ್ಮಳವಾಗಲು ಸಾಧ್ಯವಾಗುವುದು.

ಚುರುಮುರಿ

ಸ್ಪೇಸ್ ಟೆಕ್ನಾಲಜಿ ಜಾಬ್!

• ಗುರು ಪಿ.ಎಸ್.

'ಹ್ಯಾಪಿ ಅನ್‌ಎಂಪ್ಲಾಯ್‌ಮೆಂಟ್ ಡೇ' ಖುಷಿಯಿಂದ ಸ್ನೇಹಿತ ಮುದ್ದಣ್ಣನಿಗೆ ವಿಶ್ ಮಾಡಿದ ವಿಜಿ. 'ಮೊನ್ನೆ ಇದ್ದ ನಮ್ ಬಾಸ್ ಬರ್ತ್‌ಡೇಯನ್ನ ಹೀಗೆ ಅಣಕಿಸಿ ಆಚರಿಸ್ತೀರಿ ಅಂತ ಗೊತ್ತು. ಎಲ್ಲದರಲ್ಲೂ ರಾಜಕೀಯ ಮಾಡ್ತೀರಲ್ಲ' ಅಂದ ಮುದ್ದಣ್ಣ.

'ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡ್ತೀವಿ ಅಂದ್ರು, ಎಲ್ಲಿ ಮಾಡಿದ್ರು ಹೇಳಪ್ಪ'.

'140 ಕೋಟಿ ಜನರಲ್ಲಿ ಎರಡೇ ಕೋಟಿ ಜನರಿಗೆ ಉದ್ಯೋಗ ಕೊಡಬೇಕು ಅಂದ್ರ ಕಷ್ಟ ಆಗುತ್ತೆ. ಅಭ್ಯರ್ಥಿಗಳು ಕಷ್ಟಪಟ್ಟು ಓದಿ ಪರೀಕ್ಷೆ ಪಾಸ್ ಮಾಡಬೇಕಪ್ಪ'.

'ರಿಕ್ರೂಟ್‌ಮೆಂಟ್ ಎಕ್ಸಾಮ್ ಒಂದಾದರೂ ಸುಸೂತ್ರವಾಗಿ ನಡೆಸ್ತಿದಾರಾ? ಎಲ್ಲದರಲ್ಲೂ ಅಕ್ರಮ, ಭ್ರಷ್ಟಾಚಾರ'.

'ಸ್ವಯಂ ಉದ್ಯೋಗ ಮಾಡ್ರಿ, ಬೇಡ ಅಂದವರಾರು?'

'ಬಂಡವಾಳ ಬೇಕಲ್ರೀ? ಒಂದು ವೇಳೆ ಹಣ ಜೋಡಿಸಿಕೊಂಡು ಪಕೋಡ ಬಿಸಿನೆಸ್ ಮಾಡಿ ಸಕ್ಸಸ್ ಆದರೂ, ಬರೋ ಪ್ರಾಫಿಟ್‌ನಲ್ಲಿ ಅರ್ಧಕ್ಕರ್ಧ ಟ್ಯಾಕ್ಸ್ ಕಟ್ಟಿಯೇ ಸುಸ್ತಾಗಬೇಕು' ಒಂದೇ ಉಸಿರಿನಲ್ಲಿ ಹೇಳಿದ ವಿಜಿ.

'ನಿರುದ್ಯೋಗ ಸಮಸ್ಯೆ ನಿವಾರಣೆಗೆ ನಮ್ ಗುರುಗಳು ಹೊಸ ಐಡಿಯಾ ಮಾಡಿದಾರೆ'.

'ಏನದು?'

'ಸ್ಪೇಸ್ ಟೆಕ್ನಾಲಜಿ. ಈ ತಂತ್ರಜ್ಞಾನ ಬಳಸಿ, ಎಲ್ಲೆಲ್ಲಿ ಉದ್ಯೋಗ ಖಾಲಿ ಇದೆ, ಯಾರ್‍ಯಾರಿಗೆ ಅವಕಾಶ ಕೊಡಬೇಕು ಅಂತ ಮೇಲಿನಿಂದಲೇ ನೋಡಿ ಡಿಸೈಡ್ ಮಾಡ್ತಾರೆ ನಮ್ ಬಾಸು'.

'ಗೊತ್ತು ಬಿಡು. 'ಮನಿ' ಮೇಲೆ ಆಸೆ ಇರುವ ಪೊಲಿಟಿಷಿಯನ್ 'ರತ್ನ'ಗಳು ಮಾತ್ರ ಈ ಟೆಕ್ನಾಲಜಿಯನ್ನು ತುಂಬಾ ಚೆನ್ನಾಗಿ ಬಳಸಿಕೊಳ್ತಿವೆ'.

'ಹಂಗೆ?'

'ಹೇಗಂದ್ರೆ, ಯಾವ ಗುತ್ತಿಗೆದಾರನ ಬಳಿ ಎಷ್ಟು ದುಡ್ಡಿದೆ, ಯಾವ ಕಾಮಗಾರಿಯಲ್ಲಿ ಹೆಚ್ಚು ಕಮಿಷನ್ ಬರುತ್ತೆ, ಯಾವ ನಿಗಮದ ಖಾತೆಯಲ್ಲಿ ಜಾಸ್ತಿ ದುಡ್ಡಿದೆ, ನೋಟಿಫೈ ಅಥವಾ ಡಿನೋಟಿಫೈ ಮಾಡೋ ಜಾಗ ಎಲ್ಲೆಲ್ಲಿದೆ ಅಂತ ಈ ಸ್ಪೇಸ್ ಟೆಕ್ನಾಲಜಿ ಮೂಲಕ ತಿಳ್ಕೊಂಡು ಅವರವರ 'ಕೆಲಸ' ಮಾಡ್ಕೊಳ್ತಿದಾರೆ!'

ಸಂಗತ

ಔಷಧ ಚೀಟಿ: ಇರಲಿ ಮಧ್ಯಮ ಮಾರ್ಗ

ಎಲ್ಲ ವೈದ್ಯರಿಗೆ ಕನ್ನಡದಲ್ಲಿ ಬರೆಯುವ ತರಬೇತಿಯನ್ನು ನಿಯಮಿತವಾಗಿ ನೀಡಿದರೆ ಅವರು ಅದನ್ನೇ ರೂಢಿ ಮಾಡಿಕೊಳ್ಳುತ್ತಾರೆ

• ಡಾ. ಪಿ.ಎಸ್.ಶಂಕರ್

ಕನ್ನಡದಲ್ಲಿ ಔಷಧ ಚೀಟಿ ಬರೆಯುವುದರ ಬಗ್ಗೆ ಚರ್ಚೆ ನಡೆಯುತ್ತಿದೆ. ಇಂಗ್ಲಿಷ್‌ನಲ್ಲೇ ಬರೆದರೆ ಗ್ರಾಮೀಣ ರೋಗಿಗಳಿಗೆ ಅರ್ಥವಾಗುವುದಿಲ್ಲ, ಆದ್ದರಿಂದ ಕನ್ನಡದಲ್ಲೇ ಬರೆಯಬೇಕು ಎಂಬುದು ಒಂದು ವಾದ. ಇನ್ನೊಂದು ಕಡೆ, ಸರಳ ಕನ್ನಡವನ್ನೇ ಬರೆಯಲು ತಿಣುಕುವ ವೈದ್ಯರು ಇನ್ನುಮೇಲೆ 'ಅಝಿತ್ರೊಮೈಸಿನ್', 'ಮೆಟ್ರೋನಿಡಝೋಲ್'ನಂತಹ ಕ್ಲಿಷ್ಟ ಪದಗಳನ್ನು ಬರೆಯಲು ಹೋಗಿ ಇನ್ನೇನೋ ಬರೆದು, ರೋಗಿಗಳು ಜೀವನ್ಮರಣದ ತೊಂದರೆಗೆ ಒಳಪಡುವ ಸಂದರ್ಭ ತಲೆದೋರಬಹುದು ಎಂಬ ಅಭಿಪ್ರಾಯವೂ ವ್ಯಕ್ತವಾಗಿದೆ.

ಅನೇಕ ವೈದ್ಯರು ಇಂಗ್ಲಿಷ್‌ನಲ್ಲಿ ನೀಡುವ ಔಷಧ ಚೀಟಿಯನ್ನು ನೋಡಿದರೆ, ಅವರು ಬರೆದಿರುವುದನ್ನು (ಗೀಚಿರುವುದನ್ನು) ಔಷಧದ ಅಂಗಡಿಗಳಲ್ಲಿ ಕೆಲಸ ಮಾಡುವವರು ಹೇಗೆ ಅರ್ಥಮಾಡಿಕೊಳ್ಳುತ್ತಾರೆ ಎಂಬುದು ನನಗಿನ್ನೂ ಯಕ್ಷಪ್ರಶ್ನೆಯಾಗಿ ಉಳಿದಿದೆ.

ಇಂದು ಕನ್ನಡ ಮಾಧ್ಯಮದಲ್ಲಿ ಮಾತ್ರವಲ್ಲ ಇಂಗ್ಲಿಷ್ ಮಾಧ್ಯಮವೂ ಸೇರಿ ವಿದ್ಯಾರ್ಥಿಗಳ ಭಾಷಾ ಸಾಮರ್ಥ್ಯ ಅವರು ಹನ್ನೆರಡನೇ ತರಗತಿವರೆಗೆ ಎಷ್ಟು ಕಲಿತಿರುತ್ತಾರೋ ಅಷ್ಟೇ ಇರುತ್ತದೆ. ವಿಜ್ಞಾನ ವಿಷಯಗಳಲ್ಲಿ ಹೆಚ್ಚು ಅಂಕಗಳನ್ನು ದೊರಕಿಸಿಕೊಂಡು ವೈದ್ಯ ಶಿಕ್ಷಣ ಪಡೆಯಬೇಕೆಂಬುದರ ಕಡೆ ಅವರ ಗಮನ ಇರುತ್ತದೆಯೇ ವಿನಾ ಭಾಷೆಗಳ ಮೇಲಿರುವುದಿಲ್ಲ. ಅಲ್ಲದೆ ವಿದ್ಯಾರ್ಥಿಗಳು ಮನೆಗಳಲ್ಲಿ ಕನ್ನಡ ಪತ್ರಿಕೆಗಳನ್ನು (ಅದೂ ತರಿಸುತ್ತಿದ್ದರೆ ಮಾತ್ರ) ಓದುವ ಹವ್ಯಾಸವನ್ನು ಇರಿಸಿಕೊಂಡಿರುವುದಿಲ್ಲ.

ಬಹಳ ದಿನಗಳ ಹಿಂದಿನ ಪ್ರಸಂಗ. ಶಿಕ್ಷಕರ ಆಯ್ಕೆಯ ಸಂದರ್ಶನಕ್ಕೆ ಸಾಂಬ್ರಾಣಿ ಕುಟುಂಬದಿಂದ ಒಬ್ಬರು ಬಂದಿದ್ದರು. ಅವರಿಗೆ ಬೋರ್ಡಿನ ಮೇಲೆ ಆ ಹೆಸರನ್ನು ಬರೆಯುವಂತೆ ಹೇಳಿದೆ. ಆಕೆ 'ಸಂಬರಣೆ' ಎಂದು ಬರೆದಿದ್ದಳು.

ವಿಜ್ಞಾನ ವಿಷಯಗಳಿಗೆ ಕೊಟ್ಟಿರುವಷ್ಟು ಮಹತ್ವವನ್ನು ಭಾಷಾ ಅಧ್ಯಯನಕ್ಕೂ ನೀಡಿದರೆ ಮಕ್ಕಳ ಭಾಷೆ ಸುಧಾರಿಸುತ್ತದೆ, ಬರವಣಿಗೆ ಸುಧಾರಿಸುತ್ತದೆ. ಈಗ ಪ್ರ್ಯಾಕ್ಟೀಸ್ ಮಾಡುತ್ತಿರುವ, ಕನ್ನಡ ಮಾತೃಭಾಷೆಯ (ಇತರರನ್ನು ಬಿಡಿ) ವೈದ್ಯರಿಗೆ, ಮುಂದೆ ವೈದ್ಯರಾಗುವ ಕನ್ನಡದ ವೈದ್ಯ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ತಪ್ಪಿಲ್ಲದೆ, ಅರ್ಥವಾಗುವ ರೀತಿ ಬರೆಯುವುದು ಕಷ್ಟದ ಕೆಲಸ. ಹಾಗೆಂದಾಕ್ಷಣ ಇದು ಅಸಾಧ್ಯದ ಕೆಲಸವೇನಲ್ಲ.

ಆದರೂ ಈ ವಿವಾದದಲ್ಲಿ ಮಧ್ಯಮ ಮಾರ್ಗ ಎಂಬುದೂ ಇದೆಯಲ್ಲ? ಔಷಧ ಚೀಟಿಯಲ್ಲಿ ಔಷಧಗಳ ಹೆಸರನ್ನು ಇಂಗ್ಲಿಷ್‌ನಲ್ಲೇ ಬರೆಯಲಿ. ಆದರೆ ಔಷಧಿ ತೆಗೆದುಕೊಳ್ಳುವ ಕ್ರಮ (ದಿನಕ್ಕೆ ಒಮ್ಮೆ, ಎರಡು ಬಾರಿ, ಮೂರು ಬಾರಿ), ಹಗಲೋ ರಾತ್ರಿಯೋ, ಎದ್ದೊಡನೆಯೋ, ಊಟಕ್ಕಿಂತ ಮೊದಲೋ, ಊಟದ ನಂತರವೋ ಎಂಬುದನ್ನು ಔಷಧ ಚೀಟಿಯಲ್ಲಿ ಸ್ಪಷ್ಟವಾಗಿ ಬರೆದರೆ, ರೋಗಿ ಇಲ್ಲವೆ ರೋಗಿಯ ಆರೈಕೆಯಲ್ಲಿ ನಿರತರಾಗಿರುವವರು ಸುಲಭವಾಗಿ ತಿಳಿದುಕೊಳ್ಳಬಲ್ಲರು. ಉದಾಹರಣೆಗೆ, ಅಂತಹ ಔಷಧದ ಚೀಟಿ ಹೀಗಿರಬಹುದು:

1. Azithromycin 250 mg 10 tabs– ಈ ಮಾತ್ರೆಯನ್ನು ದಿನಕ್ಕೆ ಎರಡು ಬಾರಿ ಸೇವಿಸಿ.
2. Electrol 4 Packets– ಪಾಕೀಟಿನಲ್ಲಿರುವ ಚಮಚೆಯನ್ನು ತುಂಬುವಷ್ಟು ಪುಡಿಯನ್ನು ಒಂದು ಲೋಟ ನೀರಿನಲ್ಲಿ ಕರಗಿಸಿ ದಿನಕ್ಕೆ ನಾಲ್ಕು ಬಾರಿ ಕುಡಿಯಲು ಕೊಡಿ.
3. Statin 10 mg 30 tabs– ರಾತ್ರಿ ಮಲಗುವ ಮೊದಲು ಒಂದು ಮಾತ್ರೆ ತೆಗೆದುಕೊಳ್ಳಿ.
4. L-Thyroxin 100 mcg 100 Tabs– ಬಾಟಲಿಯಲ್ಲಿರುವ ಒಂದು ಗುಳಿಗೆಯನ್ನು ಮುಂಜಾನೆ ಎದ್ದಕೂಡಲೇ ನುಂಗಬೇಕು.

ಸಾಮಾನ್ಯವಾಗಿ ಬರೆಯುವ ಔಷಧ ಚೀಟಿಯಲ್ಲಿ ಇಷ್ಟೇ ವಿವರ ಇರುತ್ತದೆ. ಬರೆಯುತ್ತಾ ಹೋದಂತೆ ಅದೇ ರೂಢಿಯಾಗಿಬಿಡುತ್ತದೆ.

ಔಷಧದ ಚೀಟಿಯಲ್ಲಿನ ಬರವಣಿಗೆಯ ಸಮಸ್ಯೆ ನಮ್ಮ ರಾಜ್ಯ ಅಥವಾ ದೇಶಕ್ಕೆ ಸೀಮಿತವಲ್ಲ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೋಗಿಗೆ ವಿವರಿಸುವಾಗ, ಬಿಳಿಯ ಗುಳಿಗೆ ದಿನಕ್ಕೆ ಎರಡು ಸಲ, ಕೆಂಪು ಗುಳಿಗೆ ರಾತ್ರಿ ತೆಗೆದುಕೊಳ್ಳಬೇಕು ಎಂದು ವಿವರಿಸುತ್ತಾರೆ.



ಇಂದು ಪ್ರಚಲಿತವಿರುವ ಪದ್ಧತಿಯಲ್ಲಿ ರೋಗಿಗಳು ಮತ್ತು ಅವರ ಸಂಬಂಧಿಕರು ಔಷಧ ಚೀಟಿಯನ್ನು ವೈದ್ಯರಿಂದ ಪಡೆದ ಮೇಲೆ, ಅವರ ಸೂಚನೆಗಳ ಬಗ್ಗೆ ಮತ್ತೆ ಕೇಳಿಕೊಳ್ಳುತ್ತಾರೆ. ನಂತರ ತಮ್ಮದೇ ರೀತಿಯಲ್ಲಿ ಗುರುತು ಹಾಕಿಕೊಳ್ಳುತ್ತಾರೆ. ಅನೇಕ ವರ್ಷಗಳಿಂದ ನಡೆದುಬಂದ ಈ ವಿಧಾನಕ್ಕೇ ಹೊಂದಿಕೊಂಡಿದ್ದಾರೆ. ಆದರೆ ಬದಲಾವಣೆ ಜಗದ ನಿಯಮವಲ್ಲವೇ?

ಸರ್ಕಾರಿ ವೈದ್ಯರನ್ನೂ ಒಳಗೊಂಡು ಎಲ್ಲ ವೈದ್ಯರಿಗೆ ಕನ್ನಡದಲ್ಲಿ ಬರೆಯುವ ತರಬೇತಿಯನ್ನು ನಿಯಮಿತವಾಗಿ ನೀಡಿದರೆ ಅವರು ಅದನ್ನೇ ರೂಢಿ ಮಾಡಿಕೊಳ್ಳುತ್ತಾರೆ. ನಮ್ಮ ದೇಶದಲ್ಲಿಯೇ ಬೇರೆ ರಾಜ್ಯಗಳಿಗೆ ಇಲ್ಲವೇ ಹೊರ ದೇಶಗಳಿಗೆ ಹೋದರೆ ಅವರು ಅಲ್ಲಿನ ನೆಲದ ಭಾಷೆಯನ್ನು ನಾಲ್ಕಾರು ತಿಂಗಳು ಕಲಿತು ಅದರಲ್ಲಿಯೇ ವ್ಯವಹರಿಸುತ್ತಾರೆ. ಹಾಗಿರುವಾಗ, ಔಷಧ ಚೀಟಿಯನ್ನು ಕನ್ನಡದಲ್ಲಿ ಬರೆಯುವುದನ್ನು ಅಭ್ಯಾಸ ಮಾಡಿಕೊಳ್ಳುವುದು ಕಷ್ಟದ ಕೆಲಸವೇನಲ್ಲ.

ವೈದ್ಯರಿಗೆ ಕನ್ನಡದಲ್ಲಿ ಬರೆಯುವ ತರಬೇತಿಯನ್ನು ವಾರದಲ್ಲಿ ಒಂದು ದಿನ ಕೊಡುವ ರೂಢಿಯನ್ನು ಪ್ರತಿ ವೈದ್ಯ ಕಾಲೇಜು ತನ್ನ ಪಠ್ಯಕ್ರಮದಲ್ಲಿ ಅಳವಡಿಸಿಕೊಂಡರೆ, ಇನ್ನು ನಾಲ್ಕೈದು ವರ್ಷಗಳಲ್ಲಿ ಎಲ್ಲ ವೈದ್ಯರೂ ಔಷಧ ಚೀಟಿಯನ್ನು ಕನ್ನಡದಲ್ಲಿ ಬರೆಯುವುದು ಸಾಧ್ಯ. ವೈದ್ಯ ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುವುದರ ಬಗ್ಗೆ ರಾಜೀವ್ ಗಾಂಧಿ ವಿಜ್ಞಾನಗಳ ವಿಶ್ವವಿದ್ಯಾಲಯ ಈಗಾಗಲೇ ಸಮಿತಿಯೊಂದರ ಮೂಲಕ ನೀಡಿರುವ ಕಾರ್ಯವಿಧಾನವನ್ನು ಅಳವಡಿಸಿಕೊಂಡರೆ, ಯಾವ ಸಮಸ್ಯೆಯೂ ಉದ್ಭವವಾಗುವುದಿಲ್ಲ.

ವಾಚಕರ ವಾಣಿ

'ಆಡಳಿತ ಸೌಧ'ದ ಮಾಹಿತಿ ಇಲ್ಲವೆ?

ತಾಲ್ಲೂಕುಗಳಲ್ಲಿ ಇನ್ನು ಮುಂದೆ ನಿರ್ಮಿಸುವ ಮಿನಿ ವಿಧಾನಸೌಧಗಳಿಗೆ ಪ್ರಜಾಸೌಧ ಎಂದು ನಾಮಕರಣ ಮಾಡಲು ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿರುವುದಾಗಿ ವರದಿಯಾಗಿದೆ. ತಾಲ್ಲೂಕು ಕೇಂದ್ರಗಳಲ್ಲಿನ ಮಿನಿ ವಿಧಾನಸೌಧಗಳ ಹೆಸರನ್ನು ಈ ಹಿಂದಿನ ಸರ್ಕಾರದ ಆಡಳಿತಾವಧಿಯಲ್ಲಿ ತಾಲ್ಲೂಕು ಆಡಳಿತ ಸೌಧಗಳೆಂದು ಬದಲಿಸಲಾಗಿದೆ. ನಾಮಫಲಕಗಳೂ ಹೀಗೆ ಬದಲಾಗಿವೆ. ಆದಾಗ್ಯೂ, ಇಲ್ಲದಿರುವ ಮಿನಿ ವಿಧಾನಸೌಧಗಳ ಹೆಸರು ಬದಲಾಯಿಸಲು ಸಚಿವ ಸಂಪುಟ ಸಭೆ ನಿರ್ಣಯಿಸಿರುವುದು ಹಾಸ್ಯಾಸ್ಪದ ಅಲ್ಲವೆ? ಈ ವಿಷಯ ಸರ್ಕಾರಿ ಅಧಿಕಾರಿಗಳಿಗೆ ತಿಳಿಯದಿರುವುದು ಬೇಸರದ ಸಂಗತಿ.

ಲಕ್ಷ್ಮೀಕಾಂತರಾಜು ಎಂ.ಜಿ., ಮಠಗ್ರಾಮ, ಗುಬ್ಬಿ

ಕೆಪಿಎಸ್‌ಸಿ ಪ್ರಮಾದ: ಇನ್ನೆಷ್ಟು ದಿನ?

ಕರ್ನಾಟಕ ಲೋಕಸೇವಾ ಆಯೋಗದಿಂದ (ಕೆಪಿಎಸ್‌ಸಿ) ಇತ್ತೀಚಿನ ದಿನಗಳಲ್ಲಿ ಆದ ಪ್ರಮಾದಗಳು ಅಷ್ಟಿಷ್ಟಲ್ಲ. ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳಿಗೆ ನಡೆದ ಪರೀಕ್ಷೆಯಲ್ಲಿ ಆದ ಭಾಷಾಂತರದ ತಪ್ಪುಗಳಿಂದ ಉಂಟಾದ ವ್ಯತಿರಿಕ್ತ ಪರಿಣಾಮದ ಕಹಿಯು ಜನಮಾನಸದಿಂದ ಮಾಸುವ ಮುನ್ನವೇ ಆಯೋಗದ ಕಡೆಯಿಂದ ಇನ್ನೊಂದು ಪ್ರಮಾದ ಜರುಗಿದ್ದು ದುರದೃಷ್ಟಕರ. ಇದೇ 14 ಮತ್ತು 15ರಂದು ನಿಗದಿಯಾಗಿದ್ದ ಗ್ರೂಪ್ 'ಬಿ' ಹುದ್ದೆಗಳ ಪರೀಕ್ಷೆಯನ್ನು ಬರೀ 15– 20 ಗಂಟೆಗಳು ಬಾಕಿ ಇರುವಾಗ ಏಕಾಏಕಿ ಪತ್ರಿಕಾ ಪ್ರಕಟಣೆ ನೀಡಿ ಮುಂದೂಡಲಾಯಿತು. ಅಭ್ಯರ್ಥಿಗಳಲ್ಲಿ ಬಹುತೇಕರು ಪರೀಕ್ಷಾ ಕೇಂದ್ರವಿರುವ ಊರಿಗೆ ಹೋಗಲು ರೈಲು ಅಥವಾ ಬಸ್ಸಿನ ಮುಂಗಡ ಟಿಕೆಟ್ ಕಾಯ್ದಿರಿಸಿದ್ದರು. ಕೆಲವರು ಪರೀಕ್ಷಾ ಕೇಂದ್ರವಿರುವ ಊರಿಗೆ ಒಂದು ದಿನ ಮುಂಚಿತವಾಗಿಯೇ ಹೋಗಿ ವಸತಿಗೃಹಗಳಲ್ಲಿ ತಂಗಿದ್ದರು. ಆಯೋಗದ ಕೊನೆಯ ಕ್ಷಣದ ನಿರ್ಧಾರದಿಂದ ಅಭ್ಯರ್ಥಿಗಳ ಜೇಬಿಗೆ ಕತ್ತರಿ ಬಿದ್ದಂತಾಯಿತು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲೆಗಳಲ್ಲಿ ಪರೀಕ್ಷಾ ಮುಖ್ಯ ಮೇಲ್ವಿಚಾರಕರ ಹಾಜರಿಯಲ್ಲಿ ನಡೆದ ಪರೀಕ್ಷಾ ಪೂರ್ವಭಾವಿ ಸಭೆಗಳು ವ್ಯರ್ಥವಾಗಿ, ಅಧಿಕಾರಿಗಳ ಅಮೂಲ್ಯ ಸಮಯ ಹಾಳಾಯಿತು. ಪರೀಕ್ಷಾ ಕೇಂದ್ರವಾಗಿ ಗುರುತಿಸಿದ್ದ ಶಾಲಾ ಕಾಲೇಜುಗಳಲ್ಲಿ ಪರೀಕ್ಷೆ ಪೂರ್ವ ತಯಾರಿಗೆಂದು ಬಳಸಿದ್ದ ಮಾನವ ಸಂಪನ್ಮೂಲ ಪೋಲಾಯಿತು, ದೈನಂದಿನ ಪಾಠ- ಪ್ರವಚನಗಳನ್ನು ರದ್ದು ಮಾಡಲಾಗಿತ್ತು.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಹ ಅಭ್ಯರ್ಥಿಗಳಲ್ಲಿ ಹೀಗೆ ಗೊಂದಲ ಸೃಷ್ಟಿಸುವುದರಲ್ಲಿ ಕೆಪಿಎಸ್‌ಸಿ ಜೊತೆಗೆ ಪೈಪೋಟಿಗೆ ಇಳಿದಂತೆ ತೋರುತ್ತಿದೆ. ಪ್ರಾಧಿಕಾರವು ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆ ನೇಮಕಾತಿಗೆ ಸಂಬಂಧಿಸಿದ ಪರೀಕ್ಷೆಯನ್ನು ಯುಪಿಎಸ್‌ಸಿ ಮುಖ್ಯ ಪರೀಕ್ಷೆಯ ದಿನದಂದೇ ನಿಗದಿ ಮಾಡಿತ್ತು. ನಂತರ ಅಭ್ಯರ್ಥಿಗಳು ಮನವಿ ಮಾಡಿದಾಗ ಪರೀಕ್ಷಾ ದಿನಾಂಕವನ್ನು ಮರು ನಿಗದಿ ಮಾಡಿತಾದರೂ ಬೇರೊಂದು ಮುಖ್ಯ ಪರೀಕ್ಷೆಯ ದಿನದಂದೇ ನಿಗದಿಪಡಿಸಿದ್ದು ವಿಷಾದನೀಯ. ಇದು ಪ್ರಾಧಿಕಾರದ ಅಧಿಕಾರಿಗಳ ದೂರದೃಷ್ಟಿಯ ಕೊರತೆಯನ್ನು ತೋರಿಸುತ್ತದೆ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ತಯಾರಾಗುವುದರ ಜೊತೆಗೆ ಕೆಪಿಎಸ್‌ಸಿ ನೀಡುವ ಮಾನಸಿಕ ಪರೀಕ್ಷೆಗೆ ಸಹ ತಯಾರಾಗಬೇಕಾಗಿರುವುದು ಶೋಚನೀಯ. ಇಂತಹ ಜವಾಬ್ದಾರಿಯುತ ಸಂಸ್ಥೆಗಳಿಂದ ಈ ರೀತಿಯ ತಪ್ಪುಗಳು ಪುನರಾವರ್ತನೆ ಆದಲ್ಲಿ ಅಭ್ಯರ್ಥಿಗಳು ವ್ಯವಸ್ಥೆಯ ಮೇಲಿನ ನಂಬಿಕೆಯನ್ನೇ ಕಳೆದುಕೊಳ್ಳುವ ಅಪಾಯ ಇರುತ್ತದೆ. ಆಳುವವರು ಇನ್ನಾದರೂ ಅಭ್ಯರ್ಥಿಗಳ ಅಳಲನ್ನು ಆಲಿಸಿ, ಯುಪಿಎಸ್‌ಸಿ ಮಾದರಿಯಂತೆ ಒಂದು ವರ್ಷ ಮುಂಚಿತವಾಗಿಯೇ ವೇಳಾಪಟ್ಟಿಯನ್ನು ಪ್ರಕಟಿಸಬೇಕು. ಈ ಮೂಲಕ ಗೊಂದಲರಹಿತವಾಗಿ ಪರೀಕ್ಷೆ ನಡೆಸಬೇಕು.

ಸಂತೋಷ ಜಿ. ಹೆಗಡೆ, ದಾವಣಗೆರೆ

ಆ...ಹಾರ ?!

ಆಡುವ ಮಾತು
ಹಿತ ಮಿತ ಮೃದುವಾಗಿದ್ದರೆ
ಅದೇ ಮುತ್ತಿನ ಹಾರ,
ಅನುಚಿತವಾಗಿದ್ದರೆ
ಇದ್ದೇ ಇದೆಯಲ್ಲ
ಆ ಪರಪ್ಪನ
ಅಗ್ರ'ಹಾರ'!

ಮ.ಗು.ಬಸವಣ್ಣ, ಮೈಸೂರು

ಕಲಬುರಗಿಯಲ್ಲಿ ಸಭೆ: ಅನುಕರಣೀಯ ನಡೆ

ತೀರಾ ಹಿಂದುಳಿದ ಪ್ರದೇಶವಾದ ಕಲ್ಯಾಣ ಕರ್ನಾಟಕದಲ್ಲಿ ಆಡಳಿತಾತ್ಮಕ ಬದಲಾವಣೆ ತರುವ ಉದ್ದೇಶದಿಂದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಈ ಬಾರಿ ಕಲಬುರಗಿಯಲ್ಲಿ ಸಚಿವ ಸಂಪುಟ ಸಭೆ ನಡೆಸಿದ್ದು ಅನುಕರಣೀಯವಾದುದು. ಈ ವಿಭಾಗದ ಏಳು ಜಿಲ್ಲೆಗಳ ಸರ್ವಾಂಗೀಣ ಅಭಿವೃದ್ಧಿಗೆ ಇದರಿಂದ ಅನುಕೂಲವಾಗಲಿದೆ. ಇಲ್ಲಿನವರ ಬಹುದಿನಗಳ ಬೇಡಿಕೆಯಾದ ಪ್ರಾದೇಶಿಕವಾರು ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ಸರ್ಕಾರ ಒಪ್ಪಿರುವುದು ಸ್ವಾಗತಾರ್ಹ. ಅಭಿವೃದ್ಧಿ ಯೋಜನೆಗಳಿಗೆ ಸಂಬಂಧಿಸಿದಂತೆ ಹಲವು ಮಹತ್ವದ ನಿರ್ಧಾರಗಳನ್ನು ಕೈಗೊಂಡಿರುವುದು ಈ ಭಾಗದ ಜನರಲ್ಲಿ ಆಶಾಭಾವನೆ ಮೂಡಿಸಿದೆ.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ಗ್ರಂಥಾಲಯ ಅಭಿವೃದ್ಧಿ: ಗಮನ ಅಗತ್ಯ

'ಪುಸ್ತಕೋದ್ಯಮಕ್ಕೆ ಕಾಯಕಲ್ಪ' ಆಗಬೇಕು ಎಂದು ಕೇಶವ ಶರ್ಮ ಕೆ. ಅಭಿಪ್ರಾಯಪಟ್ಟಿದ್ದಾರೆ (ಚರ್ಚೆ, ಸೆ. 17). ನಿಜ, ಪ್ರತಿ ಸಾರಿ ಸರ್ಕಾರವು ಜನರಿಂದ ಗ್ರಂಥಾಲಯ ಕರ ಪಡೆಯುತ್ತದೆ. ನಾಲ್ಕೈದು ವರ್ಷಗಳಿಂದ ಹೀಗೆ ಸಂಗ್ರಹವಾಗಿರುವ ಹಣ ಸುಮಾರು ₹600 ಕೋಟಿಗೂ ಮಿಗಿಲಾಗಿದೆ. ಆದರೆ ಇತ್ತ ಸರ್ಕಾರ ಪುಸ್ತಕಗಳನ್ನು ಕೊಳ್ಳುತ್ತಿಲ್ಲ, ಅತ್ತ ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳೂ ಎಟಕುತ್ತಿಲ್ಲ. ಗ್ರಂಥಭಂಡಾರಗಳೆಂದರೆ ಜ್ಞಾನ ಭಂಡಾರಗಳು. ಮ್ಯಾಕ್ಸಿಂ ಗಾರ್ಕಿಯಂಥ ಜಾಗತಿಕ ಕಥೆಗಾರ ತಮ್ಮ ಮನೆ ಮಾಲೀಕ ಕಾರ್ ಶೆಡ್‌ನಲ್ಲಿ ಒಗೆದಿದ್ದ ಪುಸ್ತಗಳನ್ನು ಓದಿ ಜ್ಞಾನಾರ್ಜನೆ ಮಾಡಿದರಂತೆ.

ಸರ್ಕಾರ ವರ್ಷಂಪ್ರತಿ ಪುಸ್ತಕಗಳನ್ನು ಖರೀದಿಸಿದರೆ ಬರೀ ₹30 ಕೋಟಿಯಿಂದ 40 ಕೋಟಿ ಆಗಬಹುದು. ಇದರಿಂದ, ಸಾಲಸೋಲ ಮಾಡಿ ಪುಸ್ತಕಗಳನ್ನು ಪ್ರಕಟಿಸುವ ಪ್ರಕಾಶಕರ ಜೀವನೋಪಾಯಕ್ಕೆ ನೆರವಾಗುತ್ತದೆ. ಶಕ್ತಿ, ಗೃಹಲಕ್ಷ್ಮಿಯಂತಹ ಜನಪರ ಯೋಜನೆಗಳನ್ನು ಕೈಗೊಂಡಿರುವ ರಾಜ್ಯ ಸರ್ಕಾರ ಗ್ರಂಥಾಲಯವನ್ನೂ ಹೀಗೇ ಅಭಿವೃದ್ಧಿಪಡಿಸಿದರೆ ತೆರಿಗೆ ಹಣ ಸದ್ವಿನಿಯೋಗವಾಗುತ್ತದೆ. ಜ್ಞಾನಾರ್ಜನೆಗೆ 'ಕೋಶ ಓದು ದೇಶ ಸುತ್ತು' ಎಂಬ ಗಾದೆ ಮಾತಿದೆ. ಸದ್ಯ ಹೊಸ ಪುಸ್ತಕಗಳೇ ಸಿಗದಿದ್ದರೆ ಓದುವುದಾದರೂ ಹೇಗೆ? ಸರ್ಕಾರ ಈ ದಿಸೆಯಲ್ಲಿ ತುರ್ತಾಗಿ ಗಮನ ಹರಿಸಬೇಕು.

ಪ್ರೊ. ಶಿವರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲೆಬನಾನ್‌ನಲ್ಲಿ ಪೇಜರ್ ಸ್ಫೋಟ: ಹುಟ್ಟುಹಾಕಿದೆ ಹಲವು ಅನುಮಾನ

ಸಂವಹನ ಸಾಧನವೇ ಅಸ್ತ್ರವಾದಾಗ...

ಲೆಬನಾನ್‌ನಲ್ಲಿ ನಡೆದಿರುವ ಪೇಜರ್ ಸ್ಫೋಟವು ಜಗತ್ತೇ ಹುಬ್ಬೇರಿಸುವಂತೆ ಮಾಡಿದೆ. ಸ್ಫೋಟಗಳ ಹೊಣೆಯನ್ನು ಯಾರೂ ಹೊತ್ತುಕೊಂಡಿಲ್ಲವಾದರೂ ಹಿಜ್ಬುಲ್ಲಾ ಮತ್ತು ಇಸ್ರೇಲ್ ವೈರತ್ವದ ಕಾರಣ ಬಹುತೇಕರು ಇಸ್ರೇಲ್‌ನತ್ತ ಬೊಟ್ಟು ಮಾಡುತ್ತಿದ್ದಾರೆ. ಜನ ಮರೆತೇ ಹೋಗಿರುವ ಪೇಜರ್‌ಗಳನ್ನು ದಾಳಿಯ ಸಾಧನಗಳನ್ನಾಗಿ ಬಳಸಿರುವುದು ಅಚ್ಚರಿಯ ಅಂಶವಾದರೆ, ದೇಶ ದೇಶಗಳ ನಡುವಿನ ಸಂಘರ್ಷವು ಎಂತಹ ಊಹಾತೀತ ತಿರುವುಗಳನ್ನು ಪಡೆಯುತ್ತಿದೆ ಎನ್ನುವುದು ಆತಂಕಕ್ಕೆ ಕಾರಣವಾಗಿದೆ

ಪ್ರಜಾವಾಣಿ ವಾರ್ತೆ

ಲೆಬನಾನ್‌ನ ಬೈರೂತ್ ನಗರ, ಬೆಕ್ಕಾ ಕಣಿವೆ ಮತ್ತು ಸಿರಿಯಾ ದೇಶದ ಡಮಾಸ್ಕಸ್ ಸೇರಿದಂತೆ ಹಲವೆಡೆ ಮಂಗಳವಾರ ವಿಚಿತ್ರ ವಿದ್ಯಮಾನವೊಂದು ಘಟಿಸಿದೆ. ನೂರಾರು ಪೇಜರ್‌ಗಳು ಸ್ಫೋಟಗೊಂಡು ಹತ್ತಕ್ಕೂ ಹೆಚ್ಚು ಜನ ಸಾವಿಗೀಡಾಗಿರುವುದಲ್ಲದೇ, ಸಾವಿರಾರು ಮಂದಿ ಆಸ್ಪತ್ರೆ ಪಾಲಾಗಿದ್ದಾರೆ. ಇದೊಂದು ಆಕಸ್ಮಿಕ ಘಟನೆ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಬಹುತೇಕರು, ಇದು ಹಿಜ್ಬುಲ್ಲಾ ಸಂಘಟನೆಯನ್ನು ಗುರಿಯಾಗಿಸಿಕೊಂಡು ಇಸ್ರೇಲ್ ನಡೆಸಿರುವ ಯೋಜಿತ ದಾಳಿ ಎಂದು ಆರೋಪಿಸುತ್ತಿದ್ದಾರೆ. ಒಂದು ಕಾಲದ ಸಂವಹನ ಸಾಧನವಾಗಿದ್ದ ಪೇಜರ್ ಈಗ ಯುದ್ಧದ ಅಸ್ತ್ರವಾಗಿ ಮಾರ್ಪಟ್ಟಿದೆಯೇ ಎನ್ನುವ ಅನುಮಾನ ದಟ್ಟವಾಗಿದೆ.

ಲೆಬನಾನ್‌ನಲ್ಲಿ ಮಂಗಳವಾರ, ಸ್ಥಳೀಯ ಕಾಲಮಾನದ ಪ್ರಕಾರ ಮಧ್ಯಾಹ್ನ 3.45ರ ಸುಮಾರಿಗೆ ಹಲವೆಡೆ ಸರಣಿಯಾಗಿ ಪೇಜರ್‌ಗಳು ಸ್ಫೋಟಗೊಳ್ಳತೊಡಗಿದವು. ಕೆಲವರು ಸೂಪರ್ ಮಾರ್ಕೆಟ್‌ನಲ್ಲಿ ಹಣ್ಣು ಖರೀದಿಸುತ್ತಿರುವಾಗ, ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಅವರ ಜೇಬಿನಲ್ಲಿದ್ದ ಪೇಜರ್‌ಗಳು ಸ್ಫೋಟಗೊಂಡಿವೆ.

ಒಂದು ಗಂಟೆಯಲ್ಲಿ ಸರಣಿಯಾಗಿ ಸ್ಫೋಟಗಳು ಸಂಭವಿಸಿದ್ದು, ಅಲ್ಲಿನ ಜನ ಬೆರಗು ಮತ್ತು ಭಯದಿಂದ ಇದಕ್ಕೆ ಸಾಕ್ಷಿಯಾಗಿದ್ದಾರೆ.

ಬೈರೂತ್‌ನ ಮಾರುಕಟ್ಟೆಯೊಂದರಲ್ಲಿ ಹಣ್ಣು ಖರೀದಿಸುತ್ತಿದ್ದ ವ್ಯಕ್ತಿಯೊಬ್ಬರು ಪೇಜರ್ ಸ್ಫೋಟದಿಂದ ಕುಸಿದರು

ಮೊಬೈಲ್ ಯುಗ ಆರಂಭವಾಗುವುದಕ್ಕೂ ಮುಂಚೆ ಬಳಕೆಯಲ್ಲಿದ್ದ ಪೇಜರ್‌ಗಳು ಈಗ ಜನರ ನೆನಪಿನಿಂದ ಬಹುತೇಕ ಅಳಿಸಿಯೇ ಹೋಗಿವೆ. ಹೀಗಿರುವಾಗ, ಲೆಬನಾನ್ ಮತ್ತು ಸಿರಿಯಾದಲ್ಲಿ ಪೇಜರ್‌ಗಳು ಸ್ಫೋಟಗೊಂಡಿರುವುದರಿಂದ ಕನಿಷ್ಠ 12 ಮಂದಿ ಸಾವಿಗೀಡಾಗಿರುವುದಲ್ಲದೇ, ಸುಮಾರು 2,800 ಮಂದಿ ಗಾಯಗೊಂಡಿದ್ದಾರೆ. ದಾಳಿಯ ತೀವ್ರತೆ ಯಾವ ಪರಿ ಇತ್ತೆಂದರೆ, ಲೆಬನಾನ್‌ನ ಆಸ್ಪತ್ರೆಗಳಿಗೆ ಅರ್ಧ ಗಂಟೆಯಲ್ಲಿ 2,800 ಮಂದಿ ಗಾಯಾಳುಗಳು ದಾಖಲಾಗಿದ್ದಾರೆ.

ಸತ್ತವರ ಪೈಕಿ ಇಬ್ಬರು ಮಕ್ಕಳಿದ್ದಾರೆ. ಗಾಯಾಳುಗಳಲ್ಲಿ ಸುಮಾರು 300 ಮಂದಿಯ ಪರಿಸ್ಥಿತಿ ಚಿಂತಾಜನಕವಾಗಿದೆ. ಕೆಲವರ ಮುಖ ಸುಟ್ಟು ಹೋಗಿದ್ದರೆ, ಮತ್ತೆ ಕೆಲವರ ಮಿದುಳಿಗೆ ಹಾನಿಯಾಗಿದೆ ಎಂದು ಲೆಬನಾನ್ ಆರೋಗ್ಯ ಸಚಿವ ಫಿರಾಸ್ ಅಬಿಯದ್ ಹೇಳಿದ್ದಾರೆ.

ಘಟನೆ ನಡೆದ ತಕ್ಷಣವೇ ಲೆಬನಾನ್ ಮತ್ತು ಸಿರಿಯಾ ಬೊಟ್ಟು ಮಾಡಿರುವುದು ಇಸ್ರೇಲ್‌ನತ್ತ. ಇರಾನ್ ಬೆಂಬಲಿತ ಹಿಜ್ಬುಲ್ಲಾ ಸಂಘಟನೆಯನ್ನು ಗುರಿಯಾಗಿಸಿಕೊಂಡು ಇಸ್ರೇಲ್‌ನ ಸೇನೆ ಹಾಗೂ ಗುಪ್ತಚರ ಮತ್ತು ವಿಶೇಷ ಕಾರ್ಯಾಚರಣಾ ಸಂಸ್ಥೆ ಮೊಸಾದ್ ಈ ಸ್ಫೋಟಗಳನ್ನು ನಡೆಸಿವೆ ಎನ್ನುವುದು ಲೆಬನಾನ್ ಆರೋಪ. ಹಿಜ್ಬುಲ್ಲಾ ಸಂಘಟನೆಯ ಮುಖಂಡರಾದ ಅಲಿ ಅಮ್ಮಾರ್ ಮತ್ತು ಹಸನ್ ಫಲ್‌ಲಲ್ಲಾ ಅವರ ಪುತ್ರರೂ ಮೃತಪಟ್ಟವರಲ್ಲಿ ಸೇರಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅದೇ ರೀತಿ, ಸಂಘಟನೆಯ ಸದಸ್ಯರೊಬ್ಬರ ಪುತ್ರಿಯೂ ಸಾವಿಗೀಡಾಗಿದ್ದಾರೆ ಎನ್ನಲಾಗುತ್ತಿದೆ.

ಹಿಜ್ಬುಲ್ಲಾ, ಲೆಬನಾನ್‌ನಲ್ಲಿ ಪ್ರಾಬಲ್ಯ ಮತ್ತು ಪ್ರಭಾವ ಹೊಂದಿರುವ ಶಿಯಾ ಮುಸ್ಲಿಮರ ಸಂಘಟನೆಯಾಗಿದೆ. ಇಸ್ರೇಲ್ ವಿರೋಧಿ ಇರಾನ್‌ನೊಂದಿಗೆ ಹಿಜ್ಬುಲ್ಲಾ ಸಂಘಟನೆಯು ಉತ್ತಮ ಸಂಬಂಧ ಹೊಂದಿದೆ. ಇದು ಸಹಜವಾಗಿಯೇ ಇಸ್ರೇಲ್ ಸಿಟ್ಟಿಗೆ ಕಾರಣವಾಗಿದೆ. ಹಮಾಸ್, ಕಳೆದ ವರ್ಷದ ಅಕ್ಟೋಬರ್ 7ರಂದು ಗಾಜಾ ಪಟ್ಟಿಯ ಮೂಲಕ ಇಸ್ರೇಲ್ ಮೇಲೆ ದಾಳಿ ಮಾಡಿದ ನಂತರ ಹಿಜ್ಬುಲ್ಲಾ ಮತ್ತು ಇಸ್ರೇಲ್ ನಡುವಿನ ವೈರತ್ವ ಹೆಚ್ಚಾಗಿದೆ. ಗಡಿಗಳಲ್ಲಿ ಉದ್ವಿಗ್ನ ಪರಿಸ್ಥಿತಿ ತಲೆದೋರಿದೆ.

ಹಿಜ್ಬುಲ್ಲಾ ಸದಸ್ಯರು ಇಸ್ರೇಲ್ ಮೇಲೆ ದಾಳಿ ಮಾಡುವುದು, ಅದಕ್ಕೆ ಇಸ್ರೇಲ್ ರಕ್ಷಣಾ ಪಡೆಗಳು (ಐಡಿಎಫ್) ಪ್ರತಿದಾಳಿ ಮಾಡುವುದು ನಡೆಯುತ್ತಲೇ ಇದೆ. ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ನೆಲೆಗಳ ಮೇಲೆ ಇಸ್ರೇಲ್ ಸೇನೆಯು ಹಲವು ಬಾರಿ ವಾಯು ದಾಳಿ, ಟ್ಯಾಂಕ್ ಮತ್ತು ಫಿರಂಗಿಗಳ ಮೂಲಕ ದಾಳಿ ನಡೆಸಿದೆ. ಅದರಿಂದಾಗಿ ಕನಿಷ್ಠ 589 ಮಂದಿ ಸಾವಿಗೀಡಾಗಿದ್ದು, ಅವರಲ್ಲಿ ಹೆಚ್ಚಿನವರು ಹಿಜ್ಬುಲ್ಲಾ ಸದಸ್ಯರು, 137 ಮಂದಿ ನಾಗರಿಕರು ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಇತ್ತೀಚೆಗೆ ಹೇಳಿತ್ತು.

ಇನ್ನೊಂದೆಡೆ, ಗಡಿ ಸಂಘರ್ಷದಿಂದ ದೇಶದಲ್ಲಿ 25 ನಾಗರಿಕರು ಮತ್ತು 21 ಸೇನಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಇಸ್ರೇಲ್ ಹೇಳಿದೆ. ಇಷ್ಟೆಲ್ಲ ಇದ್ದರೂ ಎರಡೂ ಕಡೆಯವರು ಗಡಿ ದಾಟಿ ದಾಳಿಗೆ ಮುಂದಾಗದೇ ಎಚ್ಚರಿಕೆಯಿಂದ ಇದ್ದು, ಪೂರ್ಣ ಪ್ರಮಾಣದ ಯುದ್ಧದ ಸ್ಥಿತಿ ಉದ್ಭವಿಸದಂತೆ ನೋಡಿಕೊಂಡಿದ್ದಾರೆ.

ಜುಲೈ 27ರಂದು ಇಸ್ರೇಲ್ ಆಕ್ರಮಿತ ಗೋಲನ್ ಹೈಟ್ಸ್‌ನಲ್ಲಿ ನಡೆದಿದ್ದ ರಾಕೆಟ್ ದಾಳಿಯಲ್ಲಿ 12 ಮಂದಿ ಮಕ್ಕಳು ಮೃತಪಟ್ಟಿದ್ದರು. ಘಟನೆಗೆ ಹಿಜ್ಬುಲ್ಲಾ ಸಂಘಟನೆಯೇ ಕಾರಣ ಎಂದು ಇಸ್ರೇಲ್ ಆರೋಪಿಸಿತ್ತು. ಆದರೆ, ಹಿಜ್ಬುಲ್ಲಾ ಸಂಘಟನೆ ಇದನ್ನು ನಿರಾಕರಿಸಿತ್ತು. ಜುಲೈ 30ರಂದು ಬೈರೂತ್ ನಗರದ ಹೊರವಲಯದಲ್ಲಿ ವಾಯುದಾಳಿ ಮಾಡುವ ಮೂಲಕ ಹಿಜ್ಬುಲ್ಲಾ ಸೇನಾ ಕಮಾಂಡರ್ ಫೌದ್ ಶುಕ್ರ್ ಅವರನ್ನು ಹತ್ಯೆ ಮಾಡಿರುವುದಾಗಿ ಐಡಿಎಫ್ ಘೋಷಣೆ ಮಾಡಿತ್ತು. ಇಂತಹ ಘಟನೆಗಳು ಆಗಿಂದಾಗ್ಗೆ ನಡೆಯುತ್ತಲೇ ಇವೆ.

ತನ್ನ ವಿರೋಧಿಗಳ ಜತೆಗಿನ ಯುದ್ಧವನ್ನು ಇನ್ನಷ್ಟು ವಿಸ್ತರಿಸುವುದಾಗಿ ಪೇಜರ್ ಸ್ಫೋಟಗಳು ಸಂಭವಿಸುವ ಕೆಲವೇ ಗಂಟೆಗಳ ಮುಂಚೆ ಇಸ್ರೇಲ್ ಹೇಳಿತ್ತು. ಹೀಗಾಗಿ, ಲೆಬನಾನ್ ಮತ್ತು ಸಿರಿಯಾದಲ್ಲಿ ಪೇಜರ್ ಸ್ಫೋಟಕ್ಕೆ ಇಸ್ರೇಲ್‌ನವರೇ ಕಾರಣ ಎಂದು ಅಲ್ಲಿನವರು ಖಚಿತವಾಗಿ ನಂಬಿದ್ದು, ತಾನು ಪ್ರತೀಕಾರ ತೀರಿಸಿಕೊಳ್ಳುವುದಾಗಿ ಹಿಜ್ಬುಲ್ಲಾ ಶಪಥ ಮಾಡಿದೆ. ಆದರೆ, ಪೇಜರ್ ದಾಳಿಯ ಹೊಣೆಯನ್ನು ಇಸ್ರೇಲ್ ಹೊತ್ತುಕೊಂಡಿಲ್ಲ. ಈ ಬಗ್ಗೆ ಪ್ರತಿಕ್ರಿಯಿಸಲೂ ನಿರಾಕರಿಸಿದೆ.

ಈ ಮಧ್ಯೆ, ಪೇಜರ್ ಸ್ಫೋಟದ ಆಘಾತದಿಂದ ಹೊರಬರುವ ಮುನ್ನವೇ ಬುಧವಾರ ಲೆಬನಾನಿನಲ್ಲಿ ವಾಕಿ ಟಾಕಿಗಳು ಸ್ಫೋಟಗೊಂಡು ಸಾವು ನೋವು ಸಂಭವಿಸಿದೆ.

ಆಧಾರ: ಎಎಫ್‌ಪಿ, ಬಿಬಿಸಿ, ಸಿಎನ್‌ಎನ್, ದಿ ನ್ಯೂಯಾರ್ಕ್ ಟೈಮ್ಸ್

ನಿಗಾ ತಪ್ಪಿಸಲು ಪೇಜರ್‌ಗೆ ಮೊರೆ

ಸಂಘಟನೆ, ಅದರ ಕಾರ್ಯಾಚರಣೆ, ಯೋಜನೆ, ಕಾರ್ಯತಂತ್ರಗಳ ಬಗ್ಗೆ ಸದಾ ಗೋಪ್ಯತೆ ಕಾಪಾಡಿಕೊಳ್ಳುತ್ತಾ ಬಂದಿರುವ ಹಿಜ್ಬುಲ್ಲಾ, ಇಸ್ರೇಲ್ ತನ್ನ ಚಲನವಲನದ ಮೇಲೆ ನಿಗಾ ಇಡುವುದನ್ನು ತಪ್ಪಿಸುವುದಕ್ಕಾಗಿ ಪೇಜರ್‌ಗಳ ಬಳಕೆ ಆರಂಭಿಸಿತ್ತು ಎನ್ನಲಾಗಿದೆ. ಸ್ಮಾರ್ಟ್‌ಫೋನ್‌ಗಳನ್ನು ಬಳಸಿದರೆ ಸಂಘಟನೆಯ ಚಲನವಲನಗಳು, ಯೋಜನೆಗಳು ಶತ್ರುರಾಷ್ಟ್ರಕ್ಕೆ ತಿಳಿಯಬಹುದು ಎಂಬ ಕಾರಣಕ್ಕೆ, ಯಾರೊಬ್ಬರೂ ಸ್ಮಾರ್ಟ್‌ಫೋನ್‌ಗಳನ್ನು ಬಳಸದಂತೆ ಸಂಘಟನೆಯ ಮುಖಂಡರು, ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರಿಗೆ ಹಿಜ್ಬುಲ್ಲಾ ಮುಖ್ಯಸ್ಥ ಹಸನ್ ನಸರಲ್ಲಾಹ್ ಈ ವರ್ಷದ ಆರಂಭದಲ್ಲಿ ಕರೆ ನೀಡಿದ್ದ.

ಮೊಬೈಲ್ ಕ್ರಾಂತಿ ಆರಂಭಕ್ಕೂ ಮುನ್ನ ಸಂದೇಶಗಳ ರವಾನೆಗೆ ಬಳಸುತ್ತಿದ್ದ ಪೇಜರ್ ತಂತ್ರಜ್ಞಾನ ಈಗಿನ ಆಧುನಿಕ ಕಾಲದ ಸಂವಹನಕ್ಕೆ ಹೊಂದುವಂತಹದ್ದಲ್ಲ. ನಿರ್ದಿಷ್ಟ ವ್ಯಾಪ್ತಿಯಲ್ಲಿ ಮಾತ್ರ ಈ ವ್ಯವಸ್ಥೆ ಕಾರ್ಯಾಚರಿಸುತ್ತದೆ. ಪೇಜರ್‌ನಲ್ಲಿ ಜಿಪಿಎಸ್ ಸೌಲಭ್ಯವಿಲ್ಲ. ಮೈಕ್ರೊಫೋನ್, ಕ್ಯಾಮೆರಾ ಇಲ್ಲ. ರೇಡಿಯೊ ತರಂಗಗಳನ್ನು ಬಳಸಿಕೊಂಡು ಇದು ಕಾರ್ಯನಿರ್ವಹಿಸುತ್ತದೆ. 2000 ಇಸವಿಗೂ ಮುನ್ನ ಮತ್ತು ತುರ್ತು ಸೇವಾ ಕ್ಷೇತ್ರದಲ್ಲಿ ಇದರ ಬಳಕೆ ಹೆಚ್ಚಿತ್ತು. ತನ್ನ ಸೀಮಿತ ಕಾರ್ಯಾಚರಣೆ ಸಾಮರ್ಥ್ಯದ ಕಾರಣಕ್ಕೆ ಪೇಜರ್ ಬಹುಬೇಗ ಬಳಕೆಯಿಂದ ದೂರವಾಯಿತು.

ಪೇಜರ್‌ನಲ್ಲಿ ನಡೆಸುವ ಸಂವಹನದ ಮೇಲೆ ಮೂರನೇ ವ್ಯಕ್ತಿ ಅಥವಾ ದೇಶಕ್ಕೆ ನಿಗಾ ಇಡಲು ಸಾಧ್ಯವಿಲ್ಲ. ಹಾಗಾಗಿ ಇದು ಹೆಚ್ಚು ಸುರಕ್ಷಿತ ಎಂಬ ಕಾರಣಕ್ಕೆ ಹಿಜ್ಬುಲ್ಲಾ ಸಂಘಟನೆ ಇವುಗಳನ್ನು ಬಳಸಲು ಆರಂಭಿಸಿತ್ತು. ಅದರಲ್ಲಿ ಮಾಡುವ ಸಂವಹನವನ್ನು ಇಸ್ರೇಲ್‌ಗೆ ಆಗಲಿ ಅಥವಾ ಬೇರೆ ಯಾರಿಗೇ ಆಗಲಿ ಭೇದಿಸಲು ಸಾಧ್ಯವಿಲ್ಲ ಎಂಬುದು ಸಂಘಟನೆಯ ನಂಬಿಕೆವಾಗಿತ್ತು. ಸ್ಫೋಟವು ಅದನ್ನು ಹುಸಿಗೊಳಿಸಿದೆ. ಮಂಗಳವಾರ ಮಧ್ಯಾಹ್ನ ಸಂಘಟನೆಯ ಮುಖಂಡನಿಂದ ಪೇಜರ್‌ಗೆ ಬಂದ ಸಂದೇಶ ತೆರೆದುಕೊಳ್ಳುವುದರ ಬದಲಾಗಿ ಸಾಧನವೇ ಸ್ಫೋಟಗೊಂಡಿದೆ ಎಂದು ಹೇಳಲಾಗುತ್ತಿದೆ.

ಪೇಜರ್ ಸ್ಫೋಟ ಆಗಿದ್ದಾದರೂ ಹೇಗೆ?

ಈ ಪ್ರಶ್ನೆ ಹಿಜ್ಬುಲ್ಲಾ ಬಂಡುಕೋರರು ಸೇರಿದಂತೆ ಜಗತ್ತಿನ ಎಲ್ಲ ತಂತ್ರಜ್ಞರನ್ನು ಕಾಡುತ್ತಿದೆ. ಇದೊಂದು ಅತ್ಯಂತ ಪೂರ್ವಯೋಜಿತವಾಗಿ ನಡೆಸಿರುವ, ನಂಬಲು ಸಾಧ್ಯವಿಲ್ಲದಂತಹ ಕಾರ್ಯಾಚರಣೆ ಎಂದು ಬಹುತೇಕ ತಂತ್ರಜ್ಞರು ವಿಶ್ಲೇಷಿಸುತ್ತಿದ್ದಾರೆ.

ಪೇಜರ್‌ಗಳು ಲಿಥಿಯಂ ಬ್ಯಾಟರಿ ಹೊಂದಿದ್ದವು. ತಜ್ಞರ ಪ್ರಕಾರ, ಲಿಥಿಯಂ ಬ್ಯಾಟರಿಗಳು ಸ್ಫೋಟಗೊಳ್ಳುವುದು ವಿರಳ. ಬ್ಯಾಟರಿ ಹೆಚ್ಚು ಬಿಸಿಯಾದರೆ, ಹೊಗೆ ಕಾಣಿಸಿಕೊಂಡು ಬೆಂಕಿ ಹತ್ತಿಕೊಳ್ಳುತ್ತದೆ. ಮಂಗಳವಾರ ಲೆಬನಾನ್‌ನಲ್ಲಿ ಜನರ ಬಳಿ ಇದ್ದ ಪೇಜರ್‌ಗಳು ಏಕಾಏಕಿ ಸ್ಫೋಟಗೊಂಡಿರುವುದು ವಿಡಿಯೊ ದೃಶ್ಯಾವಳಿಗಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಸಾಧನದಲ್ಲಿ ಸ್ಫೋಟಕಗಳನ್ನು ಅಳವಡಿಸಿದ್ದರೆ ಮಾತ್ರ ಸ್ಫೋಟವಾಗವಾಗಬಹುದು, ಇಲ್ಲದಿದ್ದರೆ ಸಾಧ್ಯವೇ ಇಲ್ಲ ಎಂಬುದು ತಜ್ಞರ ವಾದ.

ಪೇಜರ್‌ಗಳಿಗೆ ಸಂದೇಶ ಬಂದ ನಂತರ ಅವು ಏಕಾಏಕಿ ಸ್ಫೋಟಗೊಂಡಿವೆ. ಪೂರೈಕೆ ಆಗುವುದಕ್ಕೆ ಮೊದಲೇ (supply chain attack) ಪೇಜರ್‌ಗಳಲ್ಲಿ ಸ್ಫೋಟಕ ಅಳವಡಿಸಿರುವ ಅನುಮಾನ ವ್ಯಕ್ತವಾಗಿದೆ. ಅಂದರೆ, ಸಂಘಟನೆಗೆ ಪೇಜರ್‌ಗಳು ಪೂರೈಕೆಯಾಗುವುದಕ್ಕೂ ಮೊದಲೇ, ತಯಾರಿಕಾ ಅಥವಾ ಸಾಗಣೆಯ ಹಂತದಲ್ಲಿ ಮೂರನೇ ವ್ಯಕ್ತಿ/ದೇಶ/ಕಂಪನಿಯು ಅವುಗಳಲ್ಲಿ ಸ್ಫೋಟಕ ವಸ್ತು ಅಳವಡಿಸಿರಬಹುದು. ಸ್ಫೋಟಕವು ಮೂರರಿಂದ ಐದು ಗ್ರಾಂಗಳಷ್ಟೇ ತೂಕ ಇದ್ದಿರಬಹುದು. ರಿಮೋಟ್ ತಂತ್ರಜ್ಞಾನದ ಮೂಲಕ ರೇಡಿಯೊ ಸಂಕೇತಗಳನ್ನು ಬಳಸಿಕೊಂಡು ಪೇಜರ್‌ಗಳನ್ನು ಸ್ಫೋಟಿಸಿರಬಹುದು ಎಂಬ ವಿಶ್ಲೇಷಣೆಯನ್ನು ತಂತ್ರಜ್ಞರು ಮಾಡುತ್ತಿದ್ದಾರೆ.

ಈ ವರ್ಷದ ಫೆಬ್ರುವರಿಯ ನಂತರ ಹಿಜ್ಬುಲ್ಲಾ ಸದಸ್ಯರು ಪೇಜರ್‌ಗಳನ್ನು ಬಳಸಲು ಆರಂಭಿಸಿದ್ದರು ಎನ್ನಲಾಗುತ್ತಿದೆ. ಆರು ತಿಂಗಳ ಹಿಂದೆ ಸಂಘಟನೆಯು 1,000 ಪೇಜರ್‌ಗಳನ್ನು ಖರೀದಿಸಿತ್ತು. ಮಂಗಳವಾರ ಸ್ಫೋಟಗೊಂಡ ಪೇಜರ್‌ಗಳೆಲ್ಲ ಹೊಸದಾಗಿ ಖರೀದಿಸಿದಂಥವು. ಈವರೆಗೂ ಅವು ಚೆನ್ನಾಗಿ ಕೆಲಸ ಮಾಡಿದ್ದವು.

ಸ್ಫೋಟಗೊಂಡ ಪೇಜರ್‌ಗಳ ಅವಶೇಷ

ಸ್ವಿಚ್‌ಆಫ್ ಆಗಿದ್ದ ಪೇಜರ್‌ಗಳು ಸ್ಫೋಟಗೊಂಡಿಲ್ಲ. ಸ್ಫೋಟಗೊಳ್ಳದ ಪೇಜರ್‌ಗಳನ್ನು ಹಿಜ್ಬುಲ್ಲಾ ಸಂಘಟನೆಯು ಪರಿಶೀಲನೆಗೆ ಒಳಪಡಿಸುತ್ತಿದೆ ಎಂದು ವರದಿಯಾಗಿದೆ.

ಸ್ಫೋಟಗೊಂಡಿರುವುದು ತೈವಾನಿನ ಅಪೋಲೋ ಗೋಲ್ಡ್ ಕಂಪನಿಯ ಪೇಜರ್. ಆದರೆ, ಈ ಪೇಜರ್‌ಗಳನ್ನು ತಾನು ತಯಾರಿಸಿಲ್ಲ ಎಂದು ಕಂಪನಿ ಹೇಳಿಕೊಂಡಿದೆ. ಹಂಗೆರಿಯ ಬಿಎಸಿ ಕನ್ಸಲ್ಟಿಂಗ್ ಕೆಎಫ್‌ಟಿ ಕಂಪನಿ ಇದನ್ನು ತಯಾರಿಸಿದ್ದು, ತನ್ನ ಬ್ರ್ಯಾಂಡ್ ಹೆಸರನ್ನು ಬಳಸಲು ಅನುಮತಿ ನೀಡಿದ್ದಾಗಿ ಹೇಳಿದೆ. ಹಂಗೆರಿಯು ತನ್ನ ನೆಲದಲ್ಲಿ ಪೇಜರ್ ತಯಾರಿಸಿಲ್ಲ ಎಂದಿದೆ.

ಬಿಡುಗಡೆಗೆ ಸಜ್ಜಾಗುತ್ತಿದೆ ಫುಲ್ ಮೀಲ್ಸ್

ಲಿಖಿತ್ ಶೆಟ್ಟಿ, ತೇಜಸ್ವಿನಿ ಶರ್ಮ, ಖುಷಿ ರವಿ

‘ಸಂಕಷ್ಟಕರ ಗಣಪತಿ’, ‘ಫ್ಯಾಮಿಲಿ ಪ್ಯಾಕ್’, ‘ಅಬ್ಬಬ್ಬ’ ಸಿನಿಮಾ ಖ್ಯಾತಿಯ ನಟ ಲಿಖಿತ್ ಶೆಟ್ಟಿ ನಟಿಸಿ ನಿರ್ಮಿಸುತ್ತಿರುವ ‘ಫುಲ್ ಮೀಲ್ಸ್’ ಚಿತ್ರ ಬಿಡುಗಡೆಗೆ ಸಜ್ಜಾಗುತ್ತಿದೆ.

ಇತ್ತೀಚೆಗೆ ಚಿತ್ರದ ಪೋಸ್ಟರ್ ಅನ್ನು ಚಿತ್ರತಂಡ ಬಿಡುಗಡೆ ಮಾಡಿದ್ದು, ತ್ರಿಕೋನ ಪ್ರೇಮಕಥೆ ಹೊಂದಿರುವ ಸಿನಿಮಾದಲ್ಲಿ ನಾಯಕರಾಗಿ ಲಿಖಿತ್ ಶೆಟ್ಟಿ, ನಾಯಕಿಯರಾಗಿ ತೇಜಸ್ವಿನಿ ಶರ್ಮ ಮತ್ತು ಖುಷಿ ರವಿ ನಟಿಸಿದ್ದಾರೆ. ತೇಜಸ್ವಿನಿ ಶರ್ಮ ಚಿತ್ರದಲ್ಲಿ ಮೇಕಪ್ ಆರ್ಟಿಸ್ಟ್ ಪಾತ್ರ ಮಾಡಿದ್ದಾರೆ. ‘ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸ ಬಹುತೇಕ ಪೂರ್ಣಗೊಂಡಿದ್ದು, ಹಿನ್ನೆಲೆ ಸಂಗೀತದ ಕೆಲಸ ನಡೆಯುತ್ತಿದ್ದು, ವರ್ಷಾಂತ್ಯದೊಳಗೆ ತೆರೆಗೆ ಬರಲಿದೆ’ ಎಂದಿದೆ ಚಿತ್ರತಂಡ.

ವೆಡ್ಡಿಂಗ್ ಫೋಟೋಗ್ರಾಫರ್ ಸುತ್ತ ಸುತ್ತುವ ಕಥಾಹಂದರವನ್ನು ಹೊಂದಿರುವ ಈ ಸಿನಿಮಾವನ್ನು ಚಿತ್ರದುರ್ಗದ ಎನ್.ವಿನಾಯಕ ನಿರ್ದೇಶಿಸಿದ್ದಾರೆ. ಇದು ಇವರ ಚೊಚ್ಚಲ ಸಿನಿಮಾ. ಲಿಖಿತ್ ಶೆಟ್ಟಿ ಫಿಲ್ಮ್ಸ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣವಾಗಿದೆ. ಚಿತ್ರಕ್ಕೆ ಹರೀಶ್ ಗೌಡ ಸಂಭಾಷಣೆ, ಮನೋಹರ್ ಜೋಷಿ ಛಾಯಾಚಿತ್ರಗ್ರಹಣ, ಗುರುಕಿರಣ್ ಸಂಗೀತ, ದೀಪು ಎಸ್. ಕುಮಾರ್ ಸಂಕಲನ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನ ಹಾಗೂ ಅರ್ಜುನ್ ರಾಜ್ ಸಾಹಸ ನಿರ್ದೇಶನವಿದೆ. ರಂಗಾಯಣ ರಘು, ಸೂರಜ್, ವಿಜಯ್ ಚಂಡೂರ್, ರವಿಶಂಕರ್ ಗೌಡ, ರಾಜೇಶ್ ನಟರಂಗ, ಸುಜಯ್ ಶಾಸ್ತ್ರಿ, ಚಂದ್ರಕಲಾ ಮೋಹನ್, ಹೊನ್ನವಳ್ಳಿ ಕೃಷ್ಣ, ರಮೇಶ್ ಪಂಡಿತ್, ಚೇತನ್ ದುರ್ಗಾ, ನಾಗೇಂದ್ರ ಅರಸ್, ಮೂಗು ಸುರೇಶ್ ಸೇರಿದಂತೆ ದೊಡ್ಡ ತಾರಾಗಣವೇ ಇದೆ. ❖

‘ಗ್ಯಾಂಗ್ಸ್ ಆಫ್ ಯುಕೆ’ಯಲ್ಲಿ ರವಿ ಶ್ರೀವತ್ಸ

‘ಡೆಡ್ಲಿ ಸೋಮ’, ‘ಮಾದೇಶ’ ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ್ದ ರವಿ ಶ್ರೀವತ್ಸ ಇದೀಗ ತಮ್ಮದೇ ನಿರ್ಮಾಣ ಸಂಸ್ಥೆ ಮೂಲಕ ಉತ್ತರ ಕರ್ನಾಟಕದ ಕಥೆಯುಳ್ಳ ‘ಗ್ಯಾಂಗ್ಸ್ ಆಫ್ ಯುಕೆ’ ಸಿನಿಮಾವನ್ನು ಪೂರ್ಣಗೊಳಿಸಿದ್ದಾರೆ. ಇತ್ತೀಚೆಗಷ್ಟೇ ಚಿತ್ರದ ಶೀರ್ಷಿಕೆ ಹಾಗೂ ರವಿ ಶ್ರೀವತ್ಸ ಅವರ ‘ಡೆಡ್ಲಿ ಆರ್ಟ್ಸ್’ ಸಂಸ್ಥೆಯ ಲಾಂಛನ ಬಿಡುಗಡೆ ಕಾರ್ಯಕ್ರಮ ನಡೆಯಿತು.

‘2018 ರಲ್ಲಿ ಮಾಡಿಕೊಂಡಿದ್ದ ಕಥೆಯಿದು. ನಿರ್ಮಾಪಕ ಕೆ.ವಿ.ರಾಜು ಬಳಿಕ ಎಂ.ಎಸ್. ರಮೇಶ್ ನನಗೆ ಜೊತೆಯಾದರು. ಚಿತ್ರದಲ್ಲಿ ಬಹುತೇಕ ಹೊಸಬರೇ ಇದ್ದಾರೆ. ಏಪ್ರಿಲ್‌ನಲ್ಲಿ ಚಿತ್ರೀಕರಣ ಪ್ರಾರಂಭಿಸಿದೆವು. ಕಳೆದ ವಾರ ಚಿತ್ರೀಕರಣ ಪೂರ್ಣಗೊಂಡಿದೆ. ಬಾಗಲಕೋಟೆಯ ಪಿಲ್ಲಾರಿ ಫಾಲ್ಸ್‌ನಲ್ಲಿ ನಡೆದ ಘಟನೆ ಇಟ್ಟುಕೊಂಡು ಮಾಡಿದ ಚಿತ್ರಕಥೆಯಿದು. ರಕ್ತ ತನ್ನ ಕುರುಹನ್ನು ಬಿಟ್ಟು ಹೋಗುತ್ತದೆ, ಜಿದ್ದು ಒಬ್ಬರಿಂದ ಒಬ್ಬರಿಗೆ ವರ್ಗಾವಣೆಯಾಗುತ್ತದೆ ಎಂಬುದು ಚಿತ್ರದ ಪರಿಕಲ್ಪನೆ. ‘ಉತ್ತರ ಕರ್ನಾಟಕದ ಹತ್ಯಾಕಾಂಡ’ ಎಂಬ ಟ್ಯಾಗ್‌ಲೈನ್ ಈ ಚಿತ್ರಕ್ಕಿದೆ’ ಎಂದು ಚಿತ್ರದ ಕುರಿತು ಮಾಹಿತಿ ನೀಡಿದರು.

ಕೆ.ವಿ.ರಾಜು ಅವರ ಪುತ್ರ ಅಮೋಘ್ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಒರಟ ಪ್ರಶಾಂತ್, ಜ್ಯೋತಿ ಶೆಟ್ಟಿ, ಕೋಟೆ ಪ್ರಭಾಕರ್, ಪದ್ಮಾ ವಾಸಂತಿ ಮೊದಲಾದವರು ತಾರಾಗಣದಲ್ಲಿದ್ದಾರೆ. ಎಲ್. ಎನ್. ರೆಡ್ಡಿ, ಎಂ.ಎಸ್.ರಮೇಶ್ ಬಂಡವಾಳ ಹೂಡಿದ್ದಾರೆ.

ಶಿಶುನಾಳ ಷರೀಫರ 8 ಗೀತೆಗಳ ತುಣುಕನ್ನು ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಒಟ್ಟು 9 ಹಾಡುಗಳಿದ್ದು, ಸಾಧು ಕೋಕಿಲ ಸಂಗೀತವಿದೆ. ಡಿಸೆಂಬರ್ ಅಥವಾ ಜನವರಿಗೆ ಚಿತ್ರ ಬಿಡುಗಡೆ ಮಾಡಲು ತಂಡ ಯೋಜನೆ ಹಾಕಿಕೊಂಡಿದೆ. ❖


ರವಿ ಶ್ರೀವತ್ಸ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ ಸಿಪಿಎಂ ಮುಖಂಡ ಸೀತಾರಾಮ್ ಯೆಚೂರಿ ಅವರು ಸೆಪ್ಟೆಂಬರ್ 12ರಂದು ಮೃತಪಟ್ಟರು. ಮೃತದೇಹವನ್ನು ಅವರು ಓದಿದ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯಕ್ಕೆ ಶವಪೆಟ್ಟಿಗೆಯಲ್ಲಿ ಒಯ್ದು, ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಅಂತಿಮ ನಮನ ಸಲ್ಲಿಸಿದ್ದರು. ಶವಪೆಟ್ಟಿಗೆಯಲ್ಲಿ ಮೃತದೇಹವನ್ನು ಇಡಲಾಗಿರುವ ಫೋಟೊ ಮತ್ತು ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿರುವ ಕೆಲವರು, ಯೆಚೂರಿ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಾಗಿದ್ದು, ಹಿಂದೂಗಳನ್ನು ದ್ವೇಷಿಸುತ್ತಿದ್ದರು; ಯೆಚೂರಿ ಅವರು ತಮ್ಮ ರಾಜಕೀಯ ಜೀವನದಲ್ಲಿ ಧರ್ಮವನ್ನು ಮುಚ್ಚಿಟ್ಟಿದ್ದರು ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.

✓ ರಾಜ್ಯಸಭಾ ಸದಸ್ಯರಾಗಿದ್ದ ಯೆಚೂರಿ ಅವರು 2017ರಲ್ಲಿ ತಮ್ಮ ವಿದಾಯ ಭಾಷಣದ ವೇಳೆ ತಾವು ಹುಟ್ಟಿದ ಜಾತಿಯ ಬಗ್ಗೆ ಹೇಳಿಕೊಂಡಿದ್ದರು. ತಾವು ಮದ್ರಾಸ್‌ನಲ್ಲಿ (ಈಗಿನ ಚೆನ್ನೈ) ತೆಲುಗು ಭಾಷಿಕ ಬ್ರಾಹ್ಮಣರ ಮನೆಯಲ್ಲಿ ಹುಟ್ಟಿ, ನಂತರ ಆಂಧ್ರಪ್ರದೇಶದ ಗುಂಟೂರಿಗೆ, ಆನಂತರ ಹೈದರಾಬಾದ್‌ಗೆ ಸ್ಥಳಾಂತರಗೊಂಡಿದ್ದಾಗಿ ತಿಳಿಸಿದ್ದರು. ತಮ್ಮ ಅಂತರ್ಜಾತಿ ಮದುವೆ ಬಗ್ಗೆಯೂ ಹೇಳಿಕೊಂಡಿದ್ದರು. ಇದರಿಂದ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಯೆಚೂರಿ ಅವರ ಕುಟುಂಬವು ಮೃತದೇಹವನ್ನು ಏಮ್ಸ್‌ಗೆ ದಾನ ಮಾಡಿದ್ದರಿಂದ ಅದನ್ನು ಶವಪೆಟ್ಟಿಗೆಯಲ್ಲಿ ಇಡಲಾಗಿತ್ತು ಎಂದು ಏಮ್ಸ್ ಮೂಲಗಳು ತಿಳಿಸಿವೆ. ಹೀಗಾಗಿ, ಯೆಚೂರಿ ಅವರು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದವರು ಎನ್ನುವುದು ಸಂಪೂರ್ಣ ಸುಳ್ಳು ಸುದ್ದಿ. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದೇವರು ಹಚ್ಚಿದ ದೀಪಗಳು!

ನುಡಿ ಬೆಳಗು — ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ 26

ಕೆಲವು ತಾಯಂದಿರು ತಮಗೆ ಮೂರು ಮಕ್ಕಳು ಹೆಣ್ಣಾದವೆಂದು ಚಿಂತಿ ಮಾಡ್ತಾರ. ಯಾಕ ಹೆಣ್ಣು ಆಗಬಾರದ? ಅದರಾಗೇನು ತಪ್ಪೈತಿ? ‘ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು. ಹೆಣ್ಣಲ್ಲವೆ ನಮ್ಮನ್ನೆಲ್ಲಾ ಹಡೆದ ತಾಯಿ, ಹೆಣ್ಣಲ್ಲವೆ ಪೊರೆಯುವವಳು’ ಎಂದು ಹೇಳ್ತಾಳ ಸಂಚಿ ಹೊನ್ನಮ್ಮ.

ಮಕ್ಕಳನ್ನು ಹೆಣ್ಣು ಗಂಡು ಅಂತೆಲ್ಲಾ ಭೇದ ಮಾಡಬಾರದು. ಮಕ್ಕಳು ಅಂತಷ್ಟೇ ಸ್ವೀಕರಿಸಬೇಕು. ಆಸ್ಟ್ರೇಲಿಯಾದಂತಹ ದೇಶಗಳಲ್ಲಿ ಇಂತಹ ಭೇದ ಭಾವ ತೆಗೆದಿದ್ದಾರೆ. ಅಲ್ಲಿ ಮಕ್ಕಳು ಅಂದರೆ ಮಕ್ಕಳು ಅಷ್ಟೆ. ಮಕ್ಕಳು ಅಂದರೆ ದೀಪ ಇದ್ದಂಗೆ. ದೀಪಕ್ಕೆ ಹೆಣ್ಣು ದೀಪ, ಗಂಡು ದೀಪ ಅಂತಿಲ್ಲ. ಹಾಗೆಯೇ ಮಕ್ಕಳಿಗೂ. ಮಕ್ಕಳು ಅಂದರೆ ದೇವರು ಹಚ್ಚಿದ ದೀಪಗಳು.

ಮನುಷ್ಯಗ ಭಯ ಎಲ್ಲೈತಿ ಅಂದರ ತೀರಾ ಮುಂದಾಲೋಚನೆಯಲ್ಲೈತಿ. ನಾಳೆ, ನಾಡಿದ್ದು ಏನಾಗತೈತೋ ಅಂತ ಕಲ್ಪನೆ ಮಾಡತಾನಲ್ಲ, ಆ ಕಲ್ಪನೆಯೊಳಗೆ ಭಯ ಐತಿ. ಹಿಂದೆ ನಡೆದಿದ್ದನ್ನು ನೆನಪಿಸಿಕೊಂಡು ಅಳತೀವಲ್ಲ ಅದರೊಳಗೆ ದುಃಖ ಐತಿ. ನಾಳೆ ಅನ್ನುವುದು ಇಲ್ಲ. ಇವತ್ತು ನಾಳೆ ಅಂತೀರಿ. ಬೆಳಕು ಹರಿದ ತಕ್ಷಣ ಅದಕ್ಕೊಂದು ನಾಳೆ ಹುಟ್ಟಿಕೊಳ್ಳುತೈತಿ. ಅದಕ್ಕೆ ಇವತ್ತು ದೇವರು ಏನು ಕೊಟ್ಟಾನ ಅದರಾಗ ಸಂತೋಷವಾಗಿರಬೇಕು.

ಬಹಳ ಜನರಿಗೆ ಅನಸ್ತಿರತೈತಿ ನಾವು ಬಡವರಿದೀವಿ, ಅವ್ರು ಶ್ರೀಮಂತರು ಅಂತ. ಅವರ ಮನ್ಯಾಗ ಟಿವಿ, ಫ್ರಿಜ್ ಅದಾವ, ನಮ್ಮೊನೆಯೊಳಗ ಇಲ್ಲ ಅಂತ. ನಾವು ಗುಡಿಸಲಿನಲ್ಲಿದೀವಿ, ಅವರು ಮಹಡಿಯಲ್ಲಿದ್ದಾರೆ ಅಂತ. ಆದರೆ ಇದನ್ನು ಹೀಂಗ ನೋಡಬಾರದು. ಫ್ರಿಜ್ ಇದ್ದರ ಆಹಾರವನ್ನು 3-4 ದಿನ ಅದರಲ್ಲಿ ಇಟ್ಟುಕೊಂಡು ತಿನ್ತಾರ, ನಾವು ತಾಜಾ ತಾಜಾ ಮಾಡಕೊಂಡು ತಿನ್ತೀವಿ. ಅದಕ್ಕೆ ನಾವೇ ಶ್ರೀಮಂತರು ಅನಕೋಬೇಕು. ಜೀವನದಲ್ಲಿ ಇಂಥ ದೃಷ್ಟಿಕೋನ ಇರಬೇಕು. ಅದು ಖುಷಿ ಕೊಡತೈತಿ.

ಹೊಲದಲ್ಲಿ ಯಾರೂ ಕಳೆ ಬೆಳೆಯೋದಿಲ್ಲ. ಬಿತ್ತಿದ್ದು ಬೆಳೆ ಆದರೂ ಕಳೆ ಬೆಳೀತೈತಿ. ಜಾಣ ರೈತ ಏನು ಮಾಡ್ತಾನೆ ಅಂದರ ಕಳೆ ತೆಗೀತಾನೆ ಬೆಳೆ ಉಳಿಸ್ಕೊತಾನೆ. ಹಾಂಗೆ ಜೀವನದಲ್ಲೂ ಕೆಟ್ಟದ್ದು ಒಳ್ಳೇದು ಎಲ್ಲಾ ಇರತೈತಿ. ಜಾಣ ಮನುಷ್ಯ ಜೀವನದ ಕೆಟ್ಟದ್ದು ಬಿಟ್ಟು ಚಲೋದು ಸ್ವೀಕಾರ ಮಾಡ್ತಾನೆ. ಅದು ಜೀವನ.

ಗ್ರಾಮ ಗ್ರಾಮಗಳಲ್ಲಿ ನಾಗಪ್ಪನ ಕಲ್ಲು ಇರ್ತಾವಲ್ಲ. ಒಮ್ಮೆ ನಾಗಪ್ಪ ಹನುಮಪ್ಪಗೆ ಕೇಳಿದನಂತೆ. ‘ನಿನಗೆ ಎಷ್ಟೊಂದು ಜನ ಬರ್ತಾರೆ. ಆದರೆ ನನಗೆ ಯಾರೂ ಬರಲ್ಲ. ವರ್ಷದಲ್ಲಿ ಒಮ್ಮೆ ಪಂಚಮಿಗೆ ಬಂದ್ರೆ ಮುಗೀತು ನಂತರ ಯಾರೂ ಬರೋದೇ ಇಲ್ಲ. ನಿನಗಾದರೆ ಭಕ್ತರ ಕ್ಯೂ ಯಾವಾಗಲೂ ಇರ್ತದೆ ಯಾಕೆ’ ಎಂದು. ಅದಕ್ಕೆ ಹನುಮಪ್ಪ ‘ಅವರು ನನ್ನ ನೋಡಾಕೆ ಬರೋದಿಲ್ಲ. ಕೈಲಿ ಒಂದು ಲಿಸ್ಟ್ ಹಿಡಕೊಂಡೇ ಬಂದಿರ್ತಾರ, ಕೇಳಿದ್ದೇ ಕೇಳ್ತಾರ. ಅದಕ್ಕೆ ನಾನು ಅವರನ್ನು ನೋಡೋದೇ ಇಲ್ಲ’ ಅಂತಾನೆ. ಹನುಮಪ್ಪಗೆ ಗೊತ್ತು ಯಾರೂ ತನ್ನ ಮೇಲಿನ ಪ್ರೀತಿಗೆ ಬಂದಿಲ್ಲ ಅಂತ. ತಮಗೆ ಬೇಕು ಅಂತ ಬಂದಾರ. ಕಷ್ಟಪಡದೆ ಫಲ ಬೇಕು ಎಂದು ಬಂದಾರ ಅಂತ. ಅದಕ್ಕ ಹನುಮಪ್ಪ ಯಾವಾಗಲೂ ಮುಖ ತಿರುಗಿಸಿ ನಿಂತಿರ್ತಾನ. ಮಕ್ಕಳಿಗೆ ಕೆಲಸ ಮಾಡೋದ ಕಲಿಸಿ. ಫಲ ತಾನಾಗಿಯೇ ಬರ್ತೈತಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಸೆಪ್ಟೆಂಬರ್ 19, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ದ್ವಿತೀಯ ಗಂ. 24-40 ನಕ್ಷತ್ರ: ಉತ್ತರಾಭಾದ್ರಾ ಗಂ. 08-04 ನಂತರ ರೇವತಿ 29-15, ಯೋಗ: ವೃದ್ಧಿ ಗಂ. 19-19 ಕರಣ: ತೈತಿಲ ಗಂ. 14-29, ಕನ್ಯಾ ಮಾಸದ 03 ನೇ ದಿನ, ಮಳೆನಕ್ಷತ್ರ: ಉತ್ತರ-ಫಲ್ಗುಣಿ 2. ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-23 ಸೂರ್ಯಾಸ್ತ : 06-25
ಮುಸ್ಲಿಂ ದಿನಾಂಕ : 15 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 8, 10

ಮೇಷ: ದೈವಬಲ ಒದಗುವುದರಿಂದ ಪ್ರಯತ್ನ ಕಾರ್ಯಗಳೆಲ್ಲವೂ ಶುಭ ಫಲಗಳನ್ನೇ ನೀಡಲಿದೆ. ತಪ್ಪುಗಳು ಪುನರಾವರ್ತನೆಯಾಗದಂತೆ ಗಮನಿಸಿ. ಸದಾ ತಾಳ್ಮೆಯಿಂದ ವ್ಯವಹರಿಸಿ.

ವೃಷಭ: ಭಾವನಾ ಪ್ರಪಂಚ ಈ ದಿನ ಸೆಳೆಯುತ್ತದೆ. ಕೆಲಸ ಆರಂಭಿಸುವ ಮುನ್ನ ಆಮೂಲಾಗ್ರ ಚಿಂತನೆ ಅಗತ್ಯ ಎಂಬುದನ್ನು ತಿಳಿಯಿರಿ. ವ್ಯವಹರಿಸುವಾಗ ಬುದ್ಧಿವಂತಿಕೆ ಅಗತ್ಯ.

ಮಿಥುನ: ಮನಸ್ಸು ಬೇಡದ ದಿಕ್ಕಿನಲ್ಲಿ ಹರಿಯುವುದನ್ನು ತಡೆಗಟ್ಟುವ ಬಗ್ಗೆ ಅಭ್ಯಾಸ ನಡೆಸಿ. ಮಕ್ಕಳ ವರ್ತನೆ ಸಂತೋಷ ತಂದುಕೊಡಲಿದೆ. ವೈವಾಹಿಕ ಮಾತುಕತೆಗಳು ಪ್ರಗತಿ ಪಥದತ್ತ ಸಾಗುವುದು.

ಕರ್ಕಾಟಕ: ಮಕ್ಕಳು ಮಾಡುವ ಸಣ್ಣಪುಟ್ಟ ತಪ್ಪುಗಳನ್ನು ಕ್ಷಮಿಸಿ ತಿಳಿಹೇಳಿ. ಶಿಕ್ಷಿಸಬೇಡಿ. ನೀವು ಇತರರೆಲ್ಲರಿಗಿಂತ ಭಿನ್ನ ಹಾಗೂ ಧನಾತ್ಮಕ ನಿರ್ಧಾರಗಳನ್ನು ತಗೆದುಕೊಳ್ಳುವಿರಿ.

ಸಿಂಹ: ವಿವಾದ ಗೊಡವೆಗಳಿಂದ ದೂರ ಉಳಿಯುವಂಥ ನಿರ್ಧಾರ ಕಾಪಾಡಿಕೊಳ್ಳುವಲ್ಲಿ ಅನುಕೂಲವಾಗುತ್ತದೆ. ಮನೆ ಕಟ್ಟುವ ಸಲುವಾಗಿ ಹಣಕಾಸಿನ ವ್ಯವಸ್ಥೆ ಮಾಡಲು ತಂದೆಯವರಿಗೆ ಸಹಕರಿಸುವಿರಿ.

ಕನ್ಯಾ: ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪಾಠ ಕಲಿಯುವಂತಾಗಲಿದೆ. ತೊಂದರೆಗಳೆಲ್ಲಾ ಒಂದೊಂದಾಗಿ ಉಪಶಮನಗೊಳ್ಳುತ್ತಾ ಅಭಿವೃದ್ಧಿ ತೋರಿ ಬರುವುದು.

ತುಲಾ: ಕೆಲಸ ಕಾರ್ಯಗಳಿಗೆ ಅಡ್ಡಿ ಆತಂಕಗಳು ಇರುವುದಿಲ್ಲ. ಆಲಸ್ಯತನ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ರಾಜಕೀಯದಲ್ಲಿನ ಬದಲಾವಣೆಯ ಲಾಭ ಪಡೆಯುವಿರಿ.

ವೃಶ್ಚಿಕ: ಋಣಬಾಧೆ, ಖರ್ಚು-ವೆಚ್ಚ, ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಹೆಚ್ಚಿನ ಜಾಗ್ರತೆ ವಹಿಸಿರಿ. ಕೆಲಸಗಳ ಬಗ್ಗೆ ಅನುಭವಸ್ಥರೊಂದಿಗೆ ಮಾತುಕತೆ ನಡೆಸುವುದರಿಂದ ತಿಳಿವಳಿಕೆ ವೃದ್ಧಿ.

ಧನು: ಕಾನೂನಾತ್ಮಕ ಹೋರಾಟ ಅಥವಾ ಕೋರ್ಟ್ ವ್ಯವಹಾರಗಳ ಓಡಾಟಕ್ಕೆ ಮುಕ್ತಾಯ ಸಿಗಲಿದೆ. ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರುವುದು. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನಾಗಲಿದೆ.

ಮಕರ: ಅಕ್ಕಪಕ್ಕದ ಮನೆಯವರ ಅಥವಾ ಸ್ನೇಹಿತರ ಹೊಗಳಿಕೆಯ ಮಾತುಗಳಿಗೆ ಮರುಳಾಗಬೇಡಿ. ಕೃಷಿ ಕಾರ್ಮಿಕರಿಗೆ ಕೆಲಸದ ಒತ್ತಡ ಉಂಟಾಗುವುದು. ಪ್ರಯತ್ನಗಳು ಯಾವುದೇ ಕಾರಣಕ್ಕೂ ನಿಷ್ಫಲವೆನಿಸುವುದಿಲ್ಲ.

ಕುಂಭ: ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆಹರಿಯುವುದು. ನೆಮ್ಮದಿ ಸಿಗಲಿದೆ. ಮನಸ್ಥಿತಿಯು ಯಾರೊಂದಿಗೂ ಹೆಚ್ಚಾಗಿ ಬೆರೆಯದೆ, ಕೆಲಸ ಕಾರ್ಯಗಳತ್ತಲೇ ಇರುವುದು.

ಮೀನ: ಇತರರ ಮಾತನ್ನು ತಪ್ಪಾಗಿ ಅರ್ಥೈಸಿ ಸಂಬಂಧಿಕರಲ್ಲಿ ಭಿನ್ನಾಭಿಪ್ರಾಯ ಸೃಷ್ಟಿಸಬೇಡಿ. ಹಣಕಾಸು ಪರಿಸ್ಥಿತಿ ಸಂಪೂರ್ಣ ಹಿಡಿತದಲ್ಲಿಡಲು ಪ್ರಯತ್ನಿಸಿ. ಮಕ್ಕಳ ದೈನಂದಿನ ಚಟುವಟಿಕೆ ಕಡೆ ಗಮನ ನೀಡಿ.

ಪದಬಂಧ 5807

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಅಡ್ಡಿ ಬಂದರೂ ಕೊರಳಲ್ಲಿ ಧರಿಸಿರುವ ಆಭರಣ (3)
2.ತೆಳ್ಳಗಿನ ಸೊಂಟ (4)
5.ನಟನೆಯಿಂದ ಕೂಡಿದುದು (4)
6.ಆತಂಕ ಹುಟ್ಟಿಸಿದ ಖೂನಿಗಾರ (3)
8.ಯೌವ್ವನದಲ್ಲಿ ನೋಡಿರುವ ಅರಣ್ಯ (2)
10.ಮೋರಿ ಇಲ್ಲಿದೆ (3)
11.ಪಯಣದಲ್ಲಿ ಕಟ್ಟಿದ ಬಾಜಿ ಉಲ್ಟಾ ಆಗಿದೆ (2)
13.ಸುಳ್ಳು ಸುಳ್ಳೇ ಹಬ್ಬಿದ ಗಾಳಿ ಸುದ್ದಿ (3)
14.ಈತ ಲಗ್ನವಾಗುತ್ತಿರುವವನು (4)
16.ಅಳತೆಗೆ ಮೀರಿದ ಸ್ಥಿತಿ (4)
17.ಶ್ರೇಷ್ಠವಾದ ಗುರಿಯನ್ನು ಹೀಗೂ ಹೇಳುವರು (3)

ಮೇಲಿಂದ ಕೆಳಕ್ಕೆ
1.ಒಂದನ್ನೊಂದು ಅಗಲದೇ ಇರುವಂಥದ್ದು (5)
2.ಸಾಲದ ಹಣದ ಮೇಲೆ ಕೊಡುವ ಹೆಚ್ಚಿನ ಹಣ (2)
3.ಈತ ಪ್ರಾಯಕ್ಕೆ ಬಂದವನು (5)
4.ಒಳ್ಳೆತನದ ಸೋಗಿನಲ್ಲಿ ಮೋಸಮಾಡುವವನು (5)
7.ಆಹಾರ ತಯಾರಾಗುವ ಜಾಗ (5)
9.ಹೊಸದಾಗಿ ಮದುವೆಯಾದ ಗಂಡ ಹೆಂಡಿರು (5)
12.ಕನ್ನಡಿಗನು ಮಾಡಿರುವ ಪಾಲಿನೇಷನ್ (5)
15.ಅಂಕಣದಲ್ಲಿರುವ ಅಂಕಿ ಕಾಣುತ್ತಿದೆಯೇ? (2)



5806ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಉತ್ಪ್ರೇಕ್ಷೆ 4.ಹಡಪ
5.ಎತ್ತಂಗಡಿ 6.ನದೀತೀರ
8.ನರ 10.ಉಪಾ
13.ವಾಮಾಚಾರ
14.ಪ್ರತಿವಾದಿ 15.ಗಿರಣಿ
16.ಉತ್ಪತ್ತಿ

ಮೇಲಿಂದ ಕೆಳಕ್ಕೆ:
1.ಮಹಜರುನಾಮೆ
2.ಉಪನಯನ 3.ಪಂಗಡ
5.ಎರವಲು 7.ಅನುಕ್ರಮಣಿಕೆ
9.ರಸವಾದಿ 11.ಪಾತರಗಿತ್ತಿ
12.ವಂತಿಗೆ

ಸುಡೊಕು 6192

		9			7	1		4
				3			5	
5		7	4		6	2		3
					5			1
	5	1		8			2	7
3			9					
		2		1			9	
			7		8			2
	8			2		4		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6191 ಸುಡೊಕು

2	1	6	3	7	4	8	5	9
9	4	7	5	8	6	3	1	2
3	8	5	9	2	1	4	6	7
1	2	3	8	6	5	9	7	4
5	9	8	2	4	7	1	3	6
6	7	4	1	9	3	5	2	8
7	3	9	6	1	8	2	4	5
4	5	2	7	3	9	6	8	1
8	6	1	4	5	2	7	9	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,418
ಇಂದಿನ ಅಂತ್ಯ	25,377
	41
ದಿನದ ಕನಿಷ್ಠ	25,285

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹225.50
ಆರ್‌ಎಸ್‌ಎಸ್-5	₹220.50
ಲಾಟ್	₹205.50

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು 100ಕ್ಕೆ	₹550
12 ಕ್ಕೆ	₹75
ಮೈಸೂರು 100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕೆ.ಜಿ)	₹415-570
ದ್ವಿತಳಿ (ಕೆ.ಜಿ)	₹377-740

ಎಸ್‌ಬಿಐ ನೂತನ ಸಿಜಿಎಂ ಜೂಹಿ ಸ್ಮಿತಾ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ (ಎಸ್‌ಬಿಐ) ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ (ಸಿಜಿಎಂ) ಜೂಹಿ ಸ್ಮಿತಾ ಸಿನ್ಹಾ ಅಧಿಕಾರ ವಹಿಸಿಕೊಂಡಿದ್ದಾರೆ.

ಇದಕ್ಕೂ ಮೊದಲು ಬ್ಯಾಂಕ್‌ನ ಬೆಂಗಳೂರು ವಲಯದ ಮುಖ್ಯ ಪ್ರಧಾನ ವ್ಯವಸ್ಥಾಪಕಿ, ಮುಂಬೈನ ಕಾರ್ಪೊರೇಟ್ ಕಚೇರಿಯ ಸಾಂಸ್ಥಿಕ ಯೋಜನೆ, ವ್ಯವಸ್ಥೆ ಮತ್ತು ಕಾರ್ಯ ವಿಧಾನ ವಿಭಾಗದ ಮುಖ್ಯ ಪ್ರಧಾನ ವ್ಯವಸ್ಥಾಪಕರಾಗಿ ಅವರು ಕಾರ್ಯ ನಿರ್ವಹಿಸಿದ್ದಾರೆ.

1995ರಲ್ಲಿ ಪ್ರೊಬೇಷನರಿ ಅಧಿಕಾರಿಯಾಗಿ ಬ್ಯಾಂಕ್‌ನಲ್ಲಿ ವೃತ್ತಿ ಆರಂಭಿಸಿದ ಅವರು, ರಿಟೇಲ್ ಬ್ಯಾಂಕಿಂಗ್, ಕಾರ್ಪೊರೇಟ್ ಬ್ಯಾಂಕಿಂಗ್ ಮತ್ತು ಮಾನವ ಸಂಪನ್ಮೂಲ ವಿಭಾಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಬ್ಯಾಂಕಿಂಗ್ ವಲಯದಲ್ಲಿ 29 ವರ್ಷಕ್ಕೂ ಹೆಚ್ಚು ಸೇವಾನುಭವ ಹೊಂದಿದ್ದಾರೆ.

ರಾಜ್ಯದಲ್ಲಿ ಎಸ್‌ಬಿಐ 1,700ಕ್ಕೂ ಹೆಚ್ಚು ಶಾಖೆ/ ಕಚೇರಿಗಳನ್ನು ಹೊಂದಿದೆ. ₹4.90 ಲಕ್ಷ ಕೋಟಿಗೂ ಅಧಿಕ ಜಮಾ–ಖರ್ಚು ಪಟ್ಟಿ (ಬ್ಯಾಲೆನ್ಸ್‌ಶೀಟ್) ಹೊಂದಿದೆ ಎಂದು ಬ್ಯಾಂಕ್ ತಿಳಿಸಿದೆ.

ಭೂತಾನ್‌ನಿಂದ 17 ಸಾವಿರ ಟನ್‌ಗೆ ಕೇಂದ್ರ ಸರ್ಕಾರ ಒಪ್ಪಿಗೆ

ಅಡಿಕೆ ಆಮದಿಗೆ ಅನುಮತಿ

ನವದೆಹಲಿ (ಪಿಟಿಐ): ಭೂತಾನ್‌ನಿಂದ ಕನಿಷ್ಠ ಆಮದು ಬೆಲೆಯ (ಎಂಐಪಿ) ಷರತ್ತು ಇಲ್ಲದೆಯೇ 17 ಸಾವಿರ ಟನ್ ಹಸಿ ಅಡಿಕೆ ಆಮದು ಮಾಡಿಕೊಳ್ಳಲು ಕೇಂದ್ರ ಸರ್ಕಾರವು ಬುಧವಾರ ಅನುಮತಿ ನೀಡಿದೆ.

ಒಡಿಶಾದ ಹತಿಸರ್ ಮತ್ತು ಅಸ್ಸಾಂನ ದರಂಗಾದ ಕಸ್ಟಮ್ಸ್ ಕೇಂದ್ರದ ಮೂಲಕ ಈ ಅಡಿಕೆ ಆಮದಿಗೆ ಒಪ್ಪಿಗೆ ನೀಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಧೀನದಲ್ಲಿ ಬರುವ ವಿದೇಶಿ ವ್ಯಾಪಾರ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

2022ರ ಸೆಪ್ಟೆಂಬರ್‌ನಲ್ಲಿ ಪ್ರತಿ ವರ್ಷ ಭೂತಾನ್‌ನಿಂದ ಎಂಐಪಿ ಇಲ್ಲದೆ 17 ಸಾವಿರ ಟನ್ ಹಸಿ ಅಡಿಕೆ ಆಮದು ಮಾಡಿಕೊಳ್ಳಲು ಒಪ್ಪಿಗೆ ನೀಡಲಾಗಿತ್ತು.

2017ರಲ್ಲಿ ಕೇಂದ್ರ ಸರ್ಕಾರವು ಪ್ರತಿ ಕೆ.ಜಿ ಅಡಿಕೆಗೆ ₹251 ಕನಿಷ್ಠ ಆಮದು ಬೆಲೆ ನಿಗದಿಪಡಿಸಿತ್ತು. ಕಳೆದ ವರ್ಷ ಈ ಬೆಲೆಯನ್ನು ಕೆ.ಜಿಗೆ ₹351ಕ್ಕೆ ಹೆಚ್ಚಿಸಿದೆ. ದೇಶದ ಬೆಳೆಗಾರರ ಹಿತಕಾಯುವ ನಿಟ್ಟಿನಲ್ಲಿ ಈ ಕ್ರಮ ಕೈಗೊಂಡಿದೆ.

ಯಾವುದೇ ದೇಶದಿಂದ ಅಡಿಕೆ ಆಮದು ಮಾಡಿಕೊಂಡರೂ ಈ ಬೆಲೆಗಿಂತ ಕಡಿಮೆಗೆ ಆಮದು ಮಾಡಿಕೊಳ್ಳಬಾರದು ಎಂದು ಹೇಳಿದೆ.

ಅಕ್ರಮ ಆಮದು ಎಷ್ಟು?

ವರ್ಷ	ಪ್ರಕರಣ	ವಶ (ಟನ್‌ಗಳಲ್ಲಿ)
2020-21	278	3,449
2021-22	260	3,388
2022-23	454	3,400
2023-24	643	12,881
2024ರ ಜೂನ್ ಅಂತ್ಯಕ್ಕೆ	84	3,009

(ಕೇಂದ್ರ ಸರ್ಕಾರ ನೀಡಿರುವ ಮಾಹಿತಿ)

ವರ್ತಕರ ಮೇಲೆ ನಿಗಾ ಇಡಲು ಒತ್ತಾಯ

ಶಿರಸಿ: ಭೂತಾನ್‌ನಿಂದ ಆಮದು ಮಾಡಿಕೊಳ್ಳುವ ಅಡಿಕೆ ಪ್ರಮಾಣವು ದೇಶೀಯ ಅಡಿಕೆ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ. ಆದರೆ, ವ್ಯಾಪಾರಿಗಳು ಇದರ ಲಾಭ ಪಡೆದು ಸ್ಥಳೀಯವಾಗಿ ಬೆಲೆ ಕಡಿಮೆ ಮಾಡಲು ಬಳಸಿಕೊಳ್ಳುತ್ತಾರೆ ಎಂಬುದು ಬೆಳೆಗಾರರ ಆತಂಕವಾಗಿದೆ.

ಸರ್ಕಾರ ಮತ್ತು ಅಧಿಕಾರಿಗಳಿಗೆ ಬೆಳೆಗಾರರ ಬಗ್ಗೆ ನಿಜವಾದ ಕಾಳಜಿ ಇದ್ದರೆ ವರ್ತಕರು ಪರಿಸ್ಥಿತಿಯನ್ನು ದುರ್ಬಳಕೆ ಮಾಡಿಕೊಳ್ಳದಂತೆ ಕ್ರಮ ಕೈಗೊಳ್ಳಬೇಕು. ರೈತರಿಗೆ ನಿಜವಾಗಿಯೂ ನೀಡಬೇಕಾದ ಬೆಲೆ ಸಿಕ್ಕಿ ನ್ಯಾಯಯುತ ಬೆಲೆ ಅದನ್ನು ಕೊಡಿಸಲು ಪ್ರಯತ್ನಿಸಬೇಕು ಎಂಬುದು ಮಾರುಕಟ್ಟೆ ತಜ್ಞರ ಒತ್ತಾಯ.

'ಭೂತಾನ್ ಅಡಿಕೆ ಭಾರತಕ್ಕೆ ಬರುತ್ತಿದ್ದಂತೆ ಅಡಿಕೆ ದರದಲ್ಲಿ ಸ್ವಲ್ಪ ಮಟ್ಟಿನ ಏರುಪೇರು ಶುರುವಾಗುತ್ತದೆ. ಕಳೆದ ವರ್ಷಗಳಲ್ಲಿ ಕ್ವಿಂಟಲ್‌ವೊಂದಕ್ಕೆ ₹4 ಸಾವಿರದವರೆಗೆ ದರ ಇಳಿದಿತ್ತು' ಎಂದು ಅಡಿಕೆ ವಹಿವಾಟು ನಡೆಸುವ ಸಹಕಾರ ಸಂಘಗಳ ಪ್ರಮುಖರು ಹೇಳುತ್ತಾರೆ.

'ಹಸಿ ಅಡಿಕೆ ಆಮದಿನ ಮೇಲೂ ಹೆಚ್ಚಿನ ತೆರಿಗೆ ವಿಧಿಸಬೇಕು. ಹಾಗಾದರೆ ಮಾತ್ರ ದೇಶೀಯ ಉತ್ಪನ್ನದ ದರದಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಸಾಧ್ಯ' ಎಂದು ಟಿಎಸ್‌ಎಸ್ ಪ್ರಮುಖರಾದ ಗೋಪಾಲಕೃಷ್ಣ ವೈದ್ಯ ಒತ್ತಾಯಿಸುತ್ತಾರೆ.

ದೇಶದಲ್ಲಿ ಅಕ್ರಮ ಪ್ರಕರಣ ಹೆಚ್ಚಳ

ಬೆಂಗಳೂರು: ದೇಶದಲ್ಲಿ ಅಡಿಕೆ ಅಕ್ರಮ ಆಮದು ಪ್ರಕರಣಗಳು ಹೆಚ್ಚುತ್ತಿರುವ ಬೆನ್ನಲ್ಲೇ ಸರ್ಕಾರವು ನೀಡಿರುವ ಈ ಅನುಮತಿಯು ರಾಜ್ಯದ ಬೆಳೆಗಾರರ ನಿದ್ದೆಗೆಡಿಸಿದೆ.

ಭಾರತದಲ್ಲಿ ಉತ್ಪಾದನೆಯಾಗುವ ಅಡಿಕೆಗೆ ಹೋಲಿಸಿದರೆ ಶೇ 2ರಷ್ಟು ಪ್ರಮಾಣದ ಅಡಿಕೆಯನ್ನಷ್ಟೇ ಭೂತಾನ್‌ನಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. 'ವರ್ತಕರು ಸರ್ಕಾರದ ಆದೇಶವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಹಾಗಾಗಿ, ವರ್ಷದಿಂದ ವರ್ಷಕ್ಕೆ ಅಡಿಕೆ ಅಕ್ರಮ ಆಮದು ಪ್ರಕರಣಗಳು ಹೆಚ್ಚಾಗುತ್ತಿವೆ' ಎಂದು ಕೇಂದ್ರ ಸರ್ಕಾರವು, ಸಂಸತ್‌ಗೆ ನೀಡಿರುವ ಉತ್ತರದಲ್ಲಿ ತಿಳಿಸಿದೆ.

ದೇಶದಲ್ಲಿ ಕಳೆದ ಐದು ವರ್ಷದಲ್ಲಿ ಕೇಂದ್ರೀಯ ಪರೋಕ್ಷ ತೆರಿಗೆಗಳು ಹಾಗೂ ಕಸ್ಟಮ್ಸ್ ಮಂಡಳಿಯ ತನಿಖಾ ತಂಡವು, 26 ಸಾವಿರ ಟನ್‌ಗೂ ಹೆಚ್ಚು ಅಡಿಕೆಯನ್ನು ವಶಕ್ಕೆ ಪಡೆದಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಕುಮಟ	
ಬೆಟ್ಟೆ	26150-31201
ಚಿಪ್ಪು	22089-26099
ಕೋಕ	6019-22589
ಫ್ಯಾಕ್ಟರಿ	8099-16929
ಹಳೆಚಾಲಿ	35899-39509
ಹೊಸಚಾಲಿ	31019-34509
ಶಿವಮೊಗ್ಗ	
ಬೆಟ್ಟೆ	36000-55650
ಗೊರಬಲು	17319-36069
ರಾಶಿ	31251-48969
ಸರಕು	55009-79009
ಸಿದ್ದಾಪುರ	
ಬಿಳಿಗೋಟು	24209-28909
ಚಾಲಿ	30699-34469
ಕೋಕ	13599-14699
ಕೆಂಪುಗೋಟು	17609-21019
ರಾಶಿ	40089-44899
ತಟ್ಟಿಬೆಟ್ಟೆ	25709-33309
ಶಿರಸಿ	
ಬೆಟ್ಟೆ	27560-37605
ಬಿಳಿಗೋಟು	23599-30299
ಚಾಲಿ	32189-35999
ಕೆಂಪುಗೋಟು	16699-17600

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹರಪನಹಳ್ಳಿ ಉಪವಿಭಾಗ ಹರಪನಹಳ್ಳಿ ಜಿಲ್ಲಾ ವಿಜಯನಗರ ಇವರ ನ್ಯಾಯಾಲಯದಲ್ಲಿ

ಅಧಿಬಾರ ಅರ್ಜಿ ಸಂಖ್ಯೆ: 02/2023–24

ವಾದಿ: ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ತೂಲಹಳ್ಳಿ ಕೊಟ್ಟೂರು ತಾ॥ ವಿಜಯನಗರ ಜಿಲ್ಲಾ ಇವರ ಪರವಾಗಿ ಸಂಘದ ಮುಖ್ಯ ಕಾರ್ಯ ನಿರ್ವಾಹಕರು
ವಿರುದ್ಧ
ಪ್ರತಿವಾದಿಗಳು: ಶ್ರೀ ಸಿ.ಮೇಘರಾಜ ಮತ್ತು ಇತರರು

-: ಪತ್ರಿಕಾ ಪ್ರಕಟಣೆಗೆ :-

ಈ ಮೂಲಕ ಪ್ರತಿವಾದಿ ನಂ.02 ರವರಾದ ಶ್ರೀ ಐ.ವಿರೇಶ ತಂದೆ ಬಸವರಾಜಪ್ಪ, ವಾಸ: ನಾಗರಕಟ್ಟೆ ಗ್ರಾಮ, ಕೊಟ್ಟೂರು ತಾಲ್ಲೂಕು, ವಿಜಯನಗರ ಜಿಲ್ಲೆ, ಪ್ರತಿವಾದಿ ನಂ.03 ರವರಾದ ಶ್ರೀ ಶ್ರೀಮತಿ ಬಿ.ಕೆ.ಹಾಲಮ್ಮ ಗಂಡ ಐ.ವಿರೇಶ, ವಾಸ: ನಾಗರಕಟ್ಟೆ ಗ್ರಾಮ, ಕೊಟ್ಟೂರು ತಾಲ್ಲೂಕು, ವಿಜಯನಗರ ಜಿಲ್ಲೆ, ಪ್ರತಿವಾದಿ ನಂ.04 ರವರಾದ ಶ್ರೀ ರೇವಣಸಿದ್ದಪ್ಪ ಎಸ್ ತಂದೆ ದ್ಯಾಮಪ್ಪ, ವಾಸ: ತೂಲಹಳ್ಳಿ ಗ್ರಾಮ, ಕೊಟ್ಟೂರು ತಾಲ್ಲೂಕು, ವಿಜಯನಗರ ಜಿಲ್ಲೆ, ಆದ ನಿಮ್ಮ ವಿರುದ್ಧ ವಾದಿಯಾದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ ತೂಲಹಳ್ಳಿ ಕೊಟ್ಟೂರು ತಾ ವಿಜಯನಗರ ಜಿಲ್ಲಾ ಇವರ ಪರವಾಗಿ ಸಂಘದ ಮುಖ್ಯ ಕಾರ್ಯ ನಿರ್ವಾಹಕರು ಇವರು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹರಪನಹಳ್ಳಿ, ಉಪವಿಭಾಗ ಹರಪನಹಳ್ಳಿ, ವಿಜಯನಗರ ಜಿಲ್ಲಾ ಇವರ ನ್ಯಾಯಾಲಯದಲ್ಲಿ ಅಧಿಬಾರ ಅರ್ಜಿ ಸಂಖ್ಯೆ: 02/2023–24 ರ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಗೆ ಸಂಬಂಧಿಸಿದಂತೆ ದಾವಾ ಸಮನ್ಸ್‌ನ್ನು/ನೋಟೀಸ್ ಸಾಮಾನ್ಯ ಸ್ವರೂಪದಲ್ಲಿ ಹಾಗೂ ನೊಂದಾಯಿತ ಅಂಚೆಯ ಮೂಲಕ ನಿಮಗೆ ಕಳಿಸಿದರು ಸಹ ಅವು ಜಾರಿಯಾಗದ ಕಾರಣ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುತ್ತದೆ. ಈ ದಾವೆಯ ದಿನಾಂಕ:04/10/2024ರಂದು ಬೆಳಗ್ಗೆ 11.00 ಗಂಟೆಗೆ ಮುದ್ದತ್ತು ಇರುತ್ತದೆ. ಕಾರಣ ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು.
ಒಂದು ವೇಳೆ ಈ ಮೇಲೆ ತಿಳಿಸಿದ ದಿನದಂದು ನ್ಯಾಯಾಲಯಕ್ಕೆ ಹಾಜರಾಗಲು ನೀವು ತಪ್ಪಿದಲ್ಲಿ, ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. 2024 ನೇ ಸೆಪ್ಟೆಂಬರ್ ತಿಂಗಳಿನ 12 ನೇ ತಾರೀಖಿನಂದು ನ್ಯಾಯಾಲಯದ ಮೊಹರಿನೊಂದಿಗೆ ಈ ನೋಟಿಸ್ ಕೊಡಲಾಗಿದೆ.

ಸಹಿ/–
ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹರಪನಹಳ್ಳಿ, ಉಪವಿಭಾಗ ಹರಪನಹಳ್ಳಿ, ವಿಜಯನಗರ ಜಿಲ್ಲೆ. ಇವರ ನ್ಯಾಯಾಲಯ
ವಾದಿಯ ಪರ ವಕೀಲರು
(ಶ್ರೀ ಬಿ.ಕೃಷ್ಣಮೂರ್ತಿ)
ದಿನಾಂಕ: 12/09/2024
ಸ್ಥಳ: ಹರಪನಹಳ್ಳಿ

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9148525233, 9900859248

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರವಾಸ

Holiday Package Tours

15.10.2024, 4 ದಿನಗಳು ಝರಣಿನರಸಿಂಹಸ್ವಾಮಿ, ಗಾಣಗಾಪುರ, ಕೂಡಲಸಂಗಮ, 108 ಅಡಿ ಬಸವೇಶ್ವರ ಪ್ರತಿಮೆ, ರೇವಗಿರೇವಣಸಿದ್ದೇಶ್ವರ, ವೈಷ್ಣೋದೇವಿ, ಗುರುಗುಂಟಾ ಅಮರೇಶ್ವರ ಇತ್ಯಾದಿ. 9481433157

ಭವಿಷ್ಯ

Astrology

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಒಂದೇ ಕರೆಯಲ್ಲಿ 100% ಶಾಶ್ವತ ಪರಿಹಾರ ಕೆಲವೇ ಗಂಟೆಗಳಲ್ಲಿ ಅಸಾಧ್ಯವಾದದ್ದು ಇಲ್ಲಿ ಸಾಧ್ಯ ಸಮಸ್ಯೆ ನಿಮ್ಮದು ಪರಿಹಾರ ನಮ್ಮದು: 9741637382

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಉದ್ಯೋಗಕ್ಕಾಗಿ
BOOK YOUR JOB ADS IN PRAJAVANI ALL KARNATAKA ON WEDNESDAY + SUNDAY
@ 500/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9845114560 | +91 9886213331
*Conditions apply

ನೇರ ತೆರಿಗೆ ಸಂಗ್ರಹ ಶೇ 16.12ರಷ್ಟು ಏರಿಕೆ



ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ 17ರ ವರೆಗೆ ₹9.95 ಲಕ್ಷ ಕೋಟಿ ನೇರ ತೆರಿಗೆ ನಿವ್ವಳ ಸಂಗ್ರಹವಾಗಿದೆ. ಇದರಲ್ಲಿ ವೈಯಕ್ತಿಕ ಆದಾಯ ತೆರಿಗೆ ಪಾಲು ಹೆಚ್ಚಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇ 16.12ರಷ್ಟು ಏರಿಕೆಯಾಗಿದೆ.

ಒಟ್ಟು ₹2.05 ಲಕ್ಷ ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮರು ಪಾವತಿಯಲ್ಲಿ ಶೇ 56.49ರಷ್ಟು ಹೆಚ್ಚಳವಾಗಿದೆ ಎಂದು ಕೇಂದ್ರೀಯ ನೇರ ತೆರಿಗೆಗಳ ಮಂಡಳಿಯು (ಸಿಬಿಡಿಟಿ) ಬುಧವಾರ ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

ವೈಯಕ್ತಿಕ ಆದಾಯ ತೆರಿಗೆಯ ನಿವ್ವಳ ಸಂಗ್ರಹದಲ್ಲಿ ಶೇ 19ರಷ್ಟು ಹೆಚ್ಚಳವಾಗಿದ್ದು, ಒಟ್ಟು ₹5.15 ಲಕ್ಷ ಕೋಟಿ ಸಂಗ್ರಹವಾಗಿದೆ. ಕಂಪನಿಗಳ ವರಮಾನ ತೆರಿಗೆ ಸಂಗ್ರಹದಲ್ಲಿ ಶೇ 10.55ರಷ್ಟು ಏರಿಕೆಯಾಗಿದ್ದು, ಒಟ್ಟು ₹4.52 ಲಕ್ಷ ಕೋಟಿ ಸಂಗ್ರಹವಾಗಿದೆ. ₹26,154 ಕೋಟಿ ಷೇರು ವಹಿವಾಟು ತೆರಿಗೆ (ಎಸ್‌ಟಿಟಿ) ಸಂಗ್ರಹವಾಗಿದೆ.

2024–25ನೇ ಆರ್ಥಿಕ ಸಾಲಿನ ಬಜೆಟ್‌ನಲ್ಲಿ ₹22.12 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹದ ಗುರಿ ಹೊಂದಲಾಗಿದೆ (ವೈಯಕ್ತಿಕ ಆದಾಯ ತೆರಿಗೆ, ಕಾರ್ಪೊರೇಟ್ ತೆರಿಗೆ ಮತ್ತು ಇತರೆ ತೆರಿಗೆ). ಕಳೆದ ವರ್ಷಕ್ಕಿಂತ ಶೇ 13ರಷ್ಟು ಹೆಚ್ಚು ಗುರಿ ನಿಗದಿಪಡಿಸಲಾಗಿದೆ.

'ರೆಪೊ ದರ ಇಳಿಕೆ ಸದ್ಯಕ್ಕಿಲ್ಲ'

ನವದೆಹಲಿ (ಪಿಟಿಐ): 'ಆಹಾರ ಹಣದುಬ್ಬರದ ನಿಯಂತ್ರಣವು ಅನಿಶ್ಚಿತತೆಯಿಂದ ಕೂಡಿದೆ. ಹಾಗಾಗಿ, ಪ್ರಸಕ್ತ ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಕಡಿತಗೊಳಿಸುವ ಸಾಧ್ಯತೆ ಕಡಿಮೆಯಿದೆ' ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಅಧ್ಯಕ್ಷ ಸಿ.ಎಸ್. ಶೆಟ್ಟಿ ಅಭಿಪ್ರಾಯಪಟ್ಟಿದ್ದಾರೆ.

ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್, ನಾಲ್ಕು ವರ್ಷದ ನಂತರ ಮೊದಲ ಬಾರಿಗೆ ಬಡ್ಡಿದರ ಕಡಿತಗೊಳಿಸುವ ನಿರೀಕ್ಷೆಯಿದೆ. ಇದು ಇತರೆ ದೇಶದ ಕೇಂದ್ರೀಯ ಬ್ಯಾಂಕ್‌ಗಳ ಮೇಲೆ ಪರಿಣಾಮ ಬೀರಲಿದೆ. ಆರ್‌ಬಿಐ ಆಹಾರ ಹಣದುಬ್ಬರವನ್ನು ಗಮನದಲ್ಲಿಟ್ಟು-ಕೊಂಡೇ ರೆಪೊ ದರ ಕಡಿತಗೊಳಿಸಲಿದೆ ಎಂದು ಪಿಟಿಐಗೆ ಬುಧವಾರ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಆಹಾರ ಹಣದುಬ್ಬರ ಇಳಿಕೆಯಾದರೆ 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ರೆಪೊ ದರವನ್ನು ಕಡಿತಗೊಳಿಸುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ.

ಕೇರಳ: ಓಣಂ ವೇಳೆ ₹818 ಕೋಟಿ ಮೌಲ್ಯದ ಮದ್ಯ ಮಾರಾಟ

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುವನಂತಪುರ: ಓಣಂ ಹಬ್ಬದ ಸಂದರ್ಭದಲ್ಲಿ ಕೇರಳದಲ್ಲಿ ದಾಖಲೆ ಪ್ರಮಾಣದ ಮದ್ಯ ಮಾರಾಟವಾಗಿದೆ.

ಈ ಬಾರಿ ಹಬ್ಬದ ವೇಳೆಯಲ್ಲಿ ಮದ್ಯ ಮಾರಾಟವು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿದೆ ಎಂದು ಸರ್ಕಾರಿ ಅಂಕಿ ಅಂಶಗಳು ತಿಳಿಸಿವೆ.

12 ದಿನಗಳ ಹಬ್ಬದ ಅವಧಿಯಲ್ಲಿ (ಸೆ. 6ರಿಂದ 17ರವರೆಗೆ) ಒಟ್ಟು ₹ 818.21 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆ. ಕಳೆದ ವರ್ಷ ಈ ಹಬ್ಬದ ಅವಧಿಯಲ್ಲಿ ₹ 809.25 ಕೋಟಿಯಷ್ಟು ಮದ್ಯ ಮಾರಾಟವಾಗಿತ್ತು. ಅಂದರೆ ಶೇ 1.11ರಷ್ಟು ಏರಿಕೆ ದಾಖಲಾಗಿದೆ ಎಂದು ಅಧಿಕಾರಿಗಳು ಬುಧವಾರ ಮಾಹಿತಿ ನೀಡಿದ್ದಾರೆ.

ತಿರುವೋಣಂನ ಹಿಂದಿನ ದಿನವಾದ ಉತ್ರಾಡಂನಲ್ಲಿ ಕೇರಳ ರಾಜ್ಯ ಪಾನೀಯ ನಿಗಮದ (ಕೆಎಸ್‌ಬಿಸಿ) ಮಾರಾಟ ಕೇಂದ್ರಗಳಲ್ಲಿ ಭಾರಿ ಸಂಖ್ಯೆಯ ಜನಜಂಗುಳಿ ಇತ್ತು. ಅಂದು ಗರಿಷ್ಠ ಮಾರಾಟ ನಡೆದಿದೆ. ಉತ್ರಾಡಂ ದಿನದಂದು ರಾಜ್ಯದಾದ್ಯಂತ ₹704.06 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿದೆ. ಆದರೆ ಇದು ಕಳೆದ ಬಾರಿಗಿಂತ ಕಡಿಮೆ. ಕಳೆದ ವರ್ಷ ಈ ದಿನ ₹715.97 ಕೋಟಿ ಮೌಲ್ಯದಷ್ಟು ಮದ್ಯ ಮಾರಾಟವಾಗಿತ್ತು.

ಕೊಲ್ಲಂ ಜಿಲ್ಲೆಯ ಆಶ್ರಮಂನ ಮಾರಾಟ ಕೇಂದ್ರದಲ್ಲಿ ಉತ್ರಾಡಂ ದಿನದಂದು ಅತಿ ಹೆಚ್ಚು ಅಂದರೆ ₹ 1.15 ಕೋಟಿಯಷ್ಟು ಮಾರಾಟವಾಗಿದೆ.

ಒಟ್ಟಾರೆ ಓಣಂ ಅವಧಿಯಲ್ಲಿ ಮಲಪ್ಪುರ ತಿರೂರ್ ಔಟ್‌ಲೆಟ್‌ನಲ್ಲಿ ₹ 5.59 ಕೋಟಿಯಷ್ಟು ಮದ್ಯ ಮಾರಾಟವಾಗಿದ್ದರೆ, ಇತರ ಎರಡು ಮಾರಾಟ ಕೇಂದ್ರದಲ್ಲಿ ತಲಾ ₹5 ಕೋಟಿ ಹಾಗೂ ಎಂಟು ಮಾರಾಟ ಕೇಂದ್ರಗಳಲ್ಲಿ ಸುಮಾರು ತಲಾ ₹4 ಕೋಟಿಯಷ್ಟು ಮದ್ಯ ಮಾರಾಟವಾಗಿದೆ ಎಂದು ಕೆಎಸ್‌ಬಿಸಿ ಅಂಕಿ ಅಂಶ ನೀಡಿದೆ.

ಮುಂಬೈ ಧಾರಣೆ

ಶೇಂಗಾ

18-09-2024

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ(ಹೊಸ)	9100-9200
ದಪ್ಪ ಗುಜರಾತ್(ಹೊಸ)	9900-10000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1525)
ಒಂದು ವಾರದ ಡೆಲಿವರಿ	1505 (1520)
ಪಾಮ್ ವಾರದ ಡೆಲಿವರಿ	1168 (1133)
ಸೂರ್ಯಕಾಂತಿ ಎಣ್ಣೆ ಕಚ್ಚಾ	1140 (1085)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹73,000 (72,900)
ಬೆಳ್ಳಿ ಕೆ.ಜಿ ₹87,350 (87,600)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-13000
ತಿಪಟೂರು	₹13300-14466
ತುರುವೇಕೆರೆ	₹14000-14400

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3500-4200
ಮಧ್ಯಮ	₹2500-3000
ಸಣ್ಣ	₹1000-1500

ಬೂಕರ್ ಪ್ರಶಸ್ತಿ: ಅಂತಿಮ ಪಟ್ಟಿಯಲ್ಲಿ ಸ್ತ್ರೀಯರ ಪ್ರಾಬಲ್ಯ

ಲಂಡನ್ (ಪಿಟಿಐ): ಪ್ರಸಕ್ತ ಸಾಲಿನ ಬೂಕರ್ ಪ್ರಶಸ್ತಿಯ ಅಂತಿಮ ಪಟ್ಟಿಯಲ್ಲಿ ಲೇಖಕಿಯರು ಪ್ರಾಬಲ್ಯ ಸಾಧಿಸಿದ್ದಾರೆ. ಅಂತಿಮ ಪಟ್ಟಿಯಲ್ಲಿರುವ ಆರು ಲೇಖಕರ ಪೈಕಿ ಐವರು ಮಹಿಳೆಯರು ಎಂಬುದು ಈ ಬಾರಿಯ ವಿಶೇಷವಾಗಿದೆ.

ಬೂಕರ್ ಪ್ರಶಸ್ತಿಯ 55 ವರ್ಷಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಅಂತಿಮ ಪಟ್ಟಿಯಲ್ಲಿದ್ದಾರೆ.

ಪ್ರತಿಷ್ಠಿತ ಈ ಪ್ರಶಸ್ತಿಯು 50,000 ಪೌಂಡ್ (₹55.33 ಲಕ್ಷ) ನಗದು ಬಹುಮಾನ ಮತ್ತು ಫಲಕವನ್ನು ಒಳಗೊಂಡಿದೆ.

ಲೇಖಕಿಯರಾದ ಬ್ರಿಟನ್‌ನ ಸಮಂತಾ ಹಾರ್ವೆ ಅವರ 'ಆರ್ಬಿಟಲ್', ಅಮೆರಿಕದ ರಾಚೆಲ್ ಕುಶ್ನರ್ ಅವರ 'ಕ್ರಿಯೇಷನ್ ಲೇಕ್', ಕೆನಡಾದ ಅನ್ನೆ ಮೈಕೆಲ್ಸ್ ಅವರ 'ಹೆಲ್ಡ್', ಆಸ್ಟ್ರೇಲಿಯಾದ ಶಾರ್ಲೆಟ್ ವುಡ್ ಅವರ 'ಸ್ಟೋನ್ ಯಾರ್ಡ್ ಡಿವೋಷನಲ್', ಡಚ್‌ನ ಯೆಲ್ ವ್ಯಾನ್ ಡೆರ್ ವುಡೆನ್ ಅವರ 'ದಿ ಸೇಫ್‌ಕೀಪ್' ಕೃತಿಗಳು ಅಂತಿಮ ಪಟ್ಟಿಯಲ್ಲಿವೆ.

ಅಮೆರಿಕದ ಲೇಖಕ ಪರ್ಸಿವಲ್ ಎವೆರೆಟ್ ಅವರ 'ಜೇಮ್ಸ್' ಕೃತಿಯೂ ಪಟ್ಟಿಯಲ್ಲಿದ್ದು, ಅಂತಿಮ ಸ್ಪರ್ಧೆಯಲ್ಲಿರುವ ಏಕೈಕ ಲೇಖಕರಾಗಿದ್ದಾರೆ ಎಂದು ಬೂಕರ್ ಪ್ರಶಸ್ತಿ ಪ್ರತಿಷ್ಠಾನದ ಮುಖ್ಯ ಕಾರ್ಯನಿರ್ವಾಹಕರಾದ ಗೇಬಿ ವುಡ್ ತಿಳಿಸಿದ್ದಾರೆ.

ಬೂಕರ್ ಪ್ರಸಸ್ತಿಯನ್ನು ನವೆಂಬರ್ 12ರಂದು ಲಂಡನ್‌ನಲ್ಲಿ ಪ್ರದಾನ ಮಾಡಲಾಗುತ್ತದೆ.

ಚಿಣ್ಣರ ಭವಿಷ್ಯಕ್ಕೆ ಪಿಂಚಣಿ ಖಾತರಿ ಯೋಜನೆ

ಎನ್‌ಪಿಎಸ್–ವಾತ್ಸಲ್ಯ ಆರಂಭ

ನವದೆಹಲಿ (ಪಿಟಿಐ): ಮಕ್ಕಳ ಭವಿಷ್ಯಕ್ಕೆ ಪೋಷಕರೇ ಪಿಂಚಣಿ ಖಾತೆ ತೆರೆದು ಹಣ ಉಳಿತಾಯ ಮಾಡುವ 'ಎನ್‌ಪಿಎಸ್–ವಾತ್ಸಲ್ಯ' ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಬುಧವಾರ ಅಧಿಕೃತವಾಗಿ ಚಾಲನೆ ನೀಡಿದ್ದಾರೆ. ಜುಲೈನಲ್ಲಿ ಕೇಂದ್ರ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ ಈ ಯೋಜನೆಯನ್ನು ಪ್ರಕಟಿಸಲಾಗಿತ್ತು. ಹಾಲಿ ಇರುವ ಎನ್‌ಪಿಎಸ್ ಅನ್ನು ಈಗ ಮಕ್ಕಳಿಗೂ ವಿಸ್ತರಿಸಲಾಗಿದೆ. ಕಳೆದ ಹತ್ತು ವರ್ಷದ ಅವಧಿಯಲ್ಲಿ ಎನ್‌ಪಿಎಸ್‌ನಡಿ 1.86 ಕೋಟಿ ಚಂದಾದಾರರಾಗಿದ್ದಾರೆ. ಇದರ ಒಟ್ಟು ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹13 ಲಕ್ಷ ಕೋಟಿ ಆಗಿದೆ.

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (ಪಿಎಫ್‌ಆರ್‌ಡಿಎ) ಈ ಯೋಜನೆಯನ್ನು ನಿರ್ವಹಣೆ ಮಾಡಲಿದೆ. ಐಸಿಐಸಿಐ ಬ್ಯಾಂಕ್, ಎಸ್‌ಬಿಐ ಬ್ಯಾಂಕ್ ಸೇರಿ ಹಲವು ಬ್ಯಾಂಕ್‌ಗಳು ಈ ಯೋಜನೆಯ ಯಶಸ್ವಿಗಾಗಿ ಪ್ರಾಧಿಕಾರದ ಜೊತೆಗೆ ಕೈಜೋಡಿಸಿವೆ. ಮುಂಬೈನಲ್ಲಿರುವ ಐಸಿಐಸಿಐ ಬ್ಯಾಂಕ್‌ನ ಕಚೇರಿಯಲ್ಲಿ ಮಕ್ಕಳ ಖಾತೆ ತೆರೆಯಲಾಯಿತು. ಚಂದಾದಾರರಾದ ಮಕ್ಕಳಿಗೆ ಹೊಸದಾಗಿ ಶಾಶ್ವತ ನಿವೃತ್ತಿ ಖಾತೆ ಸಂಖ್ಯೆ (ಪಿಆರ್‌ಎಎನ್) ನೀಡಲಾಯಿತು.

ಉತ್ತಮ ಆಯ್ಕೆ: ಚಾಲನೆ ನೀಡಿ ಬಳಿಕ ಮಾತನಾಡಿದ ನಿರ್ಮಲಾ ಸೀತಾರಾಮನ್, 'ದೀರ್ಘಾವಧಿ ಯೋಜನೆಯು (ಎನ್‌ಪಿಎಸ್) ಹೂಡಿಕೆದಾರರಿಗೆ ಒಳ್ಳೆಯ ಲಾಭ ತಂದುಕೊಡಲಿದೆ. ಅಲ್ಲದೆ, ಜನರು ಭವಿಷ್ಯಕ್ಕಾಗಿ ಹಣ ಉಳಿತಾಯಕ್ಕೆ ಇದು ಉತ್ತಮ ಆಯ್ಕೆಯಾಗಿದೆ' ಎಂದು ಹೇಳಿದರು.

ಖಾತೆ ತೆರೆಯುವುದು ಹೇಗೆ

ಪೋಷಕರು ಆನ್‌ಲೈನ್, ಬ್ಯಾಂಕ್ ಅಥವಾ ಅಂಚೆ ಕಚೇರಿಗೆ ಖುದ್ದಾಗಿ ಭೇಟಿ ನೀಡಿ ಮಕ್ಕಳ ಹೆಸರಿನಲ್ಲಿ ಈ ಖಾತೆ ತೆರೆಯಬಹುದಾಗಿದೆ. ಖಾತೆ ತೆರೆಯಲು ₹1 ಸಾವಿರ ನಿಗದಿಪಡಿಸಲಾಗಿದೆ.

ಯಾರು ಅರ್ಹ

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಹೆಸರಿನಲ್ಲಿ ಈ ಖಾತೆ ತೆರೆಯಬಹುದಾಗಿದೆ. ಅವರಿಗೆ 18 ವರ್ಷ ಪೂರ್ಣಗೊಂಡ ಬಳಿಕೆ ಈ ಖಾತೆಯು ಎನ್‌ಪಿಎಸ್ ಸಾಮಾನ್ಯ ಖಾತೆಯಾಗಿ ಮಾರ್ಪಾಡು ಆಗಲಿದೆ. ಖಾತೆದಾರರು 60 ವರ್ಷ ಪೂರ್ಣಗೊಳಿಸಿದ ಬಳಿಕ ಪಿಂಚಣಿ ದೊರೆಯಲಿದೆ.

ಎಷ್ಟು ಹೂಡಿಕೆ

ಪೋಷಕರು ಮಕ್ಕಳ ಖಾತೆಗೆ ವಾರ್ಷಿಕ ₹1 ಸಾವಿರ ಕೊಡುಗೆ ನೀಡಬಹುದಾಗಿದೆ. ಈ ಯೋಜನೆಯಡಿ ಹೂಡಿಕೆಯಾಗುವ ಹಣವನ್ನು ಹಿಂಪಡೆಯುವುದಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಕೇಂದ್ರವು ಅಂತಿಮಗೊಳಿಸುತ್ತಿದೆ.

ಎಷ್ಟು ಲಾಭ

ಎನ್‌ಪಿಎಸ್‌ನ ವಾರ್ಷಿಕ ಸಂಯುಕ್ತ ಬೆಳವಣಿಗೆ ದರ (ಸಿಎಜಿಆರ್) ಶೇ 9.5ರಷ್ಟಿದೆ. ಈಕ್ವಿಟಿ ಮಾರುಕಟ್ಟೆಯಲ್ಲಿ ಹೂಡಿಕೆಯಾಗಿರುವ ಎನ್‌ಪಿಎಸ್ ಹಣಕ್ಕೆ ಶೇ 14ರಷ್ಟು ಲಾಭ ಸಿಕ್ಕಿದೆ. ಕಾರ್ಪೊರೇಟ್ ಬಾಂಡ್‌ನಲ್ಲಿನ ಹೂಡಿಕೆಗೆ ಶೇ 9.1ರಷ್ಟು ಹಾಗೂ ಸರ್ಕಾರಿ ಸಾಲಪತ್ರಗಳಲ್ಲಿನ ಹೂಡಿಕೆಗೆ ಶೇ 8.8ರಷ್ಟು ಲಾಭ ದೊರೆಕಿದೆ ಎಂದು ಸಚಿವೆ ನಿರ್ಮಲಾ ತಿಳಿಸಿದ್ದಾರೆ.

ನವದೆಹಲಿಯಲ್ಲಿ ಬುಧವಾರ ಎನ್‌ಪಿಎಸ್–ವಾತ್ಸಲ್ಯ ಯೋಜನೆಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಚಾಲನೆ ನೀಡಿದರು –ಪಿಟಿಐ ಚಿತ್ರ

ಗರೀಬ್ ಕಲ್ಯಾಣ ಯೋಜನೆಗೆ 35 ಲಕ್ಷ ಟನ್ ಗೋಧಿ



ನವದೆಹಲಿ (ಪಿಟಿಐ): ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯ (ಪಿಎಂಜಿಕೆಎವೈ) ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಲು ಅಕ್ಟೋಬರ್‌ನಿಂದ ಈ ಯೋಜನೆಯಡಿ ಗೋಧಿ ಹಂಚಿಕೆಯನ್ನು ಹೆಚ್ಚಳ ಮಾಡಲಾಗುವುದು ಎಂದು ಕೇಂದ್ರ ಸರ್ಕಾರ ಬುಧವಾರ ತಿಳಿಸಿದೆ.

2022ರ ಮೇ ತಿಂಗಳಿನಿಂದ ಯೋಜನೆಗೆ ನಿಗದಿಯಾಗಿದ್ದ 1.82 ಕೋಟಿ ಟನ್ ಗೋಧಿಯನ್ನು 71 ಲಕ್ಷ ಟನ್‌ಗೆ ಮಿತಿಗೊಳಿಸಲಾಗಿತ್ತು. ದೇಶೀಯ ಮಟ್ಟದಲ್ಲಿ ಉತ್ಪಾದನೆ ಕಡಿಮೆಯಾಗಿದ್ದರಿಂದ ಸರ್ಕಾರವು ಈ ಕ್ರಮ ಕೈಗೊಂಡಿತ್ತು.

'ಸರ್ಕಾರವು 100 ದಿನಗಳನ್ನು ಪೂರೈಸಿದೆ. ಹಾಗಾಗಿ, ಯೋಜನೆಗೆ ಹೆಚ್ಚುವರಿಯಾಗಿ 35 ಲಕ್ಷ ಟನ್ ಗೋಧಿ ಹಂಚಿಕೆಗೆ ಒಪ್ಪಿಗೆ ನೀಡಿದೆ' ಎಂದು ಕೇಂದ್ರ ಆಹಾರ ಸಚಿವಾಲಯದ ಕಾರ್ಯದರ್ಶಿ ಸಂಜೀವ್ ಚೋಪ್ರಾ ತಿಳಿಸಿದ್ದಾರೆ.

ಮತ್ತೆ ಫಲಾನುಭವಿಗಳಿಗೆ ಗೋಧಿ ಮತ್ತು ಅಕ್ಕಿಯನ್ನು ಸಮ ಪ್ರಮಾಣದಲ್ಲಿ ವಿತರಣೆಗೆ ಸರ್ಕಾರ ಮುಂದಾಗಿದೆ. ಹಾಗಾಗಿ, ಮುಂದಿನ ವರ್ಷದ ಮಾರ್ಚ್‌ವರೆಗೂ ಈ ಹಂಚಿಕೆ ಮುಂದುವರಿಯಲಿದೆ ಎಂದು ಹೇಳಿದ್ದಾರೆ.

ದೇಶದಲ್ಲಿ 2023–24ನೇ ಆರ್ಥಿಕ ವರ್ಷದಲ್ಲಿ 11.29 ಕೋಟಿ ಟನ್ ಗೋಧಿ ಉತ್ಪಾದನೆಯಾಗಿದೆ. ಹಾಗಾಗಿ, ಗೋಧಿ ದಾಸ್ತಾನು ಸಾಕಷ್ಟಿದೆ ಎಂದು ವಿವರಿಸಿದ್ದಾರೆ.

ಶೀಘ್ರದಲ್ಲಿಯೇ ಮುಕ್ತ ಮಾರುಕಟ್ಟೆ ಮಾರಾಟ ಯೋಜನೆಯಡಿ (ಒಎಂಎಸ್‌ಎಸ್) ಗೋಧಿ ಮಾರಾಟ ಮಾಡುವ ಉದ್ದೇಶ ಹೊಂದಿಲ್ಲ. ಗೋಧಿ ಬೆಲೆ ಸ್ಥಿರತೆಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಪಿಎಂಜಿಕೆಎವೈ ಯೋಜನೆಯಡಿ ದೇಶದ 80 ಕೋಟಿ ಬಡವರಿಗೆ ಉಚಿತವಾಗಿ 5 ಕೆ.ಜಿ ಆಹಾರ ಧಾನ್ಯ ವಿತರಿಸಲಾಗುತ್ತದೆ.

'ಪಿಎಂ–ಆಶಾ' ಮುಂದುವರಿಕೆಗೆ ಅಸ್ತು

ಕೃಷಿ ಹುಟ್ಟುವಳಿಗಳಿಗೆ ಉತ್ತಮ ಬೆಲೆ ನೀಡುವ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ಅನ್ನದಾತ ಆಯ್ ಸಂರಕ್ಷಣಾ ಅಭಿಯಾನ (ಪಿಎಂ–ಆಶಾ) ಮುಂದುವರಿಕೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಇದಕ್ಕಾಗಿ ₹35 ಸಾವಿರ ಕೋಟಿ ನೀಡಲಿದೆ. ಅಗತ್ಯ ಸರಕುಗಳ ಬೆಲೆ ಏರಿಕೆ ನಿಯಂತ್ರಿಸುವುದು ಕೂಡ ಯೋಜನೆಯ ಮುಖ್ಯ ಉದ್ದೇಶವಾಗಿದೆ. 2025–26ನೇ ಆರ್ಥಿಕ ವರ್ಷದವರೆಗೂ ಯೋಜನೆಯು ಮುಂದುವರಿಯಲಿದೆ.

ರಸಗೊಬ್ಬರಕ್ಕೆ ₹24,475 ಕೋಟಿ ಸಬ್ಸಿಡಿ: ಹಿಂಗಾರು ಅವಧಿಗೆ ಫಾಸ್ಫೇಟಿಕ್ ಮತ್ತು ಪೊಟ್ಯಾಸಿಕ್ (ಪಿ ಆ್ಯಂಡ್ ಕೆ) ರಸಗೊಬ್ಬರಗಳಿಗೆ ₹24,475 ಕೋಟಿ ಸಬ್ಸಿಡಿ ನೀಡಲು ಸಂಪುಟ ಒಪ್ಪಿಗೆ ನೀಡಿದೆ.

ರೈತರಿಗೆ ಬೆಳೆ ಪೋಷಕಾಂಶಗಳನ್ನು ಕೈಗೆಟುಕುವ ದರದಲ್ಲಿ ಒದಗಿಸಲು ಪೋಷಕಾಂಶ ಆಧಾರಿತ ಸಬ್ಸಿಡಿ (ಎನ್‌ಬಿಎಸ್) ಅಡಿ ಈ ನಿರ್ಧಾರ ಕೈಗೊಂಡಿದೆ.

ಸಂಕ್ಷಿಪ್ತ ಸುದ್ದಿ

ಕೇರಳದ ವ್ಯಕ್ತಿಗೆ ಎಂಪಾಕ್ಸ್ ದೃಢ

ಮಲ್ಲಪ್ಪುರ (ಕೇರಳ) (ಪಿಟಿಐ): ಕೇರಳದ ಉತ್ತರ ಮಲಪ್ಪುರ ಜಿಲ್ಲೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ 38 ವರ್ಷದ ವ್ಯಕ್ತಿಯೊಬ್ಬರಲ್ಲಿ ಮಂಕಿ ಪಾಕ್ಸ್ (ಎಂಪಾಕ್ಸ್) ಸೋಂಕು ಇರುವುದು ದೃಢಪಟ್ಟಿದೆ ಎಂದು ರಾಜ್ಯದ ಆರೋಗ್ಯ ಇಲಾಖೆ ಬುಧವಾರ ತಿಳಿಸಿದೆ.

ಇತ್ತೀಚೆಗೆ ಸಂಯುಕ್ತ ಅರಬ್ ಸಂಸ್ಥಾನದಿಂದ (ಯುಎಇ) ರಾಜ್ಯಕ್ಕೆ ಬಂದಿದ್ದ ವ್ಯಕ್ತಿಯಲ್ಲಿ ಎಂಪಾಕ್ಸ್ ರೋಗ-ಲಕ್ಷಣಗಳು ಕಂಡುಬಂದಿದ್ದರಿಂದ ಇಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ರಾಜ್ಯ ಆರೋಗ್ಯ ಸಚಿವ ವೀಣಾ ಜಾರ್ಜ್ 'ಫೇಸ್‌ಬುಕ್' ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

'ರೋಗಲಕ್ಷಣಗಳನ್ನು ಗಮನಿಸಿದ ವ್ಯಕ್ತಿಯು ತನ್ನ ಕುಟುಂಬದಿಂದ ತನ್ನನ್ನು ಪ್ರತ್ಯೇಕಿಸಿ, ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಂಡಿದ್ದಾನೆ. ಸದ್ಯ, ಮಂಜೇರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಾಗಿದ್ದಾನೆ. ವ್ಯಕ್ತಿಯಿಂದ ಮಾದರಿಗಳನ್ನು ಪಡೆದು ಪರೀಕ್ಷೆಗೆ ಕಳುಹಿಸಲಾಗಿದ್ದು, ಸೋಂಕು ಇರುವುದು ಫಲಿತಾಂಶದಲ್ಲಿ ದೃಢಪಟ್ಟಿದೆ' ಎಂದು ಅವರು ತಿಳಿಸಿದ್ದಾರೆ.

ಕೋಟ: ವಿದ್ಯಾರ್ಥಿನಿ ಆತ್ಮಹತ್ಯೆ

ಜೈಪುರ(ಪಿಟಿಐ): ರಾಜಸ್ಥಾನದ ಕೋಟ ನಗರದಲ್ಲಿ 19 ವರ್ಷದ ವಿದ್ಯಾರ್ಥಿನಿ 12ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡ ಘಟನೆ ನಡೆದಿದೆ.

12ನೇ ತರಗತಿಯ ವಿದ್ಯಾರ್ಥಿನಿ ಜಿಯಾ ಖಾಂಡೇಲ್‌ವಾಲ್ (19) ಆತ್ಮಹತ್ಯೆ ಮಾಡಿಕೊಂಡವರು. ವಿದ್ಯಾರ್ಥಿನಿಯ ತಂದೆ ವೈದ್ಯರಾಗಿದ್ದು, ನರ್ಸಿಂಗ್ ಹೋಂ ನಡೆಸುತ್ತಿದ್ದಾರೆ. ಮಂಗಳವಾರ ರಾತ್ರಿ ಈ ಘಟನೆ ನಡೆದಿದೆ. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ ಎಂದು ಪೊಲೀಸ್ ಠಾಣೆ ಅಧಿಕಾರಿ ಹರಿನಾರಾಯಣ್ ಶರ್ಮಾ ತಿಳಿಸಿದ್ದಾರೆ.

ಆತ್ಮಹತ್ಯೆಗೆ ಕಾರಣ ಇನ್ನೂ ತಿಳಿದುಬಂದಿಲ್ಲ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ರಾಜೇಶ್ ಕುಮಾರ್ ಟೇಲರ್ ತಿಳಿಸಿದ್ದಾರೆ.

ಮೋದಿ ಅದ್ಭುತ ವ್ಯಕ್ತಿ: ಟ್ರಂಪ್ ಬಣ್ಣನೆ



ವಾಷಿಂಗ್ಟನ್/ ನ್ಯೂಯಾರ್ಕ್ (ಪಿಟಿಐ): 'ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮುಂದಿನ ವಾರ ಮೂರು ದಿನ ಅಮೆರಿಕಕ್ಕೆ ಭೇಟಿ ನೀಡಲಿದ್ದು, ಈ ಸಂದರ್ಭದಲ್ಲಿ ನನ್ನನ್ನು ಭೇಟಿ ಮಾಡಲಿದ್ದಾರೆ' ಎಂದು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

ಹತ್ಯೆ ಯತ್ನದ ಬಳಿಕ ಮೊದಲ ಬಾರಿಗೆ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ರಿಪಬ್ಲಿಕ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಟ್ರಂಪ್ ಅವರು, ಆಮದು ಸುಂಕದ ವಿಷಯದಲ್ಲಿ ಭಾರತವನ್ನು ಟೀಕಿಸಿದರೆ, ಮೋದಿ ಅವರನ್ನು 'ಅದ್ಭುತ ವ್ಯಕ್ತಿ' ಎಂದು ಬಣ್ಣಿಸಿದರು.

ಮೋದಿ ಅವರು ಸೆಪ್ಟೆಂಬರ್ 21ರಿಂದ 23ರವರೆಗೆ ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ.

ಸೇನೆಗೆ 'ನ್ಯಾಯಾಧೀಶರ ಅಧಿಕಾರ' ನೀಡಿದ ಬಾಂಗ್ಲಾ ಸರ್ಕಾರ

ಢಾಕಾ (ಪಿಟಿಐ): ಬಾಂಗ್ಲಾದೇಶದಲ್ಲಿ ಕಾನೂನು ಸುವ್ಯವಸ್ಥೆ ಸುಧಾರಿಸಲು ಮತ್ತು ವಿಧ್ವಂಸಕ ಚಟುವಟಿಕೆಗಳನ್ನು ತಡೆಯಲು ಮಧ್ಯಂತರ ಸರ್ಕಾರವು ದೇಶದ ಸೇನೆಗೆ ಎರಡು ತಿಂಗಳಿಗೆ ಮ್ಯಾಜಿಸ್ಟೀರಿಯಲ್ ಅಧಿಕಾರವನ್ನು (ನ್ಯಾಯಾಧೀಶರಿಗೆ ಇರುವ ಅಧಿಕಾರ) ನೀಡಿದೆ.

ಸರ್ಕಾರದ ನಿರ್ಣಯದ ಬಗ್ಗೆ ಸಾರ್ವಜನಿಕ ಆಡಳಿತ ಸಚಿವಾಲಯವು ಮಂಗಳವಾರ ಪ್ರಕಟಣೆ ಹೊರಡಿಸಿ, ತತ್‌ಕ್ಷಣದಿಂದಲೇ ಇದು ಜಾರಿಯಾಗಲಿದೆ ಎಂದು ತಿಳಿಸಿದೆ.

ಸೇನೆಯ ಕಮಿಷನ್ಡ್ ಅಧಿಕಾರಿಗಳು ಈ ವಿಶೇಷ ಅಧಿಕಾರವನ್ನು ಹೊಂದಿರುತ್ತಾರೆ. ಈ ಆದೇಶವು ಮುಂದಿನ 60 ದಿನ ಚಾಲ್ತಿಯಲ್ಲಿರುತ್ತದೆ ಎಂದು ಹೇಳಿದೆ.

ಲೆಬನಾನ್‌ನಲ್ಲಿ ಸ್ಥಿರ ದೂರವಾಣಿ ಸಾಧನಗಳು ಕೂಡ ಸ್ಫೋಟ

ವಾಕಿ–ಟಾಕಿಗಳು ಸ್ಫೋಟ: 9 ಸಾವು

ಬೈರೂತ್(ಲೆಬನಾನ್) (ಎಪಿ, ಎಎಫ್‌ಪಿ): ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಸಂಘಟನೆ ಬಿಗಿ ಹಿಡಿತ ಹೊಂದಿರುವ ಪ್ರದೇಶಗಳಲ್ಲಿ ಬುಧವಾರ ವಾಕಿ–ಟಾಕಿ ಹಾಗೂ ವೈರ್‌ಲೆಸ್ ರೇಡಿಯೊ ಸಾಧನಗಳು ಸ್ಫೋಟಗೊಂಡು ಒಂಬತ್ತು ಮಂದಿ ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ..

ಬೈರೂತ್ ನಗರದ ಹೊರವಲಯ ಹಾಗೂ ದಕ್ಷಿಣ ಲೆಬನಾನ್‌ನಲ್ಲಿ ಈ ಸ್ಫೋಟಗಳು ಸಂಭವಿಸಿವೆ. ಮಂಗಳವಾರದ ಸ್ಫೋಟಗಳಲ್ಲಿ ಮೃತಪಟ್ಟಿದ್ದ ಹಿಜ್ಬುಲ್ಲಾ ಸಂಘಟನೆಯ ಮೂವರು ಸದಸ್ಯರ ಅಂತ್ಯಕ್ರಿಯೆ ನಡೆಯುತ್ತಿದ್ದ ಸ್ಥಳದ ಸಮೀಪವೂ ಬುಧವಾರ ಸ್ಫೋಟ ಸಂಭವಿಸಿದೆ.

ಎಷ್ಟು ವಾಕಿ–ಟಾಕಿ ಸಾಧನಗಳು ಸ್ಫೋಟಗೊಂಡಿವೆ ಎಂಬ ಬಗ್ಗೆ ಈ ವರೆಗೆ ಮಾಹಿತಿ ಇಲ್ಲ. ಪೂರ್ವ ಲೆಬನಾನ್‌ನಲ್ಲಿ ಸ್ಥಿರ ದೂರವಾಣಿ ಸಾಧನಗಳು ಕೂಡ ಸ್ಫೋಟಗೊಂಡಿವೆ.

ನೂರಾರು ಪೇಜರ್‌ಗಳು ಸ್ಫೋಟಗೊಂಡು 12 ಜನ ಮೃತಪಟ್ಟು, ಇತರೆ 2,800 ಮಂದಿ ಗಾಯಗೊಂಡ ಘಟನೆ ಸಂಭವಿಸಿದ ಮರುದಿನವೇ ವಾಕಿ–ಟಾಕಿ ಸಾಧನಗಳು ಸ್ಫೋಟಗೊಂಡ ಅವಘಡ ನಡೆದಿದೆ.

ದಾಳಿ: ಇಸ್ರೇಲ್‌ನ ಶಸ್ತ್ರಾಸ್ತ್ರ ಸಂಗ್ರಹಾಗಾರವನ್ನು ಗುರಿಯಾಗಿಸಿ ರಾಕೆಟ್ ನಡೆಸಿದ್ದಾಗಿ ಹಿಜ್ಬುಲ್ಲಾ ಸಂಘಟನೆ ಹೇಳಿದೆ.

ನೂರಾರು ಪೇಜರ್‌ಗಳು ಸ್ಫೋಟಗೊಂಡು ಹಲವರು ಸಾವಿಗೀಡಾದ ಬೆನ್ನಲ್ಲೇ, ಇಸ್ರೇಲ್ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವುದಾಗಿ ಉಗ್ರ ಸಂಘಟನೆ ಹಿಜ್ಬುಲ್ಲಾ ಬುಧವಾರ ಶಪಥ ಮಾಡಿದೆ.

ಬಹುತೇಕ ಶಾಂತಿಯುತವಾಗಿ ನಡೆದ ಚುನಾವಣೆ • ಹಿಂದಿನ ಏಳು ಚುನಾವಣೆಗಳಿಗಿಂತ ಅತ್ಯಧಿಕ ಮತ ಚಲಾವಣೆ

ಜಮ್ಮು–ಕಾಶ್ಮೀರ: ಶೇ 61ರಷ್ಟು ಮತದಾನ

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನ ಬುಧವಾರ ನಡೆದಿದ್ದು, ಮತದಾರರು ಉಲ್ಲಾಸ, ಉತ್ಸಾಹದಿಂದ ಮತ ಚಲಾಯಿಸಿದರು. ರಾತ್ರಿ 11.30ರ ಮಾಹಿತಿ ಪ್ರಕಾರ ಶೇ 61ರಷ್ಟು ಮತದಾನ ನಡೆದಿದೆ.

ಇದು ಹಿಂದಿನ ಏಳು ಚುನಾವಣೆಗಳಲ್ಲಿ (ನಾಲ್ಕು ಲೋಕಸಭಾ ಮತ್ತು ಮೂರು ವಿಧಾನಸಭಾ ಚುನಾವಣೆ) ನಡೆದ ಮತದಾನಕ್ಕಿಂತ ಹೆಚ್ಚು ಎಂದು ಮುಖ್ಯ ಚುನಾವಣಾ ಅಧಿಕಾರಿ ಪಿ.ಕೆ.ಪೋಲೆ ತಿಳಿಸಿದರು.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮತಗಟ್ಟೆಗಳ ಬಳಿ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಬೆಳಿಗ್ಗೆ 7 ಗಂಟೆಗೆ ಆರಂಭವಾದ ಮತದಾನ ಪ್ರಕ್ರಿಯೆಯು ಬಹುತೇಕ ಶಾಂತಿಯುತವಾಗಿ ಮುಕ್ತಾಯವಾಯಿತು. ಎಲ್ಲೂ ಮರು ಮತದಾನ ನಡೆಸುವ ಅಗತ್ಯವಿಲ್ಲ ಎಂದರು.

2014ರ ಬಳಿಕ ಇಲ್ಲಿನ ವಿಧಾನಸಭೆಗೆ ನಡೆದ ಮೊದಲ ಚುನಾವಣೆಯಲ್ಲಿ ಜನರು ಮತಗಟ್ಟೆಗಳ ಬಳಿ ಸರತಿಯಲ್ಲಿ ಸಾಲಿನಲ್ಲಿ ನಿಂತು ಮತಚಲಾಯಿಸಿದರು. ಪುರುಷರು, ಮಹಿಳೆಯರು, ಯುವ ಮತ್ತು ಹಿರಿಯ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು.

ಅನಂತನಾಗ್ ಜಿಲ್ಲೆಯಲ್ಲಿ ಬುಧವಾರ ಮತಚಲಾಯಿಸಲು ಸರತಿ ಸಾಲಿನಲ್ಲಿ ನಿಂತಿದ್ದ ಮತದಾರರು ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

ಕಣದಲ್ಲಿದ್ದ 219 ಅಭ್ಯರ್ಥಿಗಳು: ವಿಧಾನಸಭೆಯ 90 ಕ್ಷೇತ್ರಗಳ ಪೈಕಿ ಮೊದಲ ಹಂತದಲ್ಲಿ 7 ಜಿಲ್ಲೆಗಳ 24 ಕ್ಷೇತ್ರಗಳಿಗೆ ಮತದಾನ ನಿಗದಿಯಾಗಿತ್ತು. ಇದರಲ್ಲಿ ಕಾಶ್ಮೀರ ಕಣಿವೆ ಪ್ರದೇಶದ 16 ಮತ್ತು ಜಮ್ಮು ಪ್ರದೇಶದ 8 ಕ್ಷೇತ್ರಗಳಿಗೆ ಮತದಾನ ನಡೆಯಿತು. 90 ಪಕ್ಷೇತರ ಅಭ್ಯರ್ಥಿಗಳು, 9 ಮಹಿಳೆಯರು ಸೇರಿದಂತೆ 219 ಅಭ್ಯರ್ಥಿಗಳು ಕಣದಲ್ಲಿದ್ದರು.

ಬಿಜಬೆಹಾರ ಮತ್ತು ಡಿ.ಎಚ್. ಪೋರಾಗಳಲ್ಲಿ ಕೆಲ ಸಣ್ಣ ಪುಟ್ಟ ಘರ್ಷಣೆ ಹೊರತುಪಡಿಸಿದರೆ ಚುನಾವಣೆ ಬಹುತೇಕ ಶಾಂತಿಯುತವಾಗಿ ನಡೆಯಿತು.

ಕಣಿವೆ ರಾಜ್ಯಕ್ಕೆ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ಕೇಂದ್ರ ಸರ್ಕಾರ 2019ರ ಆಗಸ್ಟ್‌ನಲ್ಲಿ ಹಿಂಪಡೆದು, ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತು. ಆದಾದ ಬಳಿಕ ವಿಧಾನಸಭೆಗೆ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ.

ಬಹಿಷ್ಕಾರ ಕೊನೆಗಾಣಿಸಿದ ಮತದಾರರು

ಕುಲ್ಗಾಂ: ದೀರ್ಘಕಾಲದಿಂದ ಚುನಾವಣೆಯನ್ನು ಬಹಿಷ್ಕರಿಸಿದ್ದ ದಕ್ಷಿಣ ಕಾಶ್ಮೀರ ಜಿಲ್ಲೆಯ ಬುಗಾಮ್ ಪ್ರದೇಶದ ಜನರು, ಬಹಿಷ್ಕಾರವನ್ನು ಕೊನೆಗಾಣಿಸಿ ಈ ಬಾರಿ ಮತ ಚಲಾಯಿಸಿದರು.

ನಿಷೇಧಿತ ಜಮಾತ್-ಎ-ಇಸ್ಲಾಮಿ ಮತ್ತು ಹಿಜ್ಬುಲ್ ಮುಜಾಹಿದ್ದೀನ್ ಉಗ್ರಗಾಮಿ ಸಂಘಟನೆಗಳ ಜತೆಗಿನ ಸಂಬಂಧದಿಂದ ಈ ಪ್ರದೇಶ ಕುಖ್ಯಾತವಾಗಿದೆ.

ಇಲ್ಲಿನ ಕುಲ್ಗಾಂ ಕ್ಷೇತ್ರದಲ್ಲಿ ಜಮಾತ್ ಬೆಂಬಲಿತ ಅಭ್ಯರ್ಥಿ ಅಹ್ಮದ್ ರೇಶಿ ಪರ ದೊಡ್ಡ ರ‍್ಯಾಲಿ ಇಲ್ಲಿ ಆಯೋಜನೆಗೊಂಡಿತ್ತು.

ಈ ಹಿಂದೆ ರೇಶಿ ಹಾಗೂ ಜಮಾತ್‌ನ ಮಾಜಿ ಮುಖ್ಯಸ್ಥ ಶೇಖ್ ಗುಲಾಂ ಹಸನ್ ಅವರು ಭಯೋತ್ಪಾದಕರಿಗೆ ಆರ್ಥಿಕ ನೆರವು ನೀಡಿದ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್ಐಎ) ಇವರಿಬ್ಬರ ಮನೆಗಳ ಮೇಲೆ ದಾಳಿ ನಡೆಸಿತ್ತು.

1989ರ ಸಶಸ್ತ್ರ ಸಂಘರ್ಷದ ಬಳಿಕ ಬುಗಾಮ್ ಮತ್ತು ಸುತ್ತಮುತ್ತಲಿನ ನಿವಾಸಿಗಳು ಚುನಾವಣೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಅದಾಗ್ಯೂ ಜಮಾತ್ ಬೆಂಬಲಿಗರು ಚುನಾವಣೆಯಲ್ಲಿ ಸ್ಪರ್ಧಿಸಿರುವುದು, ಅನೇಕ ಮತದಾರರನ್ನು ಮತ ಚಲಾಯಿಸುವಂತೆ ಪ್ರೇರೇಪಿಸಿದೆ.

ಮೂವರು ಬಿಜೆಪಿ ನಾಯಕರ ಅಮಾನತು

ಜಮ್ಮು (ಪಿಟಿಐ): ಪಕ್ಷದ ವಿರುದ್ಧ ಬಂಡಾಯವೆದ್ದು ಅಭ್ಯರ್ಥಿಯಾಗಿ ಕಣಕ್ಕಿಳಿದ ಮೂವರು ಹಿರಿಯ ನಾಯಕರನ್ನು ಬಿಜೆಪಿ ಬುಧವಾರ ಅಮಾನತುಗೊಳಿಸಿದೆ.

ಜಮ್ಮು ಮತ್ತು ಕಾಶ್ಮೀರ ಘಟಕದ ಉಪಾಧ್ಯಕ್ಷ ಪವನ್ ಖಜುರಿಯಾ, ಹಿರಿಯ ನಾಯಕರಾದ ಬಲ್ವಾನ್ ಸಿಂಗ್ ಮತ್ತು ನರೀಂದರ್ ಸಿಂಗ್ ಭಾವು ಅವರು ಅಮಾನತುಗೊಂಡ ನಾಯಕರಾಗಿದ್ದಾರೆ.

ಎಬಿಸಿ ಅಧ್ಯಕ್ಷರಾಗಿ ರಿಯಾದ್ ಮ್ಯಾಥ್ಯೂ ಆಯ್ಕೆ

ನವದೆಹಲಿ (ಪಿಟಿಐ): ಮಲಯಾಳ ಮನೋರಮಾ ಸಮೂಹದ ನಿರ್ದೇಶಕ ಮತ್ತು ಮುಖ್ಯ ಸಹ ಸಂಪಾದಕ ರಿಯಾದ್ ಮ್ಯಾಥ್ಯೂ ಅವರು ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಷನ್‌ನ (ಎಬಿಸಿ) 2024–25ನೇ ಸಾಲಿನ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ರಿಯಾದ್ ಮ್ಯಾಥ್ಯೂ

ರಿಯಾದ್ ಮ್ಯಾಥ್ಯೂ ಅವರು ಮೇರಿಲ್ಯಾಂಡ್ ವಿಶ್ವವಿದ್ಯಾಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ವಾಷಿಂಗ್ಟನ್ ಪೋಸ್ಟ್, ವಾಷಿಂಗ್ಟನ್ ಟೈಮ್ಸ್ ಮತ್ತು ಕ್ಯಾಪಿಟಲ್ ನ್ಯೂಸ್ ಸರ್ವೀಸಸ್‌ನಲ್ಲಿ ತರಬೇತಿ ಪಡೆದಿದ್ದಾರೆ. ಅವರು 2009ರ ಆಗಸ್ಟ್‌ನಿಂದ ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ (ಪಿಟಿಐ) ಆಡಳಿತ ಮಂಡಳಿ ನಿರ್ದೇಶಕರಾಗಿದ್ದು, 2016-17ರ ಅವಧಿಯಲ್ಲಿ ಅಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಅಲ್ಲದೆ, ವಿಯೆನ್ನಾ ಮೂಲದ ಇಂಟರ್‌ನ್ಯಾಷನಲ್ ಪ್ರೆಸ್ ಇನ್‌ಸ್ಟಿಟ್ಯೂಟ್ (ಐಪಿಐ) ಮಂಡಳಿಯ ಸದಸ್ಯರಾಗಿ 2023ರ ಮೇವರೆಗೆ ಕರ್ತವ್ಯ ನಿರ್ವಹಿಸಿ, ಈಗ ಐಪಿಐ ಇಂಡಿಯಾದ ಅಧ್ಯಕ್ಷರಾಗಿದ್ದಾರೆ. ಮೀಡಿಯಾ ರಿಸರ್ಚ್ ಯೂಸರ್ಸ್ ಕೌನ್ಸಿಲ್‌ನ (ಎಂಆರ್‌ಯುಸಿ) ನಿರ್ದೇಶಕರ ಮಂಡಳಿಯಲ್ಲಿ ನಿರ್ದೇಶಕರಾಗಿ ಮತ್ತು ಅಸೋಸಿಯೇಷನ್ ಆಫ್ ಇಂಡಿಯನ್ ಮ್ಯಾಗಜಿನ್ಸ್ (ಎಐಎಂ) ಮಂಡಳಿಯ ಸದಸ್ಯರಾಗಿಯೂ ಅವರು ಕೆಲಸ ಮಾಡಿದ್ದಾರೆ.

ಎಬಿಸಿಯ ಆಡಳಿತ ಮಂಡಳಿಯಲ್ಲಿ ಜಾಹೀರಾತುದಾರರು/ಗ್ರಾಹಕರನ್ನು ಪ್ರತಿನಿಧಿಸುವ ಐಟಿಸಿ ಲಿಮಿಟೆಡ್‌ನ ಕರುಣೇಶ್ ಬಜಾಜ್ ಅವರು ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ ಎಂದು ಎಬಿಸಿಯು ಬುಧವಾರ ಹೇಳಿಕೆಯಲ್ಲಿ ತಿಳಿಸಿದೆ.

ಮಂಡಳಿಯಲ್ಲಿ ಪ್ರಕಾಶಕ ಸದಸ್ಯರನ್ನು ಪ್ರತಿನಿಧಿಸುವ ಬೆನೆಟ್ ಕೋಲ್‌ಮನ್ ಆ್ಯಂಡ್ ಕಂಪನಿ ಲಿಮಿಟೆಡ್‌ನ ಮೋಹಿತ್ ಜೈನ್ ಅವರು ಕಾರ್ಯದರ್ಶಿಯಾಗಿ ಮತ್ತು ಖಜಾಂಚಿಯಾಗಿ ಜಾಹೀರಾತು ಏಜೆನ್ಸಿಗಳ ಸದಸ್ಯರ ಪ್ರತಿನಿಧಿ ಮ್ಯಾಡಿಸನ್ ಕಮ್ಯುನಿಕೇಷನ್ ಪ್ರೈವೇಟ್ ಲಿಮಿಟೆಡ್‌ನ ವಿಕ್ರಮ್ ಸಖೂಜ ಅವರನ್ನು ಅವಿರೋಧವಾಗಿ ಪುನರಾಯ್ಕೆ ಮಾಡಲಾಗಿದೆ.

ಸಕಾಳ ಪೇಪರ್ಸ್ ಪ್ರೈವೇಟ್ ಲಿಮಿಟೆಡ್‌ನ ಪ್ರತಾಪ್ ಜಿ. ಪವಾರ್, ಜಾಗರಣ್ ಪ್ರಕಾಶನ ಲಿಮಿಟೆಡ್‌ನ ಶೈಲೇಶ್ ಗುಪ್ತಾ, ಎಚ್.ಟಿ. ಮೀಡಿಯಾ ಲಿಮಿಟೆಡ್‌ನ ಪ್ರವೀಣ್ ಸೋಮೇಶ್ವರ್, ಎಬಿಪಿ ಪ್ರೈವೇಟ್ ಲಿಮಿಟೆಡ್‌ನ ಧ್ರುವ ಮುಖರ್ಜಿ, ಡಿ.ಬಿ. ಕಾರ್ಪ್ ಲಿಮಿಟೆಡ್‌ನ ಗಿರೀಶ್ ಅಗರ್ವಾಲ್ ಅವರು ಎಬಿಸಿ ಆಡಳಿತ ಮಂಡಳಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.

ಒಟ್ಟಿಗೆ ಚುನಾವಣೆಗೆ ಒಪ್ಪಿಗೆ

ಒಂದನೇ ಪುಟದಿಂದ...

ಎನ್‌ಡಿಎ ಸರ್ಕಾರಕ್ಕೆ ನೂರು ದಿನಗಳು ತುಂಬಿದ ಬೆನ್ನಲ್ಲೇ, ಸಂಪುಟ ಈ ತೀರ್ಮಾನ ಕೈಗೊಂಡಿದೆ. ಜಮ್ಮು ಮತ್ತು ಕಾಶ್ಮೀರ (ಎರಡನೇ ಮತ್ತು ಮೂರನೇ ಹಂತ) ಹಾಗೂ ಹರಿಯಾಣ ವಿಧಾನಸಭೆ ಚುನಾವಣೆಗಳಿಗೆ ಕೆಲವೇ ದಿನಗಳು ಉಳಿದಿರುವಾಗ ಕೇಂದ್ರ ಈ ದಾಳ ಉರುಳಿಸಿದೆ. ಈ ವರ್ಷದ ಅಂತ್ಯದೊಳಗೆ ಮಹಾರಾಷ್ಟ್ರ ಹಾಗೂ ಜಾರ್ಖಂಡ್ ವಿಧಾನಸಭೆಗಳಿಗೆ ಚುನಾವಣೆ ನಡೆಯಬೇಕಿದೆ.

2014ರಲ್ಲಿ ಅಧಿಕಾರಕ್ಕೆ ಬಂದ ದಿನದಿಂದಲೂ ಮೋದಿ ಅವರು ಸ್ಥಳೀಯ ಸಂಸ್ಥೆಗಳು ಸೇರಿದಂತೆ ಏಕ ಕಾಲಕ್ಕೆ ಚುನಾವಣೆಗಳನ್ನು ನಡೆಸಬೇಕು ಎಂಬುದನ್ನು ಬಲವಾಗಿ ಪ್ರತಿಪಾದಿಸುತ್ತಿದ್ದಾರೆ. ನಿರಂತರವಾಗಿ ಚುನಾವಣೆಗಳು ನಡೆಯುವುದರಿಂದ ಅಪಾರ ಹಣವ್ಯಯವಾಗಿ, ಅಭಿವೃದ್ಧಿ ಕುಂಠಿತಗೊಳ್ಳುತ್ತದೆ. ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವುದರಿಂದ ಈ ಎಲ್ಲ ತೊಂದರೆ ತಪ್ಪಿಸಬಹುದು ಎಂಬ ಕಾರಣಗಳನ್ನು ಮೋದಿ ನೀಡುತ್ತಿದ್ದಾರೆ. 'ಉನ್ನತ ಮಟ್ಟದ ಸಮಿತಿ ಶಿಫಾರಸುಗಳನ್ನು ಸಂಪುಟ ಅಂಗೀಕರಿಸಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಇನ್ನಷ್ಟು ಶ್ರೀಮಂತಗೊಳಿಸಲಿದೆ' ಎಂದು ಮೋದಿ ಹೇಳಿದ್ದಾರೆ.

ಸಂಪುಟದ ತೀರ್ಮಾನವನ್ನು ಎನ್‌ಡಿಎ ಮಿತ್ರಪಕ್ಷಗಳು ಸ್ವಾಗತಿಸಿವೆ. 'ಏಕಕಾಲಕ್ಕೆ ಚುನಾವಣೆ ನಡೆಸುವುದು ಪ್ರಾಯೋಗಿಕವಲ್ಲ' ಎಂದು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ವಾಗ್ದಾಳಿ ನಡೆಸಿವೆ. 'ಜಮ್ಮು ಮತ್ತು ಕಾಶ್ಮೀರದ ಜತೆಗೆ ಮಹಾರಾಷ್ಟ್ರ ವಿಧಾನಸಭೆಯ ಚುನಾವಣೆಯನ್ನು ನಡೆಸಲು ಸಾಧ್ಯವಾಗದವರು ಎಲ್ಲ ಚುನಾವಣೆಗಳನ್ನು ಒಟ್ಟಿಗೆ ಹೇಗೆ ನಡೆಸುತ್ತಾರೆ' ಎಂದು ಟಿಎಂಸಿ ಹಾಗೂ ಎಎಪಿ ನಾಯಕರು ಪ್ರಶ್ನಿಸಿದ್ದಾರೆ.

ಸಂಪುಟ ಸಭೆ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಕೇಂದ್ರ ವಾರ್ತಾ ಹಾಗೂ ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, 'ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಗೊಳಿಸಲು ಅನುಷ್ಠಾನ ಗುಂಪು ರಚಿಸಲಾಗುವುದು. ಮುಂದಿನ ಕೆಲವು ತಿಂಗಳುಗಳಲ್ಲಿ ದೇಶದಾದ್ಯಂತ ವಿವಿಧ ವೇದಿಕೆಗಳಲ್ಲಿ ವಿವರವಾದ ಚರ್ಚೆ ನಡೆಸಲಾಗುವುದು' ಎಂದರು.

'ಮುಂದಿನ ಕೆಲವು ತಿಂಗಳುಗಳಲ್ಲಿ ನಾವು ಒಮ್ಮತಕ್ಕೆ ಬರಲು ಪ್ರಯತ್ನಿಸುತ್ತೇವೆ. ಪ್ರಜಾಪ್ರಭುತ್ವ ಮತ್ತು ರಾಷ್ಟ್ರದ ಮೇಲೆ ದೀರ್ಘಾವಧಿಯಲ್ಲಿ ಪರಿಣಾಮ ಬೀರುವ ಅಂಶಗಳ ಬಗ್ಗೆ ಒಮ್ಮತ ಮೂಡಿಸುವ ವಿಶ್ವಾಸ ಹೊಂದಿದ್ದೇವೆ. ಇದು ನಮ್ಮ ರಾಷ್ಟ್ರವನ್ನು ಬಲಪಡಿಸುವ ವಿಷಯ' ಎಂದರು.

ಶಿಫಾರಸುಗಳು ಯಾವಾಗ ಜಾರಿಗೆ ಬರಲಿವೆ ಮತ್ತು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಸೂದೆಯನ್ನು ತರಲಾಗುತ್ತದೆಯೇ' ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ, ವೈಷ್ಣವ್ ನೇರ ಉತ್ತರ ನೀಡಲಿಲ್ಲ. 'ಸರ್ಕಾರವು ತನ್ನ ಪ್ರಸ್ತುತ ಅಧಿಕಾರಾವಧಿಯಲ್ಲಿ ಅದನ್ನು ಜಾರಿಗೆ ತರಲಿದೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಪಷ್ಟಪಡಿಸಿದರು.

ಸಮಿತಿಯ ಶಿಫಾರಸುಗಳು

- 1951 ಮತ್ತು 1967ರ ನಡುವೆ ಚುನಾವಣೆಗಳು ಏಕಕಾಲದಲ್ಲಿ ನಡೆದವು.
- ಕಾನೂನು ಆಯೋಗದ 170ನೇ ವರದಿ (1999): ಐದು ವರ್ಷಗಳಲ್ಲಿ ಲೋಕಸಭೆ ಮತ್ತು ಎಲ್ಲ ವಿಧಾನಸಭೆಗಳಿಗೆ ಒಟ್ಟಿಗೆ ಚುನಾವಣೆ.
- ಸಂಸದೀಯ ಸಮಿತಿಯ 79ನೇ ವರದಿ (2015): ಎರಡು ಹಂತಗಳಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸುವ ವಿಧಾನಗಳ ಕುರಿತ ಸಲಹೆ.
- ರಾಮನಾಥ ಕೋವಿಂದ್ ಅಧ್ಯಕ್ಷತೆಯ ಉನ್ನತ ಮಟ್ಟದ ಸಮಿತಿಯು ರಾಜಕೀಯ ಪಕ್ಷಗಳು ಮತ್ತು ತಜ್ಞರ ಜತೆಗೆ ವಿಸ್ತೃತ ಚರ್ಚೆ ನಡೆಸಿ ವರದಿ ಸಿದ್ಧಪಡಿಸಿದೆ. ದೇಶದಲ್ಲಿ ಏಕಕಾಲಕ್ಕೆ ಚುನಾವಣೆ ನಡೆಸಲು ವ್ಯಾಪಕ ಬೆಂಬಲವಿದೆ ಎಂದು ವರದಿಯಲ್ಲಿ ಉಲ್ಲೇಖ.

ಒಂದು ದೇಶ–ಒಂದು ಚುನಾವಣೆ ಸಂಬಂಧ ಉನ್ನತ ಮಟ್ಟದ ಸಮಿತಿಯು 62 ಪಕ್ಷಗಳ ಅಭಿಪ್ರಾಯಗಳನ್ನು ಕೇಳಿತ್ತು. 47 ಪಕ್ಷಗಳು ಪ್ರತಿಕ್ರಿಯಿಸಿದ್ದವು. 32 ಪಕ್ಷಗಳು ಪರವಾಗಿ ಅಭಿಪ್ರಾಯ ನೀಡಿದ್ದರೆ, 15 ಪಕ್ಷಗಳು ಈ ಪ್ರಸ್ತಾವವನ್ನು ವಿರೋಧಿಸಿದ್ದವು.

ಪರ: ಬಿಜೆಪಿ, ಎಐಎಡಿಎಂಕೆ, ಬಿಜೆಡಿ, ಜೆಡಿ(ಯು), ಎಜೆಎಸ್‌ಯು, ಎನ್‌ಪಿಪಿ, ಎಜಿಪಿ, ಎನ್‌ಡಿಪಿಪಿ, ಅಕಾಲಿದಳ, ಪಿಎಂಕೆ, ಎಚ್‌ಎಎಂ, ಐಪಿಎಫ್‌ಟಿ, ಅಪ್ನಾ ದಳ (ಸೋನಿಲಾಲ್), ಎಂಜಿಪಿ, ನಿಶಾದ್ ಪಾರ್ಟಿ, ಡಿಪಿಎಪಿ ಸೇರಿ 32 ಪಕ್ಷಗಳು

ವಿರುದ್ಧ: ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಸಿಪಿಎಂ, ಸಿಪಿಐ, ಡಿಎಂಕೆ, ವಿಸಿಕೆ, ಎಐಎಂಐಎಂ ಸೇರಿ 15 ಪಕ್ಷಗಳು.

ಪಕ್ಷಗಳ ನಿಲುವು

ಬಿಜೆಪಿ: ಆರ್ಥಿಕ, ಆಡಳಿತಾತ್ಮಕ ಮತ್ತು ಪ್ರಜಾಸತ್ತಾತ್ಮಕ ಕಾರಣಗಳಿಗಾಗಿ ರಾಷ್ಟ್ರೀಯ ಹಿತಾಸಕ್ತಿ ಅಡಗಿದೆ.

ಎಜೆಎಸ್‌ಯು: ಚುನಾವಣಾ ವೆಚ್ಚ ಕಡಿಮೆ ಮಾಡಲಿದೆ ಹಾಗೂ ಆಡಳಿತ ಸುಧಾರಣೆ ಆಗಲಿದೆ.

ಬಿಜೆಡಿ: ಹಣಕಾಸಿನ ಒತ್ತಡ ಹಾಗೂ ಆಡಳಿತದಲ್ಲಿನ ವಿಳಂಬದ ತೊಂದರೆಗಳನ್ನು ನಿವಾರಿಸುತ್ತದೆ.

ಬಿಎಸ್‌ಪಿ: ವಿಶಾಲ ಪ್ರಾದೇಶಿಕ ವ್ಯಾಪ್ತಿ ಹಾಗೂ ದೇಶದ ಜನಸಂಖ್ಯೆಯ ಕಾರಣದಿಂದ ಇದರ ಅನುಷ್ಠಾನ ದೊಡ್ಡ ಸವಾಲು.

ಕಾಂಗ್ರೆಸ್: ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಾಳುಗೆಡವಲಿದೆ. ಸದ್ಯದ ಸಂವಿಧಾನದ ಅಡಿ ಈ ನೀತಿ ಜಾರಿ ಸಾಧ್ಯವಿಲ್ಲ. ಅದನ್ನು ಜಾರಿಗೆ ತರಬೇಕೆಂದರೆ ಕನಿಷ್ಠ ಐದು ಸಂವಿಧಾನ ತಿದ್ದುಪಡಿ ಮಾಡಬೇಕಾಗುತ್ತದೆ.

ಎಎಪಿ: ಇದು ಸಂವಿಧಾನದ ಮೂಲ ಸ್ವರೂಪವನ್ನು ಉಲ್ಲಂಘಿಸಲಿದೆ. ಪ್ರಾದೇಶಿಕ ಪಕ್ಷಗಳನ್ನು ಅಳಿವಿನಂಚಿಗೆ ನೂಕಲಿದೆ. ಅಧ್ಯಕ್ಷೀಯ ಮಾದರಿಯ ಸರ್ಕಾರ ರಚನೆಗೆ ಕಾರಣವಾಗಬಹುದು.

ಸಿಪಿಎಂ: ಮೂಲಭೂತವಾಗಿ ಪ್ರಜಾಪ್ರಭುತ್ವ ವಿರೋಧಿ ಹಾಗೂ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ತಳಪಾಯವನ್ನು ಹಾಳುಗೆಡವಲಿದೆ.

ಟಿಎಂಸಿ: ಸಂವಿಧಾನದ ಒಕ್ಕೂಟ ವ್ಯವಸ್ಥೆ ಹಾಗೂ ದೇಶದ ಚುನಾವಣಾ ತತ್ವಕ್ಕೆ ವಿರುದ್ಧ.

ಸಮಾಜವಾದಿ ಪಕ್ಷ: ಚುನಾವಣಾ ತಂತ್ರ ಮತ್ತು ವೆಚ್ಚದಲ್ಲಿ ರಾಷ್ಟ್ರೀಯ ಪಕ್ಷಗಳೊಂದಿಗೆ ಸ್ಪರ್ಧಿಸಲು ರಾಜ್ಯ ಮಟ್ಟದ ಪಕ್ಷಗಳಿಗೆ ಸಾಧ್ಯವಾಗುವುದಿಲ್ಲ.

ಸಿಪಿಐ: ಏಕರೂಪತೆ ಹೇರುವ ಮೂಲಕ ಮತ್ತು ದೇಶವನ್ನು ಒಂದು ಪಕ್ಷದ ಆಡಳಿತದತ್ತ ತಳ್ಳುವ ಮೂಲಕ ಅಭಿಪ್ರಾಯ ವೈವಿಧ್ಯವನ್ನು ಮೊಟಕುಗೊಳಿಸುವ ಪ್ರಯತ್ನ.

ಈ ಪ್ರಸ್ತಾವನೆ ಬಗ್ಗೆ ತಮ್ಮ ಪಕ್ಷವು ಸಕಾರಾತ್ಮಕ ನಿಲುವು ಹೊಂದಿದೆ. ಆದರೆ, ಉದ್ದೇಶವು ರಾಷ್ಟ್ರೀಯ ಹಾಗೂ ಸಾರ್ವಜನಿಕ ಹಿತಾಸಕ್ತಿ ಹೊಂದಿರಬೇಕು

ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ

ಜಾತಿ ಗಣತಿ, ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿಯ ಭರವಸೆ

ಹರಿಯಾಣಕ್ಕೆ ಕಾಂಗ್ರೆಸ್ ಏಳು ಗ್ಯಾರಂಟಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಹರಿಯಾಣದಲ್ಲಿ ಅಧಿಕಾರಕ್ಕೆ ಬಂದರೆ ಏಳು ಗ್ಯಾರಂಟಿಗಳ ಅಡಿಯಲ್ಲಿ ಒಟ್ಟು 16 ಭರವಸೆಗಳನ್ನು ಈಡೇರಿಸಲಾಗುವುದು ಎಂದು ಕಾಂಗ್ರೆಸ್ ಪಕ್ಷವು ಬುಧವಾರ ಹೇಳಿದೆ. ಹತ್ತು ವರ್ಷಗಳ ಆಡಳಿತದಲ್ಲಿ ಬಿಜೆಪಿಯು ರಾಜ್ಯವನ್ನು ನಾಶಮಾಡಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಕಾಂಗ್ರೆಸ್ ಪಕ್ಷದ ಪೂರ್ಣ ಪ್ರಮಾಣದ ಪ್ರಣಾಳಿಕೆಯು ಶೀಘ್ರದಲ್ಲಿಯೇ ಬಿಡುಗಡೆ ಆಗಲಿದೆ. ಅದರಲ್ಲಿ ಇನ್ನೂ ಹೆಚ್ಚಿನ ಘೋಷಣೆಗಳು ಇರುತ್ತವೆ ಎಂದು ಪಕ್ಷದ ಮೂಲಗಳು ಹೇಳಿವೆ. ರೈತರ ಪ್ರತಿಭಟನೆಗಳ ಸಂದರ್ಭದಲ್ಲಿ ಮೃತರಾದ ರೈತರಿಗೆ ಸ್ಮಾರಕ ನಿರ್ಮಾಣ, ಅವರ ಕುಟುಂಬದ ಸದಸ್ಯರಿಗೆ ಉದ್ಯೋಗ ಕೊಡಿಸುವ ಭರವಸೆಗಳು ಕೂಡ ಇರಲಿವೆ ಎಂದು ಮೂಲಗಳು ಹೇಳಿವೆ.

ಗ್ಯಾರಂಟಿಗಳ ಅನಾವರಣ ಸಂದರ್ಭದಲ್ಲಿ ಹಾಜರಿದ್ದ ಹರಿಯಾಣದ ವಿರೋಧ ಪಕ್ಷದ ನಾಯಕ ಭೂಪಿಂದರ್ ಸಿಂಗ್ ಹೂಡಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ಕೆ.ಸಿ. ವೇಣುಗೋಪಾಲ್ ಮತ್ತು ಅಜಯ್ ಮಾಕನ್ –ಪಿಟಿಐ ಚಿತ್ರ

ರಾಜ್ಯದಲ್ಲಿ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಮತ್ತೆ ಜಾರಿಗೆ ತರಲಾಗುತ್ತದೆ, ಜಾತಿ ಗಣತಿ ನಡೆಸಲಾಗುತ್ತದೆ, ಕೆನೆಪದರ ಮಿತಿಯನ್ನು ₹10 ಲಕ್ಷಕ್ಕೆ ಹೆಚ್ಚಿಸಲಾಗುತ್ತದೆ, ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ನೀಡಲಾಗುತ್ತದೆ, ಬೆಳೆ ಹಾನಿಗೆ ಪರಿಹಾರವನ್ನು ತಕ್ಷಣ ನೀಡಲಾಗುತ್ತದೆ, ಬಡವರಿಗೆ 100 ಯಾರ್ಡ್‌ಗಳ ನಿವೇಶನ ಹಾಗೂ ₹3.5 ಲಕ್ಷದ ಎರಡು ಕೊಠಡಿಗಳ ಮನೆ ನೀಡಲಾಗುತ್ತದೆ ಎಂಬ ಭರವಸೆಗಳನ್ನು ಕೂಡ ಪಕ್ಷವು ನೀಡಿದೆ.

ಏಳು ಗ್ಯಾರಂಟಿಗಳು

- ಕುಟುಂಬಗಳಿಗೆ ಸಮೃದ್ಧಿ
- ಮಹಿಳೆಯರ ಸಬಲೀಕರಣ
- ಯುವಕರಿಗೆ ಸುಭದ್ರ ಭವಿಷ್ಯ
- ಸಾಮಾಜಿಕ ಭದ್ರತೆಗೆ ಬಲ
- ಹಿಂದುಳಿದ ವರ್ಗಗಳಿಗೆ ಹಕ್ಕುಗಳು
- ರೈತರ ಸಮೃದ್ಧಿ
- ಬಡವರಿಗೆ ಮನೆ



ಗ್ಯಾರಂಟಿಗಳ ಅಡಿಯಲ್ಲಿ ಕಾಂಗ್ರೆಸ್ ನೀಡಿರುವ ಭರವಸೆಗಳು

- 300 ಯೂನಿಟ್‌ವರೆಗೆ ವಿದ್ಯುತ್ ಉಚಿತ
- ₹25 ಲಕ್ಷದವರೆಗೆ ಉಚಿತವಾಗಿ ಚಿಕಿತ್ಸೆ
- ಮಹಿಳೆಯರಿಗೆ ತಿಂಗಳಿಗೆ ₹2000
- ₹500ಕ್ಕೆ ಎಲ್‌ಪಿಜಿ ಅಡುಗೆ ಅನಿಲ ಸಿಲಿಂಡರ್
- ಎರಡು ಲಕ್ಷ ಖಾಲಿ ಹುದ್ದೆಗಳಿಗೆ ನೇಮಕ
- ಮಾದಕವಸ್ತು ಮುಕ್ತ ಹರಿಯಾಣ ಯೋಜನೆ
- ವೃದ್ಧರಿಗೆ, ಅಂಗವಿಕಲರಿಗೆ ಮತ್ತು ವಿಧವೆಯರಿಗೆ ₹6,000 ಪಿಂಚಣಿ

'ಪ್ರಜಾಪ್ರಭುತ್ವಕ್ಕೆ ಬಗೆವ ದ್ರೋಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ತರಲು ಹೊರಟಿರುವ 'ಒಂದು ದೇಶ, ಒಂದು ಚುನಾವಣೆ'ಯು ಪ್ರಜಾಪ್ರಭುತ್ವಕ್ಕೆ ಬಗೆಯುವ ದ್ರೋಹ' ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ಸಿದ್ದರಾಮಯ್ಯ

'ಒಂದು ದೇಶ, ಒಂದು ಚುನಾವಣೆ' ಸಂಬಂಧ ತಜ್ಞರ ಸಮಿತಿ ಮಾಡಿದ್ದ ಶಿಫಾರಸುಗಳಿಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, 'ಇದು ಸಂಪೂರ್ಣವಾಗಿ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಲೋಕಸಭೆ ಇಲ್ಲವೇ ವಿಧಾನಸಭೆಯಲ್ಲಿ ಆಡಳಿತಾರೂಢ ಪಕ್ಷ ವಿಶ್ವಾಸಮತ ಗಳಿಸಲು ಸೋತುಹೋಗುವ ಸಂದರ್ಭದಲ್ಲಿ ಎದುರಾಗುವ ಬಿಕ್ಕಟ್ಟಿಗೆ ಈ ಪ್ರಸ್ತಾವದಲ್ಲಿ ಪರಿಹಾರವೇ ಇಲ್ಲ' ಎಂದರು.

'ಇಂತಹ ಸಂದರ್ಭದಲ್ಲಿ ಮಧ್ಯಂತರ ಚುನಾವಣೆಯೊಂದೇ ಯೋಗ್ಯ ಪರಿಹಾರ. ಇದರ ಬದಲಿಗೆ ಸದನದಲ್ಲಿ ವಿಶ್ವಾಸ ಮತ ಗಳಿಸಲು ವಿಫಲವಾದ ಅಲ್ಪಸಂಖ್ಯಾತ ಪಕ್ಷ ಅಧಿಕಾರದಲ್ಲಿ ಮುಂದುವರಿಯಲು ಅವಕಾಶ ನೀಡಿದರೆ ಅದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಬಗೆಯುವ ದ್ರೋಹವಾಗುತ್ತದೆ' ಎಂದರು.

'ಹೊಸ ಚುನಾವಣಾ ವ್ಯವಸ್ಥೆ ಜಾರಿಗೆ ಬರಬೇಕಾದರೆ ಮೊದಲು ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ಮಾಡಬೇಕಾಗಿದೆ. ಇದರ ಜೊತೆಗೆ ಸಂವಿಧಾನದ ಕನಿಷ್ಠ ಐದು ವಿಧಿಗಳಿಗೆ ತಿದ್ದುಪಡಿ ತರಬೇಕಾಗಿದೆ. ಇಡೀ ದೇಶದಲ್ಲಿ ಒಂದೇ ಬಾರಿ ಲೋಕಸಭೆ ಮತ್ತು ವಿಧಾನಸಭಾ ಚುನಾವಣೆಗಳನ್ನು ನಡೆಸುವ ಶಕ್ತಿ-ಸಾಮರ್ಥ್ಯ ನಮ್ಮ ಈಗಿನ ಚುನಾವಣಾ ಆಯೋಗಕ್ಕೆ ಇಲ್ಲ. ತನ್ನ ವೈಫಲ್ಯ ಮುಚ್ಚಿಕೊಳ್ಳಲು ಮೋದಿ ಸರ್ಕಾರ ಮಾಡುತ್ತಿರುವ ಗಿಮಿಕ್ ಇದು' ಎಂದು ಲೇವಡಿ ಮಾಡಿದರು.

ಬಿಜೆಪಿ ಮೊದಲು 'ಆಪರೇಷನ್ ಕಮಲ'ದಿಂದ ಸರ್ಕಾರ ಬೀಳಿಸುತ್ತಿತ್ತು. ಈಗ 'ಒಂದು ದೇಶ, ಒಂದು ಚುನಾವಣೆ' ಹೆಸರಿನಲ್ಲಿ ಸರ್ಕಾರಗಳನ್ನು ಬೀಳಿಸಲು ಮುಂದಾಗಿದೆ

ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

ಲೋಕಸಭಾ ಚುನಾವಣೆಗೆ ನೀಡಿದ್ದ ಭರವಸೆಗಳಲ್ಲಿ 'ಒಂದು ದೇಶ, ಒಂದು ಚುನಾವಣೆ'ಯೂ ಇತ್ತು. ಈಗ ಅದನ್ನು ಜಾರಿಗೆ ತರಲು ಕ್ರಮ ತೆಗೆದುಕೊಳ್ಳಲಾಗಿದೆ

ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯಾಧ್ಯಕ್ಷ

ಒಂದೇ ಚುನಾವಣೆ ನಡೆಸುವದರಿಂದ ಸರ್ಕಾರದ ಹಣಕಾಸಿನ ಹೊರೆ ಇಳಿಕೆಯಾಗಲಿದೆ. ಅಲ್ಲದೇ ಚುನಾಯಿತ ಪ್ರತಿನಿಧಿಗಳು ಆಡಳಿತದತ್ತ ಗಮನಹರಿಸಬಹುದು

ಆರ್.ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ

ಕೋಲ್ಕತ್ತ: ಆರೋಪಿ ಬಟ್ಟೆ ವಶ ವಿಳಂಬ

ನವದೆಹಲಿ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಮತ್ತು ಆಕೆಯ ಕೊಲೆ ಪ್ರಕರಣದ ಆರೋಪಿಗಳಲ್ಲೊಬ್ಬರಾದ ಸಂಜಯ್ ರಾಯ್ ಬಟ್ಟೆಗಳನ್ನು ವಶಕ್ಕೆ ಪಡೆಯುವಲ್ಲಿ ಪೊಲೀಸರು ವಿಳಂಬ ಮಾಡಿದ್ದಾರೆ ಎಂದು ಸಿಬಿಐ ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಈ ಅಪರಾಧ ನಡೆದ ಮಾರನೇ ದಿನವಾದ ಆಗಸ್ಟ್ 10ರಂದೇ, ಕೃತ್ಯದಲ್ಲಿ ರಾಯ್ ಪಾತ್ರವಿರುವುದು ಕಂಡುಬಂದಿತ್ತು. ಆದಾಗ್ಯೂ, ಆತನ ಬಟ್ಟೆ ವಶಕ್ಕೆ ಪಡೆಯಲು ಪೊಲೀಸರು ಎರಡು ದಿನ ವಿಳಂಬ ಮಾಡಿದರು ಎಂದು ಅಧಿಕಾರಿಗಳು ಹೇಳಿದ್ದಾರೆ.

ಘಟನೆ ನಡೆದ ದಿನ ಬೆಳಗಿನ ಜಾವ 4.30ಕ್ಕೆ, ರಾಯ್ ಕಾಲೇಜಿನ ಸೆಮಿನಾರ್ ಹಾಲ್ ಪ್ರವೇಶಿಸುತ್ತಿರುವುದು ಸಿ.ಸಿ. ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದರ ಆಧಾರದಲ್ಲಿ ಅವರನ್ನು ಬಂಧಿಸಲಾಗಿದೆ.

'ಈ ಅಪರಾಧ ಕೃತ್ಯ ಎಸಗುವಲ್ಲಿ ರಾಯ್ ಪಾತ್ರ ಇತ್ತು ಎಂಬುದು ಈಗಾಗಲೇ ಕಂಡುಬಂದಿದೆ. ಆದರೆ, ಆತನಿಗೆ ಸೇರಿದ ವಸ್ತುಗಳು ಹಾಗೂ ಆತನ ಬಟ್ಟೆ ಜಪ್ತಿ ಮಾಡಲು ತಾಲಾ ಪೊಲೀಸ್ ಠಾಣೆ ಅಧಿಕಾರಿಗಳು ಅನಗತ್ಯವಾಗಿ ಎರಡು ದಿನ ತಡ ಮಾಡಿದ್ದಾರೆ. ವಿಳಂಬ ಮಾಡಿರದಿದ್ದಲ್ಲಿ, ರಾಯ್ ವಿರುದ್ಧ ಪ್ರಬಲ ಸಾಕ್ಷ್ಯ ಲಭಿಸಿದಂತಾಗುತ್ತಿತ್ತು' ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ

ಶುಕ್ರ ಗ್ರಹ ಅಧ್ಯಯನ ಯೋಜನೆಗೂ ಕೇಂದ್ರ ಸಂಪುಟ ಅಸ್ತು

'ಚಂದ್ರಯಾನ–4'ಕ್ಕೆ ಅನುಮೋದನೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಚಂದ್ರನಲ್ಲಿಗೆ ಭಾರತೀಯ ಗಗನಯಾನಿಗಳನ್ನು ಕಳಿಸುವುದು, ಶುಕ್ರ ಗ್ರಹ ಅಧ್ಯಯನ ಹಾಗೂ ಅನಿಮೇಷನ್ ತಂತ್ರಜ್ಞಾನಕ್ಕೆ ಉತ್ತೇಜನ ನೀಡುವ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ.

ಭಾರತೀಯ ಗಗನಯಾನಿಗಳು ಚಂದಿರ ಅಂಗಳದಲ್ಲಿ ಇಳಿದು, ಪುನಃ ಭೂಮಿಗೆ ಮರಳಲು ಅಗತ್ಯವಿರುವ ತಂತ್ರಜ್ಞಾನದ ಅಭಿವೃದ್ಧಿ ಹಾಗೂ ಪ್ರಾತ್ಯಕ್ಷಿಕೆ ಒಳಗೊಂಡ 'ಚಂದ್ರಯಾನ–4' ಬಾಹ್ಯಾಕಾಶ ಕಾರ್ಯಕ್ರಮಕ್ಕೆ ಸಂಪುಟ ಅನುಮೋದನೆ ನೀಡಿದೆ.

2040ರ ವೇಳೆಗೆ ಈ ಉದ್ದೇಶ ಸಾಧನೆಗೆ ಬೇಕಾದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಮಹತ್ವಾಕಾಂಕ್ಷಿ ಯೋಜನೆ ಇದಾಗಿದೆ.

ಈ ಬಾಹ್ಯಾಕಾಶ ಯೋಜನೆಗೆ ಅಗತ್ಯವಿರುವ ಗಗನನೌಕೆ ಅಭಿವೃದ್ಧಿ ಮತ್ತು ಅದರ ಉಡ್ಡಯನದ ಹೊಣೆಯನ್ನು ಇಸ್ರೊ ನಿಭಾಯಿಸುವುದು. ಮೂರು ವರ್ಷಗಳಲ್ಲಿ ಯೋಜನೆ ಸಿದ್ಧಗೊಂಡು, ಅನುಮೋದನೆ ಪಡೆಯುವ ನಿರೀಕ್ಷೆ ಇದೆ. ಈ ಕಾರ್ಯದಲ್ಲಿ ದೇಶದ ಉದ್ದಿಮೆಗಳು ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳು ಕೂಡ ಭಾಗಿಯಾಗಲಿವೆ.

'ಚಂದ್ರನ ಮೇಲ್ಮೈಯ ಶಿಲೆ, ಮಣ್ಣು ಮತ್ತಿತರ ಮಾದರಿಗಳನ್ನು ಸಂಗ್ರಹಿಸಿ, ಅವುಗಳನ್ನು ವಿಶ್ಲೇಷಣೆಗೆ ಒಳಪಡಿಸಲು ಅಗತ್ಯವಿರುವ ತಂತ್ರಜ್ಞಾನದ ಪ್ರಾತ್ಯಕ್ಷಿಕೆ ನಡೆಸಲಾಗುವುದು. ಈ ಎಲ್ಲ ತಂತ್ರಜ್ಞಾನಗಳನ್ನು ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗುವುದು' ಎಂದು ಪ್ರಕಟಣೆ ತಿಳಿಸಿದೆ.

ಶುಕ್ರ ಗ್ರಹದತ್ತ ಚಿತ್ತ: ಶುಕ್ರ ಗ್ರಹ ಅಧ್ಯಯನ ಉದ್ದೇಶದ 'ಶುಕ್ರ ಗ್ರಹ ಕಕ್ಷೆಗಾಮಿ ಕಾರ್ಯಕ್ರಮ'ಕ್ಕೆ ಕೂಡ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಶುಕ್ರ ಗ್ರಹ ಕಕ್ಷೆಗೆ ಗಗನನೌಕೆಯೊಂದನ್ನು ಕಳಿಸಿ, ಅದರ ಮೇಲ್ಮೈ, ವಾತಾವರಣದಲ್ಲಿನ ವಿವಿಧ ಪ್ರಕ್ರಿಯೆಗಳು ಹಾಗೂ ವಾತಾವರಣದ ಮೇಲೆ ಸೂರ್ಯನ ಪ್ರಭಾವ ಕುರಿತು ಅಧ್ಯಯನ ನಡೆಸುವುದು ಯೋಜನೆಯ ಉದ್ದೇಶ.

ಉತ್ಕೃಷ್ಟತಾ ಕೇಂದ್ರ ಸ್ಥಾಪನೆ: ಐಐಟಿ ಹಾಗೂ ಐಐಎಂ ಮಾದರಿಯಲ್ಲಿಯೇ ಅನಿಮೇಷನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್, ಕಾಮಿಕ್ಸ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿ (ಎವಿಜಿಸಿ–ಎಕ್ಸ್‌ಆರ್) ಕ್ಷೇತ್ರಕ್ಕೆ ಸಂಬಂಧಿಸಿ ಉತ್ಕೃಷ್ಟತಾ ಕೇಂದ್ರ (ನ್ಯಾಷನಲ್ ಸೆಂಟರ್ ಆಫ್ ಎಕ್ಸ್‌ಲೆನ್ಸ್ ಫಾರ್ ಅನಿಮೇಷನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್, ಕಾಮಿಕ್ಸ್ ಮತ್ತು ಎಕ್ಸ್‌ಟೆಂಡೆಡ್ ರಿಯಾಲಿಟಿ) ಸ್ಥಾಪಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ. ಈ ಕೇಂದ್ರವನ್ನು ಮುಂಬೈನಲ್ಲಿ ಸ್ಥಾಪಿಸಲಾಗುತ್ತದೆ.

ಬುಡಕಟ್ಟು ಕಲ್ಯಾಣ ಯೋಜನೆಗೆ ಒಪ್ಪಿಗೆ

ಬುಡಕಟ್ಟು ಸಮುದಾಯಗಳ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶದ 'ಪ್ರಧಾನ ಮಂತ್ರಿ ಜನಜಾತೀಯ ಉನ್ನತ ಗ್ರಾಮ ಅಭಿಯಾನ' ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಈ ಯೋಜನೆಯ ವೆಚ್ಚ ₹79,156 ಕೋಟಿ. ಬುಡಕಟ್ಟು ಸಮುದಾಯದವರ ಜನಸಂಖ್ಯೆ ಅಧಿಕವಿರುವ ದೇಶದ 63 ಸಾವಿರ ಗ್ರಾಮಗಳಲ್ಲಿನ ಐದು ಕೋಟಿ ಬುಡಕಟ್ಟು ಕುಟುಂಬಗಳಿಗೆ ಸರ್ಕಾರದ ಎಲ್ಲ ಪ್ರಯೋಜನಗಳನ್ನು ತಲುಪುವಂತೆ ಮಾಡುವುದು ಯೋಜನೆಯ ಉದ್ದೇಶ.

ನೀರು ಹಂಚಿಕೆ ಪಾಕ್‌ಗೆ ಭಾರತ ನೋಟಿಸ್

ನವದೆಹಲಿ(ಪಿಟಿಐ): ಸಿಂಧು ನದಿ ನೀರು ಹಂಚಿಕೆ ಒಪ್ಪಂದವನ್ನು ಮರು ಪರಿಶೀಲನೆ ಮಾಡುವ ಕುರಿತು ಪಾಕಿಸ್ತಾನಕ್ಕೆ ಭಾರತ ನೋಟಿಸ್ ಕಳುಹಿಸಿದೆ.

'ಸನ್ನಿವೇಶಗಳಲ್ಲಿ ಕೆಲ ಅನಿರೀಕ್ಷಿತ ಬದಲಾವಣೆಗಳು ಕಂಡುಬಂದ ಕಾರಣ, ಒಪ್ಪಂದವನ್ನು ಮರುಮೌಲ್ಯಮಾಪನ ಮಾಡುವ ಅಗತ್ಯವಿದೆ' ಎಂದು ಭಾರತ ತಿಳಿಸಿದೆ.

ಒಪ್ಪಂದದ ವಿಧಿ 12(3) ಅನ್ವಯ, ಆಗಸ್ಟ್ 30ರಂದು ಈ ನೋಟಿಸ್ ಜಾರಿ ಮಾಡಲಾಗಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಬುಧವಾರ ತಿಳಿಸಿವೆ. 1960ರ ಸೆ.19ರಂದು ಉಭಯ ದೇಶಗಳು ಈ ಒಪ್ಪಂದಕ್ಕೆ ಸಹಿ ಹಾಕಿದ್ದವು.

ಜನಸಂಖ್ಯೆಯಲ್ಲಿ ಹೆಚ್ಚಳ, ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ಗಡಿಯಾಚೆಗಿನ ಭಯೋತ್ಪಾದನೆಯಿಂದ ಆಗುತ್ತಿರುವ ಪರಿಣಾಮಗಳಿಂದಾಗಿ ಒಪ್ಪಂದದ ಮರುಪರಿಶೀಲನೆಯ ಅಗತ್ಯವಿದೆ ಎಂದು ಭಾರತ ಹೇಳಿದೆ.

ಚೆನ್ನೈನಲ್ಲಿ ಭಾರತ– ಬಾಂಗ್ಲಾದೇಶ ಮೊದಲ ಟೆಸ್ಟ್ ಇಂದಿನಿಂದ • ಕೆ.ಎಲ್. ರಾಹುಲ್, ರಿಷಭ್ ಪಂತ್ ಮೇಲೆ ಕಣ್ಣು

ಶರ್ಮಾ ಪಡೆಗೆ ಶಾಂತೊ ಬಳಗದ ಸವಾಲು

ಪ್ರಜಾವಾಣಿ ವಾರ್ತೆ

ಚೆನ್ನೈ: ಐದು ವರ್ಷಗಳ ಹಿಂದೆ ಬಾಂಗ್ಲಾದೇಶದ ಎದುರಿನ ಟೆಸ್ಟ್ ಸರಣಿಗೆ ಭಾರತವು ಆತಿಥ್ಯ ವಹಿಸಿತ್ತು. ಆಗ ನಡೆದಿದ್ದ ಎರಡೂ ಪಂದ್ಯಗಳನ್ನು ಸುಲಭವಾಗಿ ಗೆದ್ದಿದ್ದ ಭಾರತವು ತವರಿನಲ್ಲಿ ಪಾರಮ್ಯ ಮೆರೆದಿತ್ತು. ಇಂದೋರ್ ಮತ್ತು ಕೋಲ್ಕತ್ತದಲ್ಲಿ ಆ ಪಂದ್ಯಗಳು ನಡೆದಿದ್ದವು.

ಕಳೆದ ಕೆಲವು ವರ್ಷಗಳಿಂದ ಭಾರತ ತಂಡವು ತನ್ನ ಬ್ಯಾಟಿಂಗ್ ಮತ್ತು ವೇಗದ ವಿಭಾಗಗಳಲ್ಲಿ ಗಣನೀಯ ಸುಧಾರಣೆ ಸಾಧಿಸಿದೆ. ಬಾಂಗ್ಲಾದ ಎದುರಿನ ಆ ಸರಣಿಯ ನಂತರ ಇದುವರೆಗೆ ಇಂಗ್ಲೆಂಡ್ (ಎರಡು ಬಾರಿ), ನ್ಯೂಜಿಲೆಂಡ್, ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ಎದುರು ಜಯಭೇರಿ ಬಾರಿಸಿದೆ. ರೋಹಿತ್ ಶರ್ಮಾ ಮತ್ತು ಬಳಗವು 12 ಟೆಸ್ಟ್ ಪಂದ್ಯಗಳನ್ನು ಜಯಿಸಿದೆ. 3ರಲ್ಲಿ ಸೋತಿದೆ.

ಅದೇ ಜಯದ ಓಟವನ್ನು ಮುಂದುವರಿಸುವ ಛಲದಲ್ಲಿರುವ ಭಾರತ ತಂಡವು ಗುರುವಾರ ಎಂ.ಎ. ಚಿದಂಬರಂ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಬಾಂಗ್ಲಾ ಎದುರಿನ ಟೆಸ್ಟ್‌ನಲ್ಲಿ ಕಣಕ್ಕಿಳಿಯಲಿದೆ.

ಬಾಂಗ್ಲಾ ತಂಡಕ್ಕೆ ಹೋಲಿಸಿದರೆ ಭಾರತ ತಂಡದಲ್ಲಿರುವ ಆಟಗಾರರ ಅನುಭವ, ಪ್ರತಿಭೆ ಮತ್ತು ವೈವಿಧ್ಯತೆಗಳು ಹೆಚ್ಚಿವೆ. ಈಚೆಗೆ ಪಾಕಿಸ್ತಾನ ತಂಡವನ್ನು ಅದರ ನೆಲದಲ್ಲಿಯೇ ಮಣಿಸಿದ್ದ ಬಾಂಗ್ಲಾ 2–0ಯಿಂದ ಸರಣಿ ಜಯಿಸಿತ್ತು. ಆದರೂ ಭಾರತದ ಸಾಮರ್ಥ್ಯಕ್ಕೆ ಸರಿಸಾಟಿಯಾಗುವುದೇ ಎಂಬುದನ್ನು ಕಾದು ನೋಡಬೇಕಿದೆ.

ನಾಯಕ ರೋಹಿತ್ ಮತ್ತು 'ರನ್ ಯಂತ್ರ' ವಿರಾಟ್ ಕೊಹ್ಲಿ ಅವರು ಭಾರತದ ಇನಿಂಗ್ಸ್ ಆರಂಭಿಸಲಿದ್ದಾರೆ. ಇಬ್ಬರೂ ಪ್ರಸ್ತುತ ಕ್ರಿಕೆಟ್ ಕ್ಷೇತ್ರದ ಅಪ್ರತಿಮ ಬ್ಯಾಟರ್‌ಗಳಾಗಿದ್ದಾರೆ. ಅಲ್ಲದೇ ಯುವ ಆಟಗಾರರಾದ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಅವರು ಇದ್ದಾರೆ. ಗಿಲ್ ಅವರನ್ನು ಈಗಾಗಲೇ ಭಾರತದ ಭವಿಷ್ಯದ ನಾಯಕ ಎಂದು ಹೇಳಲಾಗುತ್ತಿದೆ.

ಜೈಸ್ವಾಲ್ ತಮ್ಮ ಟೆಸ್ಟ್ ಕ್ರಿಕೆಟ್ ಆರಂಭವನ್ನು ಭರ್ಜರಿಯಾಗಿ ಮಾಡಿದ್ದಾರೆ. ಇಲ್ಲಿಯವರೆಗೆ ಆಡಿರುವ 9 ಪಂದ್ಯಗಳಿಂದ 1028 ರನ್ ಗಳಿಸಿದ್ದಾರೆ. 22 ವರ್ಷದ ಜೈಸ್ವಾಲ್ ಅವರು ಭಾರತ ತಂಡವು 4–1ರಿಂದ ಇಂಗ್ಲೆಂಡ್ ಎದುರಿನ ಸರಣಿ ಜಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರು 89ರ ಸರಾಸರಿಯಲ್ಲಿ 712 ರನ್ ಗಳಿಸಿದ್ದರು.

ಆದರೆ, ಗಿಲ್ ಅವರು ಇಂಗ್ಲೆಂಡ್ ಸರಣಿಯ ಆರಂಭದಲ್ಲಿ ವೈಫಲ್ಯ ಅನುಭವಿಸಿ, ಅಪಾರ ಟೀಕೆಗೊಳಗಾಗಿದ್ದರು. ನಂತರದ ಪಂದ್ಯಗಳಲ್ಲಿ ಎರಡು ಶತಕ ಮತ್ತು ಎರಡು ಅರ್ಧಶತಕ ಗಳಿಸಿ ಟೀಕಾಕಾರರಿಗೆ ಉತ್ತರಿಸಿದ್ದರು. ವೇಗ ಮತ್ತು ಸ್ಪಿನ್ ಬೌಲರ್‌ಗಳನ್ನು ಎದುರಿಸುವ ತಮ್ಮ ಸಾಮರ್ಥ್ಯವನ್ನು ತೋರಿಸಿದ್ದರು.

ವಿಕೆಟ್‌ಕೀಪರ್ ರಿಷಭ್ ಪಂತ್ ಸುಮಾರು ಎರಡು ವರ್ಷಗಳ ನಂತರ ಟೆಸ್ಟ್ ಕ್ರಿಕೆಟ್‌ಗೆ ಮರಳುತ್ತಿದ್ದಾರೆ. ಅವರಿಂದಾಗಿ ಮಧ್ಯಮ ಕ್ರಮಾಂಕವು ಬಲಿಷ್ಠವಾಗಿ ಕಾಣುತ್ತಿದೆ. ಕನ್ನಡಿಗ ಕೆ.ಎಲ್. ರಾಹುಲ್ ಅವರಿಗೆ ಇದು ಮರಳಿ ಅರಳುವ ಕಾಲವಾಗಿದೆ.

ಉತ್ಕೃಷ್ಟ ದರ್ಜೆಯ ಬೌಲರ್‌ಗಳು ತಂಡದಲ್ಲಿದ್ದಾರೆ. ವೇಗದಲ್ಲಿ ಜಸ್‌ಪ್ರೀತ್ ಬೂಮ್ರಾ, ಮೊಹಮ್ಮದ್ ಸಿರಾಜ್ ಇದ್ದರೆ, ಸ್ಪಿನ್‌ನಲ್ಲಿ ಆರ್. ಅಶ್ವಿನ್, ರವೀಂದ್ರ ಜಡೇಜ, ಕುಲದೀಪ್ ಯಾದವ್ ಹಾಗೂ ಅಕ್ಷರ್ ಪಟೇಲ್ ಇದ್ದಾರೆ. ಸ್ಪಿನ್ನರ್‌ಗಳು ಬ್ಯಾಟಿಂಗ್‌ನಲ್ಲಿಯೂ ಉತ್ತಮ ಕಾಣಿಕೆ ನೀಡಬಲ್ಲ ಸಮರ್ಥರು.

ನಜ್ಮುಲ್ ಹುಸೇನ್ ಶಾಂತೊ ನಾಯಕತ್ವದ ಬಾಂಗ್ಲಾ ತಂಡದ ಮುಂದೆ ಕಠಿಣ ಸವಾಲು ಇದೆ. ಆದರೆ ಆತ್ಮವಿಶ್ವಾಸ ತುಂಬಿರುವ ತಂಡವು ಅಚ್ಚರಿಯ ಫಲಿತಾಂಶ ನೀಡುವ ಛಲದಲ್ಲಿದೆ. ಇದರಿಂದಾಗಿ ಚೆನ್ನೈನ ಬಿಸಿಲು ಮತ್ತಷ್ಟು ಕಾವೇರುವ ಸಾಧ್ಯತೆ ಅಲ್ಲಗಳೆಯಲಾಗದು.

632 ದಿನಗಳ ನಂತರ ಮರಳಿದ ರಿಷಭ್

ಚೆನ್ನೈ (ಪಿಟಿಐ): ವಿಕೆಟ್‌ಕೀಪರ್ ಬ್ಯಾಟರ್ ರಿಷಭ್ ಪಂತ್ ಅವರು 632 ದಿನಗಳ ನಂತರ ಟೆಸ್ಟ್ ಕ್ರಿಕೆಟ್‌ಗೆ ಮರಳುತ್ತಿದ್ದಾರೆ. ಕಾಕತಾಳೀಯವೆಂದರೆ 2022ರಲ್ಲಿ ಅವರು ಕೊನೆಯ ಬಾರಿಗೆ ಟೆಸ್ಟ್ ಪಂದ್ಯವಾಡಿದ್ದು ಬಾಂಗ್ಲಾದೇಶದ ಎದುರು. ಈಗ ಮರಳುತ್ತಿರುವುದು ಕೂಡ ಅದೇ ತಂಡದ ವಿರುದ್ಧದ ಪಂದ್ಯಕ್ಕೆ.

ಅದೇ ವರ್ಷ ಭೀಕರ ಕಾರು ಅಪಘಾತದಲ್ಲಿ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಚೇತರಿಸಿಕೊಂಡಿದ್ದ ಅವರು ಶಸ್ತ್ರಚಿಕಿತ್ಸೆ, ಆರೈಕೆಗಳ ನಂತರ ಈ ವರ್ಷದ ಐಪಿಎಲ್ ಟೂರ್ನಿಯ ಮೂಲಕ ಕ್ರಿಕೆಟ್‌ಗೆ ಮರಳಿದ್ದರು. ಟಿ20 ವಿಶ್ವಕಪ್ ಟೂರ್ನಿಯಲ್ಲಿಯೂ ಅಮೋಘವಾಗಿ ಆಡಿದ್ದರು. ಇದೀಗ ದೀರ್ಘ ಮಾದರಿಯಲ್ಲಿ ಅವರ ಸಾಮರ್ಥ್ಯ ಪರೀಕ್ಷೆಗೆ ವೇದಿಕೆ ಸಿದ್ಧವಾಗಿದೆ.

ಬಾಂಗ್ಲಾ ತಂಡದ ನಾಯಕ ನಜ್ಮುಲ್ ಹುಸೇನ್ ಶಾಂತೊ

ಭಾರತದ ರಿಷಭ್ ಪಂತ್ ಮತ್ತು ಕೆ.ಎಲ್. ರಾಹುಲ್

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಭಾರತ–ಬಾಂಗ್ಲಾ ಬಲಾಬಲ

ಪಂದ್ಯಗಳು	ಭಾರತ ಜಯ	ಡ್ರಾ
13	11	2

ರೋಹಿತ್ ಶರ್ಮಾ –ಪಿಟಿಐ ಚಿತ್ರಗಳು

ಗಂಭೀರ್ ಹನುಮಾನ್ ಚಾಲೀಸಾ, ಕೊಹ್ಲಿಯ ನಮಃ ಶಿವಾಯ

ಚೆನ್ನೈ (ಪಿಟಿಐ): ಗೌತಮ್ ಗಂಭೀರ್ ಮತ್ತು ವಿರಾಟ್ ಕೊಹ್ಲಿ ಅವರ ನಡುವಿನ ಸ್ನೇಹ ಮತ್ತು ವೈಮನಸ್ಸಿನ ಹಲವು ಕತೆಗಳು ಜನಜನಿತವಾಗಿವೆ. ದೆಹಲಿಯವರಾದ ಈ ಇಬ್ಬರೂ ಆಟಗಾರರು ಈಗ ಮತ್ತೆ ಒಂದೇ ತಂಡದಲ್ಲಿ ಜೊತೆಗೂಡಿದ್ದಾರೆ.

ಗಂಭೀರ್ ಭಾರತ ತಂಡದ ಮುಖ್ಯ ಕೋಚ್ ಆಗಿದ್ದಾರೆ. ವಿರಾಟ್ ಆಟಗಾರನಾಗಿ ಅವರ ಮಾರ್ಗದರ್ಶನದಲ್ಲಿ ಆಡುತ್ತಿದ್ದಾರೆ. ಅವರಿಬ್ಬರ ಆಟದ ಶೈಲಿ, ಅನುಭವ ಮತ್ತು ನಡವಳಿಕೆಗಳು ಭಿನ್ನವಾಗಿರಬಹುದು. ಆದರೆ ಆಧ್ಯಾತ್ಮದ ವಿಷಯದಲ್ಲಿ ಇಬ್ಬರಲ್ಲೂ ಸಾಮ್ಯತೆ ಇದೆ. ಬಿಸಿಸಿಐ ಡಾಟ್ ಟಿವಿಯಲ್ಲಿ ವಿರಾಟ್ ಅವರು ಗೌತಮ್ ಗಂಭೀರ್ ಅವರನ್ನು ಸಂದರ್ಶನ ಮಾಡಿದ ವಿಡಿಯೊದಲ್ಲಿ ಇದು ಬಹಿರಂಗವಾಗಿದೆ.

ಒಂದೂವರೆ ದಶಕದ ಹಿಂದೆ ನೇಪಿಯರ್‌ನಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಟೆಸ್ಟ್‌ನಲ್ಲಿ ಭಾರತವನ್ನು ಸೋಲಿನಿಂದ ತಪ್ಪಿಸಲು ಗಂಭೀರ್ ಅಮೋಘವಾಗಿ ಬ್ಯಾಟಿಂಗ್ ಮಾಡಿದ್ದರು. ಆ ಸಂದರ್ಭದಲ್ಲಿ ಅವರು ಬ್ಯಾಟಿಂಗ್ ಮಾಡುವಾಗ 'ಹನುಮಾನ್ ಚಾಲೀಸಾ' ಪಠಿಸಿದ್ದರಂತೆ.

ಇದಕ್ಕೆ ಪ್ರತಿಯಾಗಿ ವಿರಾಟ್ ಕೂಡ ತಮ್ಮದೊಂದು ಹಳೆಯ ನೆನಪು ಹಂಚಿಕೊಂಡರು. 2014ರಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಕೊಹ್ಲಿ ನಾಲ್ಕು ಶತಕ ಗಳಿಸಿದ್ದರು. ಆ ಸಂದರ್ಭದಲ್ಲಿ ಅವರು ಬ್ಯಾಟಿಂಗ್ ಮಾಡುವಾಗಲೆಲ್ಲ 'ಓಂ ನಮಃ ಶಿವಾಯ' ಪಠಿಸುತ್ತಿದ್ದರಂತೆ.

ಚೆಸ್: ಭಾರತಕ್ಕೆ ಗೆಲುವು ತಂದ ಗುಕೇಶ್

ಬುಡಾಪೆಸ್ಟ್: ಮೊದಲ ಬೋರ್ಡ್‌ನಲ್ಲಿ ಆಡಿದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್, 80 ನಡೆಗಳನ್ನು ಕಂಡ ದೀರ್ಘ ಪಂದ್ಯದಲ್ಲಿ ಚೀನಾದ ವೀ ಯಿ ಅವರನ್ನು ಸೋಲಿಸಿದರು. ಅವರ ಈ ನಿರ್ಣಾಯಕ ಗೆಲುವಿನಿಂದಾಗಿ ಭಾರತ, 45ನೇ ಚೆಸ್ ಒಲಿಂಪಿಯಾಡ್‌ನಲ್ಲಿ ಬುಧವಾರ ಏಳನೇ ಸುತ್ತಿನಲ್ಲಿ ಚೀನಾವನ್ನು 2.5–1.5 ಪಾಯಿಂಟ್‌ಗಳಿಂದ ಸೋಲಿಸುವಲ್ಲಿ ಯಶಸ್ವಿಯಾಯಿತು.

ಗುಕೇಶ್ ಇದುವರೆಗೆ ಆರು ಪಂದ್ಯಗಳಲ್ಲಿ ಐದು ಗೆದ್ದು, ಒಂದು ಡ್ರಾ ಮಾಡಿಕೊಂಡಿದ್ದಾರೆ. ಉಳಿದ ಮೂರು ಪಂದ್ಯಗಳು ಡ್ರಾ ಆದವು. ಪ್ರಜ್ಞಾನಂದ ಎರಡನೇ ಬೋರ್ಡ್‌ನಲ್ಲಿ ಯು ಯಾಂಗ್ವಿ ವಿರುದ್ಧ ಮೊದಲಿಗರಾಗಿ ಡ್ರಾ ಮಾಡಿಕೊಂಡರು. ಹರಿಕೃಷ್ಣ ಅವರು ವಾಂಗ್ ಯು ವಿರುದ್ಧ ಡ್ರಾ ಮಾಡಿಕೊಂಡರು. ಅರ್ಜುನ್ ಇರಿಗೇಶಿ ಹೋರಾಟ ತೋರಿದರೂ, ಬು ಷಿಯಾಂಗ್ಝಿ ಜೊತೆ ಪಾಯಿಂಟ್ ಹಂಚಿಕೊಳ್ಳಬೇಕಾಯಿತು. ಓಪನ್ ವಿಭಾಗದಲ್ಲಿ ಎರಡನೇ ಶ್ರೇಯಾಂಕದ ಭಾರತ ಅಗ್ರಸ್ಥಾನ ಉಳಿಸಿಕೊಂಡಿದೆ.

ಮಹಿಳೆಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಭಾರತ 3–1 ರಿಂದ ಜಾರ್ಜಿಯಾ ಮೇಲೆ ಜಯಗಳಿಸಿ ಮುನ್ನಡೆ ಕಾಪಾಡಿಕೊಂಡಿದೆ. ವಂತಿಕಾ ಅಗರವಾಲ್ ಮತ್ತು ವೈಶಾಲಿ ತಮ್ಮ ಪಂದ್ಯಗಳಲ್ಲಿ ಗೆದ್ದರೆ, ಹಾರಿಕಾ ಮತ್ತು ದಿವ್ಯಾ ದೇಶಮುಖ್ ಎದುರಾಳಿಗಳ ಜೊತೆ ಡ್ರಾ ಮಾಡಿಕೊಂಡರು. ಇನ್ನು ನಾಲ್ಕು ಸುತ್ತುಗಳು ಉಳಿದಿವೆ.

ತ್ರಿಪುರ ತಂಡಕ್ಕೆ ಶರತ್ ಶ್ರೀನಿವಾಸ್

ಪ್ರಜಾವಾಣಿ ವಾರ್ತೆ

ಶರತ್ ಶ್ರೀನಿವಾಸ್

ಬೆಂಗಳೂರು: ಕರ್ನಾಟಕ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ -ಬ್ಯಾಟರ್ ಶರತ್ ಶ್ರೀನಿವಾಸ್ ಅವರು ಇದೇ ದೇಶಿ ಋತುವಿನಿಂದ ತ್ರಿಪುರ ರಾಜ್ಯ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಅವರು ತವರಿನ ತಂಡದಿಂದ ತ್ರಿಪುರಕ್ಕೆ ವರ್ಗಾವಣೆಯಾಗಲು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಯು ನಿರಾಕ್ಷೇಪಣಾ ಪತ್ರವನ್ನು ನೀಡಿದೆ.

'ಮೂರು ಮಾದರಿಗಳಲ್ಲಿಯೂ ಕ್ರಿಕೆಟ್ ಆಡುವ ಅವಕಾಶಕ್ಕಾಗಿ ತ್ರಿಪುರ ತಂಡಕ್ಕೆ ವಲಸೆ ಹೋಗುತ್ತಿರುವೆ. ಬೇರೆ ಯಾವುದೇ ಕಾರಣಗಳೂ ಇಲ್ಲ. ಕರ್ನಾಟಕ ತಂಡದಲ್ಲಿ ನನಗೆ ಎಲ್ಲ ರೀತಿಯ ಬೆಂಬಲ ಮತ್ತು ಮಾರ್ಗದರ್ಶನ ದೊರೆತಿದೆ' ಎಂದು ಶರತ್ 'ಪ್ರಜಾವಾಣಿ'ಗೆ ತಿಳಿಸಿದರು.

2018ರಲ್ಲಿ ರಣಜಿ ಟ್ರೋಫಿ ಟೂರ್ನಿಯಲ್ಲಿ ಶರತ್ ಪದಾರ್ಪಣೆ ಮಾಡಿದ್ದರು. 20 ಪ್ರಥಮ ದರ್ಜೆ ಪಂದ್ಯಗಳಿಂದ 943 ರನ್ ಗಳಿಸಿದ್ದಾರೆ. ಅದರಲ್ಲಿ ಒಂದು ಶತಕ ಮತ್ತು 4 ಅರ್ಧಶತಕಗಳು ಇವೆ. 79 ಕ್ಯಾಚ್ ಪಡೆದಿರುವ ಅವರು 5 ಸ್ಟಂಪಿಂಗ್ ಮಾಡಿದ್ದಾರೆ. 7 ಲಿಸ್ಟ್ ಎ ಪಂದ್ಯಗಳಲ್ಲಿ ಆಡಿದ್ದು, ಒಂದು ಅರ್ಧಶತಕ ಹೊಡೆದಿದ್ದಾರೆ. ಒಟ್ಟು 139 ರನ್‌ಗಳು ಅವರ ಖಾತೆಯಲ್ಲಿವೆ.

ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡುವ ಕರ್ನಾಟಕ ಸಂಭವನೀಯರ ತಂಡವನ್ನು ಈಚೆಗೆ ಪ್ರಕಟಿಸಲಾಗಿತ್ತು. ಅದರಲ್ಲಿ 28 ವರ್ಷದ ಶರತ್ ಕೂಡ ಇದ್ದರು. ಅದೇ ತಂಡದಲ್ಲಿ ಉದಯೋನ್ಮುಖ ವಿಕೆಟ್‌ಕೀಪರ್‌ಗಳಾದ ಲವನೀತ್ ಸಿಸೊಡಿಯಾ, ಸುಜಯ್ ಸತೇರಿ ಹಾಗೂ ಕೃತಿಕ್ ಕೃಷ್ಣ ಸ್ಥಾನ ಪಡೆದಿದ್ದಾರೆ.

'ಇದುವರೆಗೆ ದೀರ್ಘ ಮಾದರಿಯಲ್ಲಿ ಹೆಚ್ಚು ಪಂದ್ಯಗಳನ್ನು ಆಡುವ ಅವಕಾಶ ಲಭಿಸಿದೆ. ವಿಜಯ್ ಹಜಾರೆ ಏಕದಿನ ಕ್ರಿಕೆಟ್ ಮತ್ತು ಸೈಯ್ಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಗಳಲ್ಲಿ ಆಡುವುದು ನನ್ನ ಗುರಿ' ಎಂದು ಶರತ್ ಹೇಳಿದರು.

'ಶರತ್ ಪ್ರತಿಭಾವಂತ ಆಟಗಾರ. ಅವರು ತ್ರಿಪುರ ತಂಡದಲ್ಲಿ ಆಡುವ ಇಚ್ಛೆ ಹೊಂದಿದ್ದು ಎನ್‌ಒಸಿ ನೀಡಲಾಗಿದೆ. ಕರ್ನಾಟಕ ತಂಡದಲ್ಲಿ ಉತ್ತಮ ಹಾಗೂ ಪ್ರತಿಭಾನ್ವಿತರಾದ ಮೂರ್ನಾಲ್ಕು ಜನ ವಿಕೆಟ್‌ಕೀಪರ್‌ಗಳು ಇದ್ದಾರೆ' ಎಂದು ಕೆಎಸ್‌ಸಿಎ ಮೂಲಗಳು ಸ್ಪಷ್ಟಪಡಿಸಿವೆ.

ಈಚೆಗೆ ಆರಂಭಿಕ ಬ್ಯಾಟರ್ ಆರ್. ಸಮರ್ಥ್, ಕೆ.ವಿ. ಸಿದ್ಧಾರ್ಥ್ ಅವರೂ ಪರರಾಜ್ಯಗಳ ತಂಡಗಳಿಗೆ ವಲಸೆ ಹೋಗಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕಮಿಂದು ಶತಕ: ಲಂಕಾ ಚೇತರಿಕೆ

ಗಾಲೆ, ಶ್ರೀಲಂಕಾ (ಎಎಫ್‌ಪಿ): ಕಮಿಂದು ಮೆಂಡಿಸ್ (114, 173ಎ, 11x4) ಅವರ ಕೆಚ್ಚೆದೆಯ ಶತಕದ ನೆರವಿನಿಂದ ಶ್ರೀಲಂಕಾ ತಂಡ, ನ್ಯೂಜಿಲೆಂಡ್ ವಿರುದ್ಧ ನಡೆಯುತ್ತಿರುವ ಬುಧವಾರ ಆರಂಭವಾದ ಮೊದಲ ಟೆಸ್ಟ್ ಪಂದ್ಯದಲ್ಲಿ ಆಟ ಮುಗಿದಾಗ 7 ವಿಕೆಟ್‌ಗೆ 302 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು.

ಕೇವಲ ಏಳನೇ ಟೆಸ್ಟ್ ಆಡುತ್ತಿರುವ ಕಮಿಂದು ಈಗಾಗಲೇ 800ಕ್ಕೂ ಹೆಚ್ಚು ರನ್ ಪೇರಿಸಿದ್ದಾರೆ. ಅದರಲ್ಲಿ ನಾಲ್ಕು ಶತಕಗಳು, ನಾಲ್ಕು ಅರ್ಧ ಶತಕಗಳಿವೆ.

ಸ್ಕೋರುಗಳು: ಮೊದಲ ಇನಿಂಗ್ಸ್: ಶ್ರೀಲಂಕಾ: 7 ವಿಕೆಟ್‌ಗೆ 302 (ದಿನೇಶ್ ಚಾಂದಿಮಲ್ 30, ಆಂಜೆಲೊ ಮ್ಯಾಥ್ಯೂಸ್ 36, ಕಮಿಂದು ಮೆಂಡಿಸ್ 114, ಕುಸಲ್ ಮೆಂಡಿಸ್ 50; ವಿಲಿಯಂ ಓ ರೂರ್ಕ್ 54ಕ್ಕೆ3, ಗ್ಲೆನ್ ಫಿಲಿಪ್ಸ್ 52ಕ್ಕೆ2) ವಿರುದ್ಧ ನ್ಯೂಜಿಲೆಂಡ್.

ದಕ್ಷಿಣ ಆಫ್ರಿಕಾಕ್ಕೆ ಅಫ್ಗನ್ ಆಘಾತ

ಶಾರ್ಜಾ (ಎಎಫ್‌ಪಿ): ಅಫ್ಗಾನಿಸ್ತಾನ ಬೌಲರ್‌ಗಳ ಪರಿಣಾಮಕಾರಿ ದಾಳಿಗೆ ತತ್ತರಿಸಿದ ದಕ್ಷಿಣ ಆಫ್ರಿಕಾ ತಂಡವು ಬುಧವಾರ ಮೊದಲ ಏಕದಿನ ಪಂದ್ಯದಲ್ಲಿ ಆರು ವಿಕೆಟ್‌ಗಳ ಹೀನಾಯ ಸೋಲು ಅನುಭವಿಸಿತು.

ಮೂರು ಪಂದ್ಯಗಳ ಸರಣಿಯಲ್ಲಿ ಅಫ್ಗನ್ ತಂಡವು 1–0 ಮುನ್ನಡೆ ಪಡೆಯಿತು. ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ದಕ್ಷಿಣ ಆಫ್ರಿಕಾದ ಬ್ಯಾಟರ್‌ಗಳನ್ನು ಫಜಲ್‌ಹಕ್ ಫಾರೂಕಿ (35ಕ್ಕೆ 4), ಎ.ಎಂ. ಗಜನ್‌ಫರ್ (20ಕ್ಕೆ 3) ಮತ್ತು ರಶೀದ್ ಖಾನ್ (30ಕ್ಕೆ 2) ಕಾಡಿದರು. ವಿಯಾನ್ ಮುಲ್ಡರ್ (52; 84) ಏಕಾಂಗಿ ಹೋರಾಟ ನಡೆಸಿ ತಂಡವನ್ನು ನೂರರ ಗಡಿ ದಾಟಿಸಿದರು. ತಂಡವು 33.3 ಓವರ್‌ಗಳಲ್ಲಿ 106 ರನ್‌ಗೆ ಕುಸಿಯಿತು. ಅಫ್ಗನ್ ತಂಡವು 26 ಓವರ್‌ಗಳಲ್ಲಿ 4 ವಿಕೆಟ್‌ಗೆ 107 ರನ್ ಗಳಿಸಿ ಗೆಲುವು ಸಾಧಿಸಿತು.

ಯಶಸ್ವಿನಿಗೆ ಕಿರೀಟ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ, ಹಿಮಾಚಲ ಪ್ರದೇಶದ ಕಾಂಗ್ರಾದಲ್ಲಿ ನಡೆದ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಯಶಸ್ವಿನಿ ಫೈನಲ್‌ನಲ್ಲಿ 12-10, 11-5, 11-4, 4-11, 12-10ರಿಂದ ಪಿಎಸ್‌ಪಿಬಿಯ ರೀತ್ ರಿಶ್ಯಾ ಅವರನ್ನು ಸೋಲಿಸಿದರು.

ಹಾಕಿ: ಉತ್ತರ ಪ್ರದೇಶಕ್ಕೆ ಮಣಿದ ಕರ್ನಾಟಕ

ಜಲಂಧರ್ (ಪಿಟಿಐ): ಉತ್ತರ ಪ್ರದೇಶ ಮತ್ತು ಪಂಜಾಬ್ ತಂಡಗಳು ಇಲ್ಲಿ ನಡೆಯುತ್ತಿರುವ ಜೂನಿಯರ್ ರಾಷ್ಟ್ರೀಯ ಪುರುಷರ ಹಾಕಿ ಟೂರ್ನಿಯಲ್ಲಿ ಫೈನಲ್ ಪ್ರವೇಶ ಮಾಡಿವೆ.

ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ಉತ್ತರ ಪ್ರದೇಶ ತಂಡವು 3–1 ಗೋಲುಗಳಿಂದ ಕರ್ನಾಟಕ ತಂಡವನ್ನು ಸೋಲಿಸಿತು. ಮತ್ತೊಂದು ಸೆಮಿಫೈನಲ್‌ನಲ್ಲಿ ಪಂಜಾಬ್ ತಂಡವು ಹರಿಯಾಣವನ್ನು ಮಣಿಸಿತು.

ಬಿಎಫ್‌ಸಿ–ಎಚ್‌ಎಫ್‌ಸಿ ಹಣಾಹಣಿ ಇಂದು

ಬೆಂಗಳೂರು: ಇಲ್ಲಿಯ ಕಂಠೀರವ ಕ್ರೀಡಾಂಗಣದಲ್ಲಿ ಗುರುವಾರ ನಡೆಯಲಿರುವ ಐಎಸ್‌ಎಲ್ ಪಂದ್ಯದಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಹೈದರಾಬಾದ್ ಎಫ್‌ಸಿ ವಿರುದ್ಧ ಆಡಲಿದೆ.

ಈ ಬಾರಿಯ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಮೊದಲ ಪಂದ್ಯದಲ್ಲಿ ಬಿಎಫ್‌ಸಿ ಜಯಿಸಿತ್ತು. ಆದ್ದರಿಂದ ಅಪಾರ ಆತ್ಮವಿಶ್ವಾಸದಲ್ಲಿ ತಂಡವಿದೆ. ಹೈದರಾಬಾದ್ ತಂಡಕ್ಕೂ ಸೋಲಿನ ರುಚಿ ತೋರಿಸಲು ಸಿದ್ಧವಾಗಿದೆ. ಆ ಪಂದ್ಯದಲ್ಲಿ ಬಿಎಫ್‌ಸಿಯ ಯುವ ಆಟಗಾರ ವಿನಿತ್ ವೆಂಕಟೇಶ್ ಗೋಲು ಹೊಡೆದು ಮಿಂಚಿದ್ದರು.

ನೂರಾರು ಫುಟ್‌ಬಾಲ್ ಪ್ರೇಮಿಗಳ ಸಮ್ಮುಖದಲ್ಲಿ ಮಿಂಚಲು ಬಿಎಫ್‌ಸಿಯ ಎಡ್ಗರ್ ಮೆಂಡಿಸ್, ಪೆಡ್ರೊ ಕಾಪೊ, ರಾಹುಲ್ ಭೆಕೆ, ಅಲ್ಬರ್ಟೊ ನೊಗೆರಾ ಮತ್ತು ಜಾರ್ಜ್ ಪೆರೆಯಾ ದಿಯಾಜ್ ಸಿದ್ಧವಾಗಿದ್ದಾರೆ. ಮುಖ್ಯ ಕೋಚ್ ಜೆರಾರ್ಡ್ ಝುಗೋರ್ಜಾ ಅವರ ಮಾರ್ಗದರ್ಶನದಲ್ಲಿ ಗೆಲುವಿನ ಓಟ ಮುಂದುವರಿಸುವ ತವಕದಲ್ಲಿದ್ದಾರೆ.

'ಹೈದರಾಬಾದ್ ತಂಡವು ಋತುವಿಗೂ ಮುನ್ನ ಯಾವುದೇ ಪಂದ್ಯವಾಡಿಲ್ಲ. ಆದರೂ ನಾವು ಮೈಮರೆಯುವಂತಿಲ್ಲ. ಈ ಪಂದ್ಯವನ್ನು ಜಯಿಸುವುದು ಸುಲಭವೇನಲ್ಲ. ಈ ಹಿಂದಿನ ಪಂದ್ಯದಲ್ಲಿ ಆದ ಲೋಪಗಳನ್ನು ಸರಿಪಡಿಸಿಕೊಳ್ಳುವುದು ಮುಖ್ಯ ಕಾರ್ಯವಾಗಿದೆ' ಎಂದು ಜೆರಾರ್ಡ್ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಪಂದ್ಯ ಆರಂಭ: ರಾತ್ರಿ 7.30, ನೇರಪ್ರಸಾರ: ಸ್ಪೋರ್ಟ್ಸ್ 18

ಬಿಎಫ್‌ಸಿಯ ಸುನಿಲ್ ಚೆಟ್ರಿ ಮತ್ತು ವಿನಿತ್ ವೆಂಕಟೇಶ್

ಕಿಂಗ್ಸ್‌ಗೆ ಪಾಂಟಿಂಗ್ ಕೋಚ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ರಿಕಿ ಪಾಂಟಿಂಗ್, ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಪಂಜಾಬ್ ಕಿಂಗ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿ ನೇಮಕಗೊಂಡಿದ್ದಾರೆ.

ಈ ಹಿಂದೆ ಪಂಜಾಬ್ ತಂಡಕ್ಕೆ ಟ್ರೆವರ್ ಬೇಲಿಸ್ ಅವರು ಕೋಚ್ ಆಗಿದ್ದರು. ತಂಡವು ನಿರೀಕ್ಷಿತ ಫಲಿತಾಂಶ ನೀಡದ ಕಾರಣ ಅವರನ್ನು ಕೈಬಿಡಲಾಗಿತ್ತು. ಇದೀಗ ಆ ಸ್ಥಾನಕ್ಕೆ ರಿಕಿ ನೇಮಕವಾಗಿದ್ದಾರೆ. ರಿಕಿ ಅವರು ಏಳು ವರ್ಷಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿದ್ದರು.

ದುಲೀಪ್ ಟ್ರೋಫಿ ಪಂದ್ಯ ಇಂದಿನಿಂದ

ಅನಂತಪುರ (ಪಿಟಿಐ): ಭಾರತ ತಂಡದಲ್ಲಿ ಸ್ಥಾನ ಪಡೆಯುವ ಉತ್ಸಾಹದಲ್ಲಿರುವ ಶ್ರೇಯಸ್ ಅಯ್ಯರ್, ಸಂಜು ಸ್ಯಾಮ್ಸನ್, ರಿಯಾನ್ ಪರಾಗ್ ಮತ್ತು ರಿಂಕು ಸಿಂಗ್ ಅವರು ಗುರುವಾರ ಆರಂಭವಾಗುವ ದುಲೀಪ್ ಟ್ರೋಫಿ ಟೂರ್ನಿಯ ಮೂರನೇ ಪಂದ್ಯಗಳಲ್ಲಿ ಕಣಕ್ಕಿಳಿಯಲಿದ್ದಾರೆ. ರಾಷ್ಟ್ರೀಯ ತಂಡದ ಆಯ್ಕೆಗಾರರ ಗಮನ ಸೆಳೆಯಲು ಈ ಸುತ್ತು ಸದವಕಾಶವಾಗಿದೆ.

ಸೆ. 22ರವರೆಗೆ ನಡೆಯಲಿರುವ ಪಂದ್ಯಗಳಲ್ಲಿ ಭಾರತ ಬಿ ತಂಡವು ಡಿ ವಿರುದ್ಧ ಹಾಗೂ ಎ ತಂಡವು ಸಿ ವಿರುದ್ಧ ಸೆಣಸಲಿವೆ.

ಕಳೆದೆರಡು ಪಂದ್ಯಗಳ ನಂತರ ಪಾಯಿಂಟ್ ಪಟ್ಟಿಯಲ್ಲಿ ಭಾರತ ಸಿ ತಂಡವು ಅಗ್ರಸ್ಥಾನದಲ್ಲಿದೆ. ಬಿ (7 ಅಂಕ) ಮತ್ತು ಎ (6 ಅಂಕ) ತಂಡಗಳು ಕ್ರಮವಾಗಿ ಎರಡು, ಮೂರನೇ ಸ್ಥಾನದಲ್ಲಿವೆ. ಡಿ ತಂಡವು ಕೊನೆಯ ಸ್ಥಾನದಲ್ಲಿದ್ದು ಯಾವುದೇ ಅಂಕ ಪಡೆದಿಲ್ಲ.

ಪಂದ್ಯ ಆರಂಭ: ಬೆಳಿಗ್ಗೆ 9.30.
ನೇರಪ್ರಸಾರ: ಸ್ಪೋರ್ಟ್ಸ್ 18

ಬಲಿಯಾನ್ ತಾತ್ಕಾಲಿಕ ಅಮಾನತು

ನವದೆಹಲಿ (ಪಿಟಿಐ): ಹಾಂಗ್‌ಝೌ ಏಷ್ಯನ್ ಗೇಮ್ಸ್ ಷಾಟ್‌ಪಟ್ ಕಂಚಿನ ಪದಕ ವಿಜೇತೆ ಕಿರಣ್ ಬಲಿಯಾನ್ ಅವರನ್ನು ನಿಷೇಧಿತ ಪಟ್ಟಿಯಲ್ಲಿರುವ ಮದ್ದು ಸೇವನೆಗಾಗಿ ರಾಷ್ಟ್ರೀಯ ಉದ್ದೀಪನ ಮದ್ದುಸೇವನೆ ತಡೆ ಘಟಕವು (ನಾಡಾ) ತಾತ್ಕಾಲಿಕವಾಗಿ ಅಮಾನತು ಮಾಡಿದೆ.

ಕಿರಣ್ ಬಲಿಯಾನ್

ವಿವಿಧ ಕ್ರೀಡೆಗಳಲ್ಲಿರುವ ಕೆಲವು ಅಥ್ಲೀಟುಗಳು ಮದ್ದುಸೇವನೆ ಮಾಡಿದವರ ಪಟ್ಟಿಯಲ್ಲಿದ್ದಾರೆ. ಆದರೆ ಅಚ್ಚರಿಯೆಂಬಂತೆ ಕುಸ್ತಿಪಟು ಬಜರಂಗ್ ಪೂನಿಯಾ ಅವರ ಹೆಸರು ಈ ಬಾರಿ ಕಾಣಿಸಿಕೊಂಡಿಲ್ಲ. ಈ ಹಿಂದೆ 'ನಾಡಾ' ಬಿಡುಗಡೆ ಮಾಡಿದ್ದ ಪಟ್ಟಿಯಲ್ಲಿ ಪೂನಿಯಾ ಹೆಸರಿತ್ತು. ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು) ಈಗಾಗಲೇ ಅವರನ್ನು ಅಮಾನತು ಮಾಡಿದೆ.

ಮಹಿಳೆಯರ ಷಾಟ್‌ಪಟ್‌ನಲ್ಲಿ ಪದಕ ಗೆದ್ದ ಭಾರತದ ಎರಡನೇ ಅಥ್ಲೀಟ್ ಎಂಬ ಹೆಗ್ಗಳಿಕೆಗೆ 25 ವರ್ಷ ವಯಸ್ಸಿನ ಕಿರಣ್ ಪಾತ್ರರಾಗಿದ್ದರು. ಅವರು ಮೆಟಂಡಿನೊನ್ ಎಂಬ ಅನಾಬಾಲಿಕ್ ಸ್ಟಿರಾಯಿಡ್ ಸೇವನೆ ಮಾಡಿದ್ದು ಪತ್ತೆಯಾಗಿದೆ.

2014ರ ಇಂಚಿಯೊನ್ ಗೇಮ್ಸ್‌ನ ಹ್ಯಾಮರ್ ಥ್ರೊನಲ್ಲಿ ಕಂಚಿನ ಪದಕ ಗೆದ್ದಿದ್ದ ಮಂಜು ಬಾಲಾ ಅವರೂ ನಿಷೇಧಿತ ಮದ್ದುಸೇವನೆಗೆ ಅಮಾನತು ಶಿಕ್ಷೆಗೆ ಗುರಿಯಾಗಿದ್ದಾರೆ. ಈ ವರ್ಷದ ಫೆಡರೇಷನ್ ಕಪ್‌ನಲ್ಲಿ ಬೆಳ್ಳಿ ಗೆದ್ದ ಶಾಲಿನಿ ಚೌಧರಿ ಅವರ ಹೆಸರೂ ಪಟ್ಟಿಯಲ್ಲಿದೆ. ಬ್ಯಾಡ್ಮಿಂಟನ್ ಡಬಲ್ಸ್ ಆಟಗಾರ ಕೃಷ್ಣಪ್ರಸಾದ್ ಗರಗ ಅವರೂ ಮದ್ದುಸೇವನೆ ಮಾಡಿದ್ದು ಖಚಿತವಾಗಿದೆ.

ಗ್ರೆಗೋರಿಯಾಗೆ ಮಾಳವಿಕಾ ಆಘಾತ

ಚಾಂಗ್‌ಝೌ (ಪಿಟಿಐ): ಭಾರತದ ಉದಯೋನ್ಮುಖ ತಾರೆ ಮಾಳವಿಕಾ ಬನ್ಸೋಡ್ ಅವರು ಚೀನಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚಿನ ಪದಕ ವಿಜೇತೆ ಗ್ರೆಗೋರಿಯಾ ಮರಿಸ್ಕಾ ತುಂಜಂಗ್ ಅವರಿಗೆ ಆಘಾತ ನೀಡಿದರು.

ಮಾಳವಿಕಾ ಬನ್ಸೋಡ್

ಬುಧವಾರ ನಡೆದ 32ರ ಘಟ್ಟದ ಪಂದ್ಯದಲ್ಲಿ 22 ವರ್ಷ ವಯಸ್ಸಿನ ಬನ್ಸೋಡ್ 26-24, 21-19ರಿಂದ ಇಂಡೊನೇಷ್ಯಾದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿ, ಎರಡನೇ ಸುತ್ತಿಗೆ ಮುನ್ನಡೆದರು. ವಿಶ್ವದ ಏಳನೇ ಕ್ರಮಾಂಕದ ಗ್ರೆಗೋರಿಯಾ ಅವರನ್ನು 43ನೇ ರ್‍ಯಾಂಕ್‌ನ ಭಾರತದ ಆಟಗಾರ್ತಿ 46 ನಿಮಿಷದಲ್ಲಿ ಸದೆಬಡಿದರು.

ಅವರು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಎರಡು ಬಾರಿ ಕಾಮನ್‌ವೆಲ್ತ್ ಗೇಮ್ಸ್ ಪದಕ ವಿಜೇತೆ ಕ್ರಿಸ್ಟಿ ಗಿಲ್ಮೊರ್ (ಸ್ಕಾಟ್ಲೆಂಡ್) ಅವರನ್ನು ಎದುರಿಸಲಿದ್ದಾರೆ. ಅವರು ಟೂರ್ನಿಯಲ್ಲಿ ಉಳಿದಿರುವ ಭಾರತದ ಏಕೈಕ ಭರವಸೆಯಾಗಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಕಿರಣ್ ಜಾರ್ಜ್ 21–4, 10–21, 21–23ರಿಂದ ಜಪಾನ್‌ನ ಕೆಂಟಾ ನಿಶಿಮೊಟೊ ಅವರ ವಿರುದ್ಧ ಮುಗ್ಗರಿಸಿದರು.

'ಗೋಲ್ಡನ್ ಬೂಟ್' ಪುರಸ್ಕಾರ ಪಡೆದಿದ್ದ ಇಟಲಿಯ ಆಟಗಾರ

1990ರ ವಿಶ್ವಕಪ್ ತಾರೆ ಷಿಲಾಚಿ ಇನ್ನಿಲ್ಲ

ರೋಮ್ (ಎಪಿ): ಇಟಲಿಯಲ್ಲಿ ನಡೆದಿದ್ದ 1990ರ ಫುಟ್‌ಬಾಲ್ ವಿಶ್ವಕಪ್‌ನಲ್ಲಿ ಅತ್ಯಧಿಕ ಗೋಲುಗಳನ್ನು ಗಳಿಸಿದ ಹಿರಿಮೆಗೆ ಭಾಜನರಾಗಿದ್ದ ತವರಿನ ಆಟಗಾರ ಸಾಲ್ವಟೋರೆ 'ಟೊಟೊ' ಷಿಲಾಚಿ ಅವರು ಕರುಳಿನ ಕ್ಯಾನ್ಸರ್‌ನಿಂದ ಬುಧವಾರ ನಿಧನರಾದರು. ಅವರಿಗೆ 59 ವರ್ಷ ವಯಸ್ಸಾಗಿತ್ತು.

ಪಾಲೆರ್ಮೊದ ಆಸ್ಪತ್ರೆಯಲ್ಲಿ ಅವರು 11 ದಿನಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು.

'ಇಟಾಲಿಯಾ 90' ವಿಶ್ವಕಪ್‌ನಲ್ಲಿ ಅವರು ಆರು ಗೋಲುಗಳನ್ನು ಗಳಿಸಿದ್ದರು. ಆಸ್ಟ್ರಿಯಾ ಎದುರಿನ ಮೊದಲ ಪಂದ್ಯದಲ್ಲಿ ಸಬ್‌ಸ್ಟಿಟ್ಯೂಟ್ ಆಗಿ ಆಡಿದ ಅವರು ಆ ಪಂದ್ಯದ ಏಕೈಕ ಗೋಲನ್ನು ಗಳಿಸಿದ್ದರು. ನಂತರ ಅವರೇ ಆ ವಿಶ್ವಕಪ್‌ನ ಅತ್ಯಧಿಕ ಸ್ಕೋರರ್ ಎನಿಸಿ 'ಗೋಲ್ಡನ್ ಬೂಟ್' ಪುರಸ್ಕಾರಕ್ಕೆ ಪಾತ್ರರಾದರು.

ಷಿಲಾಚಿ ಅವರು 1990ರ ವಿಶ್ವಕಪ್‌ನ 'ಶ್ರೇಷ್ಠ ಆಟಗಾರ' ಎನಿಸಿ 'ಗೋಲ್ಡನ್ ಬಾಲ್' ಪುರಸ್ಕಾರಕ್ಕೂ ಪಾತ್ರರಾಗಿದ್ದರು. ಆ ವೇಳೆ ಜರ್ಮನಿಯ ಲೋಥರ್ ಮಥಾಯಸ್, ಅರ್ಜೆಂಟೀನಾದ ಡೀಗೊ ಮರಡೋನ ಅವರಂಥ ಘಟಾನುಘಟಿ ಆಟಗಾರರನ್ನು ಹಿಂದೆಹಾಕಿ ಈ ಗೌರವ ಪಡೆದಿದ್ದರು.

ಷಿಲಾಚಿ ಅವರು ವೃತ್ತಿ ಜೀವನದ ವೇಳೆ ಮೆಸ್ಸಿನಾ, ಯುವೆಂಟಸ್, ಇಂಟರ್ ಮಿಲಾನ್ ಮತ್ತು ಜಪಾನ್‌ನ ಜುಬಿಲೊ ಇವಾಟ ತಂಡಗಳಿಗೆ ಆಡಿದ್ದರು. 16 ಪಂದ್ಯಗಳಲ್ಲಿ ಅವರು ರಾಷ್ಟ್ರೀಯ ತಂಡವನ್ನು ಮುನ್ನಡೆಸಿದ್ದಾರೆ.

'ತಡೆಯಲಾಗದ ಸಂಭ್ರಮದ ವೇಳೆ ಅವರ ಮುಖದಲ್ಲಿ ಲಾಸ್ಯವಾಡುತ್ತಿದ್ದ ಖುಷಿ- ಇವೆಲ್ಲವೂ ಇಟಲಿ ಫುಟ್‌ಬಾಲ್ ಚರಿತ್ರೆಯ ಭಾಗವಾಗಿರಲಿದೆ' ಎಂದು ಇಟಾಲಿಯನ್ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಗೇಬ್ರಿಯಲ್ ಗ್ರವಿನಾ ತಿಳಿಸಿದ್ದಾರೆ.

ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ಕೂಡ ಕಂಬನಿ ಮಿಡಿದು 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದಾರೆ.

1990ರ ವಿಶ್ವಕಪ್ ಫೈನಲ್‌ನಲ್ಲಿ ಅರ್ಜೆಂಟೀನಾವನ್ನು ಮಣಿಸಿದ ಜರ್ಮನಿ ಸಾಮ್ರಾಟನಾಗಿ ಮೆರೆದಿತ್ತು. ಆದರೆ ಇಟಲಿ ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವನ್ನು ಶೂಟೌಟ್‌ನಲ್ಲಿ ಸೋಲಿಸಿತ್ತು. ಷಿಲಾಚಿ ಅವರ ಪೆನಾಲ್ಟಿ ಕಿಕ್ ಈ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು.

'ನನ್ನ ಆತ್ಮೀಯ ಗೆಳೆಯನಿಗೆ ವಿದಾಯ' ಎಂದು ಅಂದಿನ (ಮೂರನೇ ಸ್ಥಾನದ) ಪಂದ್ಯದಲ್ಲಿ ಇಟಲಿಯ ಮೊದಲ ಗೋಲು ಗಳಿಸಿದ ರಾಬರ್ಟೊ ಬ್ಯಾಜಿಯೊ ಇನ್‌ಸ್ಟಾದಲ್ಲಿ ಬರೆದಿದ್ದಾರೆ.

1999ರ ವಿಶ್ವಕಪ್‌ಗೆ ಸ್ವಲ್ಪ ಮೊದಲು ಯುಇಎಫ್‌ಎ ಕಪ್ ಮತ್ತು ಇಟಾಲಿಯನ್ ಕಪ್ ಕೂಟಗಳಲ್ಲಿ ಅವರು 21 ಗೋಲುಗಳನ್ನು ಗಳಿಸಿದ್ದು ಅವರಿಗೆ ಹೆಸರು ತಂದುಕೊಟ್ಟಿತು.

1990ರ ವಿಶ್ವಕಪ್ ಸೆಮಿಫೈನಲ್ ಪಂದ್ಯದಲ್ಲಿ ಇಟಲಿ ತಂಡದ ಮೊದಲ ಗೋಲು ಗಳಿಸಿದ ಸಂಭ್ರಮದಲ್ಲಿ ಸಾಲ್ವಟೋರ್ ಷಿಲಾಚಿ –ಎಎಫ್‌ಪಿ ಫೈಲ್ ಚಿತ್ರ